ಏತದ್ದೇಶೀಯ ಸೋಪಪತ್ತಿಕ

ಜಮಾ-ಖರ್ಚಿನ ಪದ್ಧತಿಯು.

ಗ್ರಂಥಕರ್ತ

ಓಂಕಾರ ಬಾಳಕೃಷ್ಣ ಬೋಠೆ,

ಪೆನ್‌ಶನರ ಮಾಸ್ತರ.

ಸನ್ ೧೯೨೮ ಇಸ್ವಿ.

ಬೆಲೆ ೧೦ ಅಣೆ.

ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಪಠ್ಯ ಪುಸ್ತಕವೆಂದು ಉಪಯೋಗಿಸುವದಕ್ಕಾಗಿ
ಸರಕಾರದಿಂದ ಮಂಜೂರಾಗಿರುತ್ತದೆ.

ಏತದ್ದೇಶೀಯ ಸೋಪಪತ್ತಿಕ

ಜಮಾಖರ್ಚಿನ ಪದ್ಧತಿಯು.

ಇದನ್ನು

ಓಂಕಾರ ಬಾಳಕೃಷ್ಣ ಬೋಕೆ

ಪೆನ್‌ಶನರ ಮಾಸ್ತರ

ಇವರು

ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆದರು.

ತಿದ್ದಿ ಬೆಳಸಿದ ೨ನೆಯಾವೃತ್ತಿ-(೨೦೦೦ ಪ್ರತಿಗಳು)

ಸನ್ ೧೯೨೮ ಇಸ್ವಿ.

ಬೆಲೆ ೧೦ ಆಣೆ.

ಬೆಳಗಾಂವಿಯೊಳಗೆ ದತ್ತಾಜೀರಾವ ಆಬಾಜೀರಾವ ಸಾವಂತ, ಇವರು ತಮ್ಮ “ ಶ್ರೀರಾಮ
ಪ್ರಕಾಶ” ಮುದ್ರಣಾಲಯದಲ್ಲಿ ಮುದ್ರಿಸಿ ಅಲ್ಲಿಯೇ
ಪ್ರಸಿದ್ಧ ಮಾಡಿದರು.

ಪ್ರಸ್ತಾವನೆ.

ಭಾಷಾಸುಧಾರಣೆಗೆ ಗ್ರಂಥಗಳೇ ಹೆಚ್ಚು ಕಾರಣೀಭೂತವಾಗಿರುತ್ತವಷ್ಟೆ; ಆದಕ್ಕಾಗಿ ವಿದ್ವಜ್ಜನರು ಬೇರೆ ಬೇರೆ ಪ್ರಾಂತಗಳಲ್ಲಿ ಬೇರೆ ಬೇರೆ ವಿಷಯಗಳ ಮೇಲೆ ಅನೇಕ ಗ್ರಂಥಗಳನ್ನು ರಚಿಸತೊಡಗಿದ್ದಾರೆ; ಅದರಿಂದ ಬೇರೆ ಬೇರೆ ವಿಷಯದ ಗ್ರಂಥಗಳು ಹೊಸ ಹೊಸ ರೂಪಗಳಿಂದ ವೇಗದಿಂದ ಜನ್ಮ ತಕ್ಕೊಳ್ಳಹತ್ತಿವೆ. ಅಷ್ಟೇಕೆ? ನಮ್ಮ ಕನ್ನಡದಲ್ಲಾದರೂ ಭೂಗೋಲ ಇತಿಹಾಸ ಮುಂತಾದ ವಿಷಯಗಳ ಮೇಲೆ ಬೇರೆ ಬೇರೆ ಗ್ರಂಥಗಳು ಅವತರಿಸಿರುವದಿಲ್ಲವೇ? ಜಮಾಖರ್ಚಿನ ವಿಷಯದ ಮೇಲೆ ಸಹ ನಮ್ಮ ನೆರೆಯ ಮಹಾರಾಷ್ಟ್ರದಲ್ಲಿ ಬೇರೆ ಬೇರೆ ಪುಸ್ತಕಗಳಾಗಿವೆ. ಸದ್ಯಕ್ಕೆ ಕನ್ನಡದಲ್ಲಿ ಎರಡು ಜಮಾಖರ್ಚಿನ ಪುಸ್ತಕಗಳು ಕಂಡುಬರುತ್ತವೆ ಈ ವಿಷಯದ ಮೇಲೆ ಹೊಸ ತರದ ಇನ್ನೊಂದು ಪುಸ್ತಕವಿದ್ದರೆ ಅಪ್ರಾಸಂಗಿಕವಾಗಲಿಕ್ಕಿಲ್ಲೆಂತಲೂ, ವಿದ್ಯಾರ್ಥಿಗಳಿಗೆ ಹೆಚ್ಚು ಸಹಾಯವಾಗಬಹುದೆಂತಲೂ ನೆನಿಸಿ ನಾನು ಇದನ್ನು ಬರೆದೆನು. ಪ್ರವಾಳ ಕೀಟಕವು ಅತಿ ಸೂಕ್ಷ್ಮ ಜಂತುವಾಗಿದ್ದರೂ ತನ್ನ ಶಕ್ತಿಮೀರಿ ಹೊಸ ಭೂಪ್ರದೇಶವನ್ನು ರಚಿಸ ಹವಣಿಸುವಂತೆ ನನ್ನ ಈ ಕೃತಿಯಾಗಿರುತ್ತದೆ. ಸಾರಾಂಶವೇನೆಂದರೆ ನನ್ನ ಉದ್ದೇಶವು ಕೇವಲ ತಾಯ್ನುಡಿಯ ಸೇವೆಯು ಕಿಂಚಿತ್ತಾದರೂ ನನ್ನಿಂದ ಘಟಿಸಬೇಕೆಂಬದಾಗಿರುತ್ತದೆಯೇ ಹೊರತು ಮೇಲಾಟದ ರೂಪದಿಂದಲ್ಲ.

ಈ ಪುಸ್ತಕದಲ್ಲಿ ಹೊಸ ಶಿಕ್ಷಣಕ್ರಮಕ್ಕನುಸರಿಸಿ ಯಾವದೊಂದು ವಿಷಯದ ಬಗ್ಗೆ ವಿಚಾರಗಳನ್ನು ಹುಟ್ಟಿಸಿ ಅವುಗಳಿಂದ ನಿಷ್ಪನ್ನವಾದ ಸಂಗತಿಗಳಿಂದ ವ್ಯಾಖ್ಯೆಗಳು ಕಟ್ಟಲ್ಪಟ್ಟವೆ; ಉಳಿದ ಸಂಗತಿಗಳ ವಿವೇಚನವಾದರೂ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಯುವಂತೆ ಸೋಪಪತ್ತಿಕವಾಗಿ ಮಾಡಲ್ಪಟ್ಟದೆ.

ಇದರಲ್ಲಿರುವ ಕೊಂಕುಕೊರತೆಗಳನ್ನು ವಿದ್ವಜ್ಜನರು ಲಕ್ಷ್ಯಕ್ಕೆ ತಾರರಷ್ಟೆ; ಜಲಮಿಶ್ರಿತವಾದ ಹಾಲಲ್ಲಿರುವ ಹಾಲನ್ನಷ್ಟೇ ಸ್ವೀಕರಿಸಬೇಕೆಂದು ರಾಜಹಂಸಗಳಿಗೆ ಹೇಳಬೇಕಾಗಿದೆಯೋ? ಈ ಬಗ್ಗೆ ಸೂಚನೆಗಳನ್ನು ಮಾಡತಕ್ಕದ್ದಿದ್ದು ದಯಮಾಡಿ ತಿಳಿಸಿದಲ್ಲಿ ಅವುಗಳನ್ನು ಪುನರಾವೃತ್ತಿಯಲ್ಲಿ ಆತ್ಮಾದರದಿಂದ ಸ್ವೀಕರಿಸುವೆನು.

ಓ. ಬಾ. ಬೋಕೆ.

೨ನೆಯ ಆವೃತ್ತಿಯ ಪ್ರಸ್ತಾವನೆ.

ಇದರ ಮೊದಲನೆಯಾವೃತ್ತಿಯ ಪ್ರತಿಗಳಿಗೆ ಶಿಕ್ಷಕರೂ ವಿದ್ಯಾರ್ಥಿಗಳೂ ಆಶ್ರಯಕೊಟ್ಟದ್ದರಿಂದ ಅವೆಲ್ಲ ಕೆಲವೇ ದಿವಸಗಳಲ್ಲಿಯೇ ತೀರಿಹೋದವು; ಅದರಂತೆ ಸುಧಾರಿಸಿದ ಈ ಆವೃತ್ತಿಗಾದರೂ ಆಶ್ರಯ ಕೊಡುವರೆಂದು ನಂಬಿಕೊಂಡಿರುವೆನು.

ಓ. ಬಾ. ಬೋಕೆ.

ಅನುಕ್ರಮಣಿಕೆ.

ಮೊದಲನೆಯ ಭಾಗ.

ಎರಡನೆಯ ಭಾಗ.

ಮೂರನೆಯ ಭಾಗ.

ಏತದ್ದೇಶೀಯ

ಸೋಪಪತ್ತಿಕ

ಜಮಾಖರ್ಚಿನ ಪದ್ಧತಿಯು.

ಮೊದಲನೆಯ ಭಾಗ.

೧ ನೆಯ ಪ್ರಕರಣ.

ವಿಷಯಪ್ರವೇಶ.

ಭಾಗಗಳು:—೧ ಹಣದ ಅವಶ್ಯಕತೆ, ೨ ಜಮಾಖರ್ಚಿನ ಪದ್ಧತಿಯ ಉತ್ಪತ್ತಿ, ೩ ಜಮಾಖರ್ಚಿನ ಉಪಯೋಗ, ೪ ಬರಹದ ಬಗ್ಗೆ ಎಚ್ಚರಿಕೆ.

(೧) ಮನುಷ್ಯನು ಬೇಕಾದಂತಹ ಉಚ್ಚನೀಚ ಸ್ಥಿತಿಯಲ್ಲಿರಲಿ, ಅವನಿಗೆ ಉಣ್ಣುವದಕ್ಕೆ ಕಾಳುಕಡಿ, ಹೊದ್ದುಕೊಳ್ಳುವದಕ್ಕೆ ಅರಿವೆ ಅಂಚಡಿ, ಇರುವದಕ್ಕೆ ಮನೆಮಾರು, ಇವಲ್ಲದೆ ಬೇರೆ ಸುಖಸಾಧನದ ವಸ್ತುಗಳು ಹೀಗೆ ಒಂದೇ? ಎರಡೇ? ಅನೇಕಸಂಗತಿಗಳ ಸಲುವಾಗಿ ಅವನು ಹೆಚ್ಚುಕಡಿಮೆ ಪ್ರಮಾಣದಿಂದ ಹಣವನ್ನು ವೆಚ್ಚಮಾಡಬೇಕಾಗುವದು, ಅದರಿಂದ ವ್ಯವಹಾರ ಚಕ್ರಸಾಗುವದಕ್ಕೆ ದ್ರವ್ಯದ ಹೊರತು ನಮಗೆ ನಿರ್ವಾಹವೇ ಇಲ್ಲ; ಇದಕ್ಕಾಗಿಯೇ "ದುಡ್ಡುಳ್ಳವನೇ ದೊಡ್ಡವನು" ಎಂಬ ನಾಣ್ಣುಡಿಯು ಉಂಟಾಗಿರುತ್ತದಲ್ಲವೇ? ಇಂತಹ ಉಪಯುಕ್ತವಾದ ಹಣವನ್ನು ಸಂಪಾದಿಸುವದಕ್ಕೂ ಪ್ರಸಂಗೋಪಾತ್ತವಾಗಿ ಉಪಯೋಗವಾಗಬೇಕೆಂದು ಅದರ ಸಂಗ್ರಹ ಮಾಡುವದಕ್ಕೂ ಪ್ರತಿಯೊಬ್ಬ ಮನುಷ್ಯನಿಗೆ ಯತ್ನಮಾಡುವದೇ ಪ್ರಾಪ್ತವಾಗಿದೆ.

(೨) ಇದಲ್ಲದೆ ತನ್ನ ಆದಾಯವೆಷ್ಟು? ತನ್ನ ವ್ಯಯವೆಷ್ಟು? ತನ್ನ ಕೊಡ ಕೊಳ್ಳುವದೆಷ್ಟು? ತನ್ನಲ್ಲಿದ್ದ ಸಂಚಯವೆಷ್ಟು? ಇವುಗಳ ನೆಲೆಯು ಹತ್ತುವದಾದರೂ ಅವನಿಗೆ ಅತ್ಯವಶ್ಯವಾದದ್ದು; ಇವುಗಳನ್ನೆಲ್ಲ ಬಾಯಿನೆನಪಿನಿಂದ ಎಷ್ಟೆಂದು

ಇಡಬೇಕು. ? ಅವು ಬೇಗನೆ ಮರೆತುಹೋಗುವವು; ಆದಕ್ಕಾಗಿ ಅವುಗಳ ಲೆಕ್ಕವನ್ನು ಬರೆದು ಇಡುವದು ಬಹಳೇ ಅಗತ್ಯವಾದದ್ದು; ಲೇಖನವು ಚಿರಕಾಲ ಬಾಳುವಂಥಹದು; ಇದೇ ಕಾರಣದಿಂದ ಅದರ ಘಟಕಗಳು ಅಕ್ಷರ (ನಾಶರಹಿತ) ಗಳೆಂಬ ಹೆಸರನ್ನು ತಾಳಿರುವವು, ಅಕ್ಷರಗಳನ್ನು ಒಮ್ಮೆ ಬರೆದು ಬಿಟ್ಟರೆ ತೀರಿತು, ಅವಕ್ಕೆ ಸಾವಿಲ್ಲ, ಅವು ಬ್ರಹ್ಮಲಿಖಿತವೇ ಆಗಿ ಹೋಗುತ್ತವೆ. ನ್ಯಾಯಾಧೀಶರಂತು ಬಾಯಿಸಾಕ್ಷಿಗಳಿಗಿಂತ ಲೇಖನದ ಆಧಾರವನ್ನೇ ಹೆಚ್ಚು ಮನ್ನಿಸುವರು; ಅದಕ್ಕಂತೇ ಹಿಂದುಸ್ಥಾನೀ ಭಾಷೆಯಲ್ಲಿ ' एकालिखना हजारबोलना ''ಎಂಬ ಗಾದೆಯ ಮಾತು ಉಂಟಾಗಿದೆ. ಆದುದರಿಂದ ತನ್ನ ಆದಾಯ, ವ್ಯಯ, ಕೊಡಕೊಳ್ಳುವಿಕೆ, ಸಂಗ್ರಹ ಮುಂತಾದವುಗಳ ಲೆಕ್ಕವನ್ನು ಬರೆದು ಇಡುವ ಪದ್ಧತಿಯು ಉಂಟಾಗಿದೆ; ಈ ಪದ್ಧತಿಗೆ ಜಮಾಖರ್ಚಿನ ಪದ್ಧತಿಯೆಂದೆನ್ನುವರು.

(೩) ಜಮಾಖರ್ಚನ್ನು ಇಡುವದರಿಂದ ತಮ್ಮ ಸಾಂಪತ್ತಿಕ ಸ್ಥಿತಿಯಲ್ಲಿ ಏನು ಹೆಚ್ಚು ಕಡಿಮೆಯಾಯಿತೆಂಬದರ ನಿಜಸ್ವರೂಪವು ಗೊತ್ತಾಗುವದು; ಕೊಡಕೊಳ್ಳುವ ಸಂಗತಿಗಳಲ್ಲಿ ಸಂಶಯವು ಉಳಿಯುವದಿಲ್ಲ; ಜಮಾಖರ್ಚು ಎಂದರೆ ಹಣದ ಸಂಬಂಧದಿಂದ ಕೆಲಕಾಲದ ವರೆಗೆ ನಡೆದ ವ್ಯವಹಾರದ ಇತಿಹಾಸವೇ ಎಂದು ಹೇಳಬಹುದು; ಜಮಾಖರ್ಚು ಮನುಷ್ಯನ ವ್ಯವಹಾರದ ಸತ್ಯಾಸತ್ಯತೆಯನ್ನು ತಿಳಿಸಿಕೊಡುವ ಒರೆಗಲ್ಲಿನಂತಿರುತ್ತದೆ. " ಹಾಸಿಗೆ ನೋಡಿ ಕಾಲುಚಾಚು " ಎಂಬ ನೀತಿ ತತ್ವವನ್ನು ಬೋಧಿಸಿ ಮಿತವ್ಯಯವೆಂಬ ಸದ್ಗುಣವನ್ನು ಹುಟ್ಟಿಸುತ್ತದೆ. ಮಿತವ್ಯಯ ಮಾಡುತ್ತಿದ್ದ ಮನುಷ್ಯನಿಗೆ ಜಗತ್ತಿನ ಭಯವಿಲ್ಲ; ಅವನ ಇಡೀ ಜನ್ಮವೆಲ್ಲ ತಾಪತ್ರಯವಿಲ್ಲದೆ ಆನಂದದಿಂದ ಗಮಿಸುವದು. ಬಹಳ ಹೇಳುವದೇನು. ಅವನಲ್ಲಿ ಧನದ ಸಂಗ್ರಹವು ಹೆಚ್ಚುತ್ತ ಹೋಗುವದು.

(೪) ಆದುದರಿಂದ ಮಕ್ಕಳೇ, ನೀವು ರೊಕ್ಕದ ಲೆಕ್ಕವನ್ನು ಚೊಕ್ಕವಾಗಿ ಬರೆಯುವಂತಹ ತಕ್ಕ ಪದ್ಧತಿಯಾದ ಜಮಾಖರ್ಚನ್ನು ಬರೆಯುವದಕ್ಕೆ ಅಕ್ಕರೆಯಿಂದ ಕಲಿಯುವದು ಬಹಳೇ ಅಗತ್ಯವಾದದ್ದಲ್ಲವೇ? ಜಮಾಖರ್ಚನ್ನು ಬಹುತರ ಎಲ್ಲರೂ ಇಟ್ಟೇ ಇಡುವರು; ದುಡಿದು ಹೊಟ್ಟೆ ತುಂಬಿಕೊಳ್ಳುವ ಬರೆಯಬಾರದ ಕೂಲಿಕಾರನು ಸಹ ತನಗೆ ಬಂತೆಷ್ಟು? ಹೋಯಿತೆಷ್ಟು? ಎಂಬದನ್ನು ತಿಳಿದುಕೊಳ್ಳುವದಕ್ಕೆ ತನ್ನ ಮನದೊಳಗೆ ಎಣಿಕೆ ಹಾಕತೊಡಗುವನು. ಬಾಯಿನೆನಪಿನಿಂದ ಎಣಿಕೆ ಹತ್ತದಿದ್ದರೆ ಅವನು ತನ್ನ ಜಮಾಖರ್ಚನ್ನು ಬರೆಯತೊಡಗುವನು; ಅವನ ಕಾಗದಗಳಾವವು? ಗೋಡೆಗಳು, ಇಲ್ಲವೆ ಕದಗಳು ! ಆ ಕೂಲಿಕಾರಣ್ಣನು ತನ್ನ ಆ ಕಾಗದಗಳ ಮೇಲೆ ಏತರಿಂದ ಹೇಗೆ ಬರೆಯುವನು ? ಇದ್ದಲಿಯಿಂದ ಗುರುತುಗಳನ್ನು ಮಾಡಿ, ಇಲ್ಲವೆ ಸುಣ್ಣದ ಬೊಟ್ಟುಗಳನ್ನಿಟ್ಟು ತನ್ನ ಲೆಕ್ಕವನ್ನು ಲೇಖಿಸುವನು ! ಬರೆಯಲಿಕ್ಕೆ ಬರುವ ವ್ಯವಹಾರ ಬಹಳವಿಲ್ಲದ ಗೃಹಸ್ಥರು ಸ್ಮರಣ ಪುಸ್ತ

ಕವನ್ನು ಅಥವಾ ರೋಜನಿಶಿ (ಡಾಯರಿ) ಯನ್ನು ಉಪಯೋಗಿಸುವರು. ವರ್ತಕರು ವ್ಯವಹಾರಸ್ಥ ಮುಂತಾದವರು ಜಮಾಖರ್ಚಿನ ಪುಸ್ತಕಗಳನ್ನು ಕಟ್ಟಿ ಅದರಲ್ಲಿ ಬರೆಯುವರು. ಘನವಂತರಾದ ಸಾವುಕಾರ ವರ್ತಕ ಮೊದಲಾದವರಂತು ಜಮಾಖರ್ಚಿನ ಹೆಚ್ಚೊತ್ತಿಗೆಗಳನ್ನೇ ಕಟ್ಟುವರು; ಅದನ್ನು ಬರೆದು ಕೊಳ್ಳುವದಕ್ಕೆ ಕಾರಕೂನನನ್ನು ಸಹ ಇಟ್ಟುಕೊಳ್ಳುವರು; ಜಮಾಖರ್ಚು ಆರ್ಥಿಕ ಸ್ಥಿತಿಯನ್ನು ತಿಳಿಸುವ ಸಾಧನವಾಗಿದ್ದುದರಿಂದ ಅದನ್ನು ಎಚ್ಚರದಿಂದ ಬರೆಯಬೇಕೆಂಬದು ಸ್ಪಷ್ಟವದೆ. ಅದರೊಳಗಿನ ಅಂಕೆಗಳು, ಅಕ್ಷರಗಳು ಸಂಶಯಯುಕ್ತವಾಗಿರದೆ ನಿಚ್ಚಳವಾಗಿರಬೇಕು; ಏನಾದರೂ ಮಹತ್ವವಿಲ್ಲದ ತುಸು ತಪ್ಪು ಆಗಿದ್ದರೆ ಕೆತ್ತದೆ ತಪ್ಪಿನ ಮೇಲೆ ಕೆಂಪು ಮಸಿಯಿಂದ ಗೆರೆಹೊಡೆದು ನಿಜವಾದದ್ದನ್ನು ಬರೆದು ಸಂಕ್ಷಿಪ್ತ ಸಹಿಯನ್ನು ಮಾಡಬೇಕು. ಮಸಿಯ ಗೊಣ್ಣೆಗಳನ್ನು ಬೀಳಗೊಡಬಾರದು. ಬೇರೀಜುಗಳನ್ನು ಬೇರೊಂದು ಖರಡಿನಲ್ಲಿ ಮಾಡಿ ಅವು ಸರಿಯಾಗಿರುತ್ತವೆಂದು ತಿಳಿದ ಬಳಿಕ ಜಮಾಖರ್ಚಿನ ಪುಸ್ತಕದಲ್ಲಿ ಬರೆಯಬೇಕು. ಸಾರಾಂಶವೇನಂದರೆ ಲೆಕ್ಕವು ಚಿತ್ತಕಾಟವಾಗಿರದೆ ಹಸನಾದ ಕನ್ನಡಿಯಂತೆ ಯಾರು ನೋಡಿದರೂ ಸ್ಪಷ್ಟವಾಗಿ ತಿಳಿಯುವ ಹಾಗೆ ಇರಬೇಕು; ಅಂದರೆ ಎಲ್ಲಿ ಹೋದರೂ ಅದಕ್ಕೆ ಸಾವಿಲ್ಲ.

೨ನೆಯ ಪ್ರಕರಣ.

ಕೊಡಕೊಳ್ಳುವ ರೀತಿ.

ಭಾಗಗಳು:— ೧ ಜಮೆ, ೨ ಖರ್ಚು, ೩ ಸಿಲಕು, ೪ ಜಮಾಖರ್ಚಿನ ಪುಸ್ತಕ.

೧ ಜನರ ಕಡೆಯಿಂದ ನಮಗೆ ಹಣವು ಬರತಕ್ಕದ್ದಿದ್ದಲ್ಲಿ ಅವರು ನಮಗೆ ರೋಖ ಹಣವನ್ನು ಕೊಡಬಹುದು. ಪ್ರತ್ಯಕ್ಷ (ರೋಖ) ಹಣವು ಅವರ ಬಳಿಯಲ್ಲಿ ಇಲ್ಲದೆ ಇದ್ದು, ಹಣಕೊಡುವ ಬಗ್ಗೆ ನಮ್ಮ ಉಪದ್ರವವಾದರೆ ಅವರು ರೋಖಹಣದ ಬದಲಾಗಿ ಅಷ್ಟೇ ಬೆಲೆ ಬಾಳುವ ತಮ್ಮಲ್ಲಿ ಇದ್ದ ಯಾವದಾದರೊಂದು ಪದಾರ್ಥವನ್ನು ಕೊಟ್ಟು ಮುಟ್ಟಿಸಬಹುದಷ್ಟೆ; ಹಾಗೆ ಮಾಡಲಿಕ್ಕೂ ಅವರಿಗೆ ಅನುಕೂಲವಿಲ್ಲದಿದ್ದರೆ ಅನ್ಯರ ಹವಾಲಿಯನ್ನು ಕೊಟ್ಟು, ಇಲ್ಲವೆ ಮತ್ತಾವ ಬಗೆಯಿಂದಾದರೂ ನಮ್ಮನ್ನು ಒಡಂಬಡಿಸಿ ನಮ್ಮ ಸಾಲದ ಬಂಧನದಿಂದ ಅವರು ಬಿಡುಗಡೆ ಹೊಂದಬಹುದಲ್ಲವೇ ? ಈ ಬಗೆಯಾಗಿ ಯಾವ ಪರಿಯಿಂದಾದರೂ ನಮಗೆ ಕೊಡತಕ್ಕದ್ದನ್ನು ಮುಟ್ಟಿಸಿ, ಅವರು ಪಾರವಾದರೆ ಅವರಿಂದ

ನಮಗೆ ಹಣವು ಮುಟ್ಟಿತೆಂದು ತಿಳಿದುಕೊಳ್ಳಬೇಕಾಗುತ್ತದೆ. ಇದಕ್ಕೆ ಜಮೆಯೆಂದೆನ್ನುವರು. ಆದುದರಿಂದ ಮಂದಿಯ ಕಡೆಯಿಂದ ತನಗೆ ರೋಖ ಇಲ್ಲವೆ ಬೇರೆ ಯಾವ ರೀತಿಯಿಂದಾದರೂ ಬಂದ ಹಣಕ್ಕೆ ಜಮೆಯೆಂಬ ಹೆಸರು.

೨ ಇದೇ ರೀತಿಯಾಗಿ ನಾವು ಮಂದಿಗೆ ಹಣ ಕೊಡತಕ್ಕದ್ದಿದ್ದಲ್ಲಿ, ರೋಖ ಹಣವನ್ನು ಅವರಿಗೆ ಕೊಡಬಹುದು; ರೋಖ ಹಣವು ನಮ್ಮ ಹತ್ತರವಿಲ್ಲದೆ ಇದ್ದು ಮಂದಿಯ ತ್ರಾಸವು ನಮಗೆ ಬಹಳವಾದರೆ ಅಷ್ಟೇ ಬೆಲೆ ಬಾಳುವ ನಮ್ಮ ಹತ್ತರವಿರುವ ಯಾವದಾದರೊಂದು ಪದಾರ್ಥವನ್ನು ಕೊಟ್ಟು ಅವರಿಗೆ ಕೊಡತಕ್ಕ ಹಣವನ್ನು ಮುಟ್ಟಿಸಬಹುದು, ಅದೂ ಇಲ್ಲದ ಪಕ್ಷಕ್ಕೆ ಅನ್ಯರ ಹವಾಲೆ ಮುಂತಾದದ್ದನ್ನು ಕೊಟ್ಟು ಅವರ ಋಣದಿಂದ ಮುಕ್ತರಾಗಬಹುದು. ಈ ಮೇರೆಗೆ ಯಾವ ರೀತಿಯಿಂದಾದರೂ ನಾವು ಮಂದಿಗೆ ಕೊಡತಕ್ಕದ್ದನ್ನು ಮುಟ್ಟಿಸಿ ಸಾರವಾದರೆ ಅವರಿಗೆ ನಾವು ಹಣವನ್ನು ಕೊಟ್ಟೆವೆಂದು ತಿಳಿದುಕೊಳ್ಳಬೇಕಾಗುವದು ಇದಕ್ಕೆ ಖರ್ಚು ಎಂದೆನ್ನುವರು. ಆದರಿಂದ ಮಂದಿಗೆ ರೋಖವಾಗಲಿ ಬೇರೆ ಯಾವ ರೀತಿಯಿಂದಾಗಲಿ ಕೊಟ್ಟ ಹಣಕ್ಕೆ ಖರ್ಚು ಅನ್ನುತ್ತಾರೆ.

೩ ಈಗ ನಮ್ಮ ಹತ್ತರ ೨೫ ರೂಪಾಯಿಗಳಿರುತ್ತವೆಂದು ತಿಳಿದು, ಈ ವೊತ್ತು ನಮ್ಮ ಹೊಲದ ಉತ್ಪನ್ನದಲ್ಲಿ ೧೦೦ ರೂಪಾಯಿಗಳು ಬಂದವೆಂದು ಕಲ್ಪಿಸುವಾ; ಹಾಗಾದರೆ ಮೊದಲಿನ ೨೫, ಈ ವೊತ್ತಿನ ೧೦೦ ಕೂಡಿ ೧೨೫ ಒಟ್ಟು ನಮ್ಮಲ್ಲಿ ಆದಂತಾಯಿತು, ಆದರೆ ಈವೊತ್ತು ಸರಕಾರದ ತೆರಿಗೆಯ ಬಗ್ಗೆ ೨೦ ರೂಪಾಯಿಗಳನ್ನು ಕೊಟ್ಟೆವೆಂದು ತಿಳಿದರೆ ನಮ್ಮ ಹತ್ತರ ೧೦೫ ರೂಪಾಯಿಗಳು ಉಳಿಯುವವು, ಈ ಉಳಿಯುವ ಹಣಕ್ಕೆ ಸಿಲುಕು ಎನ್ನುವರು; ಆದುದರಿಂದ ಮೊದಲಿದ್ದ ಹಣದಲ್ಲಿ ಹೊಸದಾಗಿ ಬಂದ ಹಣವನ್ನು ಕೂಡಿಸಲಾಗಿ ಆಗುವ ಒಟ್ಟಿನಲ್ಲಿ ಇಲ್ಲವೆ ಜಮೆಯ ರಕಮಿನಲ್ಲಿ ಖರ್ಚಾದ ಹಣವನ್ನು ಕಳೆದರೆ ಉಳಿಯುವ ಹಣಕ್ಕೆ ಸಿಲಕು ಎಂದು ಅನ್ನುವರು.

೪ ಆವುದಾದರೊಂದು ವ್ಯವಹಾರದಲ್ಲಿ ತನಗೆ ಬಂತೆಷ್ಟು ಹೋಯಿತೆಷ್ಟು ಇದನ್ನು ತಿಳಿದುಕೊಳ್ಳುವದೇ ಮುಖ್ಯ ಸಂಗತಿಯಾಗಿದೆ; ಬಂದ ಹೋದ ಲೆಕ್ಕದ ಅರಿವು ಇಲ್ಲದೆ ಸಿಕ್ಕ ಸಿಕ್ಕ ಹಾಗೆ ಖರ್ಚು ಮಾಡಿದರೆ ತನ್ನ ವ್ಯವಹಾರದ ಮಟ್ಟು ತನಗೇ ತಿಳಿಯಲಾರದು; ಆದುದರಿಂದ ಜಮೆ ಮತ್ತು ಖರ್ಚು ಇವುಗಳನ್ನು ಅರಿತುಕೊಂಡು ಜಮೆಗಿಂತ ಖರ್ಚನ್ನು ಕಡಿಮೆ ಮಾಡುತ್ತ ಹೋಗುವದೇ ಜಾಣತನದ ಸಂಗತಿಯಾಗಿದೆ, ಅದಕ್ಕಾಗಿ ಜಮೆಯ ರಕಮುಗಳನ್ನೂ, ಖರ್ಚಿನ ರಕಮುಗಳನ್ನೂ ಒಂದು ಪುಸ್ತಕದಲ್ಲಿ ಬರೆದುಕೊಳ್ಳುವದು ಅಗತ್ಯವಾಗಿರುತ್ತದೆ. ಆದುದರಿಂದ ಜಮೆ ಮತ್ತು ಖರ್ಚು ಇವುಗಳ ಸಂಬಂಧವಾಗಿ ಬರೆಯಲ್ಪಡುವ ಪುಸ್ತಕಕ್ಕೆ ಜಮಾಖರ್ಚಿನ ಪುಸ್ತಕವೆನ್ನುವರು.

೩ನೆಯ ಪ್ರಕರಣ.

ಜಮಾ ಖರ್ಚಿನ ಪುಸ್ತಕಗಳು.

ಭಾಗಗಳುಃ—೧ ಕೀರ್ದಿ, ೨ ಕೀರ್ದಿಯ ಪ್ರಕಾರಗಳು, ೩ ಖಾತೆ, ೪ ಖತಾವಣಿ, ೫ ಕಚ್ಚಾ ಕೀರ್ದಿ, ೬ ಇತರ ಚೋಪಡಿಗಳು.

೧ ಜಮೆಯ ಸಂಗತಿಗಳು ಅನೇಕ ತರವಾಗಿ ಇರಬಹುದು; ಒಮ್ಮೆ ಜನರು ನಮ್ಮಿಂದ ಸಾಲವಾಗಿ ತೆಗೆದುಕೊಂಡ ಹಣವನ್ನು ನಮಗೆ ತಿರುಗಿ ತಂದುಕೊಡಬಹುದು; ಮತ್ತೊಮ್ಮೆ ನಮ್ಮಲ್ಲಿಯ ಮಾಲಿನ ಮಾರಾಟವಾಗಿ ಅದರ ಬೆಲೆಯ ಸಂಬಂಧದ ಹಣವು ಬರಬಹುದು; ಇನ್ನೊಮ್ಮೆ ನಾವು ಸಾಲಕೊಟ್ಟ ಹಣದ ಬಡ್ಡಿ ಬರಬಹುದು; ಹೀಗೆ ಹಲವು ರೀತಿಯಾಗಿ ಹಣಬರುವ ಮಾರ್ಗಗಳುಂಟು; ಇದರಂತೆ ನಾವಾದರೂ ಪರರಿಗೆ ಬಗೆಬಗೆಯ ಸಂಗತಿಗಳ ಸಂಬಂಧವಾಗಿ ಹಣವನ್ನು ಕೊಡಬಹುದು, ಈ ಮೇರೆಗೆ ಜಮೆಯ ಸಂಗತಿಗಳೂ ಖರ್ಚಿನ ಸಂಗತಿಗಳೂ ದಿನವೊಂದಕ್ಕೊ ಇಲ್ಲವೆ ಕೆಲಕೆಲವು ದಿವಸಗಳ ಅಂತರದಿಂದಲೂ ಆಗತೊಡಗಿದರೆ ಅವುಗಳನ್ನು ನೆನಪಿನಲ್ಲಿ ಎಷ್ಟೆಂದು ಇಟ್ಟುಕೊಳ್ಳಬೇಕು? ನಮ್ಮ ಹಣದ ಲೆಕ್ಕ ನಮಗೆ ಹತ್ತುವ ಬಗೆ ಹೇಗೆ? ಅದಕ್ಕಾಗಿ ಅವುಗಳನ್ನು ಸ್ವಚ್ಛವಾದ ಕಾಗದಗಳ ಮೇಲೆ ಸ್ಪಷ್ಟವಾಗಿ ತಿಳಿಯುವಂತೆ ಬರೆದುಕೊಳ್ಳಬೇಕಾಗುತ್ತದಲ್ಲವೇ? ಹಾಗೆ ಮಾಡುವದರಿಂದ ನಮ್ಮಲ್ಲಿ ಎಷ್ಟೆಷ್ಟು ಹಣವು ಯಾವ ಯಾವ ಕಾರಣಗಳಿಂದ ಯಾವ ಯಾವ ದಿವಸ ಬಂತು, ಮತ್ತು ಹೋಯಿತು, ಮತ್ತು ನಮ್ಮಲ್ಲಿ ಎಷ್ಟು ಹಣ ಉಳಿಯತಕ್ಕದ್ದು ಎಂಬದರ ಲೆಕ್ಕವು ನಮಗೆ ಹತ್ತುವದು. ನಮಗೆ ಮರವಾದರೆ ಅದನ್ನು ಕೂಡಲೆ ಹಿಡಿದು ಕೊಡುವದು, ಆದುದರಿಂದ ಇವುಗಳ ಬಗ್ಗೆ ನಾವು ಒಂದು ಹೊತ್ತಿಗೆಯನ್ನೇ ಕಟ್ಟುವದು ಒಳ್ಳೇದು. ಈ ಹೊತ್ತಿಗೆಗೆ ಕೀರ್ದಿಯನ್ನುವರು, ಆದುದರಿಂದ ಜಮೆಯ ಮತ್ತು ಖರ್ಚಿನ ಸಂಗತಿಗಳನ್ನು ವಿವರ (ತಪಸೀಲ) ವಾಗಿ ಬರೆದು ಶಿಲಕು ಹೊರಡಿಸುವ ಪುಸ್ತಕಕ್ಕೆ ಕೀರ್ದಿಯೆಂಬ ಹೆಸರು.

೨ ದಿನಾಲು ಕೊಡುಕೊಳ್ಳುವ ವ್ಯವಹಾರವು ಒಳ್ಳೇ ಭರದಿಂದ ಸಾಗಹತ್ತಿದರೆ ಆ ಕೊಡಕೊಳ್ಳುವ ರಕಮುಗಳನ್ನು ದಿನಾಲು ಕೀರ್ದಿಯಲ್ಲಿ ಬರೆದು ಶಿಲಕನ್ನು ತೆಗೆಯುವದೂ, ಅದು ಸರಿಯಾಗಿರುತ್ತದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಲೆಕ್ಕವನ್ನು ಹಸನ ಮಾಡಿಕೊಳ್ಳುವದೂ ಒಳ್ಳೆಯದು; ಆದರೆ ದಿನಾಲು ವ್ಯವಹಾರ ಸಾಗದೆ ಇದ್ದ ಸಣ್ಣ ಪುಟ್ಟ ವ್ಯವಹಾರಸ್ಥರು ದಿನಾಲು ಕೀರ್ದಿಯನ್ನು ಬರೆಯುವ ಕಾರಣವಿಲ್ಲವಷ್ಟೇ? ಅಂಥವರು ಯಾವ ಯಾವ ದಿವಸ

ಎಷ್ಟೆಷ್ಟು ಜಮೆ, ಮತ್ತು ಎಷ್ಟೆಷ್ಟು ಖರ್ಚು ಆಗಿರುವದು ಎಂಬದರ ಟಿಪ್ಪಣಿಯು ನ್ನಿಟ್ಟು ಕೆಲವು ದಿವಸಗಳ ಅಂತರದಿಂದ ಅವೆಲ್ಲವುಗಳ ಜಮಾಖರ್ಚನ್ನು ಆಯಾ ಮಿತಿಯ ಪ್ರಕಾರ ಬರೆದುಕೊಂಡು ಸಿಲಕು ತೆಗೆಯಬಹುದು. ಅಂದಮೇಲೆ ಕೀರ್ದಿ ಯಲ್ಲಿ ದಿನ ದಿನಕ್ಕೆ ಬರೆಯುವ ಕೀರ್ದಿ, ಮತ್ತು ನಿಯಮಿತ ಮುದ್ದತಿಗೆ ಇಲ್ಲವೆ ಸಮ್ಮಗೆ ಕೂಡಿದಾಗ ಬರೆಯುವ ಕೀರ್ದಿ ಎಂದು ಎರಡು ಪ್ರಕಾರಗಳಿರುತ್ತವೆ. **ದಿನವೊಂದಕ್ಕೂ ತಪಸೀಲವಾರ ಜಮಾಖರ್ಚನ್ನು ಬರೆದು ಸಿಲಕು ತೆಗೆಯುವ ವಹಿಗೆ ರೋಜ (ಪ್ರತಿದಿನದ) ಕೀರ್ದಿಯೆನ್ನುವರು;** ಕೆಲ ವರು ಇದಕ್ಕೆ ಧಾವರೀಕೀರ್ದೀಯೆಂದೆನ್ನುವರು. **ಕೆಲವು ದಿವಸಗಳ ವರೆಗೆ ತಡೆ ತಡೆದು ಬರೆಯುವ ಕೀರ್ದಿಗೆ ಜೈಠೀ (ಕೂತಂಥ ಅರ್ಥಾತ್ ದಿನಾವಧಿ ಯುಳ್ಳಂಥ) ಕೀರ್ದಿಯೆಂದು ಅನ್ನುವರು.** ಜೈಠೀಕೀರ್ದಿಯನ್ನು ದಿನದಿ ನಕ್ಕೆ ಬರೆಯುದ ಕಾರಣ ಪ್ರತಿಯೊಂದು ರಕಮಿನ ಮುಂದೆ (ಟಿಪ್ಪಣಿಯಲ್ಲಿ ಹಚ್ಚಿ ಕೊಂಡಿರುವಂತೆ) ಆಯಾ ವ್ಯವಹಾರ ನಡೆದ ತಾರೀಖನ್ನು ಅಥವಾ ಮಿತಿಯನ್ನು ಬರೆಯುವದು ಅವಶ್ಯವಾಗಿದೆ. (ಜೈಠೀಕೀರ್ದಿಯ ನಮೂನೆಯು ೩ ನೆಯ ಭಾಗ ದ ೧ ನೆಯ ಪ್ರಕರಣದಲ್ಲಿ ಬರೆಯಲ್ಪಟ್ಟದೆ.) ಜೈಠೀಕೀರ್ದಿಯಿಂದ ಪ್ರತಿನಿತ್ಯದ ಸಿಲಕು ತಿಳಿಯುವದಿಲ್ಲ ಆದರಿಂದ ಲೆಕ್ಕವು ತಪ್ಪಾಗಿದ್ದರೆ ತಟ್ಟನೆ ತಿಳಿಯದು. ಈ ಅನುಕೂಲತೆಗಳು ರೋಜಕೀರ್ದಿಗೆ ಇರುತ್ತವೆ.

೩ ಹೀಗೆ ಬಂದ ಬಂದ ಹಾಗೆ ಜಮೆ, ಕೊಟ್ಟ ಕೊಟ್ಟ ಹಾಗೆ ಖರ್ಚು ಬರೆ ಯುತ್ತ ಹೋಗುವ ಕೀರ್ದಿಯಲ್ಲಿ ಯಾರ ಯಾರ ಕಡೆಯಿಂದ ಇಲ್ಲವೆ ಯಾವ ಯಾವ ಸಂಗತಿಗಳ ಸಂಬಂಧವಾಗಿ ಎಷ್ಟೆಷ್ಟು ಹಣ ಬಂತು? ಮತ್ತು ಯಾರ ಯಾರಿಗೆ ಇಲ್ಲವೆ ಯಾವ ಯಾವ ಸಂಗತಿಗಳ ಸಂಬಂಧವಾಗಿ ಎಷ್ಟೆಷ್ಟು ಹಣ ಕೊಟ್ಟಿತು? ಇದು ಒಮ್ಮೆಲೇ ತಿಳಿಯುವದಿಲ್ಲ; ಬೇರೆ ಬೇರೆ ಪಾನುಗಳನ್ನು ತಿರುತಿರುವಿಹಾ ಕುತ್ತ ಹುಡುಹುಡುಕಾಡಿ ಬೇಸರ ಬರಬಹುದು; ಆದುದರಿಂದ ಯಾವ ಯಾವ ಮನುಷ್ಯರಿಂದ ಇಲ್ಲವೆ ಯಾವ ಯಾವ ಸಂಗತಿಗಳಿಂದ ಎಷ್ಟೆಷ್ಟು ಹಣ ಬಂತು? ಮತ್ತು ಯಾವ ಯಾವ ಮನುಷ್ಯರಿಗೆ ಇಲ್ಲವೆ ಯಾವ ಯಾವ ಸಂಗತಿಗಳಿಗೆ ಎಷ್ಟೆ ಷ್ಟು ಹಣ ಕೊಟ್ಟಿತು? ಇದು ಒಮ್ಮೆಲೇ ತಿಳಿಯುವಂತೆ ಪ್ರತಿಯೊಂದು ಸಂಗತಿಯ ಬಗ್ಗೆ ಸ್ವತಂತ್ರವಾಗಿ ಬರೆದಿಡುವದು ನಿಚ್ಚಳವಲ್ಲವೇ? ಹೀಗೆ ಬರೆದಿಡುವದಕ್ಕೆ ಖಾತೆ ಯೆನ್ನುವರು. ಹಾಗಾದರೆ **ಪ್ರತಿಯೊಬ್ಬ ಮನುಷ್ಯನ (ಇಸಮಿನ) ಮತ್ತು ಪ್ರತಿಯೊಂದು ಸಂಗತಿಯ (ಬಾಬಿನ) ಕೊಡಕೊಳ್ಳುವ ಜಮಾಖರ್ಚನ್ನು ಒತ್ತಟ್ಟಿಗೆ ಸ್ವತಂತ್ರವಾಗಿ ಬರೆದು ಇಡುವದಕ್ಕೆ ಖಾತೆಯೆಂಬ ಹೆಸರು.**

೪ ಇಂತಹ ಅನೇಕ ಖಾತೆಗಳನ್ನು ಪುಸ್ತಕ ಕಟ್ಟಿ ಅದರಲ್ಲಿ ಬರೆದುಕೊಳ್ಳು ವರು; ಆ ಪುಸ್ತಕಕ್ಕೆ ಖಾತೆಯವಹಿ ಅಥವಾ ಖತಾವಣಿಯೆನ್ನುವರು. ಆದುದ

ರಿಂದ ಎಲ್ಲ ಖಾತೆಗಳನ್ನು ಬರೆಯುವ ಪುಸ್ತಕಕ್ಕೆ ಖಾತೆಯುವಹಿ ಅಥವಾ ಖತಾವಣಿಯೆಂಬ ಹೆಸರು.

೫ ಇನ್ನು ವ್ಯವಹಾರ ನಡೆದ ಕೂಡಲೆ ಕೀರ್ದಿಯಲ್ಲಿಯೇ ಬರೆಯುತ್ತ ಹೋದರೆ ಆದರಲ್ಲಿ ತಪ್ಪುತಡಿಗಳಾಗುವ ಸಂಭವವುಂಟು; ಆದುದರಿಂದ ಬೇರೊಂದು ನೋಟಬುಕ್ಕನ್ನು ಕಟ್ಟಿ ಅದರಲ್ಲಿ ಇಲ್ಲವೆ ಒಂದು ಸಣ್ಣ ಕರೆಯ ಹಲಗೆಯ ಮೇಲೆ ವ್ಯವಹಾರ ನಡೆನಡೆದ ಹಾಗೆ ರಕಮುಗಳನ್ನು ಬರೆಯುತ್ತ ಹೋಗುವದು ಒಳ್ಳೆಯದಲ್ಲವೇ? ಹಾಗೆ ಮಾಡುವದರಿಂದ ಕೀರ್ದಿಪುಸ್ತಕದ ಮೇಲೆ ಆ ಟಿಪ್ಪಣೆಯಂತೆ ಸಾವಕಾಶವಾಗಿ ಏನೊಂದು ಗದ್ದಲವಿಲ್ಲದೆ ಲೆಕ್ಕವನ್ನು ಚೊಕ್ಕವಾಗಿ ಬರೆಯಲನುವಾಗುವದು. ಆದುದರಿಂದ **ಕೊಡಕೊಳ್ಳುವ ವ್ಯವಹಾರ ಸಾಗಿದ ಕೂಡಲೆ ಅವುಗಳ ಟಿಪ್ಪಣೆಯನ್ನು ವಿವರವಾಗಿ ಬರೆದುಕೊಂಡು ಸಿಲಕು ತೆಗೆಯುವ ನೋಟಬುಕ್ಕಿಗೆ ಕಚ್ಚಾಕೀರ್ದಿ ಅಥವಾ ರೋಜ ಖರಡು ಎಂದೆನ್ನುವರು.**

ರೋಜ ಖರಡಿನಲ್ಲಿ ಒಂದು ವೇಳೆ ತಪ್ಪು ಬರೆದುಕೊಂಡಿದ್ದರೆ ಆದನ್ನು ತಿದ್ದಿಕೊಳ್ಳಲಿಕ್ಕೆ ಬರುತ್ತದೆ, ಇಲ್ಲವೆ ಮೊದಲು ಬರೆದುಕೊಂಡದ್ದು ಅವಶ್ಯವಾಗಿ ತೋರದಿದ್ದರೆ ಆದನ್ನು ಕಾಟಹಾಕಲಿಕ್ಕೂ ಬರುತ್ತದೆ. ಅದರ ಹೆಸರೇ ಖರಡು ಅಲ್ಲವೇ? ಆದನ್ನು ಬೇಕಾದ ಹಾಗೆ ಸುಧಾರಿಸಿಕೊಳ್ಳಬಹುದು; ಅನಿಗೆ ಮುಂಜಾನೆ ೨೦ ರೂಪಾಯಿಗಳನ್ನು ಕೊಟ್ಟೆವೆಂದು ಕಲ್ಪಿಸುವಾ, ಅವನು ಸಂಜೆಗೆ ೨೦ ರೂಪಾಯಿಗಳನ್ನು ತಿರುಗಿ ತಂದುಕೊಟ್ಟರೆ ಆದನ್ನು ಜಮೆಹಿಡಿಯದೆ ಮುಂಜಾನೆ ಅವನ ಹೆಸರಿನಿಂದ ಖರ್ಚು ಬರೆದ ೨೦ ರೂಪಾಯಿಗಳನ್ನು ಕಾಟಹಾಕಿ ಬಿಟ್ಟರಾಯಿತು, ಈ ರಕಮನ್ನು ಪಕ್ಕಾ ಕೀರ್ದಿಯಲ್ಲಿ ಬರೆಯುವ ಕಾರಣವೇ ಇಲ್ಲ; ಇನ್ನು ಅನಿಗೆ ಮುಂಜಾನೆ ೧೦ ರೂಪಾಯಿಗಳನ್ನು ಕೊಟ್ಟು ಅವನ ಹೆಸರಿನಿಂದ ಖರ್ಚು ಹಾಕಿ, ಸಂಜೆಗೆ ಪುನಃ ೧೦ ರೂಪಾಯಿಗಳನ್ನು ಕೊಟ್ಟರೆ ಸಂಜೆಯ ೧೦ ರೂಪಾಯಿಗಳನ್ನು ಪ್ರತ್ಯೇಕವಾಗಿ ಬರೆಯದೆ ಮುಂಜಾನೆಯ ೧೦ ರೂಪಾಯಿಗಳನ್ನೇ ೨೦ ರೂ. ಮಾಡಿ ಪಕ್ಕಾ ಕೀರ್ದಿಯಲ್ಲಿ ೨೦ ರೂ. ಖರ್ಚು ಹಾಕಿದರಾಯಿತು. ಜಮೆಯ ಸಂಬಂಧವಾಗಿಯೂ ಇದೇ ಪ್ರಕಾರ ಮಾಡಬಹುದು. ರೋಜ ಖರಡವು ಕೇವಲ ಟಿಪ್ಪಣೆಯಾಗಿರುವದರಿಂದ ಹೀಗೆ ಚಿತ್ತಕಾಟ ಮಾಡಲಡ್ಡಿಯಿಲ್ಲ. ಆದರೆ ಪಕ್ಕಾ ಕೀರ್ದಿಯಲ್ಲಿ ಚಿತ್ತಕಾಟವು ಎಷ್ಟು ಮಾತ್ರಕ್ಕೂ ಆಗಕೂಡದು. (ಇದರ ಮಾದರಿಯನ್ನು ೩ನೆಯ ಭಾಗದ ೧ನೆಯ ಪ್ರಕರಣದಲ್ಲಿ ನೋಡು).

೬ ಇದಲ್ಲದೆ ಪಠಾಣವಹಿ, ಜಾಂಗಡವಹಿ, ಮಹತ್ವದ ಜೀನಸಿನ ಕೀರ್ದಿ ಖತಾವಣಿಗಳು, ಬೋಟಖತ ಮುಂತಾದ ಇತರ ಚೋಪಡಿಗಳಿರುತ್ತವೆ. ಅವುಗಳ ಬಗ್ಗೆ ಮುಂದೆ ೩ನೆಯ ಭಾಗದ ೧ನೆಯ ಪ್ರಕರಣದಲ್ಲಿ ಬರೆದಿರುತ್ತದೆ.

೪ ನೆಯ ಪ್ರಕರಣ.

ಲೇಖನಪದ್ಧತಿ.

ರೋಜಕೀರ್ದಿಯ ಬಗ್ಗೆ.

ಭಾಗಗಳು:— ೧ ಬರೆಯುವ ಸಿಸ್ತು, ೨ ಬೀತ ಒಳಿ, ೩ ರೋಜಕೀರ್ದಿಯ ಆರಂಭ, ೪ ರೋಖ ಮತ್ತು ಜಮಾಖರ್ಚ ರಕಮುಗಳು, ೫ ಜಮೆಯ ಮತ್ತು ಖರ್ಚಿನ ರಕಮುಗಳನ್ನು ಬರೆದುಕೊಳ್ಳುವ ಬಗ್ಗೆ ಎಚ್ಚರಿಕೆ, ೬ ಹಸ್ತೆ ಗುಜಾರತಿಗಳ ಬಗ್ಗೆ, ೭ ತಪ್ಪಿನ ದುರಸ್ತಿ, ೮ ದಿನದ ಸಿಲಕು, ೯ ದಿನದ ಬೇರೀಜು, ೧೦ ಜಮಾಖರ್ಚು ಇಲ್ಲದ ದಿವಸದ ಕೀರ್ದಿ.

೧ ಜಮಾಖರ್ಚು ಬರೆಯುವ ಪುಸ್ತಕದ ಪಾನುಗಳಲ್ಲಿ ಉದ್ದವಾಗಿ ಎಂಟು ಮಡಿಕೆಗಳನ್ನು ಮಾಡಿ, ಅವುಗಳೊಳಗಿನ ಮೊದಲಿನ (ಎಡಗಡೆಯ) ನಾಲ್ಕು ಮಡಿಕೆಗಳಲ್ಲಿ ಜಮೆಯ ಸಂಗತಿಗಳನ್ನೂ ಕಡೆಯ (ಬಲಗಡೆಯ) ನಾಲ್ಕು ಮಡಿಕೆಗಳಲ್ಲಿ ಖರ್ಚಿನ ಸಂಗತಿಗಳನ್ನೂ ಬರೆಯುವರು. ಈ ಮಡಿಕೆಗಳಿಗೆ ರಕಾನೆಗಳೆನ್ನುವರು. ಖರ್ಚಿಗಿಂತ ಜಮೆಯ ಸಂಗತಿಯೇ ಲಾಭಕ್ಕೆ ಆಸ್ಪದವಾಗಿರುವದರಿಂದ ಅದನ್ನೇ ಮೊದಲನೆಯ ಭಾಗದಲ್ಲಿ ಬರೆಯುವದಕ್ಕೆ ಉಲ್ಲಾಸವುಂಟಾಗುವದು ಸ್ವಾಭಾವಿಕವದೆ; ಪಾನಿನ ಮೊದಲಿನ ಅರ್ಧ ಭಾಗದಲ್ಲಿಯೂ ಎರಡನೆಯ ಅರ್ಧ ಭಾಗದಲ್ಲಿಯೂ ಇರುವ ನಾಲ್ಕು ನಾಲ್ಕು ರಕಾನೆಗಳಲ್ಲಿ ಮೊದಲನೆಯ ರಕಾನೆಯಲ್ಲಿ ಹಣದ ರಕಮುಗಳನ್ನೂ ಉಳಿದ ಮೂರು ರಕಾನೆಗಳಲ್ಲಿ ವಿವರ (ತಪಶೀಲು) ಗಳನ್ನೂ ಬರೆಯುವರು.

೨ ಒಂದು ಕೀರ್ದಿಗಾಗಿ ಒಂದು ಖತಾವಣಿಗಾಗಿ ಈ ಪ್ರಕಾರ ಎರಡು ಹೊಸ ಪುಸ್ತಕಗಳನ್ನು ಕಟ್ಟಿ ಅವುಗಳಲ್ಲಿ ವರ್ಷಾರಂಭದ ದಿವಸ ಬರೆಯತೊಡಗುವರು. ಮೊಟ್ಟ ಮೊದಲು ಪ್ರತಿಯೊಂದು ಮುಖಪೃಷ್ಠದ ಶಿರೋಭಾಗದಲ್ಲಿ (೧)ಪುಸ್ತಕದ ಹೆಸರು (೨) ಯಜಮಾನನ ಪೂರ್ಣಹೆಸರು (೩) ಇರುವಸ್ಥಳ (೪) ವರ್ಷದ ಅವಧಿ(ಇಂಥ ಮಿತಿಯಿಂದ ಇಂಥ ಮಿತಿಯವರೆಗೆ) ಗಳನ್ನು ಬರೆಯುವರು. ಶಿರೋಭಾಗದಲ್ಲಿ ಬರೆಯತಕ್ಕದ್ದನ್ನು ಕಾಗದದ ನಟ್ಟನಡುವೆ ಬರುವಂತೆ ದೊಡ್ಡಕ್ಷರಗಳಿಂದ ಚೆಂದವಾಗಿ ಎದ್ದು ಕಾಣುವಂತೆ ಬರೆದರೆ ಅಂದವಲ್ಲವೇ? ಈ ಪ್ರಕಾರ **ಕಾಗದದ ನಟ್ಟನಡುವೆ ಬರೆಯುವ ಸಾಲಿಗೆ ಬೀತ ಒಳಿಯೆನ್ನುವರು.** ಬೀತ (ಬೀಜ) ವೆಂದರೆ ಮಧ್ಯ; ಬೀತಒಳಿಯೆಂದರೆ ಮಧ್ಯದ ಸಾಲು.

೩ ಇನ್ನು ರೋಜಕೀರ್ದಿಯನ್ನು ಬರೆಯಲು ಆರಂಭಿಸುವಾ, ರೋಜಕೀರ್ದಿಯು ಪ್ರತಿದಿನ ಬರೆಯಲ್ಪಡುತ್ತಿದ್ದು ವರ್ಷದ ಅಂತ್ಯದ ವರೆಗೂ ಆ ಕ್ರಮವು ನಡೆದಿರುವದು. ಅದಕ್ಕಾಗಿ ವರ್ಷದ ಆರಂಭದ ದಿವಸವನ್ನು ನಿರ್ಣಯಿಸಬೇಕಲ್ಲವೇ? ಹಾಗಾದರೆ ಅದು ಶುಭದಿವಸವೇ ಇರಬೇಕಲ್ಲವೇ?

೧ ಕೆಲವರು ಕಾರ್ತಿಕಶುದ್ಧ (೧) ಪ್ರತಿಪದೆಯ (ದೀವಳಿಗೆಯ ಪಾಡ್ಯದ) ದಿವಸ ಆರಂಭಮಾಡುವರು; ಹಾಗಾದರೆ ಅವರ ವರ್ಷ ಆಶ್ವಿನ ವದ್ಯ (೩೦) ಅಮಾವಾಸ್ಯೆಗೆ ಮುಗಿಯತಕ್ಕದ್ದಾಯಿತು.

೨ ಕೆಲವರು ಚೈತ್ರಶುದ್ಧ (೧) ಪ್ರತಿಪದೆಯ (ಯುಗಾದಿಯ ಪಾಡ್ಯದ) ದಿವಸ ಆರಂಭಿಸುವರು, ಅಂದ ಮೇಲೆ ಅವರ ವರ್ಷ ಫಾಲ್ಗುಣ ವದ್ಯ (೩೦) ಅಮಾವಾಸ್ಯೆಗೆ ತೀರಿತಲ್ಲವೇ?

೩ ಕೆಲವರು ಜನೆವರಿಯ ೧ನೆಯ ತಾರೀಖಿಗೆ ಮೊದಲು ಮಾಡುವರು, ಆದುದರಿಂದ ಅವರು ದಿಜಂಬರ ೩೧ ತಾರೀಖಿಗೆ ಮುಗಿಸುವರು.

೪ ಕೆಲವರು ಎಪ್ರೇಲ ೧ನೆಯ ತಾರೀಖಿಗೆ ಆರಂಭಿಸಿ ಮಾರ್ಚ ೩೧ನೆಯ ತಾರೀಖಿಗೆ **ಪೂರ್ಣ**ಮಾಡುವರು.

ಟೀಪು ನಂ. ೧— ಮಳೆಗಾಲವು ಬಹುತರ ತೀರಿರುವದರಿಂದ ಈ ಅವಧಿ ವ್ಯಾಪಾರಿ ವರ್ಗದವರಿಗೆ ಅನುಕೂಲವುಂಟು. ೨ ಈ ಅವಧಿಯಲ್ಲಿ ಹೊಲದ ಕಾಳುಕಡಿಗಳು ಬೆಳೆದು ಬರುವದರಿಂದ ಇದು ಜಮೀನದಾರರಿಗೆ ಉಪಯೋಗವುಳ್ಳದ್ದಾಗಿದೆ. ೩ ರೋಜನಿಶಿ (ಡಾಯರಿ) ಯಲ್ಲಿ ಲೆಕ್ಕ ಬರೆಯುವವರಿಗೆ ಇದು ಅನುಕೂಲವಾಗಿದೆ. ೪ ಈ ಅವಧಿಯಲ್ಲಿ ಸರಕಾರಿಯ ತೆರಿಗೆಯ ಹಣ ಮುಂತಾದವುಗಳು ಎತ್ತಲ್ಪಡುವದರಿಂದ ಸರಕಾರದ ಲೆಕ್ಕದಲ್ಲಿ ಇದನ್ನು ಉಪಯೋಗಿಸುವರು.

ಟೀಪು ೨ ರೋಜಕೀರ್ದಿಯ ಶಿರೋಭಾಗದಲ್ಲಿ ಕೆಳಗೆ ಬರೆದಂತೆ ಬರೆಯುವರು.

ರೋಜಕೀರ್ದ ಖಾಸಗತ... (ಮಾಲಕನ ಪೂರ್ಣಹೆಸರು) **ಇರುವ ಸ್ಥಳ**... (ಊರ ಹೆಸರು)

ವರ್ಷಾರಂಭ (ವರ್ಷಾರಂಭದ ಮಿತಿ ತಿಂಗಳು ಶಕೆ ವಾರ ಇಚ್ಛೆಯಿದ್ದರೆ ತಾರೀಖು ತಿಂಗಳು ಇಸ್ವಿ) ಇಲ್ಲಿಂದ (**ವರ್ಷಾಂತ್ಯ**ದ ಮಿತಿ ತಿಂಗಳು ಶಕೆ ವಾರ ಇಚ್ಛೆಯಿದ್ದರೆ ತಾರೀಖು ತಿಂಗಳು ಇಸ್ವಿ) ವರೆಗೆ.

ಟೀಪು ೩ ಮಾಲಕನು ಸ್ವತಃ ಜಮಾಖರ್ಚು ಬರೆಯುತ್ತಿದ್ದರೆ ಅವನ ಹೆಸರಿನ ಹಿಂದೆ ಖಾಸಗತ ಎಂಬ ಶಬ್ದವನ್ನಷ್ಟೇ ಬರೆಯುವರು. ಕಾರಕೂನನು ಇಲ್ಲವೆ ಬೇರೊಬ್ಬನು ಬರೆಯುತ್ತಿದ್ದರೆ ಮಾಲಕನ ಹೆಸರಿನ ಹಿಂದೆ ಖಾಸಗತ ರಾಜಶ್ರೀ

ಎಂಬ ವಿಶೇಷಣವನ್ನು ಹಾಕುವರು. ಮತ್ತು ಕಡೆಯಲ್ಲಿ ವಿದ್ಯಮಾನ ಎಂಬ ಶಬ್ದ ವನ್ನು ಹಾಕಿ ಅದರ ಮುಂದೆ ಬರೆಯುತಕ್ಕವನು ತನ್ನ ಹೆಸರನ್ನು ಬರೆಯುವನು.

ಬಳಿಕ ಕೀರ್ದಿಯ ಪುಸ್ತಕದ ಎಲೆ (ಪಾನು) ಗಳಿಗೆ ಅಂಕೆಗಳನ್ನು ಹಾಕುವರು.

ತರುವಾಯ ಹಿಂದಿನ ವರ್ಷದ ಕೊಡಕೊಳ್ಳುವ ಲೆಕ್ಕ (ಅವಲಅಥಾವೆ) ಬರೆಯತಕ್ಕ ಮನವಿದ್ದರೆ ಬರೆಯಬೇಕು. (ಕೆಲವರಿಗೆ ತಮ್ಮ ಕೊಡಕೊಳ್ಳುವ ಲೆಕ್ಕ ಮಂದಿಗೆ ತಿಳಿಯಬಾರದೆಂಬ ಇಚ್ಛೆಯಿರುವದು.)

ಅನಂತರ ಬೀತಬಳಿಯಲ್ಲಿ ವರ್ಷದ ಆರಂಭದ ದಿವಸದ ಮಿತಿ ತಾರೀಖು ಮುಂತಾದವುಗಳನ್ನು ಬರೆಯುವರು.

ಆ ಮೇಲೆ ಪಾನಿನ ಎಡಗಡೆಯ ಅರ್ಧಭಾಗದ ಮೊದಲನೆಯ ರಕಾನೆಯಲ್ಲಿ ಜಮೆಯೆಂಬ ಶಬ್ದವನ್ನು ಬರೆದು, ಅದರ ಮುಂದೆ ಅಡ್ಡಗೆರೆ ಹೊಡೆದು ೪ ನೆಯ ರಕಾನೆಯಲ್ಲಿ ರೂಪಾಯಿ ಎಂಬ ಶಬ್ದವನ್ನು ಬರೆಯುವರು, ಇದರಂತೆ ಬಲಭಾಗ ದಲ್ಲಿಯೂ ಮೊದಲನೆಯ ರಕಾನೆಯಲ್ಲಿ ಖರ್ಚು ಎಂಬ ಶಬ್ದವನ್ನು ಬರೆದು ಅದರ ಮುಂದೆ ಅಡ್ಡಗೆರೆ ಹೊಡೆದು ೪ ನೆಯ ರಕಾನೆಯಲ್ಲಿ ರೂಪಾಯಿ ಎಂಬ ಶಬ್ದವನ್ನು ಬರೆಯುವರು

ಹೋದ ವರ್ಷದ ಹಣ ಸಿಲಕು ಇದ್ದರೆ ಅದನ್ನು ಲೆಕ್ಕದಲ್ಲಿ ತೆಗೆದುಕೊಳ್ಳ ಬೇಕಾಗುತ್ತದಲ್ಲವೇ? ಅದಕ್ಕಾಗಿ ಅದನ್ನು ಜಮೆಯ ಭಾಗದ ರಕಮಿನ ರಕಾನೆಯಲ್ಲಿ ಬರೆದು ಅದರ ಮುಂದೆ ಹೋದ ವರ್ಷದ ಇಲ್ಲವೆ ವರ್ಷಾರಂಭದ ಸಿಲಕು ಎಂದು ಬರೆದು ಅದರ ಕೆಳಗೆ ಜೋಡು ಅಡ್ಡ ಗೆರೆಗಳನ್ನು ಹೊಡೆಯುವರು.

ಅನಂತರ ಅದರ ಕೆಳಗೆ ತಪಸೀಲಿನ ರಕಾನೆಗಳಲ್ಲಿ ಬೀತ ಬಳಿಯಲ್ಲಿ " ಈ ಪೊತ್ತಿನ ಜಮೆ " ಎಂದು ಬರೆದು ಅದರ ಕೆಳಗೆ ಕ್ರಮವಾಗಿ ವ್ಯವಹಾರ ನಡೆದಂತೆ ಲೆಕ್ಕ ಬರೆಯುತ್ತ ಹೋಗುವರು. ಮತ್ತು ಬಲಭಾಗದಲ್ಲಿಯೂ ತಪಸೀಲಿನ ರಕಾನೆ ಗಳಲ್ಲಿ " ಈಪೊತ್ತಿನ ಖರ್ಚು " ಎಂದು ಬರೆದು ಅದರ ಕೆಳಗೆ ಖರ್ಚಿನ ರಕಮು ಗಳನ್ನು ಕ್ರಮವಾಗಿ ಬರೆಯುವರು.

ಸೂಚನೆ ೧ ಹೋದವರ್ಷದ ಸಿಲಕಿನಲ್ಲಿ ಮಾಲು ಮುಂತಾದ ತಪಸೀಲು ಇದ್ದರೆ ಅದನ್ನು ಬರೆಯಬೇಕು.

ಸೂಚನೆ ೨ ಜಮೆಯ ಕಡೆಗೂ ಖರ್ಚಿನ ಕಡೆಗೂ ಒಂದೊಂದೇ ರಕಮು ಇದ್ದರೆ " ಈಪೊತ್ತಿನ ಜಮೆ ಈಪೊತ್ತಿನ ಖರ್ಚು " ಎಂಬ ಶಬ್ದಗಳನ್ನು ಬರೆ ಯುವ ಕಾರಣವಿಲ್ಲ, ರಕಮುಗಳೆಷ್ಟಿರುವವೆಂಬ ಸಂಗತಿಯು ರೋಜ ಖರಡದ ಮೇಲಿಂದ ಗೊತ್ತಾಗುತ್ತದಷ್ಟೆ.

ಸೂಚನೆ ೩ ಇದೇ ಮೇರೆಗೆ ಮುಂದಿನ ದಿವಸಗಳ ಕೀರ್ದಿಯನ್ನು ಬರೆಯ ತಕ್ಕದ್ದು; ಆದರೆ ಮಿತಿಯ ಧೋರಣದಂತೆ ಹೋದ ವರ್ಷದ ಸಿಲಕಿನ ಸ್ಥಳದಲ್ಲಿ ಹೋದ ತಿಂಗಳ ಸಿಲಕು, ಹೋದ ದಿವಸದ ಸಿಲಕು ಎಂಬ ಶಬ್ದಗಳನ್ನು ಹಾಕ ಬೇಕು.

ಇವೆಲ್ಲ ಸಂಗತಿಗಳನ್ನು ೨ನೆಯ ಭಾಗದ ೫ನೆಯ ಪ್ರಕರಣದಲ್ಲಿ ಬರೆದ ಕೀ ರ್ದಿಯ ನಮೂನೆಯಲ್ಲಿ ನೋಡಬೇಕು.

೪ ನಾವು ವ್ಯವಹಾರವನ್ನು ರೋಖ ಹಣದಿಂದ ಮಾಡುವದು ಜಳಜಳವಾದ ಸಂಗತಿಯು; ಇದಕ್ಕೆ ಯಾರ ನಿಗ್ಗರವಿಲ್ಲವಷ್ಟೆ; ಆದರೆ ರೋಖೀ ವ್ಯಾಪಾರವನ್ನೇ ಇಟ್ಟರೆ ಗಿರಾಕಿಗಳು ಬಹಳವಾಗಿ ಬರುವದಿಲ್ಲ. ಕಯ್ಯಲ್ಲಿ ಸದ್ಯಕ್ಕೆ ಹಣವಿಲ್ಲದ ಗೃಹಸ್ಥರಿಗೆ, ತಮ್ಮ ಗುರುತಿನ ಜನರಿಗೆ ಉದ್ದರಿಯಾಗಿ ಕೊಡಲೇ ಬೇಕಾಗುತ್ತದೆ, ಉದ್ದರಿಯ ಹೊರತು ವ್ಯವಹಾರ ಭರದಿಂದ ಸಾಗಲಾರದು. ಹಾಗಾದರೆ ಅ ಎಂಬ ವನಿಗೆ ನಾವು ೨೦ ರೂಪಾಯಿಗಳ ಬೆಲ್ಲವನ್ನು ಉದ್ದರಿಯಾಗಿ ಮಾರಿದೆವೆಂದು ಕಲ್ಪಿ ಸುವಾ; ಬೆಲ್ಲ ಮಾರಿದ ಬಗ್ಗೆ ೨೦ ರೂಪಾಯಿಗಳನ್ನು ಜಮೆ ಬರೆದುಕೊಳ್ಳಬೇಕ ಲ್ಲವೇ? ಆದರೆ ಅವನು ರೂಪಾಯಿ ಕೊಟ್ಟಿಲ್ಲವಲ್ಲ? ಸುಮ್ಮನೆ ೨೦ ರೂಪಾಯಿಗ ಳನ್ನು ಜಮೆ ಹಿಡಿದುಕೊಂಡರೆ ಲೆಕ್ಕ ತಪ್ಪಿ ಹೋಗುವದಲ್ಲ? ಆ ೨೦ ರೂಪಾಯಿಗ ಳನ್ನು **ಪುನಃ** ಖರ್ಚಿನ ಕಡೆಗೂ ಬರೆದರೆ ಮಾತ್ರ ಲೆಕ್ಕವು ಹಸನವಾಗುವದು. ಹಾಗಾದರೆ ಸುಮ್ಮ ಸುಮ್ಮನೆ ಖರ್ಚಿನ ಕಡೆಗೆ ಏನೆಂದು ಬರೆಯಬೇಕು? ಹಾಁ ಹಾಁ ತಿಳಿಯಿತು, ತಿಳಿಯಿತು, ಆ ೨೦ ರೂಪಾಯಿಗಳನ್ನು ಅ ಎಂಬವನು ನಮಗೆ ಕೊಡ ಬೇಕಾಗಿರುತ್ತದಲ್ಲವೇ? ಅವನ ಹೆಸರಿನಿಂದ ಖರ್ಚು ಬರೆದರಾಯಿತು. ಜಮೆ ಮತ್ತು ಖರ್ಚು ಇವೆರಡೂ ಭಾಗದಲ್ಲಿ ೨೦ ಈ ರಕಮು ಬರುವದರಿಂದ ಸಿಲಕಿ ನಲ್ಲಿ ಹೆಚ್ಚು ಕಡಿಮೆಯೂ ಆಗಲಿಲ್ಲ; ಲೆಕ್ಕವೂ ಸ್ಪಷ್ಟವಾಗಿ ತಿಳಿಯುವದು. ಈ ಪ್ರಕಾರ ಉದ್ದರಿ ವ್ಯಾಪಾರವಾದರೆ ಜಮೆ ಬರೆದ ಕೂಡಲೆ ಖರ್ಚು ಬರೆಯಲೇ ಬೇಕಾಗುವದು. ಆದುದರಿಂದ ಇಂತಹ ರಕಮಿಗೆ ಜಮಾಖರ್ಚಿ ಎಂದೆನ್ನುವ ರೂಢಿಯುಂಟು. ಇದಲ್ಲದೆ ಈ ರಕಮು ಜಮೆಯ ಕಡೆಗೂ ಖರ್ಚಿನ ಕಡೆಗೆ ಬರೆಯಲ್ಪಡುವದರಿಂದ ಎರಡೂ ಕಡೆಯ ಬೇರೀಜುಗಳಲ್ಲಿ ಎಣಿಸಬೇಕಾಗುತ್ತದೆ. ಅದರಿಂದ ಈ ರಕಮಿಗೆ ಕೆಲವರು ದುಬೇರಜೀ ರಕಮು ಎಂದು ಅನ್ನುವರು. ದು ಎಂದರೆ ಎರಡು ಸಾರೆ ಎಂಬುದು ಸ್ಪಷ್ಟವೇ; ಕೆಲವರು ಈ ವ್ಯವಹಾರವು ಪ್ರ ತ್ಯಕ್ಷ ಹಣದ ಕೊಡಕೊಳ್ಳುವಿಕೆಯಿಲ್ಲದೆ ಹೊರಗಿಂದ ಹೊರಗೇ ಸಾಗುವದರಿಂದ ಇದಕ್ಕೆ ಪರಭಾರೆಯೆಂತಲೂ ಹೆಸರನ್ನಿಟ್ಟಿರುವರು. ಆದುದರಿಂದ ಯಾವ ರಕ ಮಿನಿಂದ ಸಿಲಕಿನಲ್ಲಿ ಪ್ರತ್ಯಕ್ಷ ಹಣದಲ್ಲಿ ಹೆಚ್ಚು ಕಡಿಮೆಯಾಗುವ ದೋ ಆ ಹಣಕ್ಕೆ ರೋಖೀ ರಕಮು ಎಂಬೆನ್ನುವರು. ರೋಖ ವ್ಯವ ಹಾರ ನಡೆಯದೆ ಒಂದು ಖಾತೆಗೆ ಜಮೆ ಇಲ್ಲವೆ ಖರ್ಚು ಬಿದ್ದು

ಪುನಃ ಅದೇ ಖಾತೆಗೆ ಇಲ್ಲವೆ ಬೇರೊಂದು ಖಾತೆಗೆ ಜಮೆ ಇಲ್ಲವೆ ಖರ್ಚು ಬರೆಯಲ್ಪಡುವ ರಕಮಿಗೆ ಜಮಾಖರ್ಚಿ, ದುಬೇರಿಜೀ ಇಲ್ಲವೆ ಪರಭಾರೆ ಎಂಬ ಬೇರೆ ಬೇರೆ ಅನ್ವರ್ಥಕ ಹೆಸರುಗಳುಂಟು.

ಜಮಾಖರ್ಚನ್ನು ಬರೆದುಕೊಳ್ಳುವಾಗ್ಗೆ ರಕಮು ರೋಖಿ ಇರುತ್ತದೆಯೋ ಜಮಾಖರ್ಚಿ ಇರುತ್ತದೆಯೋ ಎಂಬ ಬಗ್ಗೆ ಬಹಳ ಜಾಗ್ರತೆಪಡತಕ್ಕದ್ದು; ಏಕೆಂದರೆ ರೋಖೀ ರಕಮು ಇದ್ದರೆ ಜಮೆ ಇಲ್ಲವೆ ಖರ್ಚು ಒಮ್ಮೆ ಬರೆದು ಬಿಟ್ಟರೆ ತೀರಿತು. ಜಮಾಖರ್ಚಿ ಇದ್ದರೆ ಒಂದು ಖಾತೆಗೆ ಜಮೆ ಬರೆದ ಕೂಡಲೆ ಅದನ್ನು ಅದೇ ಖಾತೆಗೆ ಇಲ್ಲವೆ ಬೇರೊಂದು ಖಾತೆಗೆ ಖರ್ಚು ಬರೆಯಲೇಬೇಕಾಗುವದು, ಇಲ್ಲವೆ ಒಂದು ಖಾತೆಗೆ ಖರ್ಚು ಬರೆದೊಡನೆಯೇ ಅದನ್ನು ಅದೇ ಖಾತೆಗೆ ಇಲ್ಲವೆ ಬೇರೊಂದು ಖಾತೆಗೆ ಜಮೆಯನ್ನು ಹಚ್ಚಿಕೊಳ್ಳಬೇಕಾಗುವದು. ಇದಕ್ಕೆ ಮರವಾದರೆ ಲೆಕ್ಕವೆಲ್ಲ ತಪ್ಪಿ ಹೋಗುವದು. ಆದುದರಿಂದ ರಕಮು ರೋಖಿ ಇರುತ್ತದೋ ಜಮಾಖರ್ಚಿ ಇರುತ್ತದೋ ಎಂಬದನ್ನು ನೋಡುವದು ಮಹತ್ವವುಳ್ಳದ್ದಾಗಿದೆ. ಇದೇ ಜಮಾಖರ್ಚು ಬರೆಯುವದರ ತತ್ವವು ! ಇದೇ ಜಮಾಖರ್ಚಿನ ಸೂತ್ರವು ! ಇದೇ ಜಮಾಖರ್ಚಿನ ತಳಹದಿಯು ! ಈ ಮರ್ಮವನ್ನು ಲಕ್ಷ್ಯದಲ್ಲಿಟ್ಟು ಜಮಾಖರ್ಚನ್ನು ಬರೆಯುತ್ತ ಹೋದರೆ ಲೆಕ್ಕವು ಬಹುಶಃ ತಪ್ಪಲಾರದು.

೫ ರೋಖ ಹಣ ಬಂದರೆ ಅದನ್ನು ಮೊದಲು ಚೆನ್ನಾಗಿ ಎಣಿಸಿಕೊಂಡು, ವ್ಯವಸ್ಥೆಯಿಂದ ಇಟ್ಟು, ಆ ಮೇಲೆ ಕೀರ್ದಿಯಲ್ಲಿ ಜಮೆ ಬರೆಯಬೇಕು, ರೋಖ ಹಣವನ್ನು ಕೊಡುವದಾದರೆ ಮೊದಲು ಆ ರಕಮನ್ನು ಕೀರ್ದಿಯಲ್ಲಿ ಖರ್ಚು ಹಾಕಿ ಕೊಡಬೇಕು. 'लेकर लिखना, लिखकर देना' ಎಂಬದಾಗಿ ಹಿಂದುಸ್ಥಾನೀ ಭಾಷೆಯ ಗಾದೆಯುಂಟು. ಹೀಗೆ ಮಾಡುವದರಿಂದ ಮರೆಯುವ ಸಂಭವವಿಲ್ಲ, ಹಣದ ಕೆಲಸವಿರುವದರಿಂದ ಈ ಬಗ್ಗೆ ಎಚ್ಚರಪಟ್ಟಷ್ಟು ಒಳ್ಳೆಯದು. ಇನ್ನು ರಕಮು ಜಮಾಖರ್ಚಿಯದಿದ್ದರೆ ಕೀರ್ದಿಯಲ್ಲಿ ಜಮೆ ಬರೆದ ಕೂಡಲೆ ಖರ್ಚು ಬರೆಯಲೇ ಬೇಕಾಗುವದು. ಇದರಲ್ಲಿ ಮರವಾದರೆ ತಮ್ಮ ಹಣದಲ್ಲೇನೂ ಹೆಚ್ಚು ಕಡಿಮೆಯಾಗುವದಿಲ್ಲ; ಅದು ಇದ್ದಷ್ಟೇ ಇರುವದು. ಕಾಗದದೊಳಗಿನ ಬೇರೀಜಿನಲ್ಲಿಯೇ ಹೆಚ್ಚು ಕಡಿಮೆಯಾಗಿ ಸಿಲಕಿಗೆ ಮೇಳು ಹೊಂದುವದಿಲ್ಲ. ಬಳಿಕ ಅದನ್ನು ಸುಧಾರಿಸಿಕೊಳ್ಳಬಹುದು. ಆದರೆ ಮೊದಲೇ ಎಚ್ಚರದಿಂದ ಬರೆಯುವದು ಒಳ್ಳೆಯದಲ್ಲವೇ ?

ಜಮೆ ಬರೆದುಕೊಳ್ಳುವ ರಕಮುಗಳನ್ನು ಜಮೆಯ ಕಡೆಯ ಮೊದಲನೆಯ ರಕಾನೆಯಲ್ಲಿ ಬರೆದು ಅದರ ಮುಂದಿರುವ ಮೂರು ರಕಾನೆಗಳಲ್ಲಿ ಏತರ ಬಗ್ಗೆ ಯಾರ ಕಡೆಯಿಂದ ಇವೇ ಮುಂತಾದ ಸಂಗತಿಗಳನ್ನು ಬರೆಯಬೇಕು. ಒಂದು ಸಾಲಿಗಿಂತ ಹೆಚ್ಚು ಸಾಲು ಬೇಕಾದರೆ ಆ ಸಾಲುಗಳನ್ನು ರಕಮಿನ ರಕಾನೆಯ ಕೆಳಗೆ

ಬರೆಯದೆ ಮುಂದಿನ ಮೂರು ರಕಾನೆಗಳಲ್ಲಿಯೇ ಬರೆಯಬೇಕು. ಖರ್ಚಿನ ರಕಮುಗಳನ್ನಾದರೂ ಇದರಂತೆಯೇ ಬರೆಯಬೇಕು; ಇದರಿಂದ ರಕಮಿನ ಅಂಕೆಗಳು ಒಂದರ ಕೆಳಗೊಂದು ಬರುವದರಿಂದ ಬೇರೀಜು ಮಾಡಲಿಕ್ಕೆ ಸುಲಭವಾಗುವದು. ಬಳಿಕ ಆ ವಿವರಗಳ ಕೆಳಗೆ ಖಾತೆಯ ಪಾನು ಎಂದು ಬರೆದು ಅದರ ಕೆಳಗೆ ಜೋಡು ಗೆರೆಗಳನ್ನು ಹೊಡೆಯಬೇಕು. ಕೆಲವರು ಮೊದಲು ಜೋಡು ಗೆರೆಗಳನ್ನು ಹೊಡೆದು ಅವುಗಳ ಕೆಳಗೆ ಖಾತೆಯ ಪಾನು ಹಾಕುವರು. ಹೇಗೆ ಮಾಡಿದರೂ ಸರಿಯೇ!

೬ ಒಮ್ಮೊಮ್ಮೆ ವ್ಯವಹಾರವು ಪ್ರತ್ಯಕ್ಷ ಇಸಮಿನ ಕೂಡ ನಡೆಯದೆ ಒಬ್ಬರ ಮುಖಾಂತರವಾಗಿ ನಡೆಯುವದು. ಇಲ್ಲವೆ ವ್ಯವಹಾರ ನಡಿಸುವ ಇಸಮಿನ ಗುರುತು ಇಲ್ಲದೆ ಇದ್ದರೆ ಒಬ್ಬನ ಸಾಕ್ಷಿ ಇಟ್ಟು ನಡಿಸಬೇಕಾಗುವದು ಹೇಗಂದರೆ—

೧ ಅ ನಿಂದ ನಮಗೆ ಕೆಲವು ಹಣ ಬರತಕ್ಕದ್ದಿದ್ದು, ಅದು ಅನ ಪತ್ರದ ಮೇಲಿಂದ ಬನು ಕನ ಕಡೆಯಿಂದ ಕಳುಹಿಕೊಟ್ಟರೆ ಆ ರಕಮಿನ ಬಗ್ಗೆ ಬನ ಗುಜಾರತವನ್ನೂ ಕನ ಹಸ್ತೆಯನ್ನೂ ಹಚ್ಚತಕ್ಕದ್ದು.

೨ ಅ ನಿಂದ ಬನಿಗೆ ಕೊಡುವ ಬಗ್ಗೆ ನಮಗೆ ಪತ್ರ ಬಂದಿದ್ದು ಬನ ಗುರುತು ನಮಗಿಲ್ಲದಿದ್ದರೆ ಕನ ಸಾಕ್ಷಿಯಿಟ್ಟು ಬನಿಗೆ ರಕಮನ್ನು ಕೊಟ್ಟರೆ ಈ ರಕಮಿಗೆ ಬನ ಹಸ್ತೆಯನ್ನೂ ಕನ ಗುಜಾರತವನ್ನೂ ಹಚ್ಚತಕ್ಕದ್ದು.

ಪ್ರತ್ಯಕ್ಷವಾಗಿ ಯಾವನ ಕೈಮುಟ್ಟ (ಹಸ್ತದಿಂದ) ವ್ಯವಹಾರ ನಡೆಯುವದೋ ಅವನಿಗೆ ಹಸ್ತೆದಾರನೆನ್ನುವರು; ಸಾಕ್ಷಿಯ ದೆಸೆಯಿಂದ ಒಬ್ಬನ ಮುಖಾಂತರ ವ್ಯವಹಾರ ನಡಿಸಿದರೆ ಅವನಿಗೆ ಗುಜಾರತವೆನ್ನುವರು. ಈ ಕಾಲಕ್ಕೆ ಒಬ್ಬರ ನಂಬಿಗೆಯು ಇಲ್ಲ; ಆದುದರಿಂದ ಹಸ್ತೇ ಗುಜಾರತ ಎಂಬ ಶಬ್ದಗಳನ್ನು ನಮೂದಿಸಿಬಿಡುವದು ಒಳ್ಳೇದು. ಅದರಿಂದ ಉಲುಕಾಡಲಿಕ್ಕೆ ಮಾರ್ಗವಿಲ್ಲ. ಪ್ರಸಂಗೋಪಾತ್ತನಾಗಿ ವ್ಯಾಜ್ಯ ನಡೆದರೆ ಇವುಗಳ ಉಪಯೋಗವಾಗುವದು.

೭ ಕೀರ್ದಿಯೊಳಗೆ ಒಬ್ಬನ ಹೆಸರಿನಿಂದ ಬರೆಯತಕ್ಕ ರಕಮನ್ನು ಮರೆತು ಮತ್ತೊಬ್ಬನ ಹೆಸರಿನಿಂದ ಬರೆಯುವ ಸಂಭವವಿರುತ್ತದಲ್ಲವೇ? ಆ ತಪ್ಪು ಯಾವಾಗ ತಿಳಿಯುವದು? ಇಸಮಿನ ಬೆಟ್ಟಿಯಾಗಿ ಅವನು ತಕರಾರು ಮಾಡಿದಾಗಲೇ ತಿಳಿಯುವದು. ಅದರ ಹೊರತು ತಿಳಿಯಲಿಕ್ಕೆ ಮಾರ್ಗವೆಲ್ಲಿಯದು? ಏಕಂದರೆ ಬೇರೀಜೂ ಸಿಲಕೂ ಸರಿಯಾಗಿಯೇ ಇರುತ್ತವೆ. ತಿಳಿದ ಮೇಲೆ ಅದನ್ನು ತಿದ್ದಿಕೊಳ್ಳುವ ಬಗೆಯೆಂತು? ಮರೆತು ಬರೆದುಕೊಂಡವನ ಹೆಸರಿಗೆ ಕಾಟ ಹಾಕಿ ಯೋಗ್ಯ ಇಸಮಿನ ಹೆಸರು ಬರೆದರಾಯಿತು. ಇದಕ್ಕೇಕೆ ಇಷ್ಟೊಂದು ಆಲೋಚನೆ! ಛೇ! ಹೀಗೆ ಮಾಡುವದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಒಂದು ವೇಳೆ ನ್ಯಾಯಬಿದ್ದು ಜಮಾಖರ್ಚಿನ ಪುಸ್ತಕವನ್ನು ನ್ಯಾಯಸ್ಥಾನಕ್ಕೆ ಒಯ್ಯುವ ಪ್ರಸಂಗಬಿದ್ದರೆ ನ್ಯಾಯಾಧೀಶರು ಅಲ್ಲಲ್ಲಿಗೆ ಚಿತ್ತಕಾಟ ಮಾಡಿದಂತಹ ಬರಹವನ್ನು ನಿಜವೆಂದು ನಂಬಲಾರರು.

ಆದುದರಿಂದ ಜಮಾಖರ್ಚಿನಲ್ಲಿ ಚಿತ್ತಕಾಟಮಾಡುವದು ತೀರಸರಿಯಲ್ಲ! ಹಾಗಾದರೆ ಆ ತಪ್ಪನ್ನು ಹೇಗೆ ಸುಧಾರಿಸಬೇಕೆಂದು ಕೇಳುವಿರೋ? ತಪ್ಪಿ ಯಾವನ ಹೆಸರಿನಿಂದ ಜಮೆ ಇಲ್ಲವೆ ಖರ್ಚು ಬರೆದುಕೊಂಡಿರುವದೋ ಅವನ ಹೆಸರಿನಿಂದ ಕ್ರಮವಾಗಿ ಖರ್ಚು ಇಲ್ಲವೆ ಜಮೆಬರೆದು ವಿವರದಲ್ಲಿ ತಪ್ಪಿ ಜಮೆ ಮಾಡಿದ ಬಗ್ಗೆ, ತಪ್ಪಿ ಖರ್ಚು ಬರೆದ ಬಗ್ಗೆ ಎಂಬದಾಗಿ ಉಲ್ಲೇಖಿಸಿಬಿಟ್ಟರೆ ಆ ತಪ್ಪು ಹಸನಾಗಿ ಹೋಗುವದು. ಮುಂದೆ ನಿಜವಾಗಿ ಯಾರ ಹೆಸರಿನಿಂದ ಎಲ್ಲಿ (ಜಮೆಯ ಕಡೆಗೆ ಅಥವಾ ಖರ್ಚಿನ ಕಡೆಗೆ) ಬರೆಯತಕ್ಕದ್ದೋ ಅಲ್ಲಿ ಬರೆದು ಬಿಟ್ಟರಾಯಿತು.

ಇನ್ನು ಒಬ್ಬನ ಹೆಸರ್ಲೆ ಜಮೆ ಬರೆಯತಕ್ಕದ್ದನ್ನು ಖರ್ಚು ಬರೆದುಕೊಂಡಿದ್ದರೆ ಹೇಗೆ? ಈ ತಪ್ಪು ತಿಳಿಯುವದಕ್ಕೆ ತಡವಿಲ್ಲ, ವ್ಯವಹಾರವೆಲ್ಲ ತೀರಿದ ಮೇಲೆ ತಮ್ಮ ಹತ್ತರವಿರುವ ಸಿಲಕು ಎಣಿಸಿ ನೋಡುವಾಗ ತಟ್ಟನೆ ತಿಳಿದು ಹೋಗುವದು. ಜಮೆಬೀಳತಕ್ಕ ರಕಮು ಖರ್ಚಿನ ಕಡೆಗೆ ಬಿದ್ದಿದ್ದರೆ ಖರ್ಚಿನ ಕಡೆಯ ಬೇರೀಜು ಹೆಚ್ಚಾಗಿ ಪುಸ್ತಕದೊಳಗಿನ ಸಿಲಕು ಚೀಲದೊಳಗಿನ ಸಿಲಕಿಗಿಂತ ಕಡಿಮೆ ಬರುವದು. ಎಷ್ಟು ಕಡಿಮೆ ಬರಬಹುದು? ಜಮೆ ಬರೆದುಕೊಳ್ಳತಕ್ಕ ರಕಮನ್ನು ಜಮೆ ಬರೆಯದೆ ಖರ್ಚಿನ ಕಡೆಗೆ ಬರೆದು ಕೊಂಡಲ್ಲಿ ಆ ರಕಮಿನ ಎರಡಷ್ಟು ಕಡಿಮೆ ಬರುವದಲ್ಲವೇ? ಬಳಿಕ ಎಲ್ಲಿ ತಪ್ಪಿರುತ್ತದೆಂಬದನ್ನು ಹುಡುಕಿ ತಪ್ಪು ತಿದ್ದಿಕೊಳ್ಳಬೇಕು. ತಪ್ಪಿ ಖರ್ಚು ಬಿದ್ದಕಾರಣದಿಂದ ಒಮ್ಮೆ ಆ ರಕಮನ್ನು ಜಮೆಯ ಕಡೆಗೆ ಬರೆದು ಮತ್ತೊಮ್ಮೆ ನಿಜವಾಗಿ ಆ ರಕಮು ಜಮೆಯ ಕಡೆಗೆ ಬೀಳತಕ್ಕದ್ದಿರುವದರಿಂದ ಜಮೆಯ ಕಡೆಗೆ ಬರೆದು ಬಿಟ್ಟರಾಯಿತು. ಯಾವ ಚಿತ್ತ ಕಾಟವಿಲ್ಲದೆ ಲೆಕ್ಕವು ಚೊಕ್ಕವಾಗಿಹೋಗುವದು. ಸಿಲಕು ಸರಿಯಾಗಿಬರುವದು; ಇದರಂತೆ ಖರ್ಚು ಬೀಳತಕ್ಕ ರಕಮನ್ನು ಜಮೆಯ ಕಡೆಗೆ ಮರೆತು ಬರೆದು ಕೊಂಡಿದ್ದರೆ ಅದನ್ನು ಎರಡುಸಾರೆ ಖರ್ಚು ಬರೆಯಬೇಕೆಂಬದು. ಸಹಜವಾದದ್ದೇ ಸರಿ. ಈ ಪ್ರಕಾರ ತಪ್ಪು ಬರೆದುಕೊಂಡ ರಕಮುಗಳು ರೋಖವ್ಯಾಪಾರ ಮಾಡುವವನಲ್ಲಿಯೂ ಪರಭಾರೆಗಳಾಗುತ್ತವೆ.

೮ ಇನ್ನು ದಿನದ ಕೊನೆಯ ಸಿಲಕು ಹೇಗೆ ಹೊರಡುತ್ತದೆಂಬದನ್ನು ನೋಡೋಣ; ಜಮೆಯ ಭಾಗದ ಇಲ್ಲವೆ ಖರ್ಚಿನ ಭಾಗದ ಮೊದಲನೆಯ ರಕಾನೆಗಳಲ್ಲಿ ಕೇವಲ ಅಂಕೆಗಳೇ ಒಂದರ ಕೆಳಗೊಂದು ನಿಚ್ಚಳವಾಗಿ ಬರೆಯಲ್ಪಟ್ಟಿರುವದರಿಂದ ಅವುಗಳ ಬೇರೀಜನ್ನು ಸುಲಭವಾಗಿ ಮಾಡಲನುವಾಗುವದು, ಅದರಿಂದ ಜಮೆಯ ಭಾಗದ ಬೇರೀಜನ್ನು ಹಿಂದಿನ ದಿವಸದ ಸಿಲಕು ಸಹಿತವಾಗಿ ಮಾಡಿ, ಅದರಲ್ಲಿ ಖರ್ಚಿನ ಭಾಗದ ಬೇರೀಜನ್ನು ಕಳೆಯಲಾಗಿ ಉಳಿಯುವದೇ ಆ ದಿನದ ಕೊನೆಯ ಸಿಲಕೆಂಬದು ಸ್ಪಷ್ಟವೇ, ಅದು ಚೀಲದಲ್ಲಿ ಉಳಿದ ಸಿಲಕಿನಷ್ಟು ಇರುತ್ತದೆಯೋ ಇಲ್ಲವೋ ಎಂಬದನ್ನು ಮನಗಂಡು ಸರಿಯಿದ್ದರೆ ಅದನ್ನು ಖರ್ಚಿನ ಭಾಗಕ್ಕೆ, ಖರ್ಚಿನ ರಕಮುಗಳ ಕೆಳಭಾಗಕ್ಕೆ ಬರೆದು, ಅದರ ಮುಂದೆ ತಪಸೀ

ಲಿನ ರಕಾನೆಗಳಲ್ಲಿ ನಾಳಿನ ಸಿಲಕು ಎಂದು ಬರೆಯಬೇಕು. ಈ ದಿನದ ಕೊನೆಯ ಸಿಲಕು ನಮ್ಮ ಪೆಟ್ಟಿಗೆಯಲ್ಲೇ ಇದ್ದರೂ ಮೇಳು ಹೊಂದುವದಕ್ಕಾಗಿ ಖರ್ಚಿನ ಕಡೆಗೆ ಬರೆಯಲ್ಪಡುವದು.

೯ ಹಿಂದಿನ ದಿವಸದ ಸಿಲಕು ಸಹಿತವಾದ ದಿನದ ಜಮೆಯ ರಕಮುಗಳ ಬೇರೀಜು, ಮುಂದಿನ ದಿವಸದ ಸಿಲಕು ಸಹಿತವಾದ ದಿನದ ಖರ್ಚಿನ ರಕಮುಗಳ ಬೇರೀಜಿಗೆ ಸರಿಯಾಗಿರಲಿಕ್ಕೆ ಬೇಕಲ್ಲವೇ? ಸರಿಯಾಯಿತೆಂದರೆ ಆ ದಿನದ ಲೆಕ್ಕ ಹಸನವಾದಂತಾಯಿತು. ಜಮೆಯ ಒಟ್ಟು ಬೇರೀಜಿನ ರಕಮನ್ನು ಜಮೆಯ ಕಡೆಗೆ ತಕ್ಕಷ್ಟು ಅಡ್ಡಗೆರೆ ಹೊಡೆದು ಅದರ ಕೆಳಗೆ ಬರೆದು ಅದರ ಮುಂದೆ ಅಕ್ಷರದಲ್ಲಿ ಇಂತಿಷ್ಟು ರೂಪಾಯಿಗಳೆಂದು ಬರೆದು ಆದರ ಕೆಳಗೆ ಬರೆದವನು ತನ್ನ ದಸ್ತೂರವನ್ನೂ ಮಾಲಕನು ತನ್ನ ಸಹಿಯನ್ನೂ ಮಾಡಬೇಕು. ಇದರಂತೆ ಖರ್ಚಿನ ರಕಮುಗಳ ಸಂಬಂಧವಾಗಿ ಮಾಡಿ ದಸ್ತೂರ ಸಹಿ ಮುಂತಾದವುಗಳನ್ನು ಹಾಕಬೇಕು. ಇಷ್ಟು ಮಾಡಿತೆಂದರೆ ಒಂದು ದಿನದ ಲೆಕ್ಕ ಮುಗಿಯಿತು. ಮುಂದೆ ಅದರಲ್ಲಿ ಏನೂ ಹೆಚ್ಚು ಕಡಿಮೆ ಮಾಡಲಿಕ್ಕೆ ಬರುವದಿಲ್ಲ; ಒಟ್ಟು ಜಮೆಯ ರಕಮನ್ನೂ ಒಟ್ಟು ಖರ್ಚಿನ ರಕಮನ್ನೂ ಅಂಕೆಗಳಿಂದ ಬರೆದರೆ ಸಾಕಾಗದೇ? ಅಕ್ಷರಗಳಿಂದ ಬರೆಯಬೇಕೆಂಬ ನಿಯಮವೇಕೆ? ಎಂದು ನೀವು ಆಕ್ಷೇಪಿಸಬಹುದು. ಕೇವಲ ಅಂಕೆಗಳಿದ್ದರೆ ಅವುಗಳನ್ನು ಚಿತ್ತುಕಾಟ ಮಾಡದೆ ತಿದ್ದಲಿಕ್ಕೆ ಸುಲಭವಾಗಿ ಬರುವದು. ಅಂಕೆಗಳ ಮುಂದೆ ಇರುವ ಪೂಜಿಗಳಿಂದ ಎಷ್ಟು ಹೆಚ್ಚು ಕಡಿಮೆಯಾಗುತ್ತದೆಂಬದನ್ನು ನೀವು ಬಲ್ಲಿರಿ. ಅದರಿಂದ ಲೆಕ್ಕದಲ್ಲಿ ತಗಲು ಆಗುವ ಸಂಭವವುಂಟು. ಆದಕಾರಣ ಅಕ್ಷರಗಳಿಂದ ಬರೆಯುವದು ವಿಹಿತವು ಅದರಿಂದ ಯಾರಿಗೂ ಏನೂ ತಗಲು ಮಾಡಲಿಕ್ಕೆ ಸಾಧಿಸುವದಿಲ್ಲ. ಆಣೆ ಹಾಕಿದಂತಾಗುವದು.

೧೦ ಜಮಾಖರ್ಚು ಇಲ್ಲದ ದಿವಸಗಳ ಕೀರ್ದಿಯನ್ನು ಬರೆಯಬೇಕಾದರೆ ಈ ಮಿತಿಯಿಂದ ಈ ಮಿತಿಯ ವರೆಗೆ ಜಮಾಖರ್ಚು (೦) ಎಂದು ಬರೆದು ಬಿಟ್ಟರಾಯಿತು. ಮುಂದೆ ಯಾವ ದಿವಸ ವ್ಯವಹಾರ ನಡೆಯುವದೋ ಆ ದಿವಸದ ಮಿತಿ ಮುಂತಾದವುಗಳನ್ನು ಬರೆದು ನಿತ್ಯಕ್ರಮದಂತೆ ಜಮಾಖರ್ಚು ಬರೆಯಬೇಕು. (ಈ ಬಗ್ಗೆ ಮುಂದೆ ಕೀರ್ದಿಯಲ್ಲಿ ನೋಡು.)

೨ ಖತಾವಣಿಯ ಬಗ್ಗೆ.

ಭಾಗಗಳು—೧ ಖಾತೆಗಳನ್ನು ಹಾಕುವಿಕೆ, ೨ ಖಾತೆಗಳ ಅನುಕ್ರಮಣಿಕೆ, ೩ ಖಾತೆ ಬರೆಯುವ ಪದ್ಧತಿ, ೪ ಖಾತೆಗಳಲ್ಲಿ ಬಾರನಾಡುವಿಕೆ, ೫ ಕೀರ್ದಿ ಖಾತೆಗಳ ತಳಕು, ೬ ಪುರವಣಿ ಖಾತೆ, ೭ ಕೀರ್ದಿ ಖಾತೆಗಳ ಮಹತ್ವ.

೧ ಇನ್ನು ಖಾತೆಯ ಲೆಕ್ಕವನ್ನು ಹೇಗೆ ಇಡತಕ್ಕದ್ದೆಂಬದನ್ನು ಬರೆಯುವಾ. ಮೊದಲು ಬೀತ ಒಳಿಯಲಿ, ಖತಾವಣಿಯ ಮೇಲ್ಭಾಗಸವನ್ನು ಬರೆಯುವದಂತು

ಸರಿಯೇ, ಬಳಿಕ ಯಾವ ಖಾತೆಯನ್ನು ಮೊದಲು? ಯಾವದನ್ನು ಹಿಂದುಗಡೆಯಲ್ಲಿ ಬರೆಯಬೇಕು? ಯಾವದೊಂದು ಖಾತೆಯನ್ನು ಹುಡುಕಾಡುತ್ತ ಕೂಡದೆ ಒಮ್ಮೆಲೇ ತಿಳಿಯುವಂತೆ ಅಕ್ಷರಾನುಕ್ರಮದಿಂದ ಖಾತೆಗಳನ್ನು ಬರೆಯುವದು ಒಳಿತಲ್ಲವೇ? ಆದಕಾರಣ ಅಕ್ಷರಾನುಕ್ರಮದಿಂದ ಅಂದರೆ ಅ, ಆ, ಕ, ಖ ಇತ್ಯಾದಿ ಆದ್ಯಕ್ಷರಗಳುಳ್ಳ ಹೆಸರಿನ ಖಾತೆಗಳನ್ನು ಕ್ರಮವಾಗಿ ಬರೆಯುವದು ವಿಹಿತವು, ಅದಕ್ಕಾಗಿ ತಮ್ಮಲ್ಲಿ ಯಾರು ಯಾರು ವ್ಯವಹಾರ ಮಾಡಬಹುದು? ಯಾರ ಯಾರ ಕೂಡ ತಮ್ಮ ಕೊಡಕೊಳ್ಳುವ ಬಳಿಕೆಯಿರುತ್ತದೆ? ಯಾವ ಯಾವ ಬಾಬುಗಳ ಜಮಾಖರ್ಚು ಇಡಲವಶ್ಯವಿರುತ್ತದೆ? ಇವುಗಳನ್ನು ಅಜಮಾಸಿನ ಮೇಲಿಂದ ಮಧ್ಯದಲ್ಲಿ ಕೆಲ ಕೆಲವು ಪಾನುಗಳನ್ನು ಬಿಟ್ಟು ವರ್ಣಾನುಕ್ರಮದಿಂದ ಬರೆದಿಡಬೇಕು; ಒಂದು ವೇಳೆ ನಾವು ವರ್ಣಾನುಕ್ರಮದಿಂದ ಬರೆದಿಟ್ಟ ಖಾತೆಗಳ ಹೊರತಾಗಿಮತ್ತೆ ಯಾವನೊಬ್ಬ ಹೊಸಮನುಷ್ಯನಿಂದ ಇಲ್ಲವೆ ಹೊಸಬಾಬಿನಿಂದ ವ್ಯವಹಾರ ನಡೆದು ಅದು ಕೀರ್ದಿಯಲ್ಲಿ ಬರೆಯಲ್ಪಟ್ಟಿದ್ದರೆ ಆ ಖಾತೆಯನ್ನು ಖತಾವಣಿಯಲ್ಲಿ ನಡು ನಡುವೆ ಬಿಟ್ಟ ಕೋರಾಪಾನಿನಲ್ಲಿ ಅಕ್ಷರಾನುಕ್ರಮದಿಂದ ಅದು ಎಲ್ಲಿ ಸಲ್ಲತಕ್ಕದ್ದೋ ಅಲ್ಲಿ ಬರೆಯತಕ್ಕದ್ದು.

೨ ಖಾತೆಗಳನ್ನು ವರ್ಣಾನುಕ್ರಮದಿಂದ ಬರೆಯುವದರಿಂಧ ಯಾವದೊಂದು ಖಾತೆಯನ್ನು ಹುಡುಕಿ ತೆಗೆಯಲಿಕ್ಕೆ ಅನುಕೂಲವಾಗುವದಷ್ಟೆ; ಆದರೂ ಖತಾವಣಿಯ ಪುಸ್ತಕದ ಆರಂಭದ ಪತ್ರದಲ್ಲಿ ಖಾತೆಗಳ ಹೆಸರುಗಳನ್ನು ವರ್ಣಾನುಕ್ರಮದಿಂದ ಬರೆದು ಅವುಗಳ ಮುಂದೆ ಖಾತೆಯ ಪಾನುಗಳ ಅಂಕೆಗಳನ್ನು ಬರೆಯಬೇಕು. ಈ ಅನುಕ್ರಮಣಿಕೆಯ ಸಾಧನದಿಂದ ಇಂಥ ಖಾತೆಯು ಯಾವ ಪಾನಿನಲ್ಲಿ ಇರುತ್ತದೆಂಬದು ಒತ್ತರದಿಂದ ತಿಳಿದುಬರುವದು; ಬಹಳ ವ್ಯವಹಾರವಿದ್ದವರು ಅನುಕ್ರಮಣಿಕೆಯದೊಂದು ಚೋಪಡಿಯನ್ನೇ ಕಟ್ಟುವರು.

೩ ಯಾವ ಖಾತೆಯ ಸಂಬಂಧವಾಗಿ ಲೆಕ್ಕವನ್ನು ಬರೆಯತಕ್ಕದ್ದಿರುವದೋ ಅದನ್ನು ಬೀತ ಬಳಿಯಲ್ಲಿ ನಿಚ್ಚಳವಾದ ಅಕ್ಕರಗಳಿಂದ ಅಚ್ಚುಕಟ್ಟಾಗಿ ಬರೆದು, ಅದರ ಕೆಳಗೆ ಎಡಗಡೆಗೆ ಜಮಾ ——— ರೂ. ಎಂದೂ ಬಲಗಡೆಗೆ ಖರ್ಚು ——— ರೂ. ಎಂದೂ ಕೀರ್ದಿಯಲ್ಲಿ ಬರೆಯುವಂತೆ ಬರೆಯಬೇಕು. ಬಳಿಕ ಕೀರ್ದಿಯೊಳಗಿನ ಜಮೆಯ ಕಡೆಯ ರಕಮುಗಳನ್ನು ಜಮೆಯ ಕಡೆಗೆ, ಖರ್ಚಿನ ಕಡೆಯ ರಕಮುಗಳನ್ನು ಖರ್ಚಿನ ಕಡೆಗೆ ಬರೆದು ಅವುಗಳ ಮುಂದೆ ಕೀರ್ದಿಯ ಪಾನು ಎಂದು ಬರೆದು ಕೀರ್ದಿಯಪಾನಿನ ಅಂಕೆಯನ್ನೂ ಮಿತಿಯನ್ನೂ ಬರೆಯಬೇಕು.

೪ ಇದಕ್ಕೆ ಕೀರ್ದಿಯೊಳಗಿನ ರಕಮನ್ನು "ಖತಾವಣಿಯಲ್ಲಿ ಬಾರಮಾಡುವದು" ಎಂದೆನ್ನುವರು. ಕೀರ್ದಿಯ ರಕಮನ್ನು ಖಾತೆಯಲ್ಲಿ ಬಾರ ಮಾಡಿದನಂತರ

ಕೀರ್ದಿ ವಹಿಯಲ್ಲಿ ಯಾವ ರಕಮನ್ನು ಜಾರಮಾಡಿರುತ್ತದೋ ಆ ರಕಮಿನ ಹಿಂದೆ (୮, ⅄ ,+ , /) ಈ ಗುರುತುಗಳಲ್ಲಿ ಯಾವದಾದರೊಂದನ್ನು ಹಾಕಬೇಕು. ಅಂದರೆ ಆ ರಕಮನ್ನು ಖಾತೆಯಲ್ಲಿ ಜಾರಮಾಡಿದ ಬಗ್ಗೆ ಗೊತ್ತಾಗುವದು, ಮತ್ತು ಜೋಡುಗೆರೆಯ ಮೇಲೆ ಖಾತೆಯ ಪಾನು ಎಂದು ಬರೆದಿರುತ್ತದಲ್ಲ? ಅಲ್ಲಿ ಖಾತೆಯ ಪಾನಿನ ಅಂಕೆಯನ್ನು ಹಾಕಬೇಕು. ಈ ಪ್ರಕಾರ ಕೀರ್ದಿಯೊಳಗಿನ ಸಿಲಕಿನ ರಕಮಿನ ಹೊರತು ಉಳಿದ ಯಾವತ್ತು ರಕಮುಗಳನ್ನು ಆಯಾ ಖಾತೆಗೆ ಜಾರಮಾಡಬೇಕು. ಆದರೆ ಖುದ್ದುಖಾತೆಯಲ್ಲಿ ವರ್ಷಾರಂಭದ ಮತ್ತು ವರ್ಷಾಂತ್ಯದ ಸಿಲಕನ್ನು ಜಾರಮಾಡತಕ್ಕದ್ದು.

೫ ಹೀಗೆ ಕೀರ್ದಿಯೊಳಗಿನ ಪಾನನ್ನು ಖಾತೆಯಲ್ಲಿ, ಖಾತೆಯೊಳಗಿನ ಪಾನನ್ನು ಕೀರ್ದಿಯಲ್ಲಿ ಬರೆದು ಒಂದಕ್ಕೊಂದು ತಳಕು ಹಾಕುವದರಿಂದ ಒಳ್ಳೇ ಉಪಯೋಗವಾಗುವದು. ಯಾವನಾದರೊಬ್ಬ ಗಿರಾಕಿಯು ಬಂದು ಸೆಟ್ಟರೇ, ನಮ್ಮ ಲೆಕ್ಕ ಎಷ್ಟು ಹೊರಡುತ್ತದೆ ? ಆದನ್ನು ತಟ್ಟನೆ ತೆಗೆಯಿರಿ ಎಂದು ಅಂಗಡಿಯಲ್ಲಿ ಬಂದು ಒತ್ತರ ಮಾಡಹತ್ತಿದರೆ ಕನ್ನಡಿಯ ಹಾಗಿರುವ ಖತಾವಣಿಯ ಲೆಕ್ಕವನ್ನು ಅನುಕ್ರಮಣಿಕೆಯ ಯೋಗದಿಂದ ಸರ್‍ರನೆ ತೆಗೆದು ಬರ್‍ರನೆ ತಮ್ಮಾ, ನಿನ್ನ ಲೆಕ್ಕ ಇಂತಿಷ್ಟು, ಎಂದು ಹೇಳಿದರಾಯಿತು. ಅವನು ಈ ಲೆಕ್ಕ ಏತರ ಸಲುವಾಗಿ ಎಂದು ಕೇಳಿದರೆ ಆದರಲ್ಲಿ ಬರೆದಿರುವ ಕೀರ್ದಿಯ ಪಾನಿನ ಅಂಕೆಯನ್ನು ನೋಡಿ ಕೀರ್ದಿಯಲ್ಲಿ ಆ ಪಾನನ್ನು ತಟ್ಟನೆ ತೆಗೆದು ಪಟ್ಟನೆ ತಪಸೀಲನ್ನು ಹೇಳಿದರಾಯಿತು. ಆಗಲಾ ಅಣ್ಣನು ಅಹುದಹುದು, ನಾನೇ ಮರೆತಿದ್ದೆನು. ನಿಮ್ಮ ಲೆಕ್ಕ ನಿಜವಾಗಿದೆ ಎಂದು ತಲೆದೂಗಿ ತಾನು ಕೊಡತಕ್ಕ ರೊಕ್ಕವನ್ನು ಮುಂದಿಟ್ಟು ತೆರಳುವನು ನೋಡಿರಿ! ಕೆಲಸವೆಷ್ಟು ಬೇಗವಾಗುವದು? ಇದು ಕೀರ್ದಿ ಖಾತೆಗಳಲ್ಲಿ ಪರಸ್ಪರ ಪಾನುಗಳ ತಳಕುಹಾಕಿದ್ದರ ಫಲವು.

೬ ಇನ್ನು ಕೆಲವೊಂದು ಖಾತೆಯ ಸಂಬಂಧವಾಗಿ ಜಮಾಖರ್ಚು ಬರೆಯುತ್ತಿರಲು, ಆ ಖಾತೆಯ ಸಂಬಂಧವಾಗಿ ಬಿಟ್ಟ ಸ್ಥಳವೆಲ್ಲ ತುಂಬಿ ಹೋದರೆಮುಂದಿನ ವ್ಯವಹಾರವನ್ನು ಎಲ್ಲಿ ಬರೆಯಬೇಕು ? ಮುಂದೆ ಹಾಗೇ ಬರೆಯಬೇಕೆಂದರೆ ಮತ್ತೊಂದು ಖಾತೆಯಿರುತ್ತದಲ್ಲ? ಎಂದು ನೀವು ಶಂಕೆಗೊಂಡರೆ ಖತಾವಣಿಯೊಳಗಿನ ಮುಂದಿನ ಕೋರಾ ಪಾನಿನಲ್ಲಿ ಮುಗಿದ ಖಾತೆಯದೊಂದು ಪುರವಣಿ ಖಾತೆಯನ್ನು ಹಾಕಿ ಆದರ ಮುಂದೆ ಹಿಂದೆ ಮುಗಿದ ಖಾತೆಯ ಪಾನಿನ ಅಂಕೆಯನ್ನು ಹಾಕುವರು. ಮತ್ತು ಪುರವಣಿ ಖಾತೆಯ ಪಾನಿನ ಅಂಕೆಯನ್ನು ಹಿಂದೆ ಮುಗಿದ ಖಾತೆಗೆ ಹಾಕುವರು. ಪುರವಣಿ ಖಾತೆಯ ಕೆಳಗೆ ಜ——— ರೂ. ಮತ್ತು ಖ——— ರೂ. ಹೀಗೆ ಬರೆದು ರಕಮಿನ ರಕಾನೆಗಳಲ್ಲಿ ಹಿಂದೆ ಮುಗಿದ ಖಾತೆಯ ಜಮೆಯ ಮತ್ತು

ಖರ್ಚಿನ ಒಟ್ಟು ರಕಮುಗಳನ್ನು ಬರೆದು ಅದರ ಕೆಳಗೆ ಮುಂದಿನ ವ್ಯವಹಾರ ಬರೆಯುತ್ತ ಹೋಗಬೇಕು. (ಈ ಬಗ್ಗೆ ಖತಾವಣಿಯಲ್ಲಿ ಶಂಕರಪ್ಪ ಬೆಲ್ಲದ ಇವನ ಖಾತೆಯನ್ನು ನೋಡು)

೭ ಇನ್ನು ನೀವು ಕೀರ್ದಿ ಮತ್ತು ಖತಾವಣಿಗಳಲ್ಲಿ ಯಾವದು ಹೆಚ್ಚಿನದೆಂಬದನ್ನು ಹೇಳಬಲ್ಲಿರೋ? ಕೀರ್ದಿಯಿಂದ ಪ್ರತಿಯೊಂದು ರಕಮಿನ ವಿವರವು ತಿಳಿಯುತ್ತದಲ್ಲದೆ ನಮ್ಮಲ್ಲಿ ಸದ್ಯಕ್ಕೆ ಸಿಲಕು ಹಣವು ಎಷ್ಟು? ಎಂಬ ಸಂಗತಿಯೂ ತಿಳಿಯುತ್ತದೆ. ಆದರೆ ಇಂಥದೊಂದು ಖಾತೆಯು ಕೊಡಕೊಳ್ಳುವ ರಕಮುಗಳು ಎಷ್ಟು ಇರುತ್ತವೆ? ಎಂಬ ಸಂಗತಿಯು ತಟ್ಟನೆ ಅದರಲ್ಲಿ ಸಿಗುವದಿಲ್ಲ. ಈ ಸಂಗತಿಯು ಖಾತೆಯಿಂದ ಬೇಗನೆ ಸಿಗುವದು, ಆದುದರಿಂದ ವಿವರದ ಸಂಬಂಧವಾಗಿಯೂ ಬೇಕಾದಾಗ ಸಿಲಕು ಎಷ್ಟು ಎಂಬದನ್ನು ತಿಳಿದುಕೊಳ್ಳುವ ಸಂಬಂಧವಾಗಿಯೂ ಕೀರ್ದಿಯು ಮಹತ್ವದ್ದು. ಕೊಡಕೊಳ್ಳುವ ಸಂಗತಿಗಳನ್ನು ತಟ್ಟನೆ ತಿಳಿದುಕೊಳ್ಳುವದಕ್ಕಾಗಿ ಖಾತೆಯು ಮಹತ್ವದ್ದು. ಆದರೆ ಕೀರ್ದಿಯನ್ನು ಕಳೆದುಕೊಂಡರೆ ಮೊದಲಿನಂತೆ ಸಿದ್ಧಗೊಳಿಸುವದಕ್ಕೆ ಬರುವದಿಲ್ಲ. ಖತಾವಣಿಯ ಮೇಲಿಂದ ರಕಮುಗಳನ್ನು ತಾರೀಖವಾರ ಹುಡುಹುಡುಕಿ ಕೀರ್ದಿಯನ್ನು ತಯಾರಮಾಡಬಹುದು. ಆದರೆ ಕೀರ್ದಿಯೊಳಗೆ ಬರೆಯತಕ್ಕ ಮಹತ್ವದ ಸಂಗತಿಯಾದ ತಪಸೀಲನ್ನು ಯಾವ ಆಧಾರದಿಂದ ಬರೆಯಬೇಕು? ಖತಾವಣಿಯಲ್ಲಿ ತಪಸೀಲು ಇರುವದಿಲ್ಲವಲ್ಲ? ಇದರ ಸಂಬಂಧವಾಗಿ ಅದು ಮೂಕವೇ ಆಗಿರುವದು. ಬಾಯಿನೆನಪಿದ್ದಷ್ಟು ಮಾತ್ರ ತಪಸೀಲನ್ನು ಕೀರ್ದಿಯಲ್ಲಿ ಬರೆಯಬಹುದು. ಸಂಪೂರ್ಣ ನೆನಪು ಇರುವದು ಅಶಕ್ಯವು. ಅವಶ್ಯವಾಗಿ ನೆನಪಿಡತಕ್ಕ ಸಂಗತಿಯ ನೆನಪು ಹಾರಿದ್ದರೆ ಮುಂದೆ ಗತಿಯೇನು? ಗಿರಾಕಿಗಳು ಬಂದು ಏತರ ಸಲುವಾಗಿ ಎಂದು ಕೇಳಿದರೆ ಅವರಿಗೆ ಏನನ್ನು ಹೇಳಬೇಕು? ಬಾಯಿ ಮುಚ್ಚಿಕೊಂಡು ಸುಮ್ಮನೆ ಕೂಡ್ರುವ ಪ್ರಸಂಗವೇ ಬರುತ್ತದಲ್ಲವೇ? ಇದರಿಂದ ಗಿರಾಕಿಗಳ ನಂಬಿಗೆ ಹಾರಿ ಒಂದು ವೇಳೆ ಪತ್ತುಗೇಡಾಗಬಹುದು. ವ್ಯಾಪಾರಸ್ಥರ ಪತ್ತು ಹಾರಿತೆಂದರೆ ಅವರ ಸೊತ್ತು ಕಡಿಮಿಯೇ ಸೈ; ಇನ್ನು ಒಂದು ವೇಳೆ ಖಾತೆ ಹೋದರೆ ಕೀರ್ದಿಯ ಮೇಲಿಂದ ಮೊದಲಿನ ಖಾತೆಯಂತೆಯೇ ಅಚ್ಚಳಿಯದೆ ನಿಚ್ಚಳವಾಗಿ ಸಜ್ಜುಗೊಳಿಸಲಿಕ್ಕೆ ಬರುವದು. ಆದುದರಿಂದ ಖಾತೆಗಿಂತ ಕೀರ್ದಿಯೇ ಹೆಚ್ಚು ಉಪಯೋಗವಾದದ್ದು. ಅದೇ ಹೆಚ್ಚು ಮಹತ್ವದ್ದು.

೫ನೆಯ ಪ್ರಕರಣ.

ಖಾತೆಗಳು.

ಯಾವದೊಂದು ವ್ಯವಹಾರದ ಭಾಗಗಳಿಗೆ ಇಲ್ಲವೆ ಶಾಖೆಗಳಿಗೆ ಖಾತೆಗಳೆಂದನ್ನಬಹುದು. ವ್ಯವಹಾರಗಳು ಬೇರೆ ಬೇರೆ ಪ್ರಕಾರದವುಗಳಿರುವದರಿಂದ ಖಾತೆಗಳು ಇಂತಿಷ್ಟೇ ಇರುತ್ತವೆಂಬದನ್ನು ನಿರ್ಣಯಿಸುವದು ಹೇಗೆ? ಆದ್ದುದರಿಂದ ಜಮಾಖರ್ಚಿನಲ್ಲಿ ಖಾತೆಗಳು ಇಷ್ಟೇ ಇರುತ್ತವೆಂದು ಹೇಳಲಾಗದು. ಆದರೂ ಮುಂದೆ ಬರೆದಂತೆ ಖಾತೆಗಳಲ್ಲಿ ನಾಲ್ಕು ಪ್ರಕಾರಗಳನ್ನು ಮಾಡಿದರೆ ತಿಳಿಯಲಿಕ್ಕೆ ಸುಲಭವಾಗುವದು. ಅವು ಯಾವವೆಂದರೆ ೧ ಇಸಮುವಾರ ಖಾತೆಗಳು, ೨ ವ್ಯಾಪಾರದ ಖಾತೆಗಳು, ೩ ಸ್ವಂತ ಸಂಬಂಧವಾದ ಖಾತೆಗಳು, ೪ ಇತರ ಖಾತೆಗಳು.

ಈ ಖಾತೆಗಳ ಸಂಬಂಧವಾಗಿ ಜಮಾಖರ್ಚನ್ನು ಹೇಗೆ ಬರೆಯಬೇಕೆಂಬ ಸಂಗತಿಯು ಮುಂದೆ ಪ್ರತಿಯೊಂದು ಖಾತೆಯ ವಿವರಣೆಯಲ್ಲಿ ಬರೆಯಲ್ಪಟ್ಟದೆ; ಬಹುತರ ಕೀರ್ದಿಯನ್ನು ಬರೆಯುವ ಮಾಲಕರು ಹೇಗೆ ಬರೆದುಕೊಳ್ಳಬೇಕೆಂಬದನ್ನು ಮಾತ್ರ ಬರೆದಿರುತ್ತದೆ. ಇದೇ ತತ್ವದಂತೆ ವ್ಯವಹಾರದೊಳಗಿದ್ದ ಪ್ರತಿಯೊಬ್ಬ ಮನುಷ್ಯನು ತನ್ನ ತನ್ನ ಲೆಕ್ಕದಲ್ಲಿ ಬರೆಯಬಹುದು. ಈ ಸಂಗತಿಯು ಸಹಜವಾಗಿ ತಿಳಿಯುವಂತೆ ಇದ್ದುದರಿಂದಲೂ ಗ್ರಂಥವಿಸ್ತಾರದ ಭಯದಿಂದಲೂ ವ್ಯವಹಾರದೊಳಗಿನ ಇತರ ಜನರು ಹೇಗೆ ಬರೆಯುತ್ತಾರೆಂಬದನ್ನು ತೋರಿಸಿರುವದಿಲ್ಲ. ಅವಶ್ಯವಿದ್ದ ಪ್ರಸಂಗದಲ್ಲಿ ಇತರ ಜನರು ಹೇಗೆ ಬರೆಯುತ್ತಾರೆಂಬದೂ ಬರೆಯಲ್ಪಟ್ಟದೆ.

೧ ಇಸಮುವಾರ ಖಾತೆಗಳು.

ನಾವು ವ್ಯವಹಾರವನ್ನು ಮನುಷ್ಯರೊಡನೆ ಮಾಡುತ್ತೇವಲ್ಲದೆ ಪಶುಪಕ್ಷ್ಯಾದಿ ಇತರ ಪ್ರಾಣಿಗಳೊಡನೆ ಮಾಡುವದಿಲ್ಲವಷ್ಟೆ. ನಮಗೆ ಕೆಲವು ಹಣಬೇಕಾಗಿದ್ದರೆ ಕೈಗಡದಿಂದಾಗಲಿ, ಬಡ್ಡಿಯಿಂದಾಗಲಿ ಪರರಿಂದ ತರುವೆವು; ನಮ್ಮಲ್ಲಿ ಹಣವಿದ್ದು ಬೇರೆ ಜನರಿಗೆ ಹಣದ ಅವಶ್ಯಕತೆ ಬಿದ್ದರೆ ಅವರಿಗೆ ಕೈಗಡವೆಂದು, ಇಲ್ಲವೆ ಸಾಲವೆಂದು ನಾವು ಹಣವನ್ನು ಕೊಡಬಹುದು. ಮುಖ್ಯ ಮುಖ್ಯ ಪಟ್ಟಣಗಳಲ್ಲಿರುವ ಸಾವುಕಾರರಿಂದ ಇಲ್ಲವೆ ಅಡತದಾರರಿಂದ ಅಲ್ಲಿ ಅಗ್ಗವಾಗಿ ಮಾರಲ್ಪಡುವ ಪದಾರ್ಥಗಳನ್ನು ನಮ್ಮಲ್ಲಿ ತರಿಸಬಹುದು. ನಮ್ಮಲ್ಲಿ ಅಗ್ಗವಾಗಿ ಮಾರಲ್ಪಡುವ ಪದಾರ್ಥಗಳನ್ನು ಅವರೆಡೆಗೆ ಕಳುಹಬಹುದು. ಈ ವಿಧವಾಗಿ ಕೊಡಕೊಳ್ಳುವಿಕೆಯು ಅನೇಕ ಪ್ರಕಾರದ ಬಳಿಕೆಯು ನಮಗೂ ಬೇರೆ ಮನುಷ್ಯರಿಗೂ ಆಗುವದುಂಟು. ನಾವು ಯಾರ ಯಾರೊಡನೆ ವ್ಯವಹಾರ ನಡಿಸುತ್ತೇವೋ ಅವರವರ ಸಂಬಂಧದ ಲೆಕ್ಕ

ಇಲ್ಲವೆ ಖಾತೆಗಳನ್ನು ಇಡುವದು ಅವಶ್ಯವಾಗಿರುತ್ತದೆ. ಪರರಿಂದ ರೋಖ ಇಲ್ಲವೆ ಪರ್ಯಾಯದಿಂದ ಹಣ ಬಂದರೆ ಅವರ ಹೆಸರಿನಿಂದ ಜಮೆಯನ್ನೂ, ರೋಖ ಇಲ್ಲವೆ ಪರ್ಯಾಯದಿಂದ ಹಣಕೊಟ್ಟರೆ ಅವರ ಹೆಸರಿನಿಂದ ಖರ್ಚನ್ನೂ ಬರೆದುಕೊಳ್ಳಬೇಕೆಂಬ ಸಂಗತಿಯು ಸ್ಪಷ್ಟವಾಗಿರುತ್ತದೆ. ಖುದ್ದ ಖಾತೆಯು ಸ್ವಂತದ ಸಂಬಂಧವಾಗಿರುತ್ತದೆ; ಅದರಿಂದ ಅದನ್ನು ಇಸಮವಾರ ಖಾತೆಗಳಲ್ಲಿ ಎಣಿಸಬೇಕೆಂಬದು ಸ್ಪಷ್ಟವೇ; ಇದೇ ಪ್ರಕಾರ ಠೇವ, ಅಮಾನತ ಮುಂತಾದ ಕೆಲವು ಖಾತೆಗಳು ಇಸಮವಾರ ಖಾತೆಗಳ ಸ್ವರೂಪವನ್ನು ತಾಳುವವು. ವ್ಯಾಪಾರದ ಸಂಬಂಧವಾಗಿ ಕೊಡಕೊಳ್ಳುವ ಬಳಿಕೆಯಿದ್ದ ಇಸಮವಾರ ಖಾತೆಗಳ ಲೆಕ್ಕವನ್ನು ಹೇಗೆ ಬರೆಯುತ್ತಾರೆಂಬ ಸಂಗತಿಯ ಸ್ಪಷ್ಟೀಕರಣವು ಮುಂದೆ ವ್ಯಾಪಾರದ ಖಾತೆಗಳಲ್ಲಿ ಮಾಡಲ್ಪಟ್ಟದೆ.

೨ ವ್ಯಾಪಾರದ ಖಾತೆಗಳು.

ಭಾಗಗಳು—೧ ಖರೇದಿವಿಕರಿಖಾತೆ, ೨ ನಫಾತೋಟಾಖಾತೆ, ೩ ಜೇನಸೆವಾರಖಾತೆ, ೪ ಉದ್ಧರಿಯವ್ಯಾಪಾರ, ೫ ಸಂಜಾಯಶಕರಾರ, ೬ ದಲಾಲಿ, ೭ ಹವಾಲೆಯಸಂಗತಿ, ೮ ಠೇವಖಾತೆ, ೯ ಅಮಾನತಖಾತೆ, ೧೦ ರವಾನಿಗೆಯಖಾತೆ, ೧೧ ಬಂಡವಲಖಾತೆ, ೧೨ ಕಮಿಶನ, ಸೂಟಬಟ್ಟಾ, ವರ್ತಾವಳಿ, ಕಸರಖಾತೆ, ಸೂಟ, ಮನೋತಿ, ೧೩ ಇವುಗಳ ಜಮಾಖರ್ಚು ಮಾಡುವರೀತಿ, ೧೪ ಜಂಗಮ ಮಾಲಿನ ಒತ್ತೆ, ೧೫ ಸಾಲದ ಕತಬಿ, ೧೬ ಸ್ಥಾವರ ಆಸ್ತಿಗಳ ಒತ್ತೆಯಬಗ್ಗೆ, ೧೭ ಜಾಮೀನ ತಕ್ಕೊಂಡು ಸಾಲಕೊಟ್ಟಬಗ್ಗೆ, ೧೮ ಕಂತದಸಾಲ, ೧೯ ಬಡ್ಡಿಯಖಾತೆ, ೨೦ ಕ್ಯಾಶಸರಟೀಫಿಕೀಟು ವಾರಬಾಂಡು ಇತ್ಯಾದಿ.

೧ **ಖರೇದಿವಿಕರಿಖಾತೆ**—ವ್ಯಾಪಾರವೇ ವ್ಯವಹಾರಸ್ಥರ ಮುಖ್ಯ ಕರ್ತವ್ಯವಾಗಿರುತ್ತದೆ; ಆದಕ್ಕಾಗಿ ಅವರು ಮಾಲನ್ನು ಕೊಳ್ಳುವದನ್ನೂ ಮಾರುವದನ್ನೂ ಮಾಡಲೇಬೇಕಾಗುತ್ತದೆ. ಕೊಂಡ ಹಣಕ್ಕೆ ಖರೇದಿ ರಕಮೆಂತಲೂ ಮಾರಿದ ಹಣಕ್ಕೆ ವಿಕರಿಯ ರಕಮೆಂತಲೂ ಅನ್ನುವರು. ಇವೆರಡು ರಕಮುಗಳನ್ನು ಬರೆದುಕೊಳ್ಳುವ ಖಾತೆಗಳಿಗೆ ಅನುಕ್ರಮವಾಗಿ ಖರೇದಿಯ ಖಾತೆ ವಿಕರಿಯ ಖಾತೆಗಳೆಂಬ ಹೆಸರು. ಕೆಲವರು ಇವೆರಡೂ ಖಾತೆಗಳಿಗೆ ಖರೇದಿವಿಕರಿಖಾತೆಯೆಂಬದೊಂದೇ ಹೆಸರನ್ನು ಕೊಡುವರು. ಮಾಲಿನ ಖರೇದಿಯ ರಕಮು, ಅದನ್ನು ತರುವಕ್ಕೆ ಬಿದ್ದ ಬಂಡಿಯಬಾಡಿಗೆ, ಹಮಾಲಿ, ದಲಾಲಿ, ಜಕಾತಿ ಇವೇ ಮುಂತಾದ ಖರ್ಚು ಇವುಗಳನ್ನು ಒಟ್ಟು ಗೂಡಿಸಿ ಕೆಲವರು ಖರೇದಿಖಾತೆಗೆ ಇಲ್ಲವೆ ಖರೇದಿ ವಿಕರಿಖಾತೆಗೆ ಖರ್ಚುಬರೆಯುವರು; ಕೆಲವರು ವಿಂಗಡವಾಗಿ ಬರೆಯುವರು. ಮಾರಿಬಂದ ಹಣವನ್ನು ವಿಕರಿಖಾತೆಗೆ ಇಲ್ಲವೆ ಖರೇದಿವಿಕರಿಖಾತೆಗೆ ಜಮೆ ಬರೆಯುವರು.

ಗದಗಿನಿಂದ ೧೦೦ ಸೀರೆಗಳುಳ್ಳ ಒಂದು ಕಪ್ಪಡದ ಗಠ್ಠೆ ಬಂದಿರುತ್ತದೆಂದು ಕಲ್ಪಿಸುವ, ಅದರ ಮೂಲ ಬೆಲೆಯು ೧೫೦ ರೂ. ಇದ್ದು, ಆ ಗಠ್ಠೆಯನ್ನು ಕಟ್ಟುವ ಖರ್ಚು, ಹಮಾಲಿಯು ಖರ್ಚು, ಉಗಿಬಂಡೆ ಎತ್ತಿನ ಬಂಡೆಗಳಿಗಾದ ಖರ್ಚು ಮುಂತಾದ ಒಟ್ಟುವೆಚ್ಚ ೨೫ ರೂಪಾಯಿಗಳಾಗಿದ್ದರೆ ಆ ಗಠ್ಠೆಗೆ ಇಲ್ಲಿಯ ಖರೇದಿಯ ಬೆಲೆಯು ೧೭೫ ರೂಪಾಯಿಯಾದಂತಾಯಿತು. ಅದರಿಂದ ಇಲ್ಲಿನಾವು ಪ್ರತಿಯೊಂದು ಸೀರೆಯ ಬೆಲೆಯನ್ನು ೧೫। ಎಂದು ತಿಳಿಯಬೇಕಾಗುವದು. ಈ ೧೭೫ ರಕಮನ್ನು ಖರೇದಿವಿಕರಿಯ ಖಾತೆಗೆ ಖರ್ಚು ಬರೆದು ಅದರ ವಿವರದಲ್ಲಿ ಗದಗಿನ ಮೂಲಬೆಲೆ, ಅದನ್ನು ತರಿಸುವ ವೆಚ್ಚ ಇವುಗಳನ್ನು ತೋರಿಸಬೇಕು, ಮುಂದೆ ಇಲ್ಲಿ ಬಿದ್ದ ಬೆಲೆಯ ಮೇಲೆ ಕೆಲವು ಲಾಭವನ್ನು ಇಟ್ಟು ಇಂತಿಷ್ಟು ಹಣಕ್ಕೆ ಪ್ರತಿಯೊಂದು ಸೀರೆಯನ್ನು ಮಾರಬೇಕೆಂದು ನಿರ್ಣಯಿಸಿ ಆ ಪ್ರಕಾರ ತಮ್ಮ ಸಾಂಕೇತಿಕ ಅಂಕೆಯನ್ನು ಪ್ರತಿಯೊಂದು ಸೀರೆಯ ಮೇಲೆ ಬರೆಯುವರು. ಮುಂದೆ ಗಿರಾಕಿಗಳಿಗೆ ಆ ಪ್ರಕಾರ ಮಾರಿಮಾರಿದಂತೆ ಖರೇದಿವಿಕರಿಖಾತೆಗೆ ಜಮೆ ಮಾಡುವರು.

೨ ನಫಾತೋಟಾಖಾತೆ—ಖರೇದಿಯ ದರಕ್ಕಿಂತ ಹೆಚ್ಚು ಬಂದರೆ ಹೆಚ್ಚು ಬಂದಷ್ಟು ಹಣ ಲಾಭ, ಕಡಿಮೆ ಬಂದರೆ ಕಡಿಮೆಯಾದ ಹಣ ಹಾನಿಯೆಂಬದು ಸಹಜವೇ. ಈ ಲಾಭಹಾನಿಗಳ ಲೆಕ್ಕವು ವರ್ಷದ ಕೊನೆಗೆ ಖರೇದಿ ವಿಕರಿ ಇವೆರಡು ರಕಮುಗಳಿಂದ ಮಾಡಲ್ಪಡುತ್ತದೆ. ಲಾಭಹಾನಿಗಳ ರಕಮಿನ ಜಮಾಖರ್ಚಿಗಾಗಿ ನಫಾತೋಟಾಖಾತೆಯನ್ನಿಡುವರು. ವ್ಯಾಪಾರದ ಪರಿಣಾಮಗಳಾದ ಲಾಭಹಾನಿಗಳು ಬಹುಶಃ ವರ್ಷಾಂತ್ಯದಲ್ಲಿಯೇ ತಿಳಿಯುವದರಿಂದ ವರ್ಷದ ಕೊನೆಗೆಯೇ ಈ ಖಾತೆಯ ಲೆಕ್ಕಮಾಡುವರು. ಲಾಭದ ಹಣವನ್ನು ಈ ಖಾತೆಗೆ ಜಮೆ, ಹಾನಿಯ ಹಣವನ್ನು ಈ ಖಾತೆಗೆ ಖರ್ಚು ಬರೆಯುವರು. ಒಂದು ವೇಳೆ ಮಧ್ಯದಲ್ಲಿ ಮಾಲು ನಿರುಪಯೋಗಿಯಾದರೆ, ಅಗ್ನಿ, ಜಲ, ಚೌರ್ಯ ಮುಂತಾದ ವಿಶೇಷಕಾರಣಗಳಿಂದ ನಾಶವಾದರೆ, ಅಂಥ ಮಾಲಿನ ಬೆಲೆಯನ್ನು ಖರೇದಿವಿಕರಿಖಾತೆಗೆ ಜಮೆ ಹಚ್ಚಿ ನಫಾತೋಟಾಖಾತೆಗೆ ಖರ್ಚುಹಾಕುವರು; ಯಾವನೊಬ್ಬ ಮನುಷ್ಯನಿಂದ ಬರತಕ್ಕ ರಕಮು ಮುಳುಗಿದರೆ ಆ ಮನುಷ್ಯನ ಹೆಸರಿಲೆ ಜಮೆಹಚ್ಚಿ, ಈ ಖಾತೆಗೆ ಖರ್ಚುಹಾಕುವರು. ಇದೇ ಪ್ರಕಾರ ಇನಾಮು, ಲಾಟರಿ ಮುಂತಾದ ವಿಶೇಷಕಾರಣಗಳಿಂದ ಹಣ ಸಿಕ್ಕರೆ ಈ ಖಾತೆಗೆ ಜಮೆ ಬರೆದುಕೊಳ್ಳುವರು.

೩ ಜೀನಸವಾರ ಖಾತೆ—ವ್ಯಾಪಾರಕ್ಕಾಗಿ ಬೇರೆ ಬೇರೆ ಜೀನಸುಗಳನ್ನು ತಕ್ಕೊಂಡಿದ್ದು ಅವುಗಳ ಬಗ್ಗೆ ಖರೇದಿ ವಿಕರಿ, ಲಾಭಹಾನಿಗಳನ್ನು ಬೇರೆ ಬೇರೆ ತಿಳಿದುಕೊಳ್ಳುವ ಇಚ್ಛೆಯಿದ್ದರೆ ಆ ಪ್ರತಿಯೊಂದು ಪದಾರ್ಥದ ಹೆಸರಿನ ಸ್ವತಂತ್ರ ಖಾತೆಯನ್ನಿಡುವರು. ಇಂಥ ಪ್ರಕಾರದ ಖಾತೆಗಳಿಗೆ ಜೀನಸವಾರ ಖಾತೆಗಳೆನ್ನು

ವರು. ಉದಾಹರಣೆ—ಬಂಗಾರಖಾತೆ, ಗೋದಿಯ ಖಾತೆ, ಹತ್ತಿಯ ಖಾತೆ ಇತ್ಯಾದಿ. ಜೇನಸವಾರ ಖಾತೆಗಳನ್ನಿಟ್ಟರೆ ಆ ಜೇನಸಿನ ಖರೇದಿಯ ರಕಮು ಆದನ್ನು ತರಿಸುವದಕ್ಕಾಗಿ ಹತ್ತಿದ ಖರ್ಚು ಇವುಗಳ ಒಟ್ಟನ್ನು ಆ ಜೇನಸಿನ ಖಾತೆಗೆ ಖರ್ಚು ಬರೆದು ಮಾರಿಮಾರಿದಂತೆ ಬಂದ ಹಣವನ್ನು ಆ ಖಾತೆಗೆ ಜಮೆ ಬರೆಯುವರು. ಖರೇದಿವಿಕರಿಖಾತೆಯನ್ನಿಟ್ಟರೆ ಅದರಿಂದ ಒಟ್ಟು ವ್ಯಾಪಾರದಲ್ಲಿ ಎಷ್ಟು ಲಾಭಹಾನಿಗಳಾದವೆಂಬ ಸಂಗತಿ ಒಮ್ಮೆಲೇ ತಿಳಿಯುತ್ತದೆ. ಜೇನಸವಾರ ಖಾತೆಗಳನ್ನಿಟ್ಟರೆ ಪ್ರತಿಯೊಂದು ಜೇನಸಿನಿಂದ ಲಾಭ ಹಾನಿಗಳೆಷ್ಟಾದವೆಂಬದು ತಿಳಿಯುತ್ತದೆ. ಮೊದಲು ಖರೇದಿ ವಿಕರಿಖಾತೆಯನ್ನಿಟ್ಟು, ಬಳಿಕ ಜೇನಸವಾರ ಖಾತೆಗಳನ್ನು ಇಡುವದಾದರೆ, ಖರೇದಿವಿಕರಿಖಾತೆಗೆ ಖರ್ಚುಬಿದ್ದ ಹಣವನ್ನು ಆ ಖಾತೆಗೆ ಜಮೆಹಿಡಿದು, ಪ್ರತಿಯೊಂದು ಜೇನಸಿಗೆ ಬಿದ್ದ ಬೆಲೆಯನ್ನು ಆ ಖಾತೆಗೆ ಖರ್ಚುಹಾಕುವರು. ಈ ಜಮಾಖರ್ಚು ರೋಖವ್ಯಾಪಾರ ಮಾಡುವವನಲ್ಲಿಯೂ ಪರಭಾರೆಯಾಗುತ್ತದೆ. ಜೇನಸಿನ ಲೆಕ್ಕ ಶಟ್ಟನೆ ತಿಳಿಯಬೇಕೆಂದು ಜೇನಸಿನ ಖಾತೆಗೆ ಆದರ ಖರೇದಿಯ ವಿಕರಿಯ ಸಂಖ್ಯೆ ಬರೆಯಬೇಕು, ಹಾಗೆ ಮಾಡದಿದ್ದರೆ ಜೇನಸಿನ ಯಾದಿ ಇಡಬೇಕಾಗುತ್ತದೆ.

ಕಪ್ಪಡದ ಬಣ್ಣಹೋದರೆ, ಇಲ್ಲವೆ ಯಾವದಾದರೊಂದು ಕೊಂಡಮಾಲು ಮನೆಯವರ ಮನಸಿಗೆ ಬರದಿದ್ದರೆ ಅದನ್ನು ತಿರುಗಿಕೊಡುವ ಕರಾರವು ಗಿರಾಕಿಗಳಿಗೂ ಅಂಗಡಿಕಾರರಿಗೂ ಒಮ್ಮೊಮ್ಮೆ ಆಗುವದುಂಟು. ಆ ಕರಾರಿನಂತೆ ಮಾಲು ಪರತಬಂದರೆ, ವಿಕರಿಯ ರಕಮು ಯಾವ ಖಾತೆಗೆ ಜಮೆಯಾಗಿರುವದೋ ಆ ಖಾತೆಗೆ ಖರ್ಚುಹಾಕಿ, ಮಾಲನ್ನು ಇಟ್ಟುಕೊಂಡು, ಅವರು ಕೊಟ್ಟ ಹಣವನ್ನು ಅವರಿಗೆ ತಿರುಗಿಕೊಡಬೇಕು.

೪ **ಉದ್ರಿಯ ವ್ಯಾಪಾರ**—ನಾವು ಯಾವದಾದರೊಂದು ಜೇನಸನ್ನು ರೋಖ ಹಣಕೊಡದೆ ಉದ್ದರಿ ತಂದರೆ ಹೇಗೆ ಬರೆಯಬೇಕೆಂಬದನ್ನು ವಿಚಾರಿಸುವಾ—ಎಷ್ಟು ಬೆಲೆಯ ಜೇನಸನ್ನು ಕೊಂಡಿರುತ್ತದೋ ಅಷ್ಟು ಹಣವನ್ನು ಆ ಜೇನಸಿನಖಾತೆಗೆ ಖರ್ಚು ಬರೆಯಬೇಕೆಂಬ ಸಂಗತಿಯು ನಿರ್ವಿವಾದವಿರುತ್ತದಷ್ಟೆ; ಇನ್ನು ನಾವಂತೂ ನಮ್ಮ ಪೆಟ್ಟಿಗೆಯೊಳಗಿನ ಹಣವನ್ನು ತೆಗೆದು ಆ ಜೇನಸಿನ ಒಡೆಯನಿಗೆ ಕೊಟ್ಟಿಲ್ಲ, ಪುಸ್ತಕದಲ್ಲಂತೂ ಖರ್ಚು ಬರೆದು ಬಿಟ್ಟೆವು. ಅದರಿಂದ ಪೆಟ್ಟಿಗೆಯೊಳಗಿನ ಸಿಲಕಿನ ಹಣವು ಹೆಚ್ಚಾಗಿ ಪುಸ್ತಕದೊಳಗಿನ ಸಿಲಕಿನ ಹಣವು ಕಡಿಮೆಯಾಗುವದಲ್ಲ? ಇದಕ್ಕೇನು ಉಪಾಯವು? ಆ ಜೇನಸಿನ ಬೆಲೆಯಷ್ಟು ಹಣವನ್ನು ಆ ಜೇನಸಿನ ಒಡೆಯನ ಕಡೆಯಿಂದ ತಂದಂತಾಗಲಿಲ್ಲವೇ? ಅದರಿಂದ ಅಷ್ಟು ಹಣವನ್ನು ಅವನ ಖಾತೆಗೆ ಜಮೆಬರೆಯಬೇಕು. ಇವರಿಂದ ಲೆಕ್ಕ ಹಸನಾಗಲಿಲ್ಲವೇ? ಮುಂದೆ ಆವನ ಹಣವನ್ನು ಕೊಟ್ಟ ಬಳಿಕ ಅವನ ಹೆಸರಿನಿಂದ ಹಾಕಿದರಾಯಿತು. ನಾವು ಮುಂದಿಗೆ ಉದ್ದರಿಮಾರಿದ್ದರೆ ಇದೇ ಪ್ರಕಾರ

ಮಾಡಬೇಕು. ಜೀನಸು ಮಾರಿರುತ್ತದೆಂದು ಜೀನಸಿನ ಖಾತೆಗೆ ಜಮೆಬರೆದು, ಉದ್ಧರಿ ಒಯ್ದ ಇಸಮಿನ ಖಾತೆಗೆ ಖರ್ಚು ಹಾಕಬೇಕು. ಆವನು ಹಣವನ್ನು ತಂದು ಕೊಟ್ಟನಂತರ ಅವನ ಖಾತೆಗೆ ಜಮೆಹಿಡಿಯಬೇಕು.

೫ **ಸಂಜಾಯತಕರಾರ**—ನಮ್ಮಲ್ಲಿಯ ಮಾಲು ಶೀಘ್ರನೆ ಮಾರದೆ ಬಹಳವಾಗಿ ಸಿಲಕುಬಿದ್ದರೆ ಅದರೊಳಗಿನ ಕೆಲವು ಇಲ್ಲವೆ ಎಲ್ಲ ಮಾಲನ್ನು ಚಿಲ್ಲರ ವ್ಯಾಪಾರಸ್ತರಿಗೆ ಮಾರಕೊಟ್ಟು ಮಾರಿದಷ್ಟು ಹಣ, ಉಳಿದ ಮಾಲು ಫಿರತಕೊಡಬೇಕೆಂದು ಗೊತ್ತು (ಕರಾರ) ಮಾಡುವ ಪದ್ಧತಿಯಿರುತ್ತದೆ. ಈ ಕರಾರಿಗೆ **ಸಂಜಾಯತಕರಾರು** ಅನ್ನುವರು. ಈ ಕರಾರಿನಿಂದ ನಾವು ಯಾವನೊಬ್ಬನಿಗೆ ನಮ್ಮಲ್ಲಿಯ ಮಾಲನ್ನು ಉದ್ದರಿಕೊಟ್ಟರೆ ಆ ಜೀನಸು ನಮ್ಮಲ್ಲಿ ಮಾರಾಟವಾಯಿತೆಂದು ಮನ್ನಿಸಿ ಆ ಜೀನಸಿನ ಖಾತೆಗೆ ಜಮೆಹಿಡಿದು ಆ ಜೀನಸಿನ ಬೆಲೆಯನ್ನು, ಮಾರಾಟಕ್ಕೆಂದು ಒಯ್ದವನ ಹೆಸರಿನಿಂದ ಖರ್ಚುಹಾಕಬೇಕು. ಇನ್ನು ಮಾರಿದಷ್ಟು ಹಣ ಉಳಿದ ಮಾಲು ಇವುಗಳನ್ನು ತಿರುಗಿ ತಂದುಕೊಟ್ಟರೆ ಒಟ್ಟು ರಕಮನ್ನು ಅವನ ಹೆಸರಿನಿಂದ ಜಮೆಹಿಡಿದು ತಿರುಗಿ ಬಂದ ಮಾಲನ್ನು ಹೊಸದಾಗಿ ಕೊಂಡಂತೆ ಆ ಮಾಲಿನ ಖಾತೆಗೆ ಖರ್ಚು ಹಾಕಬೇಕು.

ಇನ್ನು ನಾವು ಎರಡನೆಯ ವ್ಯಾಪಾರಸ್ತರಲ್ಲಿ ಸಂಜಾಯತಕರಾರಿನಿಂದ ಉದ್ಧರಿ ತಂದರೆ ತಂದಷ್ಟು ಜೀನಸಿನ ಕ್ರಯವನ್ನು ಆ ವ್ಯಾಪಾರಸ್ಥನ ಹೆಸರಿನಿಂದ ಜಮೆ ಮಾಡಿ ಆ ಜೀನಸಿನ ಖಾತೆಗೆ ಖರ್ಚು ಹಾಕಬೇಕು. ಒಳಿಕ ಮಾರಿದಷ್ಟು ಹಣ ಉಳಿದ ಬದುಕು ತಿರುಗಿ ಕೊಟ್ಟರೆ ಒಟ್ಟು ರಕಮನ್ನು ಅವನ ಹೆಸರಿನಿಂದ ಖರ್ಚು ಬರೆದು ಕೊಟ್ಟಷ್ಟು ಜೀನಸು ಮಾರಾಟವಾಯಿತೆಂದು ಬಗೆದು ಆ ಜೀನಸಿನ ಖಾತೆಗೆ ಜಮೆಹಿಡಿಯಬೇಕು.

ಸಂಜಾಯತಕರಾರಿನಿಂದ ಮಾಲನ್ನು ಮಾರಾಟಕ್ಕೆ ಒಯ್ದವನು ಮೊದಲೇ ರೋಖ ಹಣವನ್ನು ಕೊಟ್ಟು ಮಾಲನ್ನು ಒಯ್ದಿದ್ದರೆ ಬಲು ಹಸನಾದ ಸಂಗತಿಯೇ ಸೈ; ಎಲ್ಲಮಾಲು ಮಾರಿತೆಂದು ಆ ಜೀನಸಿನ ಖಾತೆಗೆ ಜಮೆಹಿಡಿದುಬಿಟ್ಟರಾಯಿತು. ಅವನಿಗೆ ಕೊಟ್ಟ ಎಲ್ಲ ಮಾಲು ಮಾರಲ್ಪಟ್ಟರೆ ಒಳಿತೇ ಆಯಿತು. ಯಾವ ನಿಗ್ಗರವೇ ಇಲ್ಲ. ಒಂದು ವೇಳೆ ಕೆಲವು ಮಾಲನ್ನು ತಿರುಗಿ ಕೊಟ್ಟಲ್ಲಿ ಆ ಜೀನಸನ್ನು ನಾವು ಹೊಸದಾಗಿ ಕೊಂಡೆವೆಂದು ತಿಳಿದು ಆ ಜೀನಸಿನ ಖಾತೆಗೆ ಖರ್ಚು ಬರೆದು ಆ ಜೀನಸಿನ ಬೆಲೆಯನ್ನು ಅವನಿಗೆ ಕೊಟ್ಟುಬಿಟ್ಟರಾಯಿತು. ರೋಖಿಯ ವ್ಯಾಪಾರವು ಬಲು ಚೊಕ್ಕವಾದದ್ದು. ಉದ್ಧರಿಯ ವ್ಯಾಪಾರವೇ ತೊಡಕುಳ್ಳದ್ದು! ಆದರೆ ಉದ್ಧರಿ ವ್ಯಾಪಾರ ಮಾಡಿದ ಹೊರತು ಸಾಗುವದಿಲ್ಲವಲ್ಲ ?

೬ ದಲಾಲಿ—ಪರರ ಮಾಲನ್ನು ಮಾರಿಸಿಕೊಡುವ ಬಗ್ಗೆ ಇಲ್ಲವೆ ಅವರಿಗೆ ಮಾಲನ್ನು ಕೊಂಡು ಕೊಡುವ ಬಗ್ಗೆ ವ್ಯಾಪಾರದಲ್ಲಿ ನಡುವೆ ಆದವನು ತನ್ನ ಶ್ರಮದ ಸಲುವಾಗಿ ತೆಗೆದುಕೊಳ್ಳುವ ಹಣಕ್ಕೆ **ದಲಾಲಿಯೆನ್ನುವರು.** ನಡುವೆ ಆದವನಿಗೆ **ದಲಾಲನೆನ್ನು**ವರು.

ವ್ಯಾಪಾರದ ಪಡಮೂಲೆಯಾಗಿರುವ (ಪೇಟೆಗೆ ಬಂದ ಮಾಲೆಲ್ಲ ಮಾರಲ್ಪಡುವ) ಪಟ್ಟಣದಲ್ಲಿ ದಲಾಲರಿರುವರು. ಅವರು ಪರಸ್ಥಳದ ಅರಿಯದ ಜನರಿಂದ ಬಂದ ಮಾಲನ್ನು ತಮ್ಮ ಗಿರಾಕಿಗಳಿಗೆ ಹಾಕಿ ಒಮ್ಮೆಲೆ ಮಾರಿಸಿಕೊಡುವರು. ಅವರಿಗೆ ಬೇಕಾದ ಮಾಲನ್ನು ಒಮ್ಮೆಲೆ ಕೊಂಡುಕೊಡುವರು ಈ ಬಗ್ಗೆ ತಮ್ಮ ಶ್ರಮದ ಸಲುವಾಗಿ ತೆಗೆದು ಕೊಂಡ ಹಣವನ್ನು ಅವರು ದಲಾಲಿಯ ಖಾತೆಗೆ ಜಮೆ ಹಚ್ಚುವರು.

ಒಂದೊಂದು ವೇಳೆ ಪರಸ್ಥಳದವರು ಮಾಲು ತಂದಿದ್ದು ಅವರ ಇಚ್ಛೆಯಂತೆ ಮಾಲಿನ ಧಾರಣೆಯಿರದೆ ಅಗ್ಗವಾಗಿದ್ದರೆ, ತುಟ್ಟಿಯಾದಾಗ್ಗೆ (ತಮ್ಮ ಇಚ್ಛೆಗನುಸಾರವಾಗಿ ಧಾರಣೆಯಾದಾಗ್ಗೆ) ಮಾರಬೇಕೆಂದು ಗೊತ್ತುಮಾಡಿ ಆ ಮಾಲನ್ನು ಆ ದಲಾಲನಲ್ಲಿಯೇ ಇಟ್ಟು ತಾವು ತಮ್ಮ ಊರಿಗೆ ಬರುವರು. ಆಗಲವರು ದಲಾಲನಿಗೆ ಆ ಮಾಲನ್ನು ಇಟ್ಟುಕೊಂಡಬಗ್ಗೆ ವಖಾರದ ಬಾಡಿಗೆ ಕೊಡಬೇಕಾಗುತ್ತದಷ್ಟೆ; ದಲಾಲನು ಆ ಮಾಲಿನ ಬಗ್ಗೆ ಇಂಥವರಿಂದ ಇಂಥ ಜೀನಸು ಇಂತಿಷ್ಟು ಬಂದಿರುತ್ತದೆಂದು ತನ್ನ ಜೀನಸಿನ ಯಾದಿಯಲ್ಲಿ ಜಮೆ ಬರಕೊಳ್ಳುವನು; ಮುಂದೆ ಇಚ್ಛಿತ ಧಾರಣೆಯಾದಾಗ್ಗೆ ಮಾರಿ, ಬಂದ ಹಣವನ್ನು ಆ ಮಾಲಿನ ಒಡೆಯನ ಖಾತೆಗೆ ಜಮೆ ಹಚ್ಚಿ, ಆದರ ಬಗ್ಗೆ ಬರತಕ್ಕ ದಲಾಲಿ, ವಖಾರದ ಬಾಡಿಗೆ, ಧರ್ಮಾದಾಯ ಮುಂತಾದ ಹಣವನ್ನು ದಲಾಲಿ, ಬಾಡಿಗೆ, ಧರ್ಮಾದಾಯ ಮುಂತಾದ ಖಾತೆಗಳಿಗೆ ಜಮೆಮಾಡಿ, ಅವುಗಳ ಒಟ್ಟು ಹಣವನ್ನು ಮಾಲಿನ ಒಡೆಯನ ಖಾತೆಗೆ ಖರ್ಚುಹಾಕಿ ಆ ಬಗ್ಗೆ ಯಾದಿಯನ್ನು ಅವನಿಗೆ ಕಳಿಸುವನು; ಮುಂದೆ ಮಾಲಿನ ಒಡೆಯನಿಗೆ ಹಣ ಕಳುಹಿ ಉಭಯತರ ಹಣದ ಲೆಕ್ಕದ ವಜಾಬಾಕಿಯಾದ ನಂತರ ಮಾರಿದ ಬಗ್ಗೆ ಅವನ ಹೆಸರಿನಿಂದ ಜಮೆಹಚ್ಚಿದ ರಕಮನ್ನು ಅವನ ಖಾತೆಗೆ ಖರ್ಚುಬರೆದು, ದಲಾಲಿ ಬಾಡಿಗೆ ಮುಂತಾದವುಗಳ ಬಗ್ಗೆ ಅವನ ಖಾತೆಗೆ ಖರ್ಚುಬಿದ್ದ ರಕಮನ್ನು ಅವನ ಹೆಸರಿನಿಂದ ಜಮೆ ಬರೆಯುವನು.

ಮಾಲಿನವನು ಕೆಲವು ಮುಂಗಡ ಹಣವನ್ನು ಬೇಡಿದರೆ, ದಲಾಲರು ತಮ್ಮಲ್ಲಿಟ್ಟ ಮಾಲಿಗೆ ತಕ್ಕಷ್ಟು ಹಣವನ್ನು ಬಡ್ಡಿಯಂತೆ ಕೊಟ್ಟು ಅವನ ಖಾತೆಗೆ ಖರ್ಚು ಹಾಕುವರು; ಮುಂದೆ ಲೆಕ್ಕ ತೀರಿಸುವಾಗ ಮಾಲಿನವನಿಗೆ ಕೊಡತಕ್ಕ ಮಾಲಿನ ಬೆಲೆಯ ರಕಮನ್ನು ಅವನ ಹೆಸರಿಲೆ ಖರ್ಚುಹಾಕಿ ವಿವರದಲ್ಲಿ ಮುಂಗಡಕೊಟ್ಟ ಹಣ, ಅದರ ಬಡ್ಡಿ ವಖಾರದ ಬಾಡಿಗೆ ಮುಂತಾದ್ದು, ಉಳಿದರೋಖ ಹಣ ಇವುಗಳನ್ನು ತೋರಿಸಿ, ರೋಖ ಹಣಬಿಟ್ಟು ಉಳಿದ ಸಾಲದ ಹಣ ಅದರ ಬಡ್ಡಿ, ವಖಾರದ ಬಾಡಿಗೆ ಮುಂತಾದವುಗಳನ್ನು ಆಯಾ ಖಾತೆಗಳಿಗೆ ಜಮೆ ಹಿಡಿಯಬೇಕು.

ಇತ್ತ ಮಾಲಿನ ಒಡೆಯನು ದಲಾಲನಲ್ಲಿ ಮಾಲು ಇಟ್ಟಾಗ್ಗೆ ದಲಾಲನಿಗೆ ದರ ತಿಳಿಸಿದಂತೆ ಕಳುಹಿದ ಜೀನಸಿನ ಬೆಲೆಯನ್ನು ದಲಾಲೀ ಜೀನಸಿನ ಖಾತೆಗೆ ಖರ್ಚುಬರೆದು ಜೀನಸಿನ ಖಾತೆಗೆ ಜಮೆಮಾಡುವನು. ದಲಾಲನ ಕಡೆಗೆ ಜೀನಸನ್ನು ಕಳುಹಲಿಕ್ಕೆ ಹತ್ತಿದ ಗಾಡಿಯ ಬಾಡಿಗೆ, ಮುಂತಾದವುಗಳನ್ನು ಆಯಾ ಖಾತೆಗಳಿಗೆ ಖರ್ಚು ಬರೆಯುವನು. ಮುಂದೆ ದಲಾಲನ ಕಡೆಯಿಂದ ರೋಖ ಹಣಬಾರದೆ ಮಾರಾಟದ ಯಾದಿಯು ಬಂದರೆ ದಲಾಲಿ ಜೀನಸಿನ ಖಾತೆಗೆ ಜಮೆ ಬರೆದು, ಅಷ್ಟು ರಕಮನ್ನು ದಲಾಲನ ಖಾತೆಗೆ ಖರ್ಚು ಬರೆಯಬೇಕು. ದಲಾಲನು ಖರ್ಚುಮಾಡಿದ ಬಾಡಿಗೆ ಮುಂತಾದ ರಕಮನ್ನು ಆಯಾ ಖಾತೆಗಳಿಗೆ ಖರ್ಚುಹಾಕಿ ದಲಾಲನ ಖಾತೆಗೆ ಜಮೆ ಮಾಡಬೇಕು. ದಲಾಲನಿಂದ ರಕಮಿನ ವ್ಯವಸ್ಥೆ (ನಿಕಾಲೆ) ಯಾದಾಗ ಮೊದಲು ಅವನ ಖಾತೆಗೆ ಖರ್ಚು ಮತ್ತು ಜಮೆ ಬಿದ್ದ ರಕಮುಗಳನ್ನು ಕ್ರಮವಾಗಿ ಅವನ ಖಾತೆಗೆ ಜಮೆ ಮತ್ತು ಖರ್ಚು ಬರೆದು ಅವನ ಖಾತೆ ಪೂರ್ಣ (ಬೇಬಾಕ)ಮಾಡಬೇಕು.

ಮಾಲಿನವನು ದಲಾಲನಿಂದ ಮುಂಗಡ ಹಣ ತಕ್ಕೊಂಡಿದ್ದರೆ ದಲಾಲನ ಹೆಸರಿಲೆ ಜಮೆಹಿಡಿಯಬೇಕು. ಲೆಕ್ಕ ತೀರಿಸುವಾಗ ಅವನು ಕೊಡತಕ್ಕ ಮಾಲಿನ ಬೆಲೆಯನ್ನೆಲ್ಲ ಅವನ ಖಾತೆಗೆ ಜಮೆ ಹಚ್ಚಿ ವಿವರದಲ್ಲಿ ಮುಂಗಡ ತಕ್ಕೊಂಡ ಹಣ, ಅದರ ಬಡ್ಡಿ, ವಖಾರದ ಬಾಡಿಗೆ ಮುಂತಾದ್ದು, ಉಳಿದ ರೋಖ ಹಣ ಇವುಗಳನ್ನು ತೋರಿಸಿ, ರೋಖ ಹಣಬಿಟ್ಟು ಉಳಿದ ಮುಂಗಡ ಕೊಟ್ಟ ಹಣ ಅದರ ಬಡ್ಡಿ, ವಖಾರದ ಬಾಡಿಗೆ ಮುಂತಾದವುಗಳನ್ನು ಆಯಾ ಖಾತೆಗಳಿಗೆ ಖರ್ಚು ಹಾಕಬೇಕು.

೭ ಹವಾಲೆಯ ಸಂಗತಿ—ಈ ಬಗ್ಗೆ ಮೊದಲು ಉದಾಹರಣರೂಪದಿಂದ ಬರೆಯುವಾ–ಅನಿಗೆ ಬನು ಕೆಲವು ರೂಪಾಯಿ ಕೊಡತಕ್ಕದ್ದಿದ್ದು ಅವನ ತ್ರಾಸ ಬಹಳವಾದುದರಿಂದ ಕನನ್ನು ಅವನ ಹತ್ತರ ಕರೆದೊಯ್ದು ಇಗೋ, ಇವನು ನನ್ನ ಮಿತ್ರನು, ನಾನು ನಿಮಗೆ ಕೊಡತಕ್ಕ ರೂಪಾಯಿಗಳ ಬಗ್ಗೆ ಇವನನ್ನು ಹವಾಲೆ ಕೊಟ್ಟಿರುವೆನೆಂದು ಹೇಳಿದನೆಂತಲೂ, ಕನು ಅಹುದಹುದು. ನಾನು ಇವನ ಹವಾಲೆ ಹಿಡಿದಿರುವೆನು, ಅವನನ್ನು ಕೇಳಬೇಡಿರಿ,ಅವನ ರೂಪಾಯಿಗಳನ್ನು ನಾನೇ ನಿಮಗೆ ತುಸು ದಿವಸಗಳಲ್ಲಿ ಕೊಡುತ್ತೇನೆಂದು ಒಪ್ಪಿಕೊಂಡನೆಂತಲೂ ಕಲ್ಪಿಸೋಣ. ಈ ಬಗ್ಗೆ ಈ ಮೂವರು ತಮ್ಮ ಜಮಾಖರ್ಚು ಹೇಗೆ ಬರೆಯಬೇಕೆಂದರೆ—

(೧) ಅನು ಬನಿಂದ ಬರತಕ್ಕ ರೂಪಾಯಿ ಬಂದವೆಂದು ತಿಳಿದು ಅವನ ಹೆಸರಿನಿಂದ ಜಮೆ ಹಿಡಿಯಬೇಕಾಯಿತು. ಕನು ಕೊಡತಕ್ಕದ್ದಾದ ಕಾರಣಾ ಅವನ ಹೆಸರಿನಿಂದ ಖರ್ಚು ಹಾಕಬೇಕಾಯಿತು. (೨) ಬನು ಅನ ಹೆಸರಿನಿಂದ ಖರ್ಚು

ಹಾಕಿ ಕನ ಹೆಸರಿನಿಂದ ಜಮೆ ಹಿಡಿಯಬೇಕಾಯಿತು. (೩) ಕನು ಬನ ಹೆಸರಿನಿಂದ ಖರ್ಚುಹಾಕಿ ಅನ ಹೆಸರಿನಿಂದ ಜಮೆಹಿಡಿಯಬೇಕಾಯಿತು.

ಸಾರಾಂಶವೇನಂದರೆ ಹವಾಲೆಯ ಜಮಾಖರ್ಚು ಮಾಡಬೇಕಾದರೆ **ಹವಾಲೆ ಕೊಟ್ಟವನ ಹೆಸರಿನಿಂದ ಜಮೆ ಹಿಡಿದು ಹವಾಲೆಗೆ ಒಪ್ಪಿದವನ ಹೆಸರಿನಿಂದ ಖರ್ಚು ಹಾಕಬೇಕು.**

೮ **ಠೇವುಖಾತೆ**—ವ್ಯಾಪಾರಸ್ತರು ನಂಬಿಗರೆಂದು ತಿಳಿದು ಜನರು ತಮ್ಮಲ್ಲಿಯ ಹಣವನ್ನು ಸುರಕ್ಷಿತತೆಯ ದೆಸೆಯಿಂದಲೂ ಬಡ್ಡಿಯ ದೆಸೆಯಿಂದಲೂ ಅವರಲ್ಲಿ ಇಡಗಂಟಾಗಿ ಇಡುವರು, ವ್ಯಾಪಾರಸ್ತರಿಗೂ ಇದು ಬೇಕಾದ ಸಂಗತಿಯೇ ಆಗಿರುವದು. ಏಕಂದರೆ ತುಸು ಬಡ್ಡಿಯಿಂದ ವ್ಯಾಪಾರದಲ್ಲಿ ಬಳಿಸಾಡುವದಕ್ಕೆ ರಕಮು ಸಿಗುವದು. ಅದರ ಸಲುವಾಗಿ ಸಾವುಕಾರರಿಗೆ ಇಡಗಂಟು (ಠೇವು) ಎಂಬ ಹೆಸರಿನದೊಂದು ಖಾತೆಯನಿಡತಕ್ಕ ಅವಶ್ಯವಿರುವದು. ಇದಕ್ಕೆ ಠೇವಖಾತೆಯೆನ್ನುವರು. ಇದರಲ್ಲಿ ಬಂದ ಕೊಟ್ಟ ಹಾಗೆ ಕ್ರಮವಾಗಿ ಜಮೆ ಮತ್ತು ಖರ್ಚು ಬರೆಯಬೇಕೆಂಬದು ಸಹಜವು; ಠೇವಖಾತೆಯನ್ನಿಡದ ಪಕ್ಷಕ್ಕೆ ಯಾವನು ಠೇವವನ್ನು ಇಡುತ್ತಾನೋ ಅವನ ಖಾತೆಯನ್ನಿಡಬೇಕಾಗುತ್ತದೆ. ಅನೇಕ ಜನರು ಠೇವವನ್ನು ಇಟ್ಟದ್ದು ಆ ಬಗ್ಗೆ ಒಂದೇ ಠೇವಖಾತೆಯನ್ನಿಟ್ಟರೆ ಪ್ರತಿಯೊಬ್ಬನ ಠೇವವೆಷ್ಟು? ಅವನು ತಿರುಗಿ ಒಯ್ದ ಹಣವೆಷ್ಟು? ಇವು ತಟ್ಟನೆ ತಿಳಿಯಲಾರವು. ಅದಕ್ಕಾಗಿ ಆಯಾ ಇಸಮಿನ ಖಾತೆಯನ್ನಿಡುವದೇ ಹೆಚ್ಚು ಅನುಕೂಲವಾದದ್ದು. ಒಳಗಡೆಯಲ್ಲಿ ಪೋಷ್ಟಿನ ಇಲ್ಲವೆ ಇತರ ಬ್ಯಾಂಕುಗಳೂ ಸಹಕಾರಿ ಮುಂತಾದ ಸಂಘಗಳೂ ಉಂಟಾಗಿರುವದರಿಂದ ಅವುಗಳಲ್ಲಿಯೇ ಠೇವವನ್ನು ಬಹುತರವಾಗಿ ಇಡುವ ಪದ್ಧತಿಯು ಜನರಲ್ಲಿ ಉಂಟಾಗಿ ವ್ಯವಹಾರಸ್ತರಲ್ಲಿ ಇಡುವದು ಬಹುತರ ಕಡಿಮೆಯಾಗಿದೆ. ಠೇವಿನ ಬಡ್ಡಿಯು ಕರಾರಿನಂತೆ ಮುದ್ದತು ತೀರಿದನಂತರ ಆಕಾರಿಸಲ್ಪಟ್ಟು, ಆ ಬಡ್ಡಿಯ ಹಣವನ್ನು ಬಡ್ಡಿಯ ಖಾತೆಗೆ ಖರ್ಚುಹಾಕಿ ಠೇವವಿಟ್ಟವನಿಗೆ ಕೊಡಬೇಕು. ಅವನು ಒಯ್ಯದಿದ್ದರೆ ಬಡ್ಡಿಯ ಖಾತೆಗೆ ಖರ್ಚು ಹಾಕಿ ಠೇವವಿಟ್ಟವನ ಖಾತೆಗೆ ಆ ಹಣವನ್ನು ಜಮೆ ಮಾಡಬೇಕು. ಒಂದು ವೇಳೆ ಅದನ್ನು ಸಹ ಠೇವ ಖಾತೆಗೆ ಜಮೆ ಮಾಡಬೇಕೆಂಬ ಮಾತು ಆಗಿದ್ದರೆ ಠೇವಖಾತೆಗೆ ಜಮೆ ಮಾಡಬೇಕು. ಹೀಗೆ ಮಾಡಿದರೆ ಬಡ್ಡಿಗೆ ಬಡ್ಡಿ ಕಟ್ಟಿದಂತಾಗುತ್ತದೆ.

೯ **ಅಮಾನತಖಾತೆ**—ರಕಮಿನ ವ್ಯವಸ್ಥೆ ಏನು ಮಾಡಬೇಕೆಂಬದನ್ನು ತಿಳಿಸದೆ ಕೆಲಕೆಲವರು ವ್ಯಾಪಾರಸ್ತರ ಕಡೆಗೆ ಹಣವನ್ನು ಕಳುಹುತ್ತಾರೆ. ಅವರಿಂದ ಬಡ್ಡಿ, ಬಾಡಿಗೆ ಮುಂತಾದ ಹಲವು ಕಾರಣಗಳಿಂದ ಹಣವು ಬರತಕ್ಕದ್ದಿರುತ್ತದೆ, ಆದರೆ ಏತರ ಬಗ್ಗೆ ಜಮೆ ಮಾಡಬೇಕೆಂಬ ವಿವರವನ್ನು ಮಾತ್ರ ತಿಳಿಸಿರುವದಿಲ್ಲ, ಇಂಥ ಪ್ರಸಂಗದಲ್ಲಿ ಅವರು ಕಳುಹಿದ ಹಣವನ್ನು ಯಾವ ಖಾತೆಗೆ ಜಮೆ ಮಾಡ

ಬೇಕೆಂಬ ಬಗ್ಗೆ ಸಂಶಯವು ಬರುವದು. ಅದಕ್ಕಾಗಿ ಅವರು ಕಳುಹಿದ ಹಣವನ್ನು ಸದ್ಯಕ್ಕನಕ ಅಮಾನತ (ಮೋಘಮ) ವೆಂಬ ಹೆಸರಿನ ಖಾತೆಯನ್ನಿಟ್ಟು ಆ ಖಾತೆಗೆ ಜಮೆ ಮಾಡುವರು. ಬಳಿಕ ಅವರಿಂದ ಯಾವ ಖಾತೆಗೆ ಜಮೆ ಮಾಡಬೇಕೆಂಬ ಸೂಚನೆ ಬಂದ ನಂತರ ಆ ಖಾತೆಗೆ ಜಮೆ ಮಾಡಿ ಅಮಾನತ ಖಾತೆಗೆ ಖರ್ಚು ಹಾಕುವರು.

ಮತ್ತು ಯಾರಾದರೂ ತಮ್ಮ ಹೆಸರನ್ನು ಪ್ರಕಟ ಮಾಡಬಾರದೆಂದು ಹೇಳಿ ಗುಪ್ತವಾಗಿ ಮಾಡುವ ಕೊಡಕೊಳ್ಳುವ ವ್ಯವಹಾರದ ರಕಮು, ಯಾವ ರಕಮಿನ ಬಗ್ಗೆ ಅಡ್ಡಿ, ತಕರಾರ, ಸಂಶಯಗಳು ಇರುತ್ತವೋ ಅಂಥ ರಕಮು, ಯಾವದೊಂದು ಮಾಲನ್ನು ಸ್ವೀಕಾರಮಾಡಿದ್ದು ಸದ್ಯಕ್ಕನಕ ಇರಲಿ, ಮನೆಯವರನ್ನು ಕೇಳಿ ತಿಳಿಸುತ್ತೇವೆಂದು ಹೇಳಿದ ಮಾಲಿನ ರಕಮು ಇವೇ ಮುಂತಾದ ಕಾರಣಗಳಿಂದ ನಿಷ್ಕರ್ಷೆಯಾಗದ ರಕಮನ್ನು ಬರೆಯುವದಕ್ಕೆ ಅಮಾನತಖಾತೆಯನ್ನು ಉಪಯೋಗಿಸುತ್ತಾರೆ. ಇದಲ್ಲದೆ ಯಾರಿಗಾದರೂ ಹಣಕೊಟ್ಟು ಖರ್ಚುಹಾಕದೆ ಬಿಟ್ಟದ್ದರೆ ಸಾಯಂಕಾಲಕ್ಕೆ ಸಿಲಕು ಎಣಿಸುವಾಗ ಹಣಕಡಿಮೆ ಬರುವದಷೆ? ಹೀಗಾದಲ್ಲಿ ಕಡಿಮೆಯಾದಷ್ಟು ಹಣವನ್ನು ಅಮಾನತ ಖಾತೆಗೆ ಖರ್ಚು ಹಾಕುವರು. ಮುಂದೆ ನೆನಪಾದ ಬಳಿಕ ಅಮಾನತ ಖಾತೆಗೆ ಜಮೆ ಹಿಡಿದು ಯೋಗ್ಯ ಖಾತೆಗೆ ಖರ್ಚು ಹಾಕುವರು. ಇದೇ ಪ್ರಕಾರ ಮಂದಿಯ ಕಡೆಯಿಂದ ಬಂದ ಹಣವನ್ನು ಜಮೆ ಮಾಡುವದಕ್ಕೆ ಮರೆತರೆ ಸಿಲಕು ಹೆಚ್ಚಾಗುವದು. ಅದರಿಂದ ಹೆಚ್ಚಾದ ಹಣವನ್ನು ಅಮಾನತ ಖಾತೆಗೆ ಜಮೆ ಹಿಡಿದು ನೆನಪಾದ ಬಳಿಕ ಅಮಾನತ ಖಾತೆಗೆ ಖರ್ಚು ಹಾಕಿ ಯೋಗ್ಯ ಖಾತೆಗೆ ಜಮೆ ಹಿಡಿಯಬೇಕು; ಮಾರ್ಗದಲ್ಲಿ ಕೆಲವು ಹಣ ಇಲ್ಲವೆ ನೋಟು ಮುಂತಾದವು ಅಕಸ್ಮಾತ್ತಾಗಿ ಸಿಕ್ಕರೆ ಆ ರಕಮನ್ನು ಅಮಾನತ ಖಾತೆಗೆ ಜಮೆ ಹಿಡಿದು ಮಾಲಕನ ಪತ್ತೆಯಾದ ಬಳಿಕ ಅದೇ ಖಾತೆಗೆ ಖರ್ಚು ಹಾಕಿ ಅವನ ರಕಮನ್ನು ಅವನಿಗೆ ಕೊಡಬೇಕು. ಪತ್ತೆಯಾಗದಿದ್ದರೆ ಆ ರಕಮನ್ನು ಸರಕಾರಕ್ಕೆ ಒಪ್ಪಿಸಬೇಕು. ಅದೇಕೆ? ಅದು ಹಾದಿಯಲ್ಲಿ ನಮಗೆ ಸಿಕ್ಕಿರುವದಲ್ಲವೇ? ನಾವೇ ಇಟ್ಟುಕೊಂಡು ಬಿಟ್ಟರಾಯಿತೆಂದು ಅನ್ನುವಿರೋ? ಮಾಲಕನ ಪತ್ತೆಯಾಗಲಿಲ್ಲೆಂದು ಅಮಾನತ ಖಾತೆಗೆ ಖರ್ಚು ಹಾಕಿ ಖುದ್ದಖಾತೆಗೆ ಜಮೆಮಾಡಬೇಕೆಂದು ನೆನಿಸುವಿರೋ? ಛೀ! ಹಾಗೆ ಮಾಡುವದು ಸರಿಯಲ್ಲ. ಅದು ನೀತಿಗೆ ವಿರುದ್ಧವಾದದ್ದು. ಹಕ್ಕುದಾರರಿಲ್ಲದ ಒಡವೆಗೆ ಸರಕಾರದವರೇ ಬಾಧ್ಯರು. ಅದರಿಂದ ಅಮಾನತ ಖಾತೆಗೆ ಖರ್ಚುಹಾಕಿ ಸರಕಾರಕ್ಕೆ ಒಪ್ಪಿಸಿ ಬಿಡಬೇಕು. ಸಾರಾಂಶವೇನಂದರೆ **ರಕಮನ್ನು ಇಂಥ ಖಾತೆಗೇ ಜಮೆಮಾಡಬೇಕೆಂಬ ನಿಶ್ಚಯಾತ್ಮಕ ಸಂಗತಿ ತಿಳಿಯದೆ ಸಂಶಯ ಯುಕ್ತಸ್ಥಿತಿಯಲ್ಲಿದ್ದ ರಕಮನ್ನು ಜಮೆಮಾಡುವ ಖಾತೆಗೆ ಅಮಾನತ ಖಾತೆಯೆನ್ನುತ್ತಾರೆ.** ಅಮಾನತ ಈ ಶಬ್ದವು ಅರಬೀ ಭಾಷೆಯದಿದ್ದು ಅಮೀನ (ಠೇವವಾಗಿ ಇಟ್ಟುಕೊಂಡು ಇಮಾನದಿಂದ ತಿರುಗಿಕೊಡುವವ) ಎಂಬ ಶಬ್ದದಿಂದ ಉಂಟಾಗಿರುತ್ತದೆ.

೧೦ ರವಾನಿಗೆಯ ಖಾತೆ—ಒಮ್ಮೊಮ್ಮೆ ಕೆಲವೊಬ್ಬರಿಗೆ ಹಣಮುಟ್ಟಿಸುವದಕ್ಕಾಗಿ, ಇಲ್ಲವೆ ಜೀನಸಿನ ಖರೇದಿಗಾಗಿ ಯಾವನೊಬ್ಬ ಮನುಷ್ಯನ ಕೂಡ ಹಣವನ್ನು ಕಳುಹಬೇಕಾಗುತ್ತದೆ. ಆದರ ಲೆಕ್ಕವನ್ನು ಎಲ್ಲಿ ಬರೆಯಬೇಕು? ಯಾವನಿಗೆ ಹಣವು ಕಳುಹಲ್ಪಟ್ಟಿರುವದೋ ಅವನ ಖಾತೆಗೆ ಖರ್ಚು ಬರೆಯಬೇಕೆಂದರೆ ಆ ಮನುಷ್ಯನಿಗೆ ಹಣ ಮುಟ್ಟಿರುವದಿಲ್ಲ, ಜೀನಸಿನ ಖಾತೆಗೆ ಬರೆಯಬೇಕೆಂದರೆ ಜೀನಸು ಬಂದಿರುವದಿಲ್ಲ. ಇನ್ನು ಕಳುಹಿದ ಮನುಷ್ಯನ ಹೆಸರಿನಿಂದ ಖರ್ಚು ಬರೆಯಬೇಕೆಂದರೆ ಅವನಿಗೇನು ನಾವು ಸಾಲವಾಗಿ ಕೊಟ್ಟಿಲ್ಲ. ಇಂತಹ ಪ್ರಸಂಗದಲ್ಲಿ ರವಾನಿಗೆ ಎಂಬ ಹೆಸರಿನ ಖಾತೆಯನ್ನು ಇಟ್ಟು ಆ ಖಾತೆಗೆ ಖರ್ಚು ಬರೆಯುವರು. ಮುಂದೆ ಆ ಹಣ ಮುಟ್ಟಿದ ಪಾವತಿಯು ಇಲ್ಲವೆ ಜೀನಸು ಬಂದ ಬಳಿಕ ಆ ಹಣವನ್ನು ರವಾನಿಗೆಯ ಖಾತೆಗೆ ಜಮೆಹಿಡಿದು ಹಣ ಮುಟ್ಟಿದ ಮನುಷ್ಯನ ಖಾತೆಗೆ ಇಲ್ಲವೆ ಜೀನಸಿನ ಖಾತೆಗೆ ಖರ್ಚು ಬರೆಯಬೇಕು. ರವಾನಿಗೆ ಮಾಡಿದ ಹಣದಲ್ಲಿ ಕೆಲವು ಹಣವು ಕಳುವಿನಿಂದಾಗಲಿ ಬೇರೆ ಯಾವ ಕಾರಣದಿಂದಾಗಲಿ ಹೋದರೆ ಯಾವನ ಕೂಡ ಹಣವನ್ನು ಕಳುಹಿರುತ್ತದೋ ಅವನಿಂದ ವಸೂಲ ಆಗುವಂತೆ ಇದ್ದರೆ ಅವನ ಖಾತೆಗೆ ಖರ್ಚು ಹಾಕಬೇಕು. ಇಲ್ಲವಾದರೆ ಹಾನಿಯಾಯಿತೆಂದು ನಫಾತೋಟಾಖಾತೆಗೆ ಖರ್ಚು ಹಾಕಬೇಕು. ರವಾನಿಗಿಯೆಂದರೆ ಕಳುಹುವಿಕೆ. ಆದಕಾರಣ ಪರಸ್ಥಳದಲ್ಲಿ ಯಾವನೊಬ್ಬನಿಗೆ ಹಣಕಳುಹಿ **ಅದನ್ನು ಖರ್ಚು ಬರೆಯುವ ಖಾತೆಗೆ ರವಾನಿಗೆ ಖಾತೆಯೆನ್ನುತ್ತಾರೆ.**

ಒಳಗಡೆಯಲ್ಲಿ ಪೋಸ್ಟಖಾತೆಯು ಬೇಕಾದಲ್ಲಿ ಬೇಕಾದಷ್ಟು ಹಣವನ್ನು ತುಸು ವೆಚ್ಚದಿಂದ ಮನಿ ಆರ್ಡರದ್ವಾರವಾಗಿ ರವಾನಿಗೆಯ ಕೆಲಸವನ್ನು ಮಾಡಲಿಕ್ಕೆ ನಡಕಟ್ಟಿಕೊಂಡು ನಿಂತದೆ. ಯಾವನಿಗಾದರೂ ಮ. ಆರ್ಡರದ್ವಾರದಿಂದ ಹಣ ಕಳುಹಿದರೆ ಅದನ್ನು ರವಾನಿಗೆಯಖಾತೆಗೂ ಆದರ ಕಮಿಶನವನ್ನು ಕಮಿಶನ ಖಾತೆಗೂ ಖರ್ಚು ಹಾಕಬೇಕು. ಮ. ಆರ್ಡರದ ಪಾವತಿ ಬಂದನಂತರ ರವಾನಿಗೆಯಖಾತೆಗೆ ಜಮೆ ಮಾಡಿ ಯೋಗ್ಯ ಇಸಮಿನ ಖಾತೆಗೆ ಖರ್ಚು ಹಾಕಬೇಕು.

೧೧ ಬಂಡವಲಖಾತೆ—ಒಮ್ಮೊಮ್ಮೆ ಕೆಲವು ವ್ಯಾಪಾರಿಗಳು ಒಟ್ಟುಗೂಡಿ ವ್ಯಾಪಾರದ ಸಂಬಂಧವಾಗಿ ಒಂದು ಸಂಘ (ಕಂಪನಿ) ಸ್ಥಾಪಿಸುವರು; ಇದರಲ್ಲಿ ಸೇರಿದ ಪ್ರತಿಯೊಬ್ಬ ಮನುಷ್ಯನು ಕಂಪನಿಯ ಗೊತ್ತುವಳಿ(ಕರಾರ)ಯಂತೆ ತನ್ನ ತನ್ನ ಇಚ್ಛಾನುಸಾರವಾಗಿ ಹಣವನ್ನು ಹಾಕುವನು, ವ್ಯಾಪಾರವು ಚೆನ್ನಾಗಿ ಸಾಗಿದರೆ ಬೇರೆ ಜನರೂ ಪಾಲುಗಾರರಾಗಿ ಕೂಡಿಕೊಳ್ಳುವರು. ವ್ಯಾಪಾರಕ್ಕಾಗಿ ಕೂಡಿಸಿದ ಹಣಕ್ಕೆ ಬಂಡವಲವೆನ್ನುವರು. **ವಸೂಲಾದ ಬಂಡವಲವನ್ನು ಜಮೆ ಮಾಡಿಕೊಳ್ಳುವದಕ್ಕೂ ತಿರುಗಿ ತಕ್ಕೊಂಡ ಹಣವನ್ನು ಖರ್ಚು ಹಾಕುವದಕ್ಕೂ ಇಟ್ಟ ಖಾತೆಗೆ ಬಂಡವಲ ಖಾತೆಯೆನ್ನುವರು.** ವ್ಯವಹಾರ

ದಲ್ಲಿ ಆಗುವ ಲಾಭ ಹಾನಿಗಳಿಗೆ ಬಡ್ಡಿಯ ಹಣಕ್ಕೆ ಪಾಲುಗಾರರೆಲ್ಲರೂ ತಮ್ಮ ತಮ್ಮ ಪಾಲಿನ ಪ್ರಮಾಣದಂತೆ ಪಾತ್ರರಷ್ಟೇ; ಇಂಥ ಪಾಲುಗಾರಿಕೆಯ ವ್ಯಾಪಾರಕ್ಕೆ ಸರ್ಕತಿಯ ವ್ಯಾಪಾರವೆನ್ನುವರು.

ಸರ್ಕತಿಯ ವ್ಯಾಪಾರದ ಜಮಾಖರ್ಚಿನಲ್ಲಿ ಸ್ವಂತ ಸಂಬಂಧದ (ಖಾಸಗಿ) ಜಮಾಖರ್ಚು ಬರಲಾರದು. ಒಂದು ವೇಳೆ ಪಾಲುಗಾರರೊಳಗೆ ಯಾರಾದರೂ ಮಾಲನ್ನು ಇಲ್ಲವೆ ಹಣವನ್ನು ಒಯ್ದರೆ ಬೇರೆ ಗಿರಾಕಿಗಳಂತೆ ಅವರ ಹೆಸರಿನಿಂದ ಖರ್ಚು ಹಾಕುವರು. ಅಂಗಡಿಯ ಸಲುವಾಗಿ ಆದ ಖರ್ಚನ್ನು ಅಂಗಡಿಯ ಖಾತೆಗೆ ಖರ್ಚು ಹಾಕುವರು. ಬಹುತರವಾಗಿ ಈ ತರದ ಜಮಾಖರ್ಚಿನಲ್ಲಿ " ಕೂಡಿದ ಬಂಡವಲು, ತಿರುಗಿ ಕೊಟ್ಟ ಬಂಡವಲು, ಖರೇದಿ ವಿಕರಿಯ ರಕಮುಗಳು, ಬಡಿ ಲಾಭಹಾನಿಗಳ ಹಂಚುವಿಕೆಯ ರಕಮುಗಳು " ಬರುತ್ತವೆ.

೧೨ ವ್ಯಾಪಾರಿಗಳಲ್ಲಿ ಠೋಕ ವ್ಯಾಪಾರ ಮಾಡುವವರು ಕಿರುಕಳ ವ್ಯಾಪಾರ ಮಾಡುವವರು ಎಂದು ಎರಡು ಪ್ರಕಾರದವರಿರುತ್ತಾರೆ. ಕಿರುಕಳ ವ್ಯಾಪಾರಸ್ಥರು ಠೋಕ ವ್ಯಾಪಾರಸ್ಥರಿಂದ ಮಾಲು ತರಿಸುವರು. ಕಿರುಕಳವಾಗಿ ತೆಗೆದುಕೊಳ್ಳುವದಕ್ಕಿಂತ ಠೋಕವಾಗಿ ತೆಗೆದುಕೊಳ್ಳುದು ಲೇಸು. ಒಂದೊಂದು ರೂಪಾಯಿ ಬೆಲೆಯುಳ್ಳ ೧೦೦ ಪುಸ್ತಕಗಳನ್ನು ಒಮ್ಮೆಲೆ ಠೋಕವಾಗಿ ತಕ್ಕೊಂಡರೆ ೧೦೦ ರೂಪಾಯಿಗಳಿಗಿಂತ ಕಡಿಮೆ ಬೆಲೆಗೆ ಆ ಪುಸ್ತಕಗಳು ಬರಬಹುದು. ಒಂದು ವೇಳೆ ಅವನ ಮತ್ತು ನಮ್ಮ ಸಮ್ಮತಿಯಂತೆ ೧೫ ರೂಪಾಯಿಗಳನ್ನು ಹಿಡಿದುಕೊಂಡು ೮೫ ರೂಪಾಯಿಗಳನ್ನು ಕೊಟ್ಟರೆ ಆ ಹಿಡಿದುಕೊಂಡ ೧೫ ರೂಪಾಯಿಗಳಿಗೆ ಕಮಿಶನವೆನ್ನುವರು. ಕಮಿಶನದ ದರವು ನೂರಕ್ಕೆ ಇಂತಿಷ್ಟರಂತೆ, ಇಲ್ಲವೆ ರೂಪಾಯಿಗೆ ಇಂತಿಷ್ಟರಂತೆ ಗೊತ್ತು ಮಾಡಲ್ಪಡುತ್ತದೆ.

ವ್ಯಾಪಾರಸ್ಥರು ಗಿರಾಕಿಗಳಿಗೆ ಮಾಲಿನ ಬೆಲೆಯಲ್ಲಿ ಸಂತೋಷದಿಂದ ಬಿಡುವ ಹಣಕ್ಕೆ ಕಮಿಶನವೆಂಬ ಹೆಸರು.

ಕಮಿಶನ ಖಾತೆಯು ನಫಾ ತೋಟಾಖಾತೆಯ ಒಂದು ಒಳಭೇದವಾಗಿದೆ. ಈ ಖಾತೆಗೆ ಸೂಟಬಟ್ಟಾಖಾತೆ ಕಸರ ಖಾತೆಗಳೆಂಬ ಹೆಸರು ಬೇರೆ ಬೇರೆ ಪ್ರಸಂಗಗಳಲ್ಲಿ ಕೊಡಲ್ಪಡುತ್ತದೆ. ನಾಣ್ಯಗಳನ್ನು ಇಲ್ಲವೆ ನೋಟುಗಳನ್ನು ಅದಲು ಬದಲು ಮಾಡುವಾಗ್ಗೆ ಒಂದೊಂದು ವೇಳೆ ಅವುಗಳ ನಿಜವಾದ ಬೆಲೆಗಿಂತ ಹೆಚ್ಚು ಕಡಿಮೆ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೂಲಕ್ರಯಕ್ಕಿಂತ ಕಡಿಮೆಯ ದರದಿಂದ ಮಾರಿದರೆ ಆ ಕಡಿಮೆಯ ಹಣಕ್ಕೆ **ಸೂಟಬಟ್ಟಾ** ಎಂತಲೂ, ಹೆಚ್ಚು ಹಣಕ್ಕೆ ಮಾರಿದರೆ ಆ ಹೆಚ್ಚಾದ ಹಣಕ್ಕೆ **ವರ್ತಾವಳಿಯೆಂತಲೂ** ಅನ್ನುವರು; ಇನ್ನು ಕೆಲವೊಂದು ರಕಮು ಕೆಲವೊಂದು ಮುದ್ದತಿಗೆ ಬರತಕ್ಕದ್ದಿದ್ದು,

ಅದನ್ನು ಮುಂಗಡವಾಗಿಯೇ ಬೇಡಿದರೆ ಕೆಲವು ಬಡ್ಡಿಯನ್ನು ಮುರಕೊಂಡು ಕೊಡುತ್ತಾರೆ; ಈ ಮುರಿದುಕೊಳ್ಳುವ ಹಣಕ್ಕೆ **ಕಸರವೆನ್ನುತ್ತಾರೆ.**

ಸಾಲದ ಇಲ್ಲವೆ ಅದರ ಬಡ್ಡಿಯ ಹಣದಲ್ಲಿ ಕೆಲವು ರಕಮನ್ನು ಬಿಟ್ಟರೆ ಆ ಬಿಟ್ಟ ಹಣಕ್ಕೆ **ಸೂಟ** ವೆನ್ನುವರು.

ಸಾಲಗಾರನಿಗೆ ಸಾಲದ ಹಣವನ್ನು ಕೊಡುವಾಗ್ಗೆ ಕೆಲವು ರಕಮನ್ನು ವ್ಯಾಪಾರಿಯ ದರದಂತೆ ಮುರಿದುಕೊಂಡು ಉಳಿದ ರಕಮನ್ನು ಕೊಡುವರು. ಈ ಮುರಿದುಕೊಂಡ ಹಣಕ್ಕೆ **ಮನೋತಿಯೆನ್ನುವರು.** ಇದರ ಹೊರತು ಬಡ್ಡಿಯ ಲೆಕ್ಕ ಬೇರೆಯೇ ಇರುವದು.

ಈ ಬೇರೆ ಬೇರೆ ಹೆಸರಿನ ಬಾಬುಗಳ ಬಗ್ಗೆ ಸ್ವತಂತ್ರ ಖಾತೆಯನ್ನು ಇಡದಿದ್ದರೆ ಇವೆಲ್ಲ ರಕಮುಗಳನ್ನು ಸೂಟ ಬಟ್ಟಾ ಇಲ್ಲವೆ ಕಮಿಶನ ಖಾತೆಗೆ ಬರೆಯಬಹುದು.

೧೩ ಈ ಬಗ್ಗೆ ಜಮಾಖರ್ಚನ್ನು ಬರೆಯುವದು ಹೇಗಂದರೆ—ಕಮಿಶನ ವರ್ತಾವಳಿ ಮುಂತಾದವುಗಳ ಸಹಿತವಾಗಿ ಒಟ್ಟು ಬೆಲೆಯನ್ನು ಖರೇದಿ ವಿಕರಿಖಾತೆಗೆ ಇಲ್ಲವೆ ಜೀನಸವಾರ ಖಾತೆಗೆ ಖರ್ಚು ಬರೆದು ಅದರ ಹೊಟ್ಟೆಯಲ್ಲಿ ರೋಖ ಇಂತಿಷ್ಟು ಕಮಿಶನ ವರ್ತಾವಳಿ ಮುಂತಾದವುಗಳು ಇಂತಿಷ್ಟು ಎಂಬ ವಿವರವನ್ನು ಬರೆದು ಕಮಿಶನ ವರ್ತಾವಳಿ ಮುಂತಾದವುಗಳ ಹಣವನ್ನು ಆಯಾಖಾತೆಗಳಿಗೆ ಜಮೆ ಮಾಡಬೇಕು. ಒಂದುವೇಳೆ ನಾವು ಕಮಿಶನ ವರ್ತಾವಳಿ ಮುಂತಾದವುಗಳನ್ನು ಪರರಿಗೆ ಕೊಟ್ಟಿದ್ದರೆ ಕಮಿಶನ ವರ್ತಾವಳಿ ಮುಂತಾದವುಗಳ ಸಹಿತವಾದ ಒಟ್ಟು ಬೆಲೆಯನ್ನು ಜೀನಸವಾರ ಖಾತೆಗೆ ಜಮೆಹಿಡಿದು ಅದರ ಹೊಟ್ಟೆಯಲ್ಲಿ ರೋಖ ಇಂತಿಷ್ಟು ಕಮಿಶನ ವರ್ತಾವಳಿ ಮುಂತಾದವು ಇಂತಿಷ್ಟು ಎಂಬ ವಿವರವನ್ನು ಬರೆದು ಕಮಿಶನ ವರ್ತಾವಳಿ ಮುಂತಾದವುಗಳನ್ನು ಕೊಟ್ಟ ಬಗ್ಗೆ ಆಯಾಖಾತೆಗಳಿಗೆ ಖರ್ಚು ಬರೆಯಬೇಕು.

ಬಡ್ಡಿಯ ಬಗ್ಗೆ ಸೂಟಬಿಟ್ಟರೆ ಎಲ್ಲ ಹಣವನ್ನು ಬಡ್ಡಿಯಖಾತೆಗೆ ಜಮೆಹಿಡಿದು ಸೂಟಬಿಟ್ಟಷ್ಟು ಹಣವನ್ನು ಸೂಟ ಬಟ್ಟಾಖಾತೆಗೆ ಖರ್ಚು ಹಾಕಬೇಕು.

ಸಾಲವನ್ನು ಕೊಡುವಾಗ್ಗೆ ಮನೋತಿಯನ್ನು ಹಿಡಿದುಕೊಂಡಿದ್ದರೆ ಎಲ್ಲ ಹಣವನ್ನು ಸಾಲಗಾರನ ಖಾತೆಗೆ ಖರ್ಚುಹಾಕಿ ಮನೋತಿಯ ಹಣವನ್ನು ಮನೋತಿಯ ಖಾತೆಗೆ ಜಮೆಮಾಡಬೇಕು.

೧೪ ಜಂಗಮಮಾಲಿನ ಒತ್ತೆ—ದಾಗೀನೆಗಳನ್ನು ಇಲ್ಲವೆ ಯಾವದೊಂದು ಯೋಗ್ಯಮಾಲನ್ನು ಒತ್ತೆ ಇಟ್ಟುಕೊಂಡು ಸಾಲಕೊಟ್ಟಿದ್ದರೆ, ಕೊಟ್ಟಷ್ಟು ರಕಮನ್ನು ಒತ್ತೆ ಇಟ್ಟುಕೊಂಡವನ ಹೆಸರಿನಿಂದ ಖರ್ಚು ಬರೆಯಬೇಕಷ್ಟೆ;

ಅದರ ವಿವರದಲ್ಲಿ ದಾಗೀನೆಗಳ ತೂಕ, ಒರಿ, ಸಂಖ್ಯೆ ಇವುಗಳ ಅಜಮಾಸ ಬೆಲೆ; ಇಲ್ಲವೆ ಇಟ್ಟಮಾಲಿನ ವರ್ಣನೆ ಮುಂತಾವುಗಳನ್ನು ಬರೆಯಬೇಕು. ಕೀರ್ದಿಯಲ್ಲಿ ಬರೆಯದಿದ್ದರೆ ಆ ಬಗ್ಗೆ ಬೇರೊಂದು ಟಿಪ್ಪಣಿ ಇಡಬೇಕು. ಒತ್ತೆ ಇಟ್ಟವನು ತನ್ನ ದಾಖಲೆಗಾಗಿ ದಾಗೀನೆಗಳ ಇಲ್ಲವೆ ಮಾಲಿನ ಯಾದಿಯನ್ನು ಬೇಡಿದರೆ ಕೊಡಬೇಕು. ಗಂಟು ಬಡ್ಡಿ ಬಂದ ಮೇಲೆ ಸಾಲದ ರಕಮನ್ನು ಸಾಲಗಾರನ ಖಾತೆಗೂ ಬಡ್ಡಿಯ ಹಣವನ್ನು ಬಡ್ಡಿಯ ಖಾತೆಗೂ ಜಮೆಮಾಡಿ ಅವನ ದಾಗೀನೆ ಇಲ್ಲವೆ ಮಾಲನ್ನು ಅವನಿಗೆ ಕೊಟ್ಟ ತಪಸೀಲಿನಲ್ಲಿ ದಾಗೀನೆ ಇಲ್ಲವೆ ಮಾಲು ಮುಟ್ಟಿದವೆಂದು ಸಾಲಗಾರನಿಂದ ಬರೆಯಿಸಿ ಸಹಿಯನ್ನು ಮಾಡಿಸಬೇಕು.

೧೫ ಸಾಲದ ಕತಬಿ—ಈ ಪ್ರಕಾರದ ಕತಬಿಯನ್ನು ಬರೆಯಿಸಿಕೊಂಡು ಸಾಲಕೊಟ್ಟಿದ್ದರೆ ಸಾಲಗಾರನ ಖಾತೆಗೆ ಖರ್ಚುಹಾಕಿ ವಿವರದಲ್ಲಿ "ಸಾಲದ ಕತಬಿ ಬರಕೊಟ್ಟ ಬಾಬತು" ಎಂದು ಬರೆದು, ಆ ಕತಬಿಯ ರಕಮು, ತಾರೀಖು, ಬಡ್ಡಿಯ ದರ, ಮುದ್ದತು ಮುಂತಾದವುಗಳನ್ನು ಬರೆಯಬೇಕು. ಅವನು ತನ್ನ ಸಾಲದ ರಕಮನ್ನು ತಿರುಗಿ ತಂದುಕೊಟ್ಟರೆ ಅವನ ಖಾತೆಗೆ ಜಮೆಹಿಡಿದು ಅವನ ಕತಬಿಯನ್ನು ಅವನಿಗೆ ತಿರುಗಿ ಕೊಡಬೇಕು. ಬಡ್ಡಿಯ ಹಣವನ್ನು ಬಡ್ಡಿಯ ಖಾತೆಗೆ ಜಮೆ ಮಾಡುವದಂತು ಸರಿಯೇ.

೧೬ ಸ್ಥಾವರ ಆಸ್ತಿಗಳ ಬಗ್ಗೆ—ಮನೆಯೊಳಗೆ ದಾಗೀನೆ ಮುಂತಾದ ಯೋಗ್ಯ ಜಂಗಮಮಾಲು ಇಲ್ಲಬದ್ದರೆ, ಸಾಲದ ಕತಬಿಯಿಂದ ಹಣ ಸಿಗಲಿಕ್ಕೆ ಪಾತ್ರನಿಲ್ಲದಿದ್ದರೆ ಏನನ್ನು ಮಾಡಬೇಕು ? ತನ್ನ ಹೊಲಮನೆಗಳನ್ನು ಒತ್ತೆಹಾಕಿ ಸಾಲವನ್ನು ತರುವ ಪ್ರಸಂಗವೇ ಬರುತ್ತದಲ್ಲವೇ ? ಸ್ಥಾವರ ಆಸ್ತಿಯ ಒತ್ತೆಗಳಲ್ಲಿ **ತೋರಒತ್ತೆ ಇಳಿಯೊತ್ತೆ ಕಬ್ಜಾಒತ್ತೆ** ಎಂದು ಮೂರು ಬಗೆಗಳುಂಟು.

ತೋರಒತ್ತೆಯಿಂದ ಸಾಲಕೊಟ್ಟಿದ್ದರೆ ಸಾಲಗಾರನು ಒಯ್ದಷ್ಟು ಹಣವನ್ನು ಅವನ ಖಾತೆಗೆ ಖರ್ಚುಹಾಕಿ ವಿವರದಲ್ಲಿ ತೋರಒತ್ತೆಯ ನೋಂದಣಿಯ ಕಾಗದದ ನಂಬರ, ಸ್ಥಾವರ ಆಸ್ತಿಯ ಕ್ಷೇತ್ರ, ರಕಮು, ಮುದ್ದತು ಮುಂತಾದ ಅವಶ್ಯ ಸಂಗತಿಗಳನ್ನು ಬರೆಯಬೇಕು. ಮುಂದೆ ಗಂಟುಬಡ್ಡಿಗಳು ಬಂದನಂತರ ಗಂಟನ್ನು ಅವನ ಖಾತೆಗೂ, ಬಡ್ಡಿಯನ್ನು ಬಡ್ಡಿಯ ಖಾತೆಗೂ ಜಮೆ ಹಚ್ಚಿ ಅವನ ದಸ್ತು ಅವನಿಗೆ ಕೊಡಬೇಕು.

ಇಳಿಒತ್ತೆಯಿಂದ ಇಟ್ಟುಕೊಂಡು ಸಾಲಕೊಟ್ಟಿದ್ದರೆ ಸಾಲಗಾರನಿಗೆ ಕೊಟ್ಟಷ್ಟು ರಕಮನ್ನು ಅವನ ಖಾತೆಗೆ ಖರ್ಚುಬರೆದು, ವಿವರದಲ್ಲಿ ಒತ್ತೆಹಾಕಿದ ಆಸ್ತಿಯ ಹೆಸರು, ಮುದ್ದತು, ನೋಂದದ ನಂಬರುಗಳನ್ನು ಹಾಕಬೇಕು. ಒಟ್ಟು ಸಾಲಕೊಟ್ಟ ರಕಮಿಗೆ ಮುದ್ದತಿನ ವರ್ಷಗಳಿಂದ ಭಾಗಿಸಿ ಬರುವ ರಕಮನ್ನು ಪ್ರತಿ

ವರ್ಷ ಜಮೆಮಾಡಿ ಮುದ್ದತಿಯ ನಂತರ ಅವನ ಆಸ್ತಿಯನ್ನು ಅವನಿಗೆ ಬಿಟ್ಟು ಅವನ ಕಾಗದವನ್ನು ಕೊಡಬೇಕು. ಪ್ರತಿವರ್ಷ ಆಸ್ತಿಯಿಂದ ಬಂದ ಉತ್ಪನ್ನದ ರಕಮು ಈ ರಕಮಿಗಿಂತ ಹೆಚ್ಚಿದ್ದರೆ ಹೆಚ್ಚಿನ ರಕಮನ್ನು ಬಡ್ಡಿಯ ಖಾತೆಗೆ ಜಮೆಮಾಡಬೇಕು. ಕಡಿಮೆಯಾದರೆ ಕಡಿಮೆಯಾದಷ್ಟು ರಕಮನ್ನು ಲಾಭಹಾನಿಯ ಖಾತೆಗೆ ಖರ್ಚುಹಾಕಬೇಕು.

ಕಬ್ಜಾಒತ್ತೆಯಿಂದ ಸಾಲಕೊಟ್ಟಿದ್ದರೆ ಸಾಲಗಾರನ ಖಾತೆಗೆ ಕೊಟ್ಟಷ್ಟು ರಕಮನ್ನು ಬರೆದು, ತಪಸೀಲಿನಲ್ಲಿ ಆಸ್ತಿಯ ವರ್ಣನೆಯನ್ನು ಬರೆಯಬೇಕು. ಸಾಲಗಾರನಿಂದ ರಕಮು ಬಂದನಂತರ ಅವನ ಖಾತೆಗೆ ಜಮೆ ಹಚ್ಚಬೇಕು. ಪ್ರತಿವರ್ಷಕ್ಕೆ ಬರುವ ಉತ್ಪನ್ನದ ರಕಮನ್ನು ಬಡ್ಡಿಯ ಖಾತೆಗೆ ಜಮೆ ಮಾಡಬೇಕು.

೧೭ ಜಾಮೀನ ತಕ್ಕೊಂಡು ಸಾಲಕೊಟ್ಟ ಬಗ್ಗೆ—ಜಂಗಮಮಾಲು ಸ್ಥಾವರ ಆಸ್ತಿಗಳು ಇಲ್ಲದಿದ್ದರೆ ಸಾಲಹುಟ್ಟುವ ಬಗೆಯೇನು? ಪರರಿಗೆ ಜಾಮೀನವಾಗುವ ಬಗ್ಗೆ ಹೇಳಿಕೊಂಡು ಅವರ ಜಾಮೀನ ಕೊಟ್ಟು ಸಾಲ ತೆಗೆಯುವ ಪ್ರಸಂಗ ಬರುತ್ತದೆ; ಈ ಪ್ರಸಂಗದಲ್ಲಿ ಸಾಲಗಾರನ ಖಾತೆಗೆ ಖರ್ಚು ಬರೆದು, ತಪಸೀಲಿನಲ್ಲಿ ಜಾಮೀನದಾರರ ಹೆಸರು, ಮುದ್ದತು, ಬಡ್ಡಿಯ ದರ ಮುಂತಾದವುಗಳನ್ನು ಬರೆಯಬೇಕು. ಅವರಿಬ್ಬರಲ್ಲಿ ಯಾರಿಂದಾದರೂ ಗಂಟು ಬಡ್ಡಿ ಬಂದರೆ ಗಂಟನ್ನು ಸಾಲಗಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಜಮೆ ಮಾಡಬೇಕು.

೧೮ ಕಂತದ ಸಾಲ—ಕಂತದಿಂದ ಸಾಲ ಕೊಟ್ಟಿದ್ದರೆ ಕೊಟ್ಟ ರಕಮನ್ನು ಸಾಲಗಾರನ ಖಾತೆಗೆ ಖರ್ಚು ಬರೆದು ತಪಸೀಲಿನಲ್ಲಿ ಕಂತಗಳ ಸಂಖ್ಯೆ, ಪ್ರತಿಯೊಂದು ಕಂತದ ರಕಮು, ಬಡ್ಡಿಯ ದರಗಳನ್ನು ಬರೆಯಬೇಕು. ಪ್ರತಿಯೊಂದು ಕಂತದ ರಕಮೂ, ಬಡ್ಡಿಯೂ ಬಂದಬಂದಂತೆ ಕಂತದ ರಕಮನ್ನು ಸಾಲಗಾರನ ಖಾತೆಗೂ ಬಡ್ಡಿಯ ರಕಮನ್ನು ಬಡ್ಡಿಯ ಖಾತೆಗೂ ಜಮೆ ಮಾಡಬೇಕು.

ಕಂತದ ಬಡ್ಡಿಯನ್ನು ತೆಗೆಯುವದು ಹೇಗಂದರೆ—ಅ ಎಂಬವನಿಗೆ ೪೦೦ ರೂಪಾಯಿಗಳನ್ನು ಒಂದೊಂದು ವರ್ಷದ ಅವಧಿಯುಳ್ಳ ಎರಡು ನೂರು ರಕಮಿನ ಎರಡು ಕಂತಗಳಿಂದ ೧೦೦ ಕ್ಕೆ ವರ್ಷಕ್ಕೆ ೧೦ ಬಡ್ಡಿಯ ದರದಿಂದ ಕೊಟ್ಟಿರುತ್ತೇವೆಂದು ಕಲ್ಪಿಸುವಾ—ಹಾಗಾದರೆ ಅವನು ಮೊದಲನೆಯ ವರ್ಷ ಎಲ್ಲ ರಕಮಿನ (೪೦೦ ರೂಪಾಯಿಗಳ) ಬಡ್ಡಿಯನ್ನು ಕೊಡಬೇಕಾಯಿತಲ್ಲವೇ? ಅದರಿಂದ ಅವನು ಮೊದಲನೆಯ ವರ್ಷ ೪೦ ರೂಪಾಯಿ ಬಡ್ಡಿ, ಕಂತದ ಬಗ್ಗೆ ೨೦೦ ರೂಪಾಯಿ ಅಂತು ೨೪೦ ರೂಪಾಯಿ ಕೊಡಬೇಕಾಗುತ್ತದೆ. ಎರಡನೆಯ ವರ್ಷ ಉಳಿದ ರಕಮಿನ (೨೦೦ ರೂಪಾಯಿಗಳ) ಬಡ್ಡಿ ೨೦ ರೂಪಾಯಿ ಮತ್ತು ಕಂತದ ಬಗ್ಗೆ ೨೦೦ ರೂಪಾಯಿ ಅಂತು ೨೨೦ ರೂಪಾಯಿಗಳನ್ನು ಕೊಡಬೇಕಾಗುತ್ತದೆ.

೧೯ ಬಡ್ಡಿಯ ಖಾತೆ—ಯಾವನೊಬ್ಬನ ಕಡೆಯಿಂದ ಇಂತಹ ಮುದ್ದತಿಗೆ ಇಂತಿಷ್ಟು ಬಡ್ಡಿ ಬರತಕ್ಕದ್ದಿದ್ದು ಆ ಮುದ್ದತಿಗೆ ಬಡ್ಡಿ ಬಾರದಿದ್ದರೆ, ಆ ಮುದ್ದತ್ತಿಯ ದಿನ ಬಡ್ಡಿಯ ಖಾತೆಗೆ ಆ ಹಣವನ್ನು ಜಮೆ ಮಾಡಿ, ಆ ಮನುಷ್ಯನು ಕೊಟ್ಟಿರುವದಿಲ್ಲಾದ ಕಾರಣ ಅವನ ಹೆಸರಿನಿಂದ ಅಷ್ಟು ಹಣವನ್ನು ಖರ್ಚು ಹಾಕಬೇಕು. ನಾವು ಕೆಲವೊಂದು ಮುದ್ದತಿಗೆ ಕೆಲವೊಬ್ಬನಿಗೆ ಬಡ್ಡಿ ಕೊಡತಕ್ಕದ್ದಿದ್ದು ಕೊಡದಿದ್ದರೆ ಆ ದಿವಸ ಕೊಡತಕ್ಕ ಬಡ್ಡಿಯ ಹಣವನ್ನು ಬಡ್ಡಿಯ ಖಾತೆಗೆ ಖರ್ಚು ಬರೆದು, ಆ ಮನುಷ್ಯನಿಗೆ ಕೊಡತಕ್ಕದ್ದಿರುವದರಿಂದ ಅವನ ಹೆಸರಿನಿಂದ ಜಮೆ ಹಿಡಿಯಬೇಕು. ಸಾವುಕಾರರು ಬಡ್ಡಿಯ ಆಕಾರ ಮಾಡುವ ಬಗೆಯನ್ನು ಮುಂದೆ ಮೂರನೆಯ ಭಾಗದ ೨ ನೆಯ ಪ್ರಕರಣದಲ್ಲಿ ವಿವರಿಸಿರುತ್ತದೆ.

೨೦ ಕ್ಯಾಶ ಸರಟಿಫಿಕೀಟು ವಾರಜಾಂಡುಗಳನ್ನು ತಕ್ಕೊಂಡಿದ್ದರೆ ಅವುಗಳ ಖಾತೆಗೆ ಅವುಗಳ ಖರೇದಿಯ ಬೆಲೆಯನ್ನು ಖರ್ಚುಹಾಕಿ ಅವುಗಳ ಹಣ ಬಂದ ನಂತರ ಮೂಲ ರಕಮನ್ನು ಅವುಗಳ ಖಾತೆಗೆ, ಬಡ್ಡಿಯನ್ನು ಬಡ್ಡಿಯ ಖಾತೆಗೆ ಜಮೆಹಚ್ಚಬೇಕು.

ಒಬ್ಬನು ನಮಗೆ ಕೊಡತಕ್ಕ ಹಣದಲ್ಲಿ ಕೆಲವು ರೋಖ, ಕೆಲವು ಹುಂಡಿ, ಕೆಲವು ಮಾಲು, ಕೆಲವು ಅನ್ಯರ ಹವಾಲೆಕೊಟ್ಟು ಉಳಿದದ್ದನ್ನು ಸೂಟುಬಿಡಿಸಿ ಕೊಂಡು ನಿಮ್ಮ ಸಾಲವೆಲ್ಲ ಮುಟ್ಟಿಸಿದೆನೆಂದು ಹೇಳಿದರೆ, ಅವನ ಹೆಸರಿಲೆ ಎಲ್ಲ ರಕಮನ್ನು ಜಮೆಹಚ್ಚಿ, ವಿವರದಲ್ಲಿ ರೋಖ, ಹುಂಡಿ, ಮಾಲು, ಹವಾಲೆ, ಸೂಟು ಇವುಗಳನ್ನು ತೋರಿಸಿ ಹುಂಡಿ ಮುಂತಾದವುಗಳನ್ನು ಆಯಾಖಾತೆಗಳಿಗೆ ಖರ್ಚು ಹಾಕಬೇಕು.

೩. ಸ್ವಂತದ ಸಂಬಂಧವಾದ ಖಾತೆಗಳು.

ಭಾಗಗಳು—೧ ಬ್ಯಾಂಕಿನಖಾತೆ, ೨ ಜಮೀನಬಾಬಖಾತೆ, ೩ ತಸಲ್ಮಾತಖಾತೆ, ೪ ಮನೆಯ ಖರ್ಚುಖಾತೆ, ೫ ಫಾಜಸ್ತಖಾತೆ ಇತ್ಯಾದಿ.

ತಮ್ಮ (ಸ್ವಂತದ) ಹೆಸರನ್ನು ಬರೆಯದೆ, ಸ್ವಂತದ ಖಾತೆಯೆಂಬರ್ಥದ ಖುದ್ದ ಖಾತೆಯೆಂಬ ಶಬ್ದವನ್ನು ತಮ್ಮ ಲೆಕ್ಕಕ್ಕೆ ಉಪಯೋಗಿಸುವರು. ಕಾರಕೂನನು ಜಮಾಖರ್ಚನ್ನು ಬರೆಯುತ್ತಿದ್ದರೆ "**ಮಾಲಕನ ಖಾತೆ**"ಯೆಂಬದಾಗಿ ಬರೆಯಬಹುದು. ಖುದ್ದಖಾತೆ ಇಲ್ಲವೆ ಮಾಲಕನ ಖಾತೆ ಇವುಗಳಿಗೆ ಸ್ವಂತದ ಹಣ, ಸ್ವಂತದ ಹೊಲತೋಟಗಳ ಉತ್ಪನ್ನ, ಸ್ವಂತದ ಮನೆಯ ಬಾಡಿಗೆ, ತಮ್ಮ ಆಳುಗಳ ಪಗಾರ, ಕೋರ್ಟಿನ ಸಾಕ್ಷಿಗಳಲ್ಲಿ ಸಿಗುವ ಭತ್ತೆಯ ಹಣ ಮುಂತಾದ ಹಲವು ಸ್ವಂತ ಸಂಬಂಧದ ಕೊಡಕೊಳ್ಳುವ ಪ್ರಕಾರಗಳು ಬರುತ್ತವೆ. ಅವುಗಳಲ್ಲಿಯ ಕೆಲವು ಮುಖ್ಯ ಪ್ರಕಾರಗಳನ್ನು ವಿವರಿಸುವಾ—

೧ ಬ್ಯಾಂಕಿನಖಾತೆ—ಸ್ವಂತ ಉತ್ಪನ್ನದೊಳಗಿನ ಕೆಲವು ಹಣವನ್ನು ಬ್ಯಾಂಕಿನಲ್ಲಿಟ್ಟರೆ ಬ್ಯಾಂಕಿನಖಾತೆಗೆ ಖರ್ಚನ್ನೂ ಆದರೊಳಗಿಂದ ತಂದರೆ, ತಂದಷ್ಟು ಹಣವನ್ನು ಆ ಖಾತೆಗೆ ಜಮೆಯನ್ನೂ ಹಿಡಿಯಬೇಕು.

೨ ಜಮಿೂನಬಾಬಖಾತೆ—ಹೊಲದ ಉತ್ಪನ್ನಬಂದರೆ ಈ ಖಾತೆಗೆ ಜಮೆಯನ್ನೂ, ಅದಕ್ಕಾಗಿ ಗೊಬ್ಬರ, ನಟ್ಟ ಕಡಿಸುವದು, ಒಡ್ಡು ಹಾಕುವದು ಮುಂತಾದವುಗಳ ಬಗ್ಗೆ ವೆಚ್ಚ ಮಾಡಿದ ಹಣ ಈ ಖಾತೆಗೆ ಖರ್ಚನ್ನೂ ಬರೆಯುವರು. ಹೊಲವನ್ನು ಲಾವಣಿಯಿಂದ ರೈತನಿಗೆ ಕೊಟ್ಟಿದ್ದರೆ, ರೈತನ ಹೆಸರಿನಿಂದ ಆ ಹಣವನ್ನು ಖರ್ಚುಹಾಕಿ ಜಮೀನಬಾಬ ಖಾತೆಗಾಗಲಿ, ಖುದ್ದಖಾತೆಗಾಗಲಿ ಜಮೆಹಿಡಿಯಬೇಕು. ರೈತನು ಆ ಲಾವಣಿಯ ಹಣಕೊಟ್ಟನಂತರ ಅವನ ಖಾತೆಗೆ ಜಮೆ ಹಿಡಿಯಬೇಕು.

೩ ತಸಲ್ಮಾತಖಾತೆ—ವಿಶೇಷವಾಗಿ ಸ್ವಂತ ಸಂಬಂಧದ (ಮನೆ, ಬಾವಿ ಮುಂತಾದವುಗಳನ್ನು ಕಟ್ಟಿಸುವ, ಲಗ್ನ ಮುಂತಾದ ಸಮಾರಂಭಗಳನ್ನು ಜರುಗಿಸುವ) ವ್ಯವಸ್ಥೆಯ ಬಗ್ಗೆ, ಇಲ್ಲವೆ ಬೇರೆ ಕೆಲಸದ ವ್ಯವಸ್ಥೆಯ ಬಗ್ಗೆ ಒಪ್ಪಿಕೊಂಡ ಒಬ್ಬ ತಜ್ಞಮನುಷ್ಯನಿಗೆ, ಇಲ್ಲವೆ ಒಬ್ಬ ಮಕ್ತೇದಾರನಿಗೆ ನಂಬಿಗೆಯಿಂದ ಇಲ್ಲವೆ ಲೇಖ ಬರೆಯಿಸಿಕೊಂಡು, ಮೇಲೆ ಮೇಲೆ ತ್ರಾಸವಾಗಬಾರದೆಂದು ಒಮ್ಮೆಲೆ ಕೆಲವು ಹಣವನ್ನು ಆ ಕೆಲಸದ ಅಜಮಾಸಿನ ಮೇಲಿಂದ ಮುಂಗಡವಾಗಿ ಕೊಡುವದುಂಟು. ಇಂತಹ ಹಣವನ್ನು ತಸಲ್ಮಾತ ಖಾತೆಗೆ ಖರ್ಚು ಹಾಕುವರು, ಕೆಲಸ ಪೂರ್ಣವಾಗಿ ಯಾದಿಯು ಬಂದ ಬಳಿಕ ತಸಲ್ಮಾತ ಖಾತೆಗೆ ಜಮೆಹಚ್ಚಿ ಖುದ್ದಖಾತೆಗೆ ಇಲ್ಲವೆ ಯೋಗ್ಯಖಾತೆಗೆ ಖರ್ಚು ಹಾಕುವರು. ತಸಲ್ಮಾತ ಎಂಬ ಶಬ್ದವು ತಸ್ಲೀಮ (ಅನ್ಯರಿಗೆ ಒಪ್ಪಿಸಲ್ಪಟ್ಟ ಕೆಲಸ) ಎಂಬ ಪಾರ್ಸೀ ಶಬ್ದದಿಂದ ಉಂಟಾಗಿರುತ್ತದೆ. ಸಾರಾಂಶವೇನಂದರೆ **ಒಪ್ಪಿಸಲ್ಪಟ್ಟ ಕೆಲಸಕ್ಕಾಗಿ ಒಪ್ಪಿಕೊಂಡ ಮನುಷ್ಯನಿಗೆ ಮುಂಗಡ ಹಣವನ್ನು ಕೊಟ್ಟು ಅದನ್ನು ಖರ್ಚು ಬರೆಯುವ ಖಾತೆಗೆ ತಸಲ್ಮಾತಖಾತೆಯೆನ್ನುತ್ತಾರೆ.** ಸರಕಾರಿಯ ಜಮಾಖರ್ಚಿನಲ್ಲಿ ಇಂತಹ ಹಣಕ್ಕೆ ಅಡ್‌ಹ್ವಾನ್ಸ ಹಣವೆನ್ನುವರು.

೪ ಮನೆಯ ಖರ್ಚುಖಾತೆ—ಗೃಹಕೃತ್ಯಕ್ಕಾಗಿ ತೆಗೆದುಕೊಂಡ ಕಾಳುಕಡಿ, ಹಾಲುಮೊಸರು, ಕಾಯಿಪಲ್ಲೆ, ಅರಿವೆಅಂಚಡಿ ಆಹೇರು (ಕಾಣಿಕೆ) ಮುಂತಾದವುಗಳ ಬಗ್ಗೆ ಖರ್ಚು ಮಾಡಿದ ಹಣವನ್ನು ಈ ಖಾತೆಗೆ ಖರ್ಚುಹಾಕುವರು; ಅಂಗಡಿಯು ನಮ್ಮದೇ ಇದ್ದಾಗ್ಗೆಯೂ ಅದರೊಳಗಿನ ಮಾಲನ್ನು ತೆಗೆದುಕೊಳ್ಳಬೇಕಾದರೆ ಮಾಲಿನ ಖಾತೆಗೆ ಜಮೆ ಹಿಡಿದು ಮನೆಯ ಖರ್ಚು ಖಾತೆಗೆ ಖರ್ಚು ಹಾಕಬೇಕು. ಆಹೇರು ಬಂದಿದ್ದರೆ ಮನೆಯ ಖರ್ಚು ಖಾತೆಗೆ ಜಮೆ ಮಾಡಿ ಖರೇದಿ ವಿಕರಿಖಾತೆಗೆ ಖರ್ಚುಹಾಕಬೇಕು.

೫ ವಾಘುಜಸ್ತಖಾತೆ—ಒಂದುಸಾರೆ ಮನೆಯ ಖರ್ಚುಖಾತೆಗೆ ಬಿದ್ದ ಛಕಮಿನಲ್ಲಿ ಕೆಲವು ಮಾಲು ತಿರುಗಿಬಂದರೆ ಅದನ್ನು ಪುನಃ ಮನೆಯ ಖರ್ಚುಖಾ

ತೆಗೆ ಜಮೆಮಾಡುವದು ಯೋಗ್ಯವಲ್ಲೆಂದು ಕೆಲವರು ಆ ರಕಮನ್ನು ವಾಫ ಜಸ್ತ ಎಂಬ ಹೆಸರಿನ ಖಾತೆಗೆ ಜಮೆ ಮಾಡುವರು. ಖರ್ಚು ಖಾತೆಗೆ ಜಮೆ ಬರೆಯಬಾರದೆಂಬದೇ ಅವರ ಉದ್ದೇಶವು.

ಇದೇ ಪ್ರಕಾರ ಪ್ರವಾಸದ ಖರ್ಚು, ಸ್ವಂತದ ಸಲುವಾಗಿ ಕೊಂಡ ಒಡವೆಗಳ ಖರ್ಚು ಇವೇ ಮುಂತಾದ ಸ್ವಂತ ಸಂಬಂಧದ ವ್ಯವಹಾರಗಳ ಬೇರೆ ಬೇರೆ ವಿವರಗಳನ್ನು ತಿಳಿದುಕೊಳ್ಳುವದಕ್ಕಾಗಿ ಬೇರೆ ಬೇರೆ ಖಾತೆಗಳನ್ನಿಡುವದು ಮಾಲಕನ ಇಚ್ಛೆಯನ್ನವಲಂಬಿಸಿರುತ್ತದೆ.

ಇತರ ಖಾತೆಗಳು.

ಭಾಗಗಳು—೧ ಧರ್ಮಾದಾಯಖಾತೆ, ೨ ಸಾದಿಲವಾರಖಾತೆ ೩ ಡೆಡ್‌ಸ್ಟಾಕಖಾತೆ, ೪ ಪಗಾರಖಾತೆ ಇತ್ಯಾದಿ.

೧ **ಧರ್ಮಾದಾಯಖಾತೆ**—ಧಾರ್ಮಿಕ ಕೃತ್ಯಗಳಿಗಾಗಿ ವೆಚ್ಚಮಾಡಿದ ಹಣವನ್ನು ಈ ಖಾತೆಗೆ ಖರ್ಚುಹಾಕುವರು. ಹತ್ತಿ, ಅರಳೆ, ತಂಬಾಕ ಮುಂತಾದ ವ್ಯವಹಾರದಲ್ಲಿ ಧರ್ಮಾದಾಯವೆಂದು ೧೦೦ ಕ್ಕೆ ಇಂತಿಷ್ಟರಂತೆ ದೊಡ್ಡ ದೊಡ್ಡ ಗಿರಾಕಿಗಳ ಕಡೆಯಿಂದ ತೆಗೆದುಕೊಳ್ಳುವ ಸಾಂಪ್ರದಾಯವುಂಟು. ಅದನ್ನು ಧರ್ಮಾದಾಯ ಖಾತೆಗೆ ಜಮೆಮಾಡುವರು. ಧರ್ಮವನ್ನು ತೆಗೆದುಕೊಳ್ಳುವವನು ಅದೆಂತಹ ಸಾವುಕಾರನೋ ! ಎಂದು ನೀವು ಅನ್ನಬಹುದು. ಈ ಬಗೆಯಾಗಿ ತೆಗೆದುಕೊಂಡು ಒಟ್ಟುಗೂಡಿಸಿದ ಹಣವು ದೇವಸ್ಥಾನ ಧರ್ಮಶಾಲೆ ಮುಂತಾದ ಸಾರ್ವಜನಿಕ ಕೃತ್ಯಗಳಿಗಾಗಿ ವೆಚ್ಚಮಾಡಲ್ಪಡುತ್ತದೆ. ಸಾರ್ವಜನಿಕ ಕಾರ್ಯಗಳನ್ನು ಜರುಗಿಸುವದಕ್ಕೆ ಇದೊಂದು ಮೇಲಾದ ಸಾಧನವೇ ಸರಿ.

೨ **ಸಾದಿಲವಾರಖಾತೆ**—ಅಂಗಡಿಯನ್ನು ಸಾರಿಸುವಿಕೆ, ದೀಪದ ವ್ಯವಸ್ಥೆ, ಕಾಗದ, ಮಸಿ, ಟಿಕೀಟು ಮುಂತಾದವುಗಳಿಗಾಗಿ ವೆಚ್ಚಮಾಡಿದ ಹಣಕ್ಕೆ ಸಾದಿಲವಾರವೆನ್ನುವರು. ಇವುಗಳಿಗೆ ಖರ್ಚಾದ ಹಣವನ್ನು ಸಾದಿಲವಾರಖಾತೆಗೆ ಖರ್ಚುಹಾಕುವರು.

೩ **ಡೆಡ್‌ಸ್ಟಾಕಖಾತೆ**—ಅಂಗಡಿಯ ಉಪಯೋಗಕ್ಕಾಗಿರುವ ಕಪಾಟು; ಪೆಟ್ಟಿಗೆ, ಡೆಸ್ಕ, ಜಮಖಾನೆ, ತಕ್ಕಡಿ, ತೂಕದಕಲ್ಲು, ಅಳತೆಯಮಾಪು ಮುಂತಾದ ಬಹುದಿನ ಬಾಳತಕ್ಕ ಸಾಮಾನಗಳಿಗೆ ಡೆಡ್‌ಸ್ಟಾಕ ಅನ್ನುವರು. ಅದರಿಂದ ಈ ಸಾಮಾನುಗಳ ಖರೇದಿಯ ಬೆಲೆಯನ್ನು ಡೆಡ್‌ಸ್ಟಾಕ ಖಾತೆಗೆ ಖರ್ಚು ಹಾಕಬೇಕು.

ಪಗಾರಖಾತೆ—ಅಂಗಡಿಯ ಲೆಕ್ಕ ಬರೆಯುವ ಕಾರಕೂನ, ಉದ್ದರಿಯಲೆಕ್ಕ ಕೇಳುವ ಸಿಪಾಯಿ ಮುಂತಾದ ನೌಕರರಿಗೆ ಕೊಡುವ ಪಗಾರವನ್ನು ಪಗಾರಖಾತೆಗೆ ಖರ್ಚು ಹಾಕಬೇಕು. ಅವರಿಗೆ ಪಗಾರ ಕೊಡುವ ಮುದ್ದತಿಗಿಂತ ಮುಂಚೆಯೇ

ಪಗಾರ ಕೊಟ್ಟರೆ ಕೊಟ್ಟಷ್ಟು ಹಣವನ್ನು ಅವರ ಖಾತೆಗೆ ಖರ್ಚು ಹಾಕಿ, ಮುದ್ದತು ತೀರಿದನಂತರ ಅವರ ಖಾತೆಗೆ ಜಮೆಹಿಡಿದು ಪಗಾರ ಖಾತೆಗೆ ಖರ್ಚು ಹಾಕಬೇಕು.

ಇದರಂತೆ ವರ್ತಮಾನಪತ್ರ ವಾಚನ ಮಂದಿರಗಳ ವರ್ಗಣಿ ಇತರ ಪಟ್ಟಿ ಪಳಿಗಿ, ರಿಪೇರಿ ಮುಂತಾದ ಸಂಗತಿಗಳ ಬಗ್ಗೆ ಬೇರೆ ಬೇರೆ ಖಾತೆಗಳನ್ನಿಡುವದು ಮಾಲಕನ ಇಚ್ಛೆಯನ್ನವಲಂಬಿಸಿರುತ್ತದೆ.

೬ನೆಯ ಪ್ರಕರಣ.

ಹುಂಡಿಯ ವ್ಯವಹಾರ.

೧ ಭಾಗಗಳುः—೧ ಹುಂಡಿಯ ಅವಶ್ಯಕತೆಯುಂಟಾದ ಕಾರಣವೂ ಅದರ ವ್ಯಾಖ್ಯೆಯೂ, ೨ ಸಾಂಕೇತಿಕ ಶಬ್ದಗಳು, ೩ ಮೇಲ್ಪತ್ರ, ೪ ಭರಪಾಯ, ೫ ಹುಂಡಿಯ ಯಜಮಾನತ್ವದ ಸಂಬಂಧವಾದ ಭೇದಗಳು, ೬ ಮುದ್ದತಿನ ಸಂಬಂಧವಾದ ಭೇದಗಳು, ೭ ನಿಶಾಜೋಗ ಹುಂಡಿ, ೮ ಹುಂಡಿಯ ಬಗ್ಗೆ ಇಂಗ್ಲಿಷ ಶಬ್ದಗಳು, ೯ ಹುಂಡಿಯ ಮಾರಾಟ, ೧೦ ಹುಂಡಿಯ ಮಾರಾಟದ ಉದಾಹರಣೆಯೂ ಅದರ ಉಪಯೋಗವೂ, ೧೧ ಹುಂಡಿಯನ್ನು ಮನ್ನಿಸುವಿಕೆ, ೧೨ ಪೇಠ ಪರಪೇಠಗಳು, ೧೩ ಪರಿಣಾಮ ಗೊತ್ತಾಗುವಿಕೆ, ೧೪ ಹುಂಡಾವಳಿ, ೧೫ ಸಕರಾಯಿ ನಕರಾಯಿ, ೧೬ ಹುಂಡಿಯನ್ನು ತೆಗೆದುಕೊಳ್ಳುವ ಬಗ್ಗೆ ಎಚ್ಚರಿಕೆ, ೧೭ ಹುಂಡಿಯ ಜಮಾಖರ್ಚಿನ ಪ್ರಕಾರಗಳು, ೧೮ ಹುಂಡಿಯು ತಿರುಗಿದ್ದು, ೧೯ ವಿಶಿಷ್ಟಪ್ರಕಾರದ ಹುಂಡಿಗಳು.

೧ ಈಗಿನಂತೆ ಮುಂಚೆ ಅಂಚೆಯಕಟ್ಟೆಗಳೂ ಉಗೆಬಂಡಿಗಳೂ ಇದ್ದಿಲ್ಲ; ರಾಜ್ಯವ್ಯವಸ್ಥೆಯಾದರೂ ಸುರಕ್ಷಿತತೆಯುಳ್ಳದ್ದಾಗಿದ್ದಿಲ್ಲ. ಆಗ ದೂರದಲ್ಲಿರುವ ಪರಸ್ಥಳಕ್ಕೆ ಹಣವನ್ನೂ ಮಾಲನ್ನೂ ಕಳುಹುವದಕ್ಕೆ ಬಹು ತೊಂದರೆಯೂ ಕಾಲಹರಣವೂ ವೆಚ್ಚವೂ ಆಗುತ್ತಿದ್ದವು. ಅದಕ್ಕಾಗಿ ಒಬ್ಬ ಮನುಷ್ಯನನ್ನು, ಇಲ್ಲವೆ ಒತ್ತರವಿದ್ದರೆ ಒಬ್ಬ ಕುದುರೆಯ ಸ್ವಾರನನ್ನು ಅವರು ಬೇಡಿದಷ್ಟು ಹಣವನ್ನು ಕೊಡಲೊಪ್ಪಿ ಕಳುಹಬೇಕಾಗುತ್ತಿತ್ತು; ಹಾದಿಯಲ್ಲಿ ಕಳ್ಳಕಾಟಕರ ಉಪದ್ರವವಿರುತ್ತಿದ್ದ ಮೂಲಕ ಆ ಕಳುಹಲ್ಪಟ್ಟ ಮನುಷ್ಯನು ಸುಖರೂಪದಿಂದ ಮನೆಗೆ ತಿರುಗಿ ಬಂದಾನೆಂಬ ನಿಯಮವಿದ್ದಿಲ್ಲ. ಇಂಥಹ ಪರಿಸ್ಥಿತಿಯಲ್ಲಿ ಸಾವುಕಾರರೂ

ಶ್ರೀಮಂತಜನರೂ ಪತ್ರದ ಮುಖಾಂತರವಾಗಿ ಪರಸ್ಥಳದಲ್ಲಿರುವ ತಮ್ಮ ಪರಿಚಯದ ಸಾವುಕಾರನಿಂದ ಇಚ್ಛಿತ ಮನುಷ್ಯರಿಗೆ ಹಣ ಮುಟ್ಟಿಸುವ ವ್ಯವಸ್ಥೆ ಮಾಡುತ್ತಿದ್ದರು; ರಕಮನ್ನು ರೋಖ ಕಳುಹುವದಕ್ಕಿಂತ ಪತ್ರದಿಂದ ವ್ಯವಸ್ಥೆ ಮಾಡುವದೇ ಅವರಿಗೆ ಹೆಚ್ಚು ಅನುಕೂಲವಾಗಿತ್ತು. ಇಂತಹ ಪತ್ರಕ್ಕೆ ಅವರು ಹುಂಡಿಯೆಂಬ ಹೆಸರನ್ನು ಕೊಟ್ಟಿದ್ದರು. ಹೀಗೆ ಹುಂಡಿಯ ವ್ಯವಹಾರವು ಇಲ್ಲಿ ಪೂರ್ವಕಾಲದಿಂದಲೇ ಇರುತ್ತದೆ. ಬೇರೆ ಬೇರೆ ಸ್ಥಳದಲ್ಲಿ ವ್ಯಾಪಾರವು ಬಹು ಜತ್ತರದಿಂದ ನಡೆದಿರುವ ಕಾರಣ ಈಗಂತೂ ಹುಂಡಿಯ ವ್ಯವಹಾರವು ಬಲು ಭರದಿಂದ ಸಾಗಿರುತ್ತದೆ. ಹಾಗಾದರೆ ಹುಂಡಿಯೆಂದರೇನು? **ಕೆಲವೊಂದು ರಕಮನ್ನು ಇಂಥ ಮನುಷ್ಯನಿಗೆ ಇಂಥ ದಿವಸಕ್ಕೆ ಮುಟ್ಟಿಸುವದಕ್ಕಾಗಿ ಒಬ್ಬ ಸಾವುಕಾರನು ಇನ್ನೊಬ್ಬ ಸಾವುಕಾರನಿಗೆ ತನ್ನ ಸಹಿಯಿಂದ ಬರೆದ ಪತ್ರಕ್ಕೆ ಹುಂಡಿಯೆನ್ನುವರು.** ಒಳಗಡೆಯಲ್ಲಿ ಹುಂಡಿಯ ನಮೂನೆಗಳು ಮುದ್ರಿಸಲ್ಪಡಹತ್ತಿವೆ. ಆ ನಮೂನೆಯ ಮಾದರಿಯನ್ನು ೩ ನೆಯ ಭಾಗದ ೩ ನೆಯ ಪ್ರಕರಣದಲ್ಲಿ ತೋರಿಸಿರುತ್ತದೆ.

೨ ಹಣಕೊಟ್ಟು ಹುಂಡಿಯನ್ನು ತೆಗೆದುಕೊಳ್ಳುವವನಿಗೆ **ರಾಖಲೆ** ಇಲ್ಲವೆ **ಹುಂಡಿಯ ಧನಿ** ಎನ್ನುವರು. ಹುಂಡಿಯ ವ್ಯಾಪಾರವು (ಹುಂಡಿಯೂ ಹುಂಡಿಯ ಹಣವೂ ಕೊಡಲ್ಪಡುವ ಕೆಲಸವು) ನಡೆಯುವ ಅಂಗಡಿಗೆ **ಅಡತ** ಇಲ್ಲವೆ **ಪೇಢಿ**ಯೆನ್ನುವರು. ಆ ಅಂಗಡಿಯ ಮಾಲಕನಿಗೆ **ಅಡತದಾರ, ಏಜಂಟ** ಇಲ್ಲವೆ **ಪೇಢೀವಾಲ** ಎನ್ನುವರು. ಯಾವ ಯಾವ ಸಾವುಕಾರರೊಳಗೆ ಪರಸ್ಪರರಲ್ಲಿ ಪರಿಚಯು, ವ್ಯಾಪಾರ, ಕೊಡಕೊಳ್ಳೋಣ ಮುಂತಾದ ಸಂಘಟನಗಳು ಇರುವವೋ, ಅವರು ಒಬ್ಬರಿಗೊಬ್ಬರು ಆಡತದಾರರಾಗುತ್ತಾರೆ. ಮಾರಾಟದ ಸಲುವಾಗಿ ಬಂದ ಹುಂಡಿಗೆ **ಹುಂಡಿಯ ಪೂರ್ಜಿ**ಯೆಂತಲೂ ಒಂದು ಹುಂಡಿಯ ಪತ್ರಕ್ಕೆ **ಹುಂಡಿಯ ಥಾನು** ಎಂತಲೂ ಅನ್ನುತ್ತಾರೆ.

೩ ಹುಂಡಿಯನ್ನು ಬರೆದುಕೊಡುವ ಸಾವುಕಾರನು ಇತ್ತ ರಾಖಲೇದಾರನ ಕಡೆಯಿಂದ ಹಣವನ್ನು ತಕ್ಕೊಂಡು ಹುಂಡಿಯನ್ನು ಕೊಟ್ಟನಂತರ ಅತ್ತ ಹುಂಡಿಯನ್ನು ಸ್ವೀಕರಿಸುವ ಸಾವುಕಾರನಿಗೆ "ಇಂತಿಷ್ಟು ರೂಪಾಯಿಗಳನ್ನು ಇಂಥ ಮನುಷ್ಯನಿಗೆ ಇಂಥ ದಿವಸ ಕೊಡುವ ಬಗ್ಗೆ ನಿಮ್ಮ ಮೇಲೆ ಹುಂಡಿ ಕೊಡಲ್ಪಟ್ಟದೆ" ಎಂದು ಪತ್ರದಿಂದ ತಿಳಿಸುತ್ತಾನೆ. ಈ ಪತ್ರಕ್ಕೆ ಮೇಲ್ಪತ್ರ ಇಲ್ಲವೆ **ಖೋಕೆ**ಯೆನ್ನುವರು. ಮೇಲ್ಪತ್ರವು ಬಂದ ಹೊರತು ಹುಂಡಿಯನ್ನು ಸ್ವೀಕರಿಸುವ ಸಾವುಕಾರನು ಹುಂಡಿಯ ಹಣವನ್ನು ಎಂದೂ ಕೊಡಲಾರನು.

೪ ಹುಂಡಿಯನ್ನು ಬರೆದು ಕೊಡುವ ಸಾವುಕಾರನು ಮೊದಲು ಒಂದು ಆಣೆಯ ಪೋಸ್ಟಿನ ಟಿಕೀಟವನ್ನು ಹುಂಡಿಯ ಪತ್ರಕ್ಕೆ ಹಚ್ಚಿಕೊಡಬೇಕಾಗುತ್ತಿತ್ತು; ಒಳಗಡೆಯಲ್ಲಿ ಹುಂಡಿಗೆ ಟಿಕೀಟಿನ ಗೊಂದಲವು ಬೇಡೆಂಬದಾಗಿ ಹೊಸ ಕಟ್ಟಳೆಯಾಗಿದೆ. ರಾಖಲೆಯು ಆಡತದಾರನಿಗೆ ಹುಂಡಿಯನ್ನು ತೋರಿಸಿ ಅದರ

ಮೇಲೆ ಸ್ವೀಕರಿಸಿದ ಬಗ್ಗೆ ಅವನಿಂದ ಬರೆಯಿಸಿ, ಮಿತಿಹಾಕಿಸಿ, ಸಹಿ ಮಾಡಿಸಿಕೊಳ್ಳುವನು. ಇದಕ್ಕೆ "ಹುಂಡಿಲಾಗುಮಾಡೋಣ" ವೆನ್ನುವರು. ಅಡತದಾರ ಆ ಹುಂಡಿಯು ನಕಲನ್ನು ತನ್ನೆಡೆಗೆ ಇಟ್ಟುಕೊಂಡು ಆ ಹುಂಡಿಯನ್ನು ಮಾಲಕನಿಗೆ ತಿರುಗಿ ಕೊಡುತ್ತಾನೆ. ಮುದ್ದತು ತುಂಬಿದ ಬಳಿಕ ಮಾಲಿಕನು ಅಡತದಾರನಿಗೆ ಹಣಬೇಡ ಹೋಗಲಾಗಿ ಅಡತದಾರನು, ಅವನು ತನ್ನ ಪರಿಚಯುದವನಿಲ್ಲದ ಪಕ್ಷಕ್ಕೆ ಹುಂಡಿಯಲ್ಲಿ ಬರೆದಿರುವ ಹೆಸರಿನ ಮನುಷ್ಯನು ಇವನೇ ಎಂಬ ಬಗ್ಗೆ ಅವನ ಠಾವಠಿಕಾಣವನ್ನು ವಿಚಾರಿಸಿ ಮನವರಿಕೆ ಮಾಡಿಕೊಂಡು, ತನಗೂ ಹುಂಡಿಯು ಹಣಬೇಡುವ ಮನುಷ್ಯನಿಗೂ ಗೊತ್ತಿದ್ದ ಒಬ್ಬ ಸಂಭಾವಿತ ಮನುಷ್ಯನ ಸಾಕ್ಷಿಯನ್ನು ಹುಂಡಿಯು ಮೇಲೆ ಹಾಕಿಸುವನು. ಬಳಿಕ ಹುಂಡಿಯು ಮಾಲಕನಿಗೆ ಹಣವನ್ನು ಮುಟ್ಟಿಸಿ, ಹುಂಡಿಯು ಪತ್ರದ ಮೇಲೆ ಇಂತಿಷ್ಟು ಹಣಮುಟ್ಟಿತು" ಎಂಬದಾಗಿ ಅವನಿಂದ ಬರೆಯಿಸಿ, ಸಹಿ ಮಾಡಿಸಿಕೊಳ್ಳುವನು. ಇದಕ್ಕೆ **ಭರಪಾಯಿ** (भरून पावले.) ಎಂದು ಅನ್ನುವರು. ಹುಂಡಿ ಭರಪಾಯಿಯಾದರೆ ಅದಕ್ಕೆ **ಪಕ್ಕಾ** ಹುಂಡಿಯೆನ್ನುವರು. ಪಕ್ಕಾಹುಂಡಿಗಾದರೂ ಖೋಕೆಯನ್ನುವದುಂಟು. ಪಕ್ಕಾ ಹುಂಡಿಯು ತಿರುಗಿ ಮೂಲ (ಹುಂಡಿ ಬರೆದ) ಸಾವುಕಾರನ ಕಡೆಗೆ ಕಳುಹಲ್ಪಡುವದು. ಇಲ್ಲಿಗೆ ಹುಂಡಿಯು ಕೆಲಸ ತೀರಿದಂತಾಗುವದು.

೫ ಹುಂಡಿಯಲ್ಲಿ ರಾಖಲೆಗೆ (ಹುಂಡಿಯು ಧನಿಗೆ) ಹಣವನ್ನು ಮುಟ್ಟಿಸಬೇಕೆಂದು ಬರೆಯಬಹುದು. ಇಲ್ಲವೆ ಹುಂಡಿಯಲ್ಲಿ ಹೆಸರು ಬರೆದ ಬೇರೊಬ್ಬ ಮನುಷ್ಯನಿಗೆ ಹಣವನ್ನು ಮುಟ್ಟಿಸಬೇಕೆಂದು ಬರೆಯಬಹುದು. ಅಥವಾ ಹುಂಡಿಯನ್ನು ತಂದ ಯೋಗ್ಯ ಮನುಷ್ಯನಿಗೆ ಹುಂಡಿಯು ಹಣ ಕೊಡಬೇಕೆಂದು ಬರೆಯಬಹುದು. ಅಂತೂ ಯಜಮಾನತ್ವದ ಸಂಬಂಧವಾಗಿ ಹುಂಡಿಯಲ್ಲಿ ಮೂರು ಪ್ರಕಾರಗಳನ್ನು ಮಾಡಬಹುದು.

(೧) ಹುಂಡಿಯು ಹಣವನ್ನು ತುಂಬಿದವನಿಗೆ (ರಾಖಲೆಗೆ) ಹಣವನ್ನು ಕೊಡಬೇಕೆಂದು ಬರೆದ ಹುಂಡಿಗೆ **ಧನಿಜೋಗ** ಹುಂಡಿಯೆನ್ನುವರು ಧನಿಯೆಂದರೆ ಧನದ ಮಾಲಕ. (೨) ಹುಂಡಿಯಲ್ಲಿ ಬರೆದ ಹೆಸರಿನ ಮನುಷ್ಯನಿಗೆ ಹಣವನ್ನು ಕೊಡಬೇಕೆಂದು ಬರೆದ ಹುಂಡಿಗೆ **ನಾಮಜೋಗ** ಹುಂಡಿಯೆನ್ನುವರು. ನಾಮವೆಂದರೆ ಹೆಸರು. (೩) ಹುಂಡಿಯನ್ನು ತಂದ ಯೋಗ್ಯಮನುಷ್ಯನಿಗೆ ಹಣವನ್ನು ಕೊಡಬೇಕೆಂದು ಬರೆದ ಹುಂಡಿಗೆ **ಶಹಜೋಗ** ಹುಂಡಿಯೆನ್ನುವರು; ಇರಾಣದ ಅರಸನಿಗೆ ಶಹನೆಂದೆನ್ನುವರು. ಆಂದಮೇಲೆ ಶಹ ಎಂದರೆ ದೊಡ್ಡ (ಸಂಭಾವಿತ) ಮನುಷ್ಯನೆಂಬದು ಸ್ಪಷ್ಟವೇ; ಶಹ ಇದು ಪಾರ್ಸೀ ಶಬ್ದವು.

ಈ ಮೂರು ಪ್ರಕಾರದ ಹುಂಡಿಗಳಲ್ಲಿ ಶಹಜೋಗ ಹುಂಡಿಯು ಬಳಿಕೆಯೋ ವಿಶೇಷವಾಗಿರುತ್ತದೆ.

೬ ಇನ್ನು ಮುದ್ದತಿನ ಸಂಬಂಧವಾಗಿಯೂ ಹುಂಡಿಯಲ್ಲಿ ಮೂರು ಪ್ರಕಾರಗಳನ್ನು ಮಾಡಬಹುದು.

(೧) ಹುಂಡಿಯನ್ನು ನೋಡಿದ ಕೂಡಲೆ (ದರ್ಶನವಾದ ಕೂಡಲೆ) ಹಣ ಕೊಡಬೇಕೆಂದು ಬರೆದಿರುವ ಹುಂಡಿಗೆ ದರ್ಶನಿಹುಂಡಿಯೆಂದೆನ್ನುವರು (೨) ಹುಂಡಿ ಲಾಗು ಆದ ಇಂತಿಷ್ಟು ದಿವಸಗಳಿಗೆ ಹಣಕೊಡಬೇಕೆಂದು ಬರೆದಿರುವ ಹುಂಡಿಗೆ ಮುದ್ದತಿ ಹುಂಡಿಯೆಂದೆನ್ನುವರು. (೩) ಹುಂಡಿಯನ್ನು ಬರೆದಂದಿನಿಂದ ಇಂತಿಷ್ಟು ದಿವಸಗಳಲ್ಲಿ ಇಲ್ಲವೆ ಇಂಥ ತಾರೀಖಿಗೆ (ಮಿತಿಗೆ) ಕೊಡಬೇಕೆಂದು ಬರೆದ ಹುಂಡಿಗೆ ಬಂದೀಮುದ್ದತಿ (ಬಂಧಮುದ್ದತಿ) ಹುಂಡಿಯೆಂದೆನ್ನುವರು.

ಟೀಪು:— ೧ ದರ್ಶನಿ ಹುಂಡಿಯಲ್ಲಿ ನೋಡಿದ ಕೂಡಲೆ ಹಣವನ್ನು ಕೊಡಬೇಕೆಂದು ಬರೆದಿದ್ದರೂ ಮೂರು ದಿವಸಗಳ ಅವಧಿಯನ್ನು ದಯಮಾಡಿ ಕೊಡುವದುಂಟು. ಇದಕ್ಕೆ ಗ್ರೇಸ ದಿವಸಗಳೆನ್ನುವರು. ಮೂರು ದಿವಸಗಳ ಅವಧಿ ಬೇಡುವದು ಸಾವುಕಾರರಿಗೆ ಗೌಣಸಂಗತಿಯಾಗಿದೆ. ನೋಡಿದ ಕೂಡಲೆ ಹಣ ಎಣಿಸುವವನೇ ಘನವಂತ ಸಾವುಕಾರನೆನಿಸಿಕೊಳ್ಳುವನು.

ಟೀಪು:— ೨ ಮುದ್ದತಿ ಹುಂಡಿಯನ್ನು ತೋರಿಸಿದೊಡನೆ ಸಾವುಕಾರರು ಆ ಹುಂಡಿಯ ನಕಲನ್ನು ತಮ್ಮಲ್ಲಿಟ್ಟುಕೊಂಡು ಅದರ ಮೇಲೆ ಹುಂಡಿ ಮುಟ್ಟಿದ ತಾರೀಖು ಹಾಕಿ ಕೊಡುವರು, ಮುಂದೆ ಮುದ್ದತು ತುಂಬಿದ ಮೇಲೆ ಹಣವನ್ನು ಬೇಡಲಿಕ್ಕೆ ಹುಂಡಿಯ ಮಾಲಕನಿಗೆ ಬಾಧ್ಯತೆ ಬರುವದು. ಮುದ್ದತು ತುಂಬಿದ ಮೇಲಾದರೂ ೩ ದಿವಸಗಳ ಅವಧಿಕೊಡುವ ರೂಢಿ ಇರುತ್ತದೆ. ಹುಂಡಿಯ ಮಾಲಕನಿಗೆ ಮುದ್ದತಿಗಿಂತ ಮೊದಲೇ ರೂಪಾಯಿಗಳು ಬೇಕಾಗಿದ್ದರೆ ಎಷ್ಟು ದಿವಸ ಮುಂಚೆ ಬೇಡುತ್ತಾನೋ ಅಷ್ಟು ದಿವಸಗಳ ಬಡ್ಡಿಯನ್ನು ತಮ್ಮ ಕರಾರಿನಂತೆ ಮುರಕೊಂಡು ಕೊಡುವರು. ಇಂತಿಷ್ಟು ದಿವಸ ಮುಂಚೆ ಬೇಡಲ್ಪಡುವ ಆ ರಕಮು ವಾಸ್ತವಿಕ ರಾಸವಾಗಿರುತ್ತದೆ; ಅದರಲ್ಲಿ ಬಡ್ಡಿ ಮುರಕೊಳ್ಳತಕ್ಕದ್ದು. ಆದರೆ ಸಾವುಕಾರರು ಹಾಗೆ ಮಾಡದೆ ಆ ರಾಸಿಗೆ ಮುದ್ದಲಿನಂತೆ ಬಡ್ಡಿ ಕಟ್ಟುವರು. ಇದರಿಂದ ಸಾವುಕಾರರಿಗೆ ಲಾಭವಾಗುವದುಂಟು. ಈ ಬಗ್ಗೆ ಮುಂದಿನ ಉದಾಹರಣೆಯಿಂದ ಸ್ಪಷ್ಟೀಕರಿಸಲ್ಪಟ್ಟದೆ. ಒಂದು ೨೦೪ ರಕಮಿನ ಮುದ್ದತಿ ಹುಂಡಿಯ ಅವಧಿ ೭೦ ದಿವಸಗಳವಿದ್ದರೆ ೧೦೦ ಕ್ಕೆ ವರ್ಷಕ್ಕೆ ೧೦ ರೂ ಬಡ್ಡಿಯಂತೆ ವಾಸ್ತವಿಕ ಮುರಕೊಳ್ಳುವ ಬಡ್ಡಿಯೆಷ್ಟು? ಸಾವುಕಾರ ರೀತಿಯ ಮುರಕೊಳ್ಳುವ ಬಡ್ಡಿಯೆಷ್ಟು? ಸಾವುಕಾರರಿಗೆ ಲಾಭವೆಷ್ಟು?

ಮುದ್ದತಿನ ದಿವಸ ೭೦+ಗ್ರೇಸ ದಿವಸ ೩=೭೩ ದಿವಸಗಳನ್ನು ಲೆಕ್ಕದಲ್ಲಿ ಹಿಡಿಯಬೇಕಾಯಿತು.

೩೬೫ ದಿವಸ: ೭೩ ದಿವಸ: ೧೦ ಬಡ್ಡಿ: ೨ ಇಷ್ಟು ಬಡ್ಡಿ:
೧೦೦ ಮು + ೨ ಬಡ್ಡಿ=೧೦೨ ರಾಸು.

೧೦೨ ರಾಸ: ೨೦೪ ರಾಸ: ೨ ಮು-ಬಡ್ಡಿ: ೪ ವಾಸ್ತವಿಕ ಮುರಕೊಳ್ಳುವ ಬಡ್ಡಿ,
ಹೀಗೆ ಮಾಡದೆ ಸಾವುಕಾರರು ರಾಸಿಗೆ ಮುದ್ದಲೆಂದು ತಿಳಿಯುವರು.

೧೦೦ ಮುದ್ದಲ: ೨೦೪ ಮು. } :: ೧೦ ಬಡ್ಡಿ :೪ ರೂ. ೧ ಆಣೆ ೩ ಪೈ ಸಾವುಕಾರೀ
೩೬೫ ದಿವಸ: ೭೩ ದಿವಸ } ರೀತಿಯ ಮು| ಬಡ್ಡಿ.

ಇದರಿಂದ ಸಾವುಕಾರರಿಗೆ ೧ ಆಣೆ ೩ ಪೈ ಹೆಚ್ಚು ಬಡ್ಡಿ ಸಿಕ್ಕಂತಾಯಿತು, ಎತ್ತಬಿದ್ದರೂ ಶೆಟ್ಟಿ ತನ್ನ ಲೆಕ್ಕದೊಳಗೇ ಬೀಳುತ್ತಾನೆಂಬ ಮಾತು ಸುಳ್ಳಲ್ಲ.

ಟೀಪು:— ೩ ಬಂದೀ ಮುದ್ದತಿಯ ಹುಂಡಿಯು ಮುದ್ದತು ತುಂಬಿದ ಕೂಡಲೆ ದರ್ಶನಿ ಹುಂಡಿಯಂತೆ ಆಗುವದು.

ಮೇಲೆ ಬರೆದ ಧನಿಜೋಗ ನಾಮಜೋಗ ಶಹಜೋಗ ಇವುಗಳಲ್ಲಿ ಪ್ರತಿಯೊಂದು ಹುಂಡಿಯು ಮುದ್ದತಿನ ಸಂಬಂಧವಾಗಿರುವ ದರ್ಶನಿ, ಮುದ್ದತಿ ಬಂದೀಮುದ್ದತಿ ಎಂಬ ಭೇದಗಳಲ್ಲಿ ಯಾವದಾದರೊಂದನ್ನು ಹೊಂದಬಹುದು. ಹಾಗಾದರೆ ಹುಂಡಿಯಲ್ಲಿ (ಮೂರು ಮೂರಲೆ) ಒಂಬತ್ತು ತರದ ಹುಂಡಿಗಳಾದವು.

೭ ಹುಂಡಿಯನ್ನು ಬೇಡುವ ಮನುಷ್ಯನಿಗೆ ಅವನು ಯಾವಸ್ಥಳದಲ್ಲಿ ಹಣವನ್ನು ಬೇಡುತ್ತಾನೋ ಆ ಸ್ಥಳದಲ್ಲಿ ಯಾರ ಪರಿಚಯವೂ ಇಲ್ಲದೆ, ಸಾಕ್ಷಿದಾರರು ಜಾಮೀನದಾರರು ಸಿಗದಂಥ ಪ್ರಸಂಗದಲ್ಲಿ ಆ ಮನುಷ್ಯನಲ್ಲಿ ಒಡೆದು ಕಾಣುವ ಮೈ ಗುರುತುಗಳನ್ನೂ ಅವನ ಸಹಿಯ ಮಾದರಿಯನ್ನೂ ಅಡತ್ತದಾರನಿಗೆ ತಿಳಿಸುತ್ತಾನೆ. ಇಂಥ ಹುಂಡಿಗೆ ನಿಶಾಜೋಗ ಹುಂಡಿಯೆನ್ನುತ್ತಾರೆ. (ನಿಶಾನ್=ಗುರುತು) ಆದರೆ ತನಗೆ ಗುರುತಿಲ್ಲ. ತನ್ನ ಗುರುತಿನವರಿಗೆ ಗುರುತಿಲ್ಲ, ಇಂತಹ ಅಪರಿಚಿತ ಮನುಷ್ಯನಿಗೆ ಇಂತಹ ಕಾಲದಲ್ಲಿ ಕೇವಲ ಚೆಹರೇಪಟ್ಟಿಯ ಮೇಲಿಂದ ಹಣವನ್ನು ಕೊಡಲಿಕ್ಕೆ ಸಾವುಕಾರರು ಹೇಗೆ ಧೈರ್ಯಪಟ್ಟಾರು ? ಆದರಿಂದ ಈಗ ಈ ತರದ ಹುಂಡಿಯನ್ನು ಕೊಡುವ ಬಳಿಕೆಯಿಲ್ಲ.

೮ ಹುಂಡಿಯ ಬಗ್ಗೆ ಇಂಗ್ಲಿಷ ಶಬ್ದಗಳು—ಒಳಗಡೆಯಲ್ಲಿ ಠೇವವನ್ನು ಇಟ್ಟುಕೊಳ್ಳುವ ಬ್ಯಾಂಕುಗಳು ಸ್ಥಾಪಿಸಲ್ಪಟ್ಟವೆ; ಅವುಗಳಲ್ಲಿ ಒಂದು ವರ್ಷವಿಟ್ಟರೆ ಕೆಲವು ಬಡ್ಡಿ (ಅಜಮಾಸು ೧೦೦ ಕ್ಕೆ ವರ್ಷಕ್ಕೆ ೬।) ಬರುವದು. ಅದಕ್ಕೂ ಹೆಚ್ಚು ವರ್ಷ ಇಟ್ಟರೆ ಆದರಕ್ಕಿಂತ ಹೆಚ್ಚು ಬಡ್ಡಿ ಬರುವದು. ಬೇಕಾದಾಗ ರಕಮನ್ನು ಕೊಡಬೇಕೆಂಬ ಕರಾರಿನಿಂದಲೂ ಹಣವಿಟ್ಟುಕೊಳ್ಳುವರು. ಇಂದೇ ಹಣವನ್ನಿಟ್ಟು ನಾಳೆಯೇ ಬೇಡಿದರೂ ಕೊಡುವರು. ಈ ಅಲ್ಪಕಾಲದ ಬಡ್ಡಿಯನ್ನೂ ಕೊಡುವರು. ಆದರಿಂದ ಇಂಥ ಠೇವಿಗೆ ತೀರ ಕಡಿಮೆ ಬಡ್ಡಿ ಬರುವದು ಸ್ಪಷ್ಟವೇ,(ಅಜಮಾಸು ೧೦೦ ಕ್ಕೆ ವರ್ಷಕ್ಕೆ ೨॥ ಬಡ್ಡಿ ಬರುವದು.) ಇಂಥ ಕರಾರಿನಿಂದ ಹಣವನ್ನಿಟ್ಟವರು ಮೆಂಬರರು ತಮ್ಮ ಬ್ಯಾಂಕಿನ ಮೇಲೆ ಕೊಡುವ ದರ್ಶನಿ ಹುಂಡಿಗೆ **ಚೆಕ್ಕು** ಅನ್ನುವರು. ಬ್ಯಾಂಕಿನ ಮೇಲೆ ಬರೆದ ಶಹಜೋಗ ದರ್ಶನಿ ಹುಂಡಿಗೆ **ಬೇರರ ಚೆಕ್ಕು** ಅನ್ನುವರು. ಇಂಥವನಿಗೆ ಇಲ್ಲವೆ ಆರ್ಡರ (ಅಪ್ಪಣೆ) ಮಾಡಿದವನಿಗೆ ಕೊಡಬೇಕೆಂದು ಬರೆದ ಹುಂಡಿಗೆ **ಆರ್ಡರ ಚೆಕ್ಕು** ಎಂಬ ಹೆಸರು. ಚೆಕ್ಕಿನ ನಮೂನೆಗಳು ಹುಂಡಿಯ ನಮೂನೆಯಂತೆ ಮುದ್ರಿಸಲ್ಪಡುವವು. (ಆದರ ನಮೂನೆಯನ್ನು ೩ ನೆಯ ಭಾಗದ ೩ ನೆಯ ಪ್ರಕರಣದಲ್ಲಿ ನೋಡು)

೯ ಹುಂಡಿಯ ಮಾರಾಟ—ಧನಿಜೋಗ ಹುಂಡಿಯಲ್ಲಿ ರಾಖಲೆಗೆ, ನಾಮಜೋಗ ಹುಂಡಿಯಲ್ಲಿ ಹೆಸರಿದ್ದವನಿಗೆ ಹಣಕೊಡಬೇಕೆಂದು ಬರೆದಿರುವ ಕಾರಣ ಅವುಗಳನ್ನು ಮಾರಲಿಕ್ಕೆ ಬರುವದಿಲ್ಲ. ಆದರೆ ಶಹಜೋಗಹುಂಡಿಯಲ್ಲಿ ಹುಂಡಿಯನ್ನು ತಂದ ಯೋಗ್ಯ ಮನುಷ್ಯನಿಗೆ ಹಣಕೊಡಬೇಕೆಂದು ಬರೆದಿರುವದರಿಂದ ಅದನ್ನು ಮಾರಲಿಕ್ಕೆ ಬರುತ್ತದೆ. ಮಾರಿದ ಬಗ್ಗೆ ಹುಂಡಿಯಲ್ಲಿ ಬರೆಯಬೇಕಾಗುತ್ತದೆ. ಇದಕ್ಕೆ **ಬೇಚಾ** ಇಲ್ಲವೆ **ಬೇಚನ** ಎನ್ನುವರು; ಹುಂಡಿಯನ್ನು ಮಾರತಕ್ಕೊಂಡವನು ತನಗೆ ಹುಂಡಿಯ ಅವಶ್ಯಕತೆಯಿಲ್ಲದಿದ್ದರೆ ಅದನ್ನು ಬೇರೊಬ್ಬನಿಗೆ ಮಾರಬಹುದು. ಈ ಪ್ರಕಾರ ಹುಂಡಿಯು ಮೂಲ ರಾಖಲೆಯಿಂದ ಒಬ್ಬನಿಗೆ, ಆ ಒಬ್ಬನಿಂದ ಇನ್ನೊಬ್ಬನಿಗೆ ಮಾರಲ್ಪಟ್ಟು ಮಾರಲ್ಪಟ್ಟು, ಅನೇಕ ಕಡೆಯಲ್ಲಿ ತಿರುಗಾಡಿ ತಿರುಗಾಡಿ ಕಟ್ಟಕಡೆಯಲ್ಲಿ ಹುಂಡಿಯನ್ನು ಬರೆದವನು ಯಾವ ಸಾವುಕಾರನ ಮೇಲೆ ಬರೆದಿರುವನೋ ಅವನ ಕಡೆಗೆ ಎಂದಾದರೂ ಒಂದು ದಿನ ಹೋಗಲಿಕ್ಕೇಬೇಕಲ್ಲವೇ? ಅವನೆಡೆಗೆ ಕಡೆಯ ಮಾರತಕ್ಕೊಂಡವನು ಆ ಹುಂಡಿಯ ಬಗ್ಗೆ ರೂಪಾಯಿಗಳನ್ನು ಬೇಡಬಂದರೆ ಅವನು ಕೊಡಲೇಬೇಕಲ್ಲವೇ? ಅವನೇನು ಪುಕ್ಕಟೆಯಾಗಿ ಹಣಕೊಡುತ್ತಾನೋ? ಹುಂಡಿಯನ್ನು ಬರೆದ ಸಾವುಕಾರನ ಹಣವನ್ನು ಅವನು ಕೊಡತಕ್ಕದ್ದೇ ಇರುತ್ತದೆ. ಬಳಿಕ ಅವನು ಹುಂಡಿಯ ರೂಪಾಯಿಗಳನ್ನು ಕೊಟ್ಟು ಭರಪಾಯಿ ಹಾಕಿಸಿ, ಆ ಭರಪಾಯದ ಹುಂಡಿ (ಖೋಕೆ) ಯನ್ನು ಹುಂಡಿ ಬರೆದ ಸಾವುಕಾರನಿಗೆ ಕಳುಹುತ್ತಾನೆ. ಈಗ ಅದರ ಪ್ರವಾಸ ಇತಿಹಾಸಗಳು ಮುಗಿದವು.

೧೦ ಹುಂಡಿಯ ಮಾರಾಟದ ಉದಾಹರಣೆಯೂ ಅದರ ಉಪಯೋಗವೂ—ಬೆಳಗಾಂವಿಯ ಸಾವುಕಾರನಿಗೆ ಮುಂಬಯಿ ಸಾವುಕಾರನು ಕೆಲವು ಹಣ ಕೊಡತಕ್ಕದ್ದಿರುತ್ತದೆಂದು ಕಲ್ಪಿಸುವ; ಆದರಿಂದ ಬೆಳಗಾಂವಿಯ ಸಾವುಕಾರನು ಮುಂಬಯಿ ಸಾವುಕಾರನ ಹಣವನ್ನು ವಸೂಲು ಮಾಡಿಕೊಳ್ಳುವ ಹವಣಿಕೆಯಲ್ಲಿರುವನು. ಅಷ್ಟರಲ್ಲಿ ಅ ಎಂಬವನೊಬ್ಬನಿಗೆ ಮುಂಬಯಿಗೆ ೨೦೦ ರು. ತೆಗೆದುಕೊಂಡು ಹೋಗತಕ್ಕದ್ದಿದ್ದು ಅಷ್ಟು ರೂಪಾಯಿಗಳು ಜಡವಾಗುತ್ತವೆಂತಲೂ ಚೋರಭಯದ ಮೂಲಕವಾಗಿಯೂ ಮುಂಬಯಿ ಹುಂಡಿಯನ್ನು ತೆಗೆದುಕೊಳ್ಳುವದಕ್ಕಾಗಿ ಬೆಳಗಾಂವಿಯ ಸಾವುಕಾರನ ಕಡೆಗೆ ಬಂದು ಅವರಿಬ್ಬರಿಗೂ ಕೆಳಗೆ ಬರೆದಂತೆ ಸಂಭಾಷಣಗಳಾದವೆಂದು ಕಲ್ಪಿಸುವಾ—

ಅ—ಸೆಟ್ಟರೇ, ನಮಗೆ ಮುಂಬಯಿಯ ೨೦೦ ರೂ. ಗಳ ಶಹಜೋಗ ಹುಂಡಿಯನ್ನು ಕೊಡುವಿರಾ? ಹುಂಡಾವಳಿಯ ದರವನ್ನು ಮಾತ್ರ ಹೆಚ್ಚಿಗೆ ಹೇಳಬಾರದು.

ಸೆಟ್ಟರು—ಸೈ, ಸೈ; ರಾಯರೇ, ನಿಮ್ಮಂಥ ಶಹಜೋಗ (ಸಂಭಾವಿತ) ಆಸಾಮಿಗೆ ಕೊಡದೆ ಏನು ಮಾಡಲಿ? ಹುಂಡಾವಳಿಯ ದರ ನಿಮಗೆಂದು ೧೦೦ಕ್ಕೆ ನಾಲ್ಕೇ ಆಣೆ ಮೇಲು ಹಿಡಿಯುವೆನು.

ಆದಕ್ಕೆ ಅನು ಭಲೆ ಭಲೆ ಸೆಟ್ಟರೇ, ೪ ಆಣೆ ಮೇಲು ಹಿಡಿದು, ಪೇಲೆ ಮೆ
ಖರ್ಚಿನಿಗೆಯೋ? ಎಂದು ೨೦೦॥ ರೂ. ಗಳನ್ನು ಅವನ ಮುಂದೆ ಎಣಿಸಿದನೆಂದ
ತಿಳಿಯೋಣ. ಆಗಲಾ ಸೆಟ್ಟಿಯು ಅವುಗಳನ್ನು ಪೆಟ್ಟಿಗೆಯಲ್ಲಿಟ್ಟು ಮುಂಬಯಿ
ಹುಂಡಿಯ ನಮೂನೆಯ ಪುಸ್ತಕವನ್ನು ತಕ್ಕೊಂಡು ಅದರೊಳಗಿನ ಒಂದು
ನಮೂನೆಯ ಎರಡೂ ಭಾಗಗಳಲ್ಲಿ ಮುಂಬಯಿ ಸಾವುಕಾರನ ಹೆಸರು ರಕಮುಗಳನ್ನು
ಬರೆದು ಕಡೆಯ ಅರ್ಧಭಾಗವನ್ನು ಹರಿದು ಅನಿಗೆ ಕೊಟ್ಟು ೨೦೦ ರೂ. ಗಳನ್ನು
ಮುಂಬಯಿ ಸಾವುಕಾರನ ಖಾತೆಗೂ, -॥- ರೂ. ಗಳನ್ನು ಹುಂಡಾವಳಿ ಖಾತೆಗೂ
ಜಮೆ ಹಚ್ಚಿಕೊಳ್ಳುವನು.

ಇತ್ತ ಅನ ಸವಾರಿಯು ಆ ಹುಂಡಿಯನ್ನು ಕಿಸೆಯಲ್ಲಿ ಹಾಕಿಕೊಂಡು
ಕೈಬೀಸಾಡುತ್ತ ಕಾಲುಮಾರ್ಗದಿಂದ ಇಲ್ಲವೆ ಉಗಿಬಂಡೆಯಿಂದ ಹೋಗ
ಬಹುದು. ಅವನಿಗೆ ಮಧ್ಯದಲ್ಲಿ ಸಾತಾರೆಯಲ್ಲಿ ರೂ. ಗಳ ಅವಶ್ಯಕತೆ ಬಿದ್ದು
ಸಾತಾರೆಯ ಪೇಟೆಗೆ ಹೋಗಿ, ಮುಂಬಯಿಯ ಹುಂಡಿಯನ್ನು ಯಾರಾದರೂ
ಕೊಳ್ಳುತ್ತೀರೋ? ಎಂದು ಕೇಳಲು, ಬ ಎಂಬವನಿಗೆ ಮುಂಬಯಿಗೆ ಹೋಗತ
ಕ್ಕದ್ದಿದ್ದರೆ ಅವನು ಆತುರದಿಂದ ಕೊಳ್ಳುವನು, ಬನಿಗೆ ಪುಣೆಯಲ್ಲಿ ರೂ.
ಗಳು ಬೇಕಾಗಿದ್ದರೆ ಪುಣೆಯಲ್ಲಿ ಸಾವುಕಾರನಿಗೆ ಮಾರುವನು. ಪುಣೆಗೂ
ಮುಂಬಯಿಗೂ ವ್ಯಾಪಾರದ ಭರಭರಿಯಿರುವ ಮೂಲಕ ಅವರು ಒತ್ತರದಿಂದ
ಕೊಳ್ಳುವರು. ಆಗಲವರು ಬನ ಹುಂಡಿ ತಕ್ಕೊಂಡು ಮುಂಬಯಿ ಸಾವುಕಾರನ
ಹೆಸರಿನಿಂದ ಖರ್ಚುಹಾಕಿ, ಆತನಿಗೆ ಪತ್ರ ಬರೆಯುವರು. ಆಗ ಮುಂಬಯಿಯ
ವನು ಪುಣೆಯವನ ಹೆಸರಿನಿಂದ ಜಮೆ ಹಿಡಿದು ಬೆಳಗಾಂವಿಯವನ ಹೆಸರಿಲೆ
ಖರ್ಚು ಹಾಕಬೇಕು. ಒಂದು ವೇಳೆ ಪುಣೆಯ ಸಾವುಕಾರನು ಕನಿಗೆ ಮಾರಿದ್ದು
ಕನು ಮುಂಬಯಿ ಸಾವುಕಾರನೆಡೆಗೆ ಹೋಗಿ ರೂ. ಗಳನ್ನು ಬೇಡಿದರೆ ಅವನ
ರೂಪಾಯಿಗಳನ್ನು ಕೊಟ್ಟು ಬೆಳಗಾಂವಿಯವನ ಹೆಸರಿಲೆ ಖರ್ಚು ಹಾಕುವನು.
ಅಂದ ಮೇಲೆ ಹುಂಡಿಯಿಂದ ಎಷ್ಟು ಲಾಭವಾಯಿತು.? ನೋಡಿರಿ! ಇತ್ತ ಗಿರಾಕಿಗ
ಳಿಗೆ ನಿಶ್ಚಿಂತೆಯಿಂದ ಕಯ್ಯ ಬೀಸಾಡುತ್ತ ಪ್ರವಾಸಮಾಡಲನುವಾಯಿತು. ಅತ್ತ
ಸಾವುಕಾರರಿಗೆ ತಮ್ಮ ತಮ್ಮ ಹಣದ ವಸೂಲಿಯನ್ನು ಮಾಡಿಕೊಳ್ಳುವದಕ್ಕೆ
ಹಗುರಾಯಿತು? ಆದುದರಿಂದ ಸಾವುಕಾರರು ತಮ್ಮ ತಮ್ಮೊಳಗೆ ಪರಸ್ಪರ
ವಾಗಿ ಹುಂಡಿಯನ್ನು ಕೊಟ್ಟು ತಮ್ಮ ತಮ್ಮ ವಸೂಲ ಮಾಡಿಕೊಳ್ಳುವರು.

೧೧ **ಹುಂಡಿಯನ್ನು ಮನ್ನಿಸುವಿಕೆ**—ಬೆಳಗಾಂವಿಯ ಸಾವುಕಾರನಿಗೆ
ಧಾರವಾಡದ ಸಾವುಕಾರನು ಹಣಕೊಡತಕ್ಕದ್ದು ಇಲ್ಲದಿದ್ದರೆ, ಅಥವಾ ಧಾರ
ವಾಡದ ಸಾವುಕಾರನೊಡನೆ ವ್ಯವಹಾರವಿಲ್ಲದಿದ್ದರೆ ಅವನು ಧಾರವಾಡದ ಸಾ
ವುಕಾರನ ಮೇಲೆ ಹುಂಡಿಯನ್ನು ಕೊಡಲಾರನು. ಯಾರಾದರೂ ಧಾರವಾಡದ

ಹುಂಡಿಯನ್ನು ಅವನೆಡೆಗೆ ಬೇಡಬಂದರೆ ಅವನು ನನ್ನಲ್ಲಿ ಧಾರವಾಡದ ಹುಂಡಿಯಿಲ್ಲೆಂದು ಖಂಡಿತವಾಗಿ ಹೇಳಿಬಿಡುವನು. ಯಾವ ಯಾವ ಸಾವುಕಾರರೊಳಗೆ ಕೊಡಕೊಳ್ಳುವದೂ ವ್ಯವಹಾರದ ಬಳಿಕೆಯೂ ಇರುವವೋ? ಅವರವರೊಳಗೇ ಹುಂಡಿಯ ವ್ಯವಹಾರ ನಡೆಯುತ್ತದಲ್ಲದೆ ಇತರರೊಡನೆ ನಡೆಯಲಾರದು. ಸುಮ್ಮ ಸುಮ್ಮನೆ ತಮಗೆ ಗೊತ್ತಿಲ್ಲದ ಮತ್ತು ವ್ಯವಹಾರದ ಬಳಿಕೆಯಿಲ್ಲದ ಸಾವುಕಾರನ ಹೆಸರಿನ ಹುಂಡಿಯನ್ನು ಯಾರಿಗೆ ಯಾರೂ ಕೊಡಲಾರರು. ಕೊಟ್ಟರೂ ಅದು ನಡೆಯುವದು ಹೇಗೆ? ನಮ್ಮಲ್ಲಿ ಇಂಥ ಸಾವುಕಾರನ ವ್ಯವಹಾರವಿಲ್ಲ. ನಾವು ಹಿಡಿಯಲಾರೆವೆಂದು ಸ್ಪಷ್ಟವಾಗಿ ಹೇಳಿಬಿಡುವರು. ಆದರೆ ಮುಂಬಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಂದ ಮಾಲನ್ನು ತರಿಸುವ ಮತ್ತು ಕಳಿಸುವ ಮುಂತಾದ ವ್ಯಾಪಾರದ ಭರಭರಿಯು ನಡೆಯುವದರಿಂದ ಮುಂಬಯಿ ಮುಂತಾದ ಪಟ್ಟಣಗಳ ಹುಂಡಿಯನ್ನು ಬಹುತರ ಎಲ್ಲ ಸಾವುಕಾರರು ಕೊಡುವರು; ಮತ್ತು ಅದನ್ನು ಎಲ್ಲರೂ ಮನ್ನಿಸುವರು.

೧೨ ಪೇಠ ಪರಪೇಠಗಳು—ಇನ್ನು ಸಾವುಕಾರರು ಕೊಟ್ಟ ಹುಂಡಿಯ ಚೀಟಿ ಹೋದರೆ ಏನುಗತಿ! ರೂಪಾಯಿಗಳು ಮುಳುಗಿದವಲ್ಲವೇ? ಛೇ! ಅವು ಮುಳುಗಲಾರವು; ಅದು ಕಳೆದು ಹೋಯಿತೆಂದು ಹೇಳಿದರೆ, ಸಾವುಕಾರರು ತಮ್ಮಲ್ಲಿದ್ದ ಹುಂಡಿಯ ಸ್ಥಳಪ್ರತಿಯ ಮೇಲಿಂದ ಅದರ ನಕಲನ್ನು ಕೊಡುವರು; ಆ ಹುಂಡಿಯ ನಕಲಿಗೆ ಪೇಠವೆನ್ನುವರು. ಪೇಠ ಹೋದರೆ ಅದರ ನಕಲು ಮತ್ತೊಂದು ಕೊಡುವರು; ಅದಕ್ಕೆ ಪರಪೇಠವೆನ್ನುವರು. ಪೇಠ ಇಲ್ಲವೆ ಪರಪೇಠ ಕೊಡುವ ಮೊದಲು ಹುಂಡಿ ಬರೆದುಕೊಡುವ ಸಾವುಕಾರನು ತನ್ನ ಅಡತದಾರನಲ್ಲಿ ಹುಂಡಿಯ ಇಲ್ಲವೆ ಪೇಠದ ಭರಪಾಯಿ ಆಗಿರುತ್ತದೋ ಹೇಗೆಂಬದರ ವಿಚಾರಮಾಡುವನು. ಭರಪಾಯಿಯಾಗಿದ್ದರೆ ಅವನಿಗೆ ಪೇಠವನ್ನಾಗಲಿ ಪರಪೇಠವನ್ನಾಗಲಿ ಸಾವುಕಾರನು ಎಂದೂ ಕೊಡಲಾರನೆಂಬದು ಸ್ಪಷ್ಟವದೆ. ಪೇಠ ಪರಪೇಠಗಳನ್ನು ಬರೆದುಕೊಡುವಾಗ್ಗೆ ಅವುಗಳ ಕೆಳಗೆ "ಇಂಥ ದಿವಸ ಇಂಥ ರಾಖಲೆಗೆ ಕೊಟ್ಟ ಹುಂಡಿಯು ಹೋಗಿರುವದು ಎಂದು ಹೇಳಿದ್ದರಿಂದ ಈ ಪೇಠವನ್ನು ಕೊಟ್ಟದೆ. ನೀವು ನಿಮ್ಮ ಜಮಾಖರ್ಚನ್ನು ಚೆನ್ನಾಗಿ ಶೋಧಿಸಿ ಮೂಲ ಹುಂಡಿಗೆ ರೂಪಾಯಿ ಕೊಟ್ಟಿಲ್ಲವೆಂಬದನ್ನು ಮನಗಂಡು ಪೇಠ ಇಲ್ಲವೆ ಪರಪೇಠಗಳ ರೂಪಾಯಿ ಕೊಡತಕ್ಕದ್ದು" ಎಂದು ಬರೆಯುತ್ತಾರೆ.

೧೩ ಪರಿಣಾಮ ಗೊತ್ತಾಗುವಿಕೆ—ಹುಂಡಿಯು ಸ್ವೀಕರಿಸಲ್ಪಟ್ಟು ಭರಪಾಯಿಯಾದ ಬಳಿಕ ಆ ಭರಪಾಯದ ಹುಂಡಿಯು (ಖೋಕೆಯು) ಮೂಲ ಸಾವುಕಾರನಲ್ಲಿ ಬರುವದು. ಒಂದು ವೇಳೆ ಹುಂಡಿಯು ಸ್ವೀಕರಿಸಲ್ಪಡದಿದ್ದರೂ ಅದು ಮೂಲ ಸಾವುಕಾರನಲ್ಲಿ ಬಂದೇಬರುವದು. ಆದರಿಂದ ಹುಂಡಿಯ ಪರಿಣಾಮವೇನಾಯಿತೆಂಬ ಸಂಗತಿಯು ರಾಖಲೆಗೆ ತಿಳಿಯುತ್ತದೆ.

೧೪ ಹುಂಡಾವಳಿ—ಹುಂಡಿ ಬರೆದುಕೊಡುವ ಸಾವುಕಾರನು ತನಗೆ ಹ
ಣದ ಅಗತ್ಯವಿಲ್ಲದಿದ್ದರೆ ರಾಖಲೆಯ ಕಡೆಯಿಂದ ಹುಂಡಿಯ ರಕಮಿನ ಮೇ
೧೦೦ಕ್ಕೆ ಇಂತಿಷ್ಟರಂತೆ ಹೆಚ್ಚು ಹಣ ತೆಗೆದುಕೊಳ್ಳುವನು. ಒಂದೊಂದು ವೇ
ಹುಂಡಿಯಲ್ಲಿ ಬರೆದ ರಕಮಿನಲ್ಲಿಯೇ ತುಸು ಬಿಡುವದಕ್ಕೆ ಒಪ್ಪಿಕೊಳ್ಳುವನು
ಉದಾರಬುದ್ಧಿಯಿಂದೇನು? ಅಲ್ಲ! ಅಲ್ಲ! ತಮಗೆ ಹಣದ ಅಗತ್ಯವಿರುತ್ತದೆಂದು
ಹೆಚ್ಚು ತೆಗೆದುಕೊಂಡ ಹಣಕ್ಕೆ ಹೊರ (ಮೇಲ್) ಬಟ್ಟವೆಂತಲೂ, ಕಡಿಮೆ ತೆ
ದುಕೊಂಡ ಹಣಕ್ಕೆ ಒಳಬಟ್ಟವೆಂತಲೂ ಅನ್ನುವರು. ಒಂದೊಂದು ವೇಳೆ ಇವೆ
ಡಕ್ಕೂ ಹುಂಡಾವಳಿ (ಹುಂಡಿಯ ಕಸರು) ಎನ್ನುವರು. ಹುಂಡಾವಳಿಯ ದರವು
ಬಹುತರ ಮನಿಆರ್ಡರ ಹಾಸಲಿಗಿಂತ ಕಡಿಮೆಯಿರುತ್ತದೆ. ಹುಂಡಿಯ ಬಗ್ಗೆ ಹುಂ
ಡಾವಳಿ ಬಂದರೆ ಹುಂಡಿಯ ಹಣವನ್ನು ಹುಂಡಿಯ ಖಾತೆಗೆ, ಹುಂಡಾವಳಿಯ ಹ
ಣವನ್ನು ಹುಂಡಾವಳಿಯ ಖಾತೆಗೆ ಜಮೆ ಹಚ್ಚಬೇಕು. ಹುಂಡಾವಳಿ ಕೊಟ್ಟದ್ದರೆ
ಹುಂಡಿಯ ಪೂರ ಹಣವನ್ನು ಹುಂಡಿಯ ಖಾತೆಗೆ ಜಮೆ ಹಚ್ಚಿ, ಹುಂಡಾವಳಿ
ಯನ್ನು ಹುಂಡಾವಳಿ ಖಾತೆಗೆ ಖರ್ಚು ಹಾಕಬೇಕು.

೧೫ ಸಕರಾಯಿ ನಕರಾಯಿ—ಹುಂಡಿಯನ್ನು ಸ್ವೀಕರಿಸುವ ಬಗ್ಗೆ ಅಡ
ತದಾರನು ಬೇಡುವ ಹಣಕ್ಕೆ ಸ್ವೀಕಾರಣಾವಳವೆಂದೂ, ಹುಂಡಿಯು ಸ್ವೀಕರಿಸಲ್ಪ
ಡದೆ ತಿರುಗಿ ಬಂದು, ಅದಕ್ಕಾಗಿ ರಾಖಲೆಯು ಹುಂಡಿ ಬರೆದ ಸಾವುಕಾರನಿಂದ
ಹಾನಿಯ ಹಣವನ್ನು ಬೇಡಿದರೆ ಅದಕ್ಕೆ ನಾಕಾರಣಾವಳವೆಂದೂ ಅನ್ನುತ್ತಾರೆ.
ಸ್ವೀಕಾರಣಾವಳ ನಾಕಾರಣಾವಳ ಈ ಶಬ್ದಗಳೇ ಕ್ರಮವಾಗಿ ಸಕರಾಯಿ ನಕ
ರಾಯಿ ಎಂಬ ರೂಪಗಳನ್ನು ತಾಳಿರುತ್ತವೆ. ಹುಂಡಿಯನ್ನು ಯೋಗ್ಯ ಮುದ್ದ
ತಿಗೆ ಸ್ವೀಕರಿಸದೇ ಇದ್ದರೆ ಎಷ್ಟು ದಿವಸ ಹೆಚ್ಚಾಗಿರುತ್ತದೋ ಆ ಮುದ್ದತಿಗೆ
ಹುಂಡಿಖಡಿ ಅನ್ನುತ್ತಾರೆ. ಈ ಖಡಿ (ಮುದ್ದತಿಗಿಂತ ಹೆಚ್ಚಾದ) ದಿವಸಗಳ ಬಡ್ಡಿ
ಯನ್ನು ರಾಖಲೆಯು ಮೂಲ ಸಾವುಕಾರನಿಂದ ಬೇಡಬಹುದು. ಇದಾದರೂ ನಕ
ಯಿಯೊಳಗೇ ಬರುವದು. ಸಾರಾಂಶವೇನಂದರೆ–ಹುಂಡಿಯನ್ನು ಸ್ವೀಕರಿಸುವ
ಬಗ್ಗೆ ಅಡತದಾರನಿಗೆ ಏನಾದರೂ ಕೊಟ್ಟದ್ದರೆ, ಅಡತದಾರನು ಹುಂಡಿಯನ್ನು
ಹಿಡಿಯದಿದ್ದರೆ, ಇಲ್ಲವೆ ಹುಂಡಿಯ ಮುದ್ದತಿಗಿಂತ ಹೆಚ್ಚುದಿನ ಇಟ್ಟುಕೊಂಡಿ
ದ್ದರೆ ಈ ಬಗ್ಗೆ ಹುಂಡಿಯ ಮಾಲಿಕನು, ಹುಂಡಿಕೊಟ್ಟವನಿಂದ ತೆಗೆದುಕೊಳ್ಳುವ
ಹಾನಿಯ ಹಣಕ್ಕೆ ಸಕರಾಯಿ ನಕರಾಯಿ ಅನ್ನುತ್ತಾರೆ. ಈ ಸಕರಾಯಿ ನಕ
ರಾಯಿ ದರಗಳನ್ನು ಮುಂದೆ ನ್ಯಾಯ ಬರಬಾರದೆಂದು ಹುಂಡಿ ಕೊಡುವಾಗಲೇ
ಸಾವುಕಾರರು ನಿರ್ಣಯಿಸುತ್ತಾರೆ.

೧೬ ಹುಂಡಿಯನ್ನು ತೆಗೆದುಕೊಳ್ಳುವ ಬಗ್ಗೆ ಎಚ್ಚರಿಕೆ–ಹಣತುಂಬಿ ಹುಂಡಿ
ಯನ್ನು ತೆಗೆದುಕೊಂಡಿದ್ದು ಅದು ಅಡತದಾರನಿಗೆ ಲಾಗು ಆಗುವದರೊಳಗಾಗಿಯೇ

ಹುಂಡಿ ಬರೆದ ಸಾವುಕಾರನು ದಿವಾಳಿ ತೆಗೆದರೆ ರಾಖಲೆಯ ಹಣವು ಮುಳುಗುವದು. ಭರಪಾಯಿ ಆದನಂತರ ದಿವಾಳಿ ತೆಗೆದರೆ ಅಡತದಾರನ ಹಣವು ಮುಳುಗುವದು. ಇದಕ್ಕಾಗಿ ಹುಂಡಿಯ ಹಣತುಂಬುವವನು ಸಾವುಕಾರರ ಸ್ಥಿತಿಯನ್ನು ಯೋಗ್ಯವಾಗಿ ವಿಚಾರಿಸಿ ತುಂಬುವದು ಒಳ್ಳೆಯದು. ಹುಂಡಿಯನ್ನು ತಕ್ಕೊಂಡ ನಂತರ ಅಡತದಾರನು ದಿವಾಳಿ ತೆಗೆದರೆ ರಾಖಲೆಯದೂ ಹುಂಡಿ ಬರೆದವನದೂ ಹಾನಿಯಿಲ್ಲ. ರಾಖಲೆಗೆ ಹುಂಡಿಯ ಪತ್ರವನ್ನು ಮಾತ್ರ ಬದಲಿಸಬೇಕಾಗುತ್ತದೆ.

೧೭ ಹುಂಡಿಯ ಜಮಾಖರ್ಚಿನ ಪ್ರಕಾರಗಳು—ಇದರಲ್ಲಿ ಮೂರು ಪ್ರಕಾರಗಳಿರುತ್ತವೆ. ಅವು ಯಾವವೆಂದರೆ:—

೧ ನೆಯ ಪ್ರಕಾರ—ಸಾವುಕಾರರು ರಾಖಲೆಯ ಕಡೆಯಿಂದ ಹಣ ತುಂಬಿಸಿಕೊಂಡು ಹುಂಡಿಯ ಚೀಟಿ ಕೊಡುತ್ತಾರಲ್ಲವೆ? ಅದರಿಂದ ಈ ಹಣವು ಹುಂಡಿಯ ಸಂಬಂಧವಾಗಿ ಬಂತೆಂದು ತಿಳಿದು ಹುಂಡಿಯ ಖಾತೆಗೆ ಜಮೆ ಬರೆದುಕೊಳ್ಳುವರು. ಬಳಿಕ ಅಡತದಾರನಿಂದ ಭರಪಾಯದ ಹುಂಡಿ (ಖೋಕೆ) ಬಂದ ನಂತರ ಹುಂಡಿಯ ಖಾತೆಗೆ 'ಖರ್ಚುಹಾಕಿ ಅಡದಾರನ ಹೆಸರಿನಿಂದ ಜಮೆಹಿಡಿಯುವರು.

೨ ನೆಯ ಪ್ರಕಾರ—ಕೆಲವರು ರಾಖಲೆಯಿಂದ ಈ ಹಣಬಂತೆಂದು ಅವನ ಹೆಸರಿನಿಂದ ಜಮೆ ಬರೆದುಕೊಳ್ಳುವರು, ಬಳಿಕ ಹುಂಡಿ ಪಟಾಯಿಸಿ, ಅಡತದಾರನ ಕಡೆಯಿಂದ ಖೋಕೆ ಬಂದಬಳಿಕ ರಾಖಲೇದಾರನ ಖಾತೆಗೆ ಖರ್ಚುಹಾಕಿ ಅಡತದಾರನ ಹೆಸರಿನಿಂದ ಜಮೆ ಹಿಡಿಯುವರು.

೩ ನೆಯ ಪ್ರಕಾರ—ಕೆಲವರು ರಾಖಲೆಯಿಂದ ಬಂದ ಹಣವನ್ನು ಮೊದಲೇ ಅಡತದಾರನ ಖಾತೆಗೆ ಜಮೆ ಹಿಡಿದು ಬಿಡುವರು. ಹೀಗೆ ಮಾಡಿದರೆ ಖೋಕೆ ಬಂದ ಬಳಿಕ ಏನೊಂದು ಜಮಾಖರ್ಚು ಬರೆಯುವ ಕಾರಣವಿಲ್ಲ. ಅಡತದಾರನ ಖಾತೆಯಲ್ಲಿ ಹುಂಡಿ ಭರಪಾಯಿಯಾದ ಮಿತಿಯನ್ನು ಹಾಕಿದರಾಯಿತು.

ಇದೇ ತತ್ತ್ವದಂತೆ ಅಡತದಾರನೂ ರಾಖಲೆಯೂ ತನ್ನ ತನ್ನ ಜಮಾಖರ್ಚನ್ನು ಬರೆಯುಬಹುದು.

ಈ ಮೂರು ಪ್ರಕಾರಗಳಲ್ಲಿ ಮೂರನೆಯ ಪ್ರಕಾರದ ಅಂದರೆ ಒಮ್ಮೆಲೇ ಅಡತದಾರನ ಖಾತೆಗೆ ಜಮೆ ಬರೆಯುವ ಪದ್ಧತಿಯೇ ವಿಶೇಷ ರೂಢಿಯಲ್ಲಿರುತ್ತದೆ.

ಇನ್ನು ಕೇವಲ ಹುಂಡಿಯ ವ್ಯಾಪಾರವನ್ನೇ ಮಾಡತಕ್ಕವರು ಹುಂಡಿಯನ್ನು ಖರೀದಿ ಮಾಡಿದರೆ ಹುಂಡಿ ಖರೀದಿಯ ಖಾತೆಗೆ ಖರ್ಚನ್ನೂ, ಮಾರಿದರೆ ಆ ಖಾತೆಗೆ ಜಮೆಯನ್ನೂ ಬರೆದುಕೊಳ್ಳುವರು. ಹುಂಡಿಯನ್ನು ಉದ್ದರಿಯಾಗಿ ಕೊಟ್ಟರೆ ಹುಂಡಿಯ ಖಾತೆಗೆ ಜಮೆ ಹಚ್ಚಿ ಹುಂಡಿ ತಕ್ಕೊಂಡವನ ಖಾತೆಗೆ ಖರ್ಚು ಹಾಕಬೇಕು. ಹುಂಡಿಯೆಂದು ಗದ್ದಲಹೊಗದೆ ಅದೊಂದು ಜೀನಸೇ ಎಂದು ತಿಳಿದು ಜಮಾಖರ್ಚು ಮಾಡಬೇಕು.

ಹುಂಡಾವಳಿ ಹಣ, ಹುಂಡಿಖಡಿ ಆದ ದಿವಸಗಳ ಬಡ್ಡಿ, ಸಕರಾಯಿ ನಕರಾಯಿ ಹುಂಡಿಯ ಇತರ ಖರ್ಚು ಇವುಗಳನ್ನು ಹುಂಡಾವಳಿ (ಹುಂಡಿ ಕಸರು) ಖಾತೆಗೆ ಆಯಾ ಪರಿಸ್ಥಿತಿಯ ಪ್ರಕಾರ ಜಮೆ ಇಲ್ಲವೆ ಖರ್ಚು ಬರೆಯಬೇಕು.

೮೮ ಹುಂಡಿಯು ತಿರುಗಿದ್ದು—ಹುಂಡಿಯು ಅಡತದಾರನಿಂದ ಸ್ವೀಕರಿಸಲ್ಪಡದೆ ತಿರುಗಿ ಬಂದರೆ, ಆ ಬಗ್ಗೆ ರಾಖಲೆಯು ತನ್ನ ಮೂಲ ಹಣವನ್ನೂ ಹುಂಡಾವಳಿಯನ್ನೂ ಬೇಡುವದಂತೂ ಸರಿಯೇ, ಇದಲ್ಲದೆ ಆ ಬಗ್ಗೆ ಆವನು ತನಗಾದ ಹಾನಿಯನ್ನು ಬೇಡುವದಾದರೂ ಸ್ವಾಭಾವಿಕವಾದದ್ದೇ ಸರಿ. ಅದರಿಂದ ಅವನ ರಕಮನ್ನು ಮೊದಲು ಯಾವ ಖಾತೆಗೆ ಜಮೆ ಬರೆದಿರುತ್ತದೋ ಆ ಖಾತೆಗೆ, ಅವನು ಹಾನಿಯ ಬಗ್ಗೆ ಬೇಡುವ ಹಣವನ್ನು ಸಕರಾಯಿ ನಕರಾಯಿ ಖಾತೆಗೆ ಖರ್ಚು ಹಾಕಿ ಕೊಡಬೇಕು.

೧೯ ವಿಷ್ಟಪ್ರಕಾರದ ಹುಂಡಿಗಳು—(ಅ) ಲಹಣೆ—ಒಮ್ಮೊಮ್ಮೆ ಸಾವುಕಾರರು ತಮ್ಮ ಅಡತವಿಲ್ಲದ ಸ್ಥಳದಲ್ಲಿಯೂ ಹುಂಡಿಯನ್ನು ಕೊಡಲೊಪ್ಪುವರು. ಆಗಲವರು ಅಡತದಾರನು ಹುಂಡಿಯನ್ನು ಸ್ವೀಕರಿಸಲಾರನೆಂದು ತಿಳಿದು ಅವನಿಗೆ ರೋಖ ಹಣವನ್ನು ಇಲ್ಲವೆ ಆ ರಕಮಿನ ಬೆಲೆಯಷ್ಟು ಅವನಿಗೆ ಅವಶ್ಯವಿದ್ದ ಮಾಲನ್ನು ಒಳಗಿಂದೊಳಗೆ ಕಳುಹುವರು. ಇದಕ್ಕೆ ಲಹಣೆಹುಂಡಿಯನ್ನುವರು. ಇಷ್ಟೊಂದು ತ್ರಾಸಪಡುವದಕ್ಕೆ ಹುಂಡಾವಳಿಯ ಹಣದಾಶೆಯಾಗಲಿ, ಸಾವುಕಾರಿಕೆಯ ಅಭಿಮಾನವಾಗಲಿ ಕಾರಣವಿರಬೇಕಷ್ಟೇ.

(ಬ) ಜವಾಬಿಹುಂಡಿ—ಒಂದು ವೇಳೆ ರಾಖಲೆಯು ಸಾವುಕಾರನಲ್ಲಿ ಹಣ ತುಂಬಿ ಈ ರಕಮನ್ನು ಇಂಥ ಮನುಷ್ಯನಿಗೆ ಮುಟ್ಟಿಸಿ, ಮುಟ್ಟಿದ ಬಗ್ಗೆ ಅವನ ಜವಾಬ (ಉತ್ತರ) ವನ್ನು ತರಿಸಿ ಕೊಡಬೇಕೆಂದು ಹೇಳಿದರೆ, ಸಾವುಕಾರನು ಆ ಹುಂಡಿಯನ್ನು ತನ್ನ ಅಡತದಾರನಿಗೆ ಕಳುಹಿ, ಹುಂಡಿಯ ಹಣ ಯೋಗ್ಯ ಮನುಷ್ಯನಿಗೆ ಭರಪಾಯಿ ಆದ ಬಗ್ಗೆ ಉತ್ತರ ತರಿಸಿ ಕೊಡುವನು. ಈ ಜವಾಬ ತರಿಸಿ ಕೊಡುವ ಹುಂಡಿಗೆ ಜವಾಬೀಹುಂಡಿಯನ್ನುವರು. ಇದು ನಾಮಜೋಗ ಹುಂಡಿಯದೊಂದು ಪ್ರಕಾರವಿರುತ್ತದೆ. ಈ ಹುಂಡಿಯಿಂದ ಅದರಲ್ಲಿ ಹೆಸರಿದ್ದವನಿಗೆ ಹಣ ಮುಟ್ಟಿಸಿ ಪಾವತಿ ತರಿಸಿಕೊಡುವ ವ್ಯವಸ್ಥೆಯಾಗುತ್ತದೆ. ಅಂದ ಮೇಲೆ ಈ ಹುಂಡಿಯು ನಮ್ಮ ನಾಡಗೀ ಮನಿಆರ್ಡರದಂತೆಯೇ ಇರುತ್ತದೆ.

ಹುಂಡಿ ಮನಿಯಾರ್ಡರಗಳಲ್ಲಿಯ ಸಾಮ್ಯ ವೈಷಮ್ಯ.

ಹುಂಡಿಗಳಲ್ಲಿ ನಾಮಜೋಗ ಹುಂಡಿಯು, ಮ. ಆರ್ಡರವನ್ನು ಹೋಲುತ್ತದೆ; ಸಾವು ಪರಸ್ಥಳದ ಕೆಲವೊಬ್ಬನಿಗೆ ಹಣಮುಟ್ಟಿಸಬೇಕಾದರೆ ಇಲ್ಲಿಯ ಸಾವುಕಾರನಲ್ಲಿ ಹಣತುಂಬಿ ಆ ಮನುಷ್ಯನ ಹೆಸರಿನ ನಾಮಜೋಗ ಹುಂಡಿಯನ್ನು ತಕ್ಕೊಂಡು ಅದನ್ನು ಪೋಷ್ಟಿನಿಂದ ಆ ಮನುಷ್ಯನಿಗೆ ಕಳುಹಲು, ಅವನು ಅಲ್ಲಿಯ ಸಾವುಕಾರನಿಗೆ ಆ ಹುಂಡಿ ತೋರಿಸಿ ಅವನಿಂದ ಹಣ ಪಡೆಯುವನು; ಇದರಿಂದ ನಾಮಜೋಗ ಹುಂಡಿಗೂ ಮ. ಆ. ಕ್ಕೂ ಕೆಳಗಿನ ಸಾಮ್ಯವೈಷಮ್ಯಗಳುಂಟು.

ಸಾಮ್ಯ—ಎರಡೂದರಿಂದ ಪರಸ್ಥಳದ ಇಚ್ಛಿತ ಮನುಷ್ಯನಿಗೆ ಹಣ ಮುಟ್ಟುವದುಂಟು.

ವೈಷಮ್ಯ—(೧) ಹಣತುಂಬಿ ಹುಂಡಿಯನ್ನು ತಮ್ಮೆಡೆಗೇ ತಕ್ಕೊಳ್ಳುವದರಿಂದ ಹಣಮುಟ್ಟಿದ ಬಗ್ಗೆ ಬೇರೆ ಪಾವತಿಯ ಕಾರಣವಿಲ್ಲ. ಮ. ಆ. ಮಾಡುವಾಗ್ಗೆ ಹಣತುಂಬಿ ಫಾರ್ಮವನ್ನು ಪೋಷ್ಟಿನಲ್ಲಿ ಕೊಡುವದರಿಂದ ಪಾವತಿಯ ಅವಶ್ಯವಿರುತ್ತದೆ. (೨) ಮ. ಆ. ದ ಹಾಸಲು ಇಂತಿಷ್ಟೇ ಎಂದು ನಿಯಮವುಂಟು. ಆದರೆ ಹುಂಡಿಯ ಹಾಸಲು (ಹುಂಡಾವಳ) ಸಾವುಕಾರರ ಗರ್ಜಿನ ಮೇಲೆ ಹೆಚ್ಚು ಕಡಿಮೆ ಆಗುವದುಂಟು. ಒಮ್ಮೊಮ್ಮೆ ಹುಂಡಿಯ ರಕಮಿನಲ್ಲಿ ತುಸು ಬಿಟ್ಟು ಸಹ ಕೊಡಬಹುದು. ಅಂತು ಹುಂಡಿಗೆ ಮ. ಆ. ಕ್ಕಿಂತ ಕಡಿಮೆ ವೆಚ್ಚ ಬರುವದು. (೩) ಹುಂಡಿ ಮುಟ್ಟಿದ ಬಳಿಕ ಆ ಮನುಷ್ಯನು ಸಾವುಕಾರನಿಗೆ ಹುಂಡಿ ತೋರಿಸಿ ಹಣತಕ್ಕೊಳ್ಳುವದಕ್ಕೆ ಎಡತಾಕಬೇಕಾಗುವದು. ಮ. ಆ. ದಲ್ಲಿ ಪೋಷ್ಟಮನನು ಹುಡುಕುತ್ತ ಆ ಮನುಷ್ಯನಿದ್ದಲ್ಲಿ ಹೋಗಿ ರೂ. ಕೊಡುವನು. (೪) ಹುಂಡಿ ಹಣ ಮುಟ್ಟಿಸಿ ಅಡತದಾರನು ಸಾವುಕಾರನಿಗೆ ಖೋಕೆ ಕಳುಹುವನು. ರಾಖಲೆಗೆ ದಾಖಲೆಯಿಲ್ಲ. ತಾವು ಕಳುಹಿದ ಮನುಷ್ಯನಿಂದ ಉತ್ತರ ಬರಬಹುದು. ಮ. ಆ. ದಲ್ಲಿ ಆ ಮನುಷ್ಯನಿಂದ ಪಾವತಿಯು ಸಿಗುವದು. (೫) ಮ. ಆ. ದಿಂದ ಸುರಕ್ಷಿತವಾಗಿಯೂ ತೀವ್ರವಾಗಿಯೂ ರೂ. ಮುಟ್ಟುವವು. ಹುಂಡಿಯಲ್ಲಿ ಸಾವುಕಾರರು ದಿವಾಳತೆಗೆಯುವ ಮತ್ತು ಅದನ್ನು ಸ್ವೀಕರಿಸದಿರುವ ಸಂಭವವದೆ. ಹಾಗು ಅದು ದರ್ಶನಿಯಿದ್ದರೂ ಅದಕ್ಕೆ ಗ್ರೇಸಿನ ಮೂರು ದಿವಸಗಳ ತೊಡಕು ಉಂಟು. ಮುದ್ದತೀ ಇದ್ದರಂತೂ ಹೇಳ ಕೇಳ ದಿನಾವಧಿಯುಳ್ಳದ್ದೇ.

ಜವಾಬಿ ಹುಂಡಿಯು ಬಹುತರ ಎಲ್ಲ ಸಂಗತಿಗಳಲ್ಲಿ ಮ. ಆ. ವನ್ನೇ ಹೋಲುತ್ತದೆ. ಧನಿಜೋಗ ಹುಂಡಿಯಿಂದ ರಾಖಲೆಗೆ, ಶಹಾಜೋಗದಿಂದ ಬೇಕಾದವನಿಗೆ ಹಣಸಿಗುವದರಿಂದ ಇವುಗಳಿಗೂ ಮ. ಆ.ಕ್ಕೂ ಸಂಬಂಧವಿಲ್ಲ. ಚಕ್ಕುಗಳು ನಾಮಜೋಗ ಹುಂಡಿಗಳಂತೆ ಇರುತ್ತವೆ.

ಭಲಾವಣಿಪತ್ರ—ಯಾವನಾದರೊಬ್ಬ ತನ್ನ ನಂಬಿಗೆಯ ಒಳ್ಳೇ ಮನುಷ್ಯನಿಗೆ ಪರಸ್ಥಳದಲ್ಲಿ ಮಾಲು ಆಗಲಿ, ಕೆಲವು ಹಣವಾಗಲಿ ಬೇಕಾಗಿದ್ದರೆ, ಇಂಥ ಮನುಷ್ಯನು ಶಹಜೋಗ (ಸಂಭಾವಿತ) ನಿರುತ್ತಾನೆ. ಇವನಿಗೆ ಇಂತಿಷ್ಟು ರಕಮಿನ ವರೆಗೆ, ಇಂತಿಷ್ಟು ದಿವಸಗಳಲ್ಲಿ ಅವನ ಇಚ್ಛೆಯ ಪ್ರಕಾರ ಮಾಲನ್ನಾಗಲಿ, ರೋಖಹಣವನ್ನಾಗಲಿ ಕೊಡಬೇಕೆಂದು ಸಾವುಕಾರರು ತಮ್ಮ ಅಡತದಾರನ ಮೇಲೆ ಬರಕೊಡುವ ಪತ್ರಕ್ಕೆ **ಭಲಾವಣಿಪತ್ರ**ವೆನ್ನುತ್ತಾರೆ. ಭಲಾ ಅಂದರೆ ಒಳ್ಳೇ ಎಂದು ಅರ್ಥವಿರುತ್ತದಷ್ಟೇ; ಭಲಾ ಈ ಶಬ್ದದಿಂದ ಭಲಾವಣಿಯೆಂಬ ಶಬ್ದವುಂಟಾಗಿರುತ್ತದೆ. ಇದೊಂದು ಜಾಮೀನ ಪತ್ರದಂತೆಯೇ ಇರುತ್ತದೆ. ಏಕಂದರೆ ಆ ಮನುಷ್ಯನಿಂದ ಅಡತದಾರನಿಗೆ ರಕಮು ಸಲ್ಲದಿದ್ದರೆ ಆ ಹಣವನ್ನು ತುಂಬಲಿಕ್ಕೆ ಸಾವುಕಾರನೇ (ಭಲಾವಣಿಪತ್ರ ಬರಕೊಟ್ಟವನೇ)ಬಾಧ್ಯನಾಗುವನು.

ಬಳಿಕ ಅಡತದಾರನು ಆ ಮನುಷ್ಯನಿಗೆ ಮಾಲನ್ನು ಕೊಟ್ಟರೆ, ಮಾಲಿ ಖಾತೆಗೆ ಜಮೆಮಾಡಿ, ಆ ಮನುಷ್ಯನ ಖಾತೆಗೆ ಖರ್ಚನ್ನು ಹಾಕುವನು. ರೋ ಹಣವನ್ನು ಕೊಟ್ಟರಂತು ಅವನ ಖಾತೆಗೆ ಖರ್ಚುಹಾಕುವದು ಸರಿಯೇ. ಬಡ್ಡಿಯ ಕರಾರವು ಅವರವರ ಸಮ್ಮತಿಯಂತೆ ಆಗುವದು.

ಭಲಾವಣಿ ಪತ್ರ ಹುಂಡಿಗಳಲ್ಲಿ ಸಾಮ್ಯ ವೈಷಮ್ಯ.

ಸಾಮ್ಯ-ಎರಡೂದರಿಂದ ಪರಸ್ಥಳದಲ್ಲಿ ಇಚ್ಛಿತ ಮನುಷ್ಯನಿಗೆ ಹಣ ಸಿಗುವದು.

ವೈಷಮ್ಯ-ಭಲಾವಣಿ ಪತ್ರ ತಕ್ಕೊಳ್ಳಬೇಕಾದರೆ ಸಾವುಕಾರನಿಗೆ ಹಣ ಕೊಡಬೇಕಾಗುವ ದಿಲ್ಲ. ಹುಂಡಿಯನ್ನು ತಕ್ಕೊಳ್ಳಬೇಕಾದರೆ ಸಾವುಕಾರನಿಗೆ ಹಣ ಕೊಡಬೇಕಾಗುವದು (೧)ಭಲಾ ವಣಿ ಪತ್ರದಿಂದ ಪರಸ್ಥಳದಲ್ಲಿ ಅಡತದಾರನಿಂದ ತನಗೆ ಅವಶ್ಯ ಬಿದ್ದ ಹಾಗೆ ಅನೇಕಸಾರೆ ಅದ ರೊಳಗಿನ ರಕಮಿನ ವರೆಗೆ ಹಣತೆಗೆದುಕೊಳ್ಳಲು ಬರುತ್ತದೆ. ಮತ್ತು ಮುಂಚೆ ಹಣಕೊಡದಿರು ವದರಿಂದ ಕಡಿಮೆ ಸಹ ತಕ್ಕೊಳ್ಳಬಹುದು. ಹುಂಡಿಯ ಹಣವನ್ನು ಒಮ್ಮೆಲೇ ಎಲ್ಲ ತಕ್ಕೊಳ್ ಬೇಕಾಗುವದು. (೩) ಭಲಾವಣಿಪತ್ರವು ತಮ್ಮ ಪೂರ್ತೆ ಸಿಫಾರಸಿನ ಪತ್ರವಿರುವದರಿಂದ ಅದನ್ನು ಮಾರಲಿಕ್ಕೆ ಬರುವದಿಲ್ಲ. ಶಹಜೋಗ ಹುಂಡಿಯು ಮಾರಲು ಬರುತ್ತದೆ. (೪) ಭಲಾವಣಿ ಪತ್ರವು ಋಣಾನು ಬಂಧದ ಮೂಲಕ ಜಾಮೀನ ಪತ್ರದಂತೆ ಕೊಟ್ಟಿರುವದರಿಂದ ಹಾಸಲು ಬೀಳು ವದಿಲ್ಲ. ಹುಂಡಿಗೆ ಹುಂಡಾವಳ ಕೊಡಬೇಕಾಗತ್ತದೆ.

ಪ್ರಾಮಿಸರಿನೋಟು—ಕೆಲವೊಬ್ಬನು ಸಾವುಕಾರರಿಗೆ ನೀವು ಇಲ್ಲವೆ ನಿಮ್ಮ ಅಪ್ಪಣೆಯ ಲೇಖವನ್ನು ತಂದವನು ಇದರಲ್ಲಿ ಬರೆದ ರಕಮನ್ನು ಬೇಡಿದ ಕೂಡಲೆ ಅಥವಾ ಇದನ್ನು ಬರೆದಂದಿನಿಂದ ಇಂತಿಸ್ಟು ಅವಧಿಗೆ ಕೊಡುತ್ತೇ ನೆಂದು ಬರಕೊಟ್ಟ ಪತ್ರಕ್ಕೆ ಪ್ರಾಮಿಸರಿನೋಟು, ವಚನದ ಚೀಟಿ, ಇಲ್ಲವೆ ಘಟ್ಟಿಹುಂಡಿ ಎನ್ನುವರು. ಇದರ ಮೇಲೆ ಸಾಕ್ಷಿ ಹಾಕಿಸುವ ಕಾರಣವಿಲ್ಲ. ಇದನ್ನು ನೋಂದಿಸುವ ಕಾರಣವಿಲ್ಲ. ಏಕೆಂದರೆ ಬರೆದು ಕೊಡುವವನು ವಚನಿ ಕನೆಂದು ತಿಳಿಯಲ್ಪಡುತ್ತದೆ. ಪ್ರಾಮಿಸರಿನೋಟಿನ ಅರ್ಥವೇ ವಚನದ ಚೀಟಿ ಯೆಂದಾಗುತ್ತದೆ. ಪ್ರಾಮಿಸ್ ಇದು ಇಂಗ್ಲಿಷ ಶಬ್ದವಿದ್ದು ಇದರ ಅರ್ಥ ವಚನ ವೆಂದಾಗುತ್ತದೆ.

ಪ್ರಾಮಿಸರಿನೋಟುಗಳನ್ನು ಮಾರಲಿಕ್ಕೆ ಬರುತ್ತದೆ. ಪ್ರಾಮಿಸರಿನೋಟಿನ ಲ್ಲಾದರೂ ಶಹಜೋಗ,ನಾಮಜೋಗ,ಧನಿಜೋಗ ಎಂದು ಮೂರು ಪ್ರಕಾರಗಳದ್ದು

ಮುದ್ದತಿನ ಸಂಬಂಧವಾಗಿ ದರ್ಶನಿ, ಬಂದಿಮುದ್ದತಿ ಎಂದು ಎರಡು ಭೇದಗಳಿರುತ್ತವೆ. ದರ್ಶನಿಪ್ರಾಮಿಸರಿನೋಟು ದರ್ಶನಿಶಹಜೋಗ ಹುಂಡಿಯನ್ನು ಹೋಲುವದು. ಆದರೆ ಪ್ರಾಮಿಸರಿನೋಟಿನಲ್ಲಿ ಬಡ್ಡಿಯ ಸಂಬಂಧವಿರುತ್ತದೆ. ಹುಂಡಿಯಲ್ಲಿ ಬಡ್ಡಿಯ ಸಂಬಂಧವಿರುವದಿಲ್ಲ. ಪ್ರಾಮಿಸರಿನೋಟಿನ ನಮೂನೆಯು ೩ನೆಯ ಭಾಗದ ೩ನೆಯ ಪ್ರಕರಣದಲ್ಲಿ ಬರೆಯಲ್ಪಟ್ಟದೆ.

ಪ್ರಾಚೀನಕಾಲದಲ್ಲಿ ನಮ್ಮ ಆರ್ಯಜನರಲ್ಲಿ ಚರ್ಮದ್ದೊಂದು ಉದ್ದವಾದ ಪ್ರಾಮಿಸರಿನೋಟು ಇತ್ತು; ಅದಕ್ಕೆ ಟೇಕೀಟು ಮುಂತಾದ ಏನೊಂದು ತೊಂದರೆಯಿದ್ದಿಲ್ಲ; ಅದು ಯಾವದು? ಅದು ಅವರ ನಾಲಿಗೆಯು! ಅವರು ತಮ್ಮ ನಾಲಿಗೆಯಿಂದ ವಚನಕೊಟ್ಟರೆ ಅವಕ್ಕೆ ಎಂದೂ ಭಂಗಬರುತ್ತಿದ್ದಿಲ್ಲ. ಆಹಾ! ಎಂಥ ಪ್ರಾಮಾಣಿಕತನದ ಪ್ರಾಮಿಸರಿನೋಟೋ, ಅದು!

ಕರನ್ಸೀ (ಬಳಿಕೆಯಲ್ಲಿರುವ) ನೋಟುಗಳು—ಇವು ಶಹಜೋಗ ದರ್ಶನಿ ಹುಂಡಿಗಳಂತೆಯೇ ಇರುತ್ತವೆ ಶಹಜೋಗ ಹುಂಡಿಗೆ ಸ್ಥಳಸ್ಥಭಾವಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಅದನ್ನು ಮತ್ತೊಬ್ಬರಿಗೆ ಕೊಡಬೇಕಾದರೆ ಆ ಬಗ್ಗೆ ಬೇಚಾ ಹಾಕಬೇಕಾಗುತ್ತದೆ. ಕರನ್ಸಿನೋಟುಗಳಿಗೆ ಈ ವಿಧದ ಯಾವ ತೊಂದರೆಯು ಇಲ್ಲ! ಅವು ಒಂದು ವಿಧದ ನಾಣ್ಯಗಳೇ ಆಗಿರುತ್ತವೆ. ಬೇಕಾದಷ್ಟು ದೊಡ್ಡ ಬೆಲೆಯ ನೋಟುಗಳನ್ನು ಕಿಸೆಯಲ್ಲಿಟ್ಟುಕೊಂಡು ಮುಂದಿಗೆ ರಕಮು ಉಂಟೆಂದು ತಿಳಿಯಗೊಡದೆ ಚಕ್ಕಂದದಿಂದ ಪ್ರವಾಸ ಮಾಡಬಹುದು! ಆದರೆ ಕರನ್ಸೀನೋಟುಗಳು ಹೋದರೆ ಮಾತ್ರ ಹಾನಿಯಾಗುವದು. ಶಹಜೋಗ ದರ್ಶನಿ ಹುಂಡಿಯು ಹೋದರೆ ಆದರ ಬದಲು ಪೇಠ ಸಿಗುವದುಂಟು.

ನೋಟುಗಳನ್ನು ಕೊಟ್ಟು ರೂಪಾಯಿ ತಕ್ಕೊಂಡಾಗ ಕಮಿಶನ ಕೊಟ್ಟರೆ ಆ ಹಣವನ್ನು ಕಮಿಶನ ಖಾತೆಗೆ ಖರ್ಚುಹಾಕಬೇಕು. ವರ್ತಾವಳಿ ಸಿಕ್ಕರೆ ಆ ಹಣ ವರ್ತಾವಳಿ ಖಾತೆಗೆ ಜಮೆಹಚ್ಚಬೇಕು.

———

೨ನೆಯ ಭಾಗ.

೧ನೆಯ ಪ್ರಕರಣ.

ಮೇಳು ನೋಡುವಿಕೆ.

ಭಾಗಗಳು—೧ ತಪ್ಪು ತಿಳಿಯುವ ಸಾಧನ, ೨ ಕೀರ್ದಿಯ ತಿಂಗಳ ತೇರೀಜು, ೩ ಖತಾವಣಿಯ ತಿಂಗಳ ತೇರೀಜು.

(೧) ಈ ವರೆಗೆ ರೋಜಕೀರ್ದಿ ಖತಾವಣಿಗಳ ಮೂಲತತ್ತ್ವಗಳನ್ನೂ ಬಹುತರ ಎಲ್ಲ ವ್ಯವಹಾರಗಳ ಜಮಾಖರ್ಚು ಮಾಡುವ ರೀತಿಯನ್ನೂ ವಿವರಿಸಿದೆವು. ಈ ಭಾಗದಲ್ಲಿ ವ್ಯವಹಾರದ ಪರಿಣಾಮವೇನಾಯಿತೆಂಬದನ್ನು ಹೇಗೆ ತಿಳಿದುಕೊಳ್ಳಬೇಕೆಂಬ ಸಂಗತಿಯು ವಿವರಿಸಲ್ಪಡುವದು. ಮೊದಲು ನಮ್ಮ ಲೆಕ್ಕವು ಸರಿಯಾಗಿರುತ್ತದೋ ಇಲ್ಲವೋ ಎಂಬದನ್ನು ನೋಡುವದು ಅವಶ್ಯವಾಗಿರುತ್ತದೆ; ಈ ಮೇಳಿಗೆ ತಾಳೆಯನ್ನುವರು. ಕೀರ್ದಿಯೊಳಗಿನ ಲೆಕ್ಕಕ್ಕೂ ಖತಾವಣಿಯ ಲೆಕ್ಕಕ್ಕೂ ತಾಳೆ ಹೊಂದಿದರೆ ಮಾತ್ರ ನಮ್ಮ ಲೆಕ್ಕ ಸರಿಯಾಗಿರುತ್ತದೆಂದು ತಿಳಿದುಕೊಳ್ಳಬೇಕು. ಕೀರ್ದಿಯೊಳಗಿನ ಯಾವದೊಂದು ರಕಮು ಖತಾವಣಿಯಲ್ಲಿ ಜಾರವಾಗದೆ ಉಳಿದಿದ್ದರೆ, ಅಥವಾ ತಪ್ಪಿ ಬಿದ್ದಿದ್ದರೆ ಅವೆರಡುಗಳ ಜೇರೀಜು ಎಂದೂ ಕೂಡಲಾರವು; ಬೇರೀಜು ಕೂಡದಿದ್ದರೆ ಎಲ್ಲಿ ತಪ್ಪಿರುತ್ತದೆಂಬದನ್ನು ಹುಡುಕಿ ತಿದ್ದಿಕೊಳ್ಳಬೇಕು. ಆದುದರಿಂದ ಕೀರ್ದಿಯ ಲೆಕ್ಕವನ್ನೂ ಖತಾವಣಿಯ ಲೆಕ್ಕವನ್ನೂ ಬೇರೀಜು ಮಾಡಿ ತಾಳೆ ನೋಡುತ್ತಿರುವದು ತಪ್ಪನ್ನು ತಿಳಿಸಿಕೊಡುವ ಸಾಧನವಾಗಿರುತ್ತದೆ. ಈ ಬಗ್ಗೆ ಕೀರ್ದಿಯ ಮೇಲಿಂದ ತಿಂಗಳ ಅಥವಾ ವರ್ಷದ ಒಟ್ಟು ಲೆಕ್ಕವನ್ನು ಖಾತೆಗೆ ತಾಳೆನೋಡುವದಕ್ಕೆ ಬರೆದ ಕಾಗದಕ್ಕೆ **ತಾಳೆಬಂದ** ಅನ್ನುವರು. ಖಾತೆಗಳ ಬಾಕಿಗಳನ್ನು **ಕೀರ್ದಿಗೆ** ಹೊಂದಿಸಿ ತಾಳೆ ನೋಡುವದಕ್ಕೆ **ಬಾಕಿಗಳ ತಾಳೆ**ಯೆನ್ನುವರು. ಪ್ರತಿ ತಿಂಗಳ ಕೊನೆಯಲ್ಲಿಯೂ ವರ್ಷದ ಕೊನೆಯಲ್ಲಿಯೂ ಬೇರೀಜು ಮಾಡುವ ಸಾಂಪ್ರದಾಯವುಂಟು. ಕೆಲವು ಬೇರೀಜುಗಳ ಬೇರೀಜಿಗೆ **ತೇರೀಜು** ಅನ್ನುವರು. ತಿಂಗಳ ವರ್ಷಗಳ ಲೆಕ್ಕ ಮಾಡುವಾಗ ನಿತ್ಯದ ಇಲ್ಲವೆ ತಿಂಗಳ ಬೇರೀಜುಗಳ ಬೇರೀಜನ್ನೇ ಮಾಡಬೇಕಾಗುತ್ತದೆ. ಮೊದಲು ತಿಂಗಳ ತೇರೀಜಿನ ವಿಷಯಕ್ಕೆ ಬರೆಯುವಾ.

೨ ಕೀರ್ದಿಯ ತಿಂಗಳ ತೇರೀಜು.

(೧)ಮೊದಲು ಬೀತ ಒಳಿಯಲ್ಲಿ ತಿಂಗಳ ಹೆಸರನ್ನು ದೊಡ್ಡಕ್ಷರಗಳಿಂದ ಬರೆಯುವರು, (೨) ಖರ್ಚಿನ (ಬಲ) ಭಾಗದಲ್ಲಿ ಮೊದಲಿನ ಎರಡು ರಕಾನೆಗಳಲ್ಲಿ

ಜಮೆ———ರೂ ಎಂತಲೂ, ಕಡೆಯ ಎರಡು ರಕಾನೆಗಳಲ್ಲಿ ಖರ್ಚು———ರೂ ಎಂತಲೂ ಬರೆಯಬೇಕು. (೩) ಅದರ ಕೆಳಗೆ ಜಮೆಯ (ಎಡ) ಭಾಗದಲ್ಲಿ ಹೋದ ತಿಂಗಳ ಸಿಲಕು ಎಂದು ಬರೆದು ಆದರ ಮುಂದೆ ಜಮೆ———ರೂ. ಎಂದು ಬರೆದದ್ದರ ಕೆಳಗೆ ಆ ತಿಂಗಳ ಸಿಲಕನ್ನೂ, ಖ———ರೂ ಎಂದು ಬರೆದದ್ದರ ಕೆಳಗೆ ಶೂನ್ಯವನ್ನೂ ಹಾಕಬೇಕು. (೪) ಎಡಭಾಗದಲ್ಲಿ ಒಂದರ ಕೆಳಗೊಂದು ಕ್ರಮದಿಂದ ಮಿತಿಗಳನ್ನೂ ಬಲಭಾಗದಲ್ಲಿ ಆ ಮಿತಿಗಳೆದುರಿಗೆ ಆ ಮಿತಿಗಳ ಜಮೆ ಖರ್ಚುಗಳ ಅಂಕೆಗಳನ್ನೂ ಬರೆಯಬೇಕು. (೫) ಅವುಗಳ ಕೆಳಗೆ ತಕ್ಕಷ್ಟು ಅಡ್ಡ ಗೆರೆಗಳನ್ನು ಹೊಡೆದು ಅವುಗಳ ಬೇರೀಜನ್ನು ಹಾಕಬೇಕು. (೬) ಅವುಗಳ ಕೆಳಗೆ ಎಡಭಾಗದಲ್ಲಿ ಮುಂದಿನ ತಿಂಗಳ ಸಿಲಕು ಎಂದು ಬರೆದು ಜಮೆಯ ಬೇರೀಜಿನ ಕೆಳಗೆ ಶೂನ್ಯವನ್ನೂ ಖರ್ಚಿನ ಬೇರೀಜಿನ ಕೆಳಗೆ ಆ ತಿಂಗಳ ಕೊನೆಯ ಸಿಲಕನ್ನೂ ಬರೆಯಬೇಕು. (೭) ಹಿಂದಿನ ತಿಂಗಳ ಸಿಲಕು ಜಮೆಯ ಬೇರೀಜುಗಳ ಒಟ್ಟನ್ನೂ, ಖರ್ಚಿನ ಬೇರೀಜು ಆ ತಿಂಗಳ ಕೊನೆಯ ಸಿಲಕಿನ ಒಟ್ಟನ್ನೂ ಮಾಡಬೇಕು. (೮) ಎರಡೂ ಒಟ್ಟುಗಳ ತೇರೀಜು ಸರಿಯಾಗುವವು; ಸರಿಯಾಗದಿದ್ದರೆ ಎಲ್ಲಿಯೋ ತಪ್ಪಿರುವದೆಂದು ತಿಳಿದು ತಪ್ಪನ್ನು ತಿದ್ದಿಕೊಳ್ಳಬೇಕು.

ತಿಂಗಳ ತೇರೀಜಿನಿಂದ ಒಟ್ಟು ತಿಂಗಳ ಜಮೆಯೆಷ್ಟು? ಖರ್ಚೆಷ್ಟು? ಎಂಬದು ತಿಳಿಯುವದು.

೩ ಖತಾವಣಿಯ ತಿಂಗಳ ತೆರೀಜು.

ಯಾವ ತಿಂಗಳ ತೇರೀಜು ಮಾಡತಕ್ಕದ್ದಿರುವದೋ, ಆ ತಿಂಗಳಲ್ಲಿ ಪ್ರತಿಯೊಂದು ಖಾತೆಯ ಜಮೆಯ ಮತ್ತು ಖರ್ಚಿನ ಬೇರೀಜುಗಳನ್ನು(ಅವಲ ಅಥವಾ ಯ ರಕಮು ಬಿಟ್ಟು)ಮಾಡಬೇಕು. ರಕಮು ಒಂದೇ ಇದ್ದರೆ ಆದರ ಕೆಳಗೆ೦ಲಂಗ ಎಂಬದನ್ನು ಬೇರೀಜು ಮಾಡುವ ಪೂರ್ವದಲ್ಲಿ ಹಾಕಬೇಕು. (೨) ಬಳಿಕ ಬೀತವಳಿಯಲ್ಲಿ ತಿಂಗಳ ಹೆಸರನ್ನು ದೊಡ್ಡ ಅಕ್ಷರಗಳಿಂದ ಬರೆಯಬೇಕು. (೩)ಕಾಗದದ ಬಲಭಾಗದ ಅರ್ಧಭಾಗದಲ್ಲಿ ಜಮೆ——ರೂ. ಎಂತಲೂ ಉಳಿದ ಅರ್ಧಭಾಗದಲ್ಲಿ ಖರ್ಚು——ರೂ, ಎಂತಲೂ ಬರೆಯುತಕ್ಕದ್ದು. (೪) ಆದರ ಕೆಳಗೆ ಎಡಭಾಗದಲ್ಲಿ ಅನುಕ್ರಮವಾಗಿ ಒಂದರ ಕೆಳಗೊಂದು ಎಲ್ಲ ಖಾತೆಗಳ ಹೆಸರುಗಳನ್ನೂ ಅವುಗಳೆದುರಿಗೆ ಆಯಾ ಖಾತೆಗಳಿಗಾದ ಜಮೆ ಮತ್ತು ಖರ್ಚಿನ ಬೇರೀಜುಗಳನ್ನು ಬರೆಯಬೇಕು. (೫) ಜಮೆ ಮತ್ತು ಖರ್ಚಿನ ಬೇರೀಜುಗಳಿಗೆ ತಕ್ಕಷ್ಟು ಅಡ್ಡಗೆರೆ ಹೊಡೆದು ಅವುಗಳ ಬೇರೀಜನ್ನು ಹಾಕಬೇಕು.

ಈ ಜಮೆಯು ಮತ್ತು ಖರ್ಚಿನ ಬೇರೀಜು ಕೀರ್ದಿಯೊಳಗಿನ (ಸಿಲಕು ಬಿಟ್ಟು) ಜಮೆಯು ಮತ್ತು ಖರ್ಚಿನ ಬೇರೀಜುಗಳಿಗೆ ಸರಿಯಾದವೆಂದರೆ ಕೀರ್ದಿಯೊಳಗಿನ ರಕಮುಗಳೆಲ್ಲ ಖತಾವಣಿಯಲ್ಲಿ ಚಾರವಾಗಿರುತ್ತವೆಂದು ತಿಳಿಯಬೇಕು. ಸರಿಯಾಗ ದಿದ್ದರೆ ಎಲ್ಲ ಖಾತೆಗಳು ಚಾರವಾಗಿಲ್ಲ; ಇಲ್ಲವೆ ಚಾರಮಾಡಿಕೊಳ್ಳಲಿಕ್ಕೆ ತಪ್ಪಾಗಿರು ವದು ಎಂದು ತಿಳಿದು ತಪ್ಪನ್ನು ಹುಡುಕಿ ತಿದ್ದಿಕೊಳ್ಳಬೇಕು. ಈ ಖತಾವಣಿಯ ತೇರೀಜನ್ನು ಕೆಲವರು ಕೀರ್ದಿಯಲ್ಲಿ ಬರೆಯದೆ ಬೇರೊಂದು ಕಾಗದದಲ್ಲಿ ಬರೆದು ಕೀರ್ದಿ ಖತಾವಣಿಗಳ ಲೆಕ್ಕ ಮೇಳುಗೂಡಿರುವದೋ ಹೇಗೆಂಬದನ್ನು ಮನವರಿಕೆ ಮಾಡಿಕೊಳ್ಳುವರು.

---

೨ ನೆಯ ಪ್ರಕರಣ.

ವರ್ಷದ ಕೊನೆ.

ಭಾಗಗಳು—೧ ಬಡ್ಡಿಯು ಹಣ ಸಿಲಕುಮಾಲು ಮುಂತಾದವುಗಳ ವ್ಯವಸ್ಥೆ. ೨ ಕೀರ್ದಿಯ ಹನ್ನೆರಡು ತಿಂಗಳ ತೇರೀಜು. ೩ ಖಾತೆಯ ಹನ್ನೆರಡು ತಿಂಗಳ ತೇರೀಜು.

೧ ವರ್ಷದ ಕೊನೆಯ ಲೆಕ್ಕವು ಬಲು ಮಹತ್ವದ್ದು; ಏಕೆಂದರೆ ಇದರಿಂದ ವರ್ಷಾನುವರ್ಷ ಮಾಡಿದ ವ್ಯವಹಾರದ ಪರಿಣಾಮವು ಗೊತ್ತಾಗುವದು. ವ್ಯವಹಾರ ದಿಂದ ನಾವು ಎಷ್ಟು ಗಳಿಸಿದೆವು ? ಮೊದಲಿಗಿಂತ ನಮ್ಮ ಬಂಡವಲವು ಹೆಚ್ಚಾಯಿತೋ ಕಳುಕೊಂಡೆವೋ? ಇಲ್ಲವೆ ಗುಡ್ಡಕ್ಕೆ ಕಲ್ಲು ಹೊತ್ತಂತಾಯಿತೋ? ಎಂಬ ಸಂಗತಿ ಗಳು ತಿಳಿದು ಬರುವವು ವರ್ಷದ ಕೊನೆಗೆ ಅಂದರೆ ಆಶ್ವಿನ ವದ್ಯ ೩೦ ಅಮಾವಾಸ್ಯೆಗೆ ಇಲ್ಲವೆ ತಮ್ಮ ವರ್ಷ ಪೂರ್ಣವಾಗುವಂಥ ಕಡೆಯ ದಿವಸಕ್ಕೆ ಎಷ್ಟೋ ಜನರ ಕಡೆಯಿಂದ ಬಡ್ಡಿ ಬರತಕ್ಕದ್ದು ಇರಬಹುದು. ಎಷ್ಟೋ ಮಾಲು ಮಾರಾಟವಾಗದೆ ಉಳಿಯಬಹುದು. ತಸಲಮಾತಿಯ ಹಣದ ಲೆಕ್ಕ ಗೊತ್ತಾಗದೆ ಇರಬಹುದು. ರವಾ ನಿಗೆಯ ಪಾವತಿ ಚಾರದೆ ನಿಲ್ಲಬಹುದು. ಹೀಗೆ ಆನೇಕ ಸಂಗತಿಗಳ ನಿಷ್ಕರ್ಷೆ ತಿಳಿ ಯದೆ ಇರಬಹುದು. ಇವುಗಳ ಲೆಕ್ಕವನ್ನೆಲ್ಲ ಮಾಡಿದಾಗ್ಗೆ ತಮ್ಮ ವ್ಯವಹಾರದ ಪರಿಣಾಮವು ಗೊತ್ತಾಗುವದು. ಆದುದರಿಂದ ಇವುಗಳ ಸಂಬಂಧದ ಲೆಕ್ಕ ಹೇಗೆ ಮಾಡಬೇಕೆಂಬ ಬಗ್ಗೆ ಬರೆಯುವಾ.

ಜನರ ಕಡೆಯಿಂದ ಬರತಕ್ಕ ರಕಮುಗಳ ಬಡಿಯ ಲೆಕ್ಕಮಾಡಿ, ಆ ರಕ ಮನ್ನು ಅವರವರ ಖಾತೆಗೆ ಖರ್ಚುಹಾಕಿ ಒಟ್ಟು ರಕಮನ್ನು ಬಡ್ಡಿಯ ಖಾತೆಗೆ

ಜಮೆ ಹಚ್ಚಿಕೊಳ್ಳಬೇಕು. ಮುಂದಿಗೆ ಬಡ್ಡಿ ಕೊಡತಕ್ಕದಿದ್ದರೆ ಆಯಾ ರಕಮು ಗಳನ್ನು ಅವರವರ ಖಾತೆಗೆ ಜಮೆ ಮಾಡಿ ಒಟ್ಟು ರಕಮನ್ನು ಬಡ್ಡಿಯ ಖಾತೆಗೆ ಖರ್ಚುಹಾಕಬೇಕು.

ವರ್ಷದ ಕಡೆಯ ದಿವಸ ಮಾಲು ಸಿಲಕು ಉಳಿದಿದ್ದರೆ ಆ ಎಲ್ಲ ಮಾಲುಗಳ ತೂಕ ಮಾಪುಗಳನ್ನು ಮಾಡಿ ಆ ದಿವಸದ ಪೇಟೆಯ ಧಾರಣಿಯಂತೆ ಬೇರೆ ಬೇರೆ ಮಾಲುಗಳ ಬೆಲೆ ಮಾಡಿ ಆಯಾ ಮಾಲುಗಳ ಖಾತೆಗೆ ಅವುಗಳ ಹಣವನ್ನು ಜಮೆ ಮಾಡಬೇಕು. ಹಣಬಾರದೆ ಸುಮ್ಮನೆ ಜಮೆ ಮಾಡಿದರೆ ಸಿಲಕಿನಲ್ಲಿ ಕಡಿಮೆ ಬರುವ ದಲ್ಲ? ಇದರ ವ್ಯವಸ್ಥೆ ಹೇಗೆ? ಖರ್ಚಿನ ಕಡೆಗೆ ಬರೆಯುವ ಕೊನೆಯ ಸಿಲಕಿನಲ್ಲಿ ರೋಖ ಇಂತಿಷ್ಟು, ಮಾಲು ಇಂತಿಷ್ಟು, ಎಂಬದರ ವಿವರ ತೋರಿಸಿದರಾಯಿತು. ಮುಂದಿನ ವರ್ಷದ ಆರಂಭಕ್ಕೆ ಹೇಗೋ ಸಿಲಕುಮಾಲಿನ ಬೆಲೆಯನ್ನು ಆಯಾ ಜೀನಸವಾರ ಖಾತೆಗಳಿಗೆ ಖರ್ಚು ಹಾಕಲೇಬೇಕಾಗುವದು. ಆಗ ಪುನಃ ರೋಖ ಸಿಲಕು ಇದ್ದಷ್ಟೇ ಉಳಿಯುವದು.

ತಸಲಮಾತ ರವಾನಿಗೆ ಮುಂತಾದ ಖಾತೆಗಳ ರಕಮುಗಳ ನಿಷ್ಕರ್ಷೆಯಾಗ ದಿದ್ದರೆ ಅವುಗಳನ್ನಾದರೂ ಆಯಾ ಖಾತೆಗಳಿಗೆ ಜಮೆ ಮಾಡಿ ಕೊನೆಯ ಸಿಲಕಿನಲ್ಲಿ ಅವುಗಳ ವಿವರವನ್ನು ತೋರಿಸಬಹುದು. ರಕಮುಗಳನ್ನು ಸಿಲಕಿನಲ್ಲಿ ತೋರಿಸುವ ದೆಂದರೆ ಅಪ್ರತ್ಯಕ್ಷರೀತಿಯಿಂದ ಖುದ್ದ ಖಾತೆಗೆ ಒಯ್ದಂತೆಯೇ ಸರಿ. ಆದುದರಿಂದ ಕೆಲವರು ಈ ಖಾತೆಗಳಗೆ ಜಮೆ ಹಿಡಿದು ಆ ರಕಮುಗಳನ್ನು ಖುದ್ದಖಾತೆಗೆ ಖರ್ಚು ಹಾಕುವರು. ಹೇಗೆ ಮಾಡಿದರೂ ಒಂದೇ.

ಕ್ಯಾಶ ಸರ್ಟಿಫಿಕೀಟು ವಾರಬಾಂಡು ಹುಂಡಿಗಳು ವರ್ಷದ ಕೊನೆಗೆ ಸಿಲಕು ಉಳಿದರೆ ಅವುಗಳನ್ನು ಜೀನಸುಗಳೆಂದು ಅವುಗಳ ಬೆಲೆಯನ್ನು ಆಯಾ ಖಾತೆಗಳಿಗೆ ಜಮೆಮಾಡಿ ಕೊನೆಯ ಸಿಲಕಿನಲ್ಲಿ ಅವುಗಳ ವಿವರ ತೋರಿಸಬಹುದು. ಇಲ್ಲವೆ ಅವು ಗಳನ್ನು ಮುಂದೆ ಹೇಳಿದಂತೆ ಪಕ್ಕಾಖಾತೆಗಳೆಂದು ಆಖೇರ ಅಥಾವೆಯಲ್ಲಿ ಅವುಗಳ ಲೆಕ್ಕ ತೋರಿಸಬಹುದು. ಅವ್ವನ ಕೂಡ ಉಂಡರೂ ಸರಿಯೇ, ಅಪ್ಪನ ಕೂಡ ಉಂಡರೂ ಸರಿಯೇ. ವರ್ಷದ ಕೊನೆಯ ಸಿಲಕನ್ನು ಸಹ ಆಖೇರ ಅಥಾವೆಯಲ್ಲಿ ತೋರಿಸಬಹುದು.

೨ ಕೀರ್ದಿಯ ಹನ್ನೆರಡು ತಿಂಗಳ ತೇರೀಜು.

(೧) ಮೊದಲು ಶಿರೋಭಾಗದಲ್ಲಿ "ಹನ್ನೆರಡು ತಿಂಗಳ ತೇರೀಜು" ಎಂದು ಬರೆಯಬೇಕು. (೨) ಬಳಿಕ ವರ್ಷದ ಶಕೆಯನ್ನಾಗಲಿ ಇಸವಿಯನ್ನಾಗಲಿ ಬರೆಯಬೇಕು. (೩) ಬಲಭಾಗದ ಅರ್ಧಭಾಗದಲ್ಲಿ ಜಮೆ ——— ರೂ. ಎಂತಲೂ, ಉಳಿದ ಅರ್ಧ ಭಾಗದಲ್ಲಿ ಖರ್ಚು ——— ರೂ. ಎಂತಲೂ ಬರೆಯಬೇಕು. (೪) ಆದರ ಕೆಳಗೆ ಜಮೆಯ ಭಾಗದಲ್ಲಿ ಹೋದ ತಿಂಗಳ ಸಿಲಕು ಎಂದು ಬರೆದು ಆದರ ಮುಂದೆ ಬಲಭಾಗದಲ್ಲಿ ಜಮೆ ——— ರೂ. ಎಂದು ಬರೆದದ್ದರ ಕೆಳಗೆ ವರ್ಷಾ ರಂಭದ ಸಿಲಕನ್ನೂ ಖರ್ಚು ——— ರೂ. ಎಂದು ಬರೆದದ್ದರ ಕೆಳಗೆ ೦ ಶೂನ್ಯ

ವನ್ನೂ ಹಾಕಬೇಕು. (೫) ಬಳಿಕ ಎಡಭಾಗದಲ್ಲಿ ಕ್ರಮವಾಗಿ ಒಂದರ ಕೆಳಗೊಂದು ತಿಂಗಳುಗಳ ಹೆಸರುಗಳನ್ನು ಬರೆದು ಅವುಗಳೆದುರಿಗೆ ಆಯಾ ತಿಂಗಳುಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳನ್ನು ಹಾಕಬೇಕು. (೬) ಎಲ್ಲ ಜಮೆಯ ರಕಮುಗಳನ್ನೂ ಎಲ್ಲ ಖರ್ಚಿನ ರಕಮುಗಳನ್ನೂ ಬೇರೆ ಬೇರೆಯಾಗಿ ಬೇರೀಜು ಮಾಡಿ ಅವುಗಳ ಕೆಳಗೆ ತಕ್ಕಷ್ಟು ಅಡ್ಡಗೆರೆ ಹೊಡೆದು ಆ ಬೇರೀಜಿನ ಅಂಕೆಗಳನ್ನು ಬರೆಯಬೇಕು. ಈ ಅಂಕೆಗಳು ವರ್ಷದ ಒಟ್ಟು ಜಮೆಯನ್ನೂ ಒಟ್ಟು ಖರ್ಚನ್ನೂ ತೋರಿಸುವವು. (೭) ಅವುಗಳ ಕೆಳಗೆ ಜಮೆಯ ಭಾಗದಲ್ಲಿ ಮುಂದಿನ ವರ್ಷದ ಸಿಲಕು ಎಂದು ಬರೆದು, ಜಮೆಯ ಬೇರೀಜಿನ ಕೆಳಗೆ ಶೂನ್ಯವನ್ನೂ ಖರ್ಚಿನ ಬೇರೀಜಿನ ಕೆಳಗೆ ಆ ವರ್ಷದ ಕೊನೆಯ ಸಿಲಕನ್ನೂ ಬರೆಯಬೇಕು. (೮) ವರ್ಷದ ಒಟ್ಟು ಜಮೆ, ವರ್ಷದ ಆರಂಭದ ಸಿಲಕು ಇವುಗಳ ಬೇರೀಜನ್ನೂ, ವರ್ಷದ ಒಟ್ಟು ಖರ್ಚು, ವರ್ಷದ ಕೊನೆಯ ಸಿಲಕು ಇವುಗಳ ಬೇರೀಜನ್ನೂ ತಕ್ಕಷ್ಟು ಅಡ್ಡಗೆರೆಗಳನ್ನು ಹೊಡೆದು ಅವುಗಳ ಕೆಳಗೆ ಬರೆಯಬೇಕು. ಈ ಬೇರೀಜುಗಳು ಒಂದಕ್ಕೊಂದು ಸರಿಯಾಗಿರುವವು.

೩ ಖತಾವಣಿಯ ಹನ್ನೆರಡು ತಿಂಗಳುಗಳ ತೇರೀಜು.

(೧) ಮೊದಲು ಪ್ರತಿಯೊಂದು ಖಾತೆಯ ಹನ್ನೆರಡು ತಿಂಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳನ್ನು (ಅವಲ ಆಖಾವೆಯ ರಕಮು ಬಿಟ್ಟು) ಮಾಡಬೇಕು. (೨) ಬಳಿಕ ಬೀತ ಒಳಿಯಲ್ಲಿ ಹನ್ನೆರಡು ತಿಂಗಳ ತೇರೀಜು ಎಂದು ಬರೆಯಬೇಕು. (೩) ವರ್ಷದ ಶಕೆಯನ್ನಾಗಲಿ ಇಸವಿಯನ್ನಾಗಲಿ ಬರೆಯಬೇಕು. (೪) ಬಳಿಕ ಬಲ ಭಾಗದ ಅರ್ಧ ಭಾಗದಲ್ಲಿ ಜಮೆ ———— ರೂ. ಎಂತಲೂ ಉಳಿದ ಅರ್ಧ ಭಾಗದಲ್ಲಿ ಖರ್ಚು———— ರೂ. ಎಂತಲೂ ಬರೆಯಬೇಕು. (೫) ಅದರ ಕೆಳಗೆ ಎಡ ಭಾಗದಲ್ಲಿ ಅನುಕ್ರಮವಾಗಿ ಒಂದರ ಕೆಳಗೊಂದು ಎಲ್ಲ ಖಾತೆಗಳ ಹೆಸರುಗಳನ್ನೂ ಅವುಗಳೆದುರಿಗೆ ಆಯಾ ಖಾತೆಗಳಿಗಾದ ಜಮೆ ಮತ್ತು ಖರ್ಚಿನ ಬೇರೀಜುಗಳನ್ನೂ ಬರೆಯಬೇಕು. (೬) ಜಮೆ ಮತ್ತು ಖರ್ಚಿನ ಬೇರೀಜುಗಳ ಕೆಳಗೆ ತಕ್ಕಷ್ಟು ಅಡ್ಡಗೆರೆ ಹೊಡೆದು ಅವುಗಳ ಒಟ್ಟು ಬೇರೀಜನ್ನು ಹಾಕಬೇಕು.

ಈ ಬೇರೀಜುಗಳು ಕೀರ್ದಿಯ ಹನ್ನೆರಡು ತಿಂಗಳುಗಳ ಜಮೆಯ ಮತ್ತು ಖರ್ಚಿನ ಒಟ್ಟು ಬೇರೀಜುಗಳಿಗೆ ಸರಿಯಾಗುವವು. ತಿಂಗಳ ಮತ್ತು ವರ್ಷದ ಬೇರೀಜುಗಳ ಮಾದರಿಯನ್ನು ಮುಂದೆ ಬರೆದ ಕೀರ್ದಿಯ ನಮೂನೆಯಲ್ಲಿ ನೋಡಬೇಕು.

೩ ನೆಯ ಪ್ರಕರಣ.

ಖಾತೆಗಳ ವರ್ಗೀಕರಣದ ಬಗ್ಗೆ.

ಭಾಗಗಳು—೧ ಖಾತೆಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳನ್ನು ಸರಿಮಾಡಿಕೊಳ್ಳುವಿಕೆ, ೨ ಕಚ್ಚಾ ಖಾತೆಗಳು, ೩ ಪಕ್ಕಾ ಖಾತೆಗಳು, ೪ ಅಥಾವೆಯ ಪ್ರಕಾರಗಳು.

೧ ವರ್ಷದ ಕೊನೆಗೆ ಯಾವ ಯಾವ ಖಾತೆಗಳಿಂದ ಬರತಕ್ಕದ್ದೆಷ್ಟು? ಅವುಗಳಿಗೆ ಕೊಡತಕ್ಕದ್ದೆಷ್ಟು? ಇವುಗಳನ್ನು ತಿಳಿದುಕೊಳ್ಳಬೇಕಾದರೆ ಆಯಾ ಖಾತೆಗಳ ಜಮೆಯ ಮತ್ತು ಖರ್ಚಿನ ರಕಮುಗಳ ಬೇರೀಜನ್ನು ಮಾಡಬೇಕಾಗುವದಷ್ಟೇ; ಕೆಲವು ಖಾತೆಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳು ತಮ್ಮಷ್ಟಕ್ಕೆ ತಾವೇ ಒಂದಕ್ಕೊಂದು ಸರಿಯಾಗಬಹುದು. ಕೆಲವು ಖಾತೆಗಳ ಬೇರೀಜುಗಳು ಹೆಚ್ಚುಕಡಿಮೆಯಾಗಬಹುದು. ಯಾವ ಖಾತೆಯ ಜಮೆಯ ಬೇರೀಜು ಖರ್ಚಿನ ಬೇರೀಜಿಗಿಂತ ಹೆಚ್ಚಾಗಿರುವದೋ ಆ ಖಾತೆಗೆ ನಾವು ಕೊಡತಕ್ಕದ್ದಿರುತ್ತದೆಂತಲೂ, ಕಡಿಮೆಯಾಗಿರುವದೋ ಆ ಖಾತೆಯಿಂದ ನಮಗೆ ಬರತಕ್ಕದ್ದಿರುತ್ತದೆಂತಲೂ ತಿಳಿಯುವದು ಸ್ವಾಭಾವಿಕವು. ಬಳಿಕ ಜಮೆಯ ಬೇರೀಜು ಖರ್ಚಿನ ಬೇರೀಜುಗಳನ್ನು ಸರಿಮಾಡಿಕೊಳ್ಳುವದಕ್ಕಾಗಿ (ಖಾತೆಗಳನ್ನು ಬಾಯಿಗೂಡಿಸುವದಕ್ಕಾಗಿ) ಯಾವ ಖಾತೆಗಳಿಗೆ ಕೊಡತಕ್ಕದ್ದು ಹೊರಡುವದೋ ಆ ಖಾತೆಗಳಿಗೆ ಅಷ್ಟು ಕೊಟ್ಟೆತೆಂದು ಖರ್ಚನ್ನೂ, ಯಾವ ಖಾತೆಗಳಿಂದ ಬರತಕ್ಕದ್ದು ಹೊರಡುವದೋ ಆ ಖಾತೆಗಳಿಗೆ ಅಷ್ಟು ಬಂತೆಂದು ಜಮೆಯನ್ನೂ ಬರೆಯಬೇಕು. ಹೀಗೆ ಮಾಡುವದರಿಂದ ಆ ಖಾತೆಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳನ್ನು ಬಲುಮೆಯಿಂದ ಸರಿಮಾಡಿಕೊಂಡಹಾಗಾಯಿತು. ಹೀಗೆ ಮನದಲ್ಲಿ ಮುಂಡಿಗೆ ಮಾಡಿದರೆ ಗೋದಿಯ ಲೆಕ್ಕ ಕೊಡುವವರಾರು? ಸುಮ್ಮಸುಮ್ಮನೆ ಜಮಾಖರ್ಚು ಬರೆದುಕೊಂಡರೆ ಲೆಕ್ಕ ಮೇಳು ಗೂಡುವದು ಹೇಗೆ? ಮೇಳುಗೂಡಬೇಕಾದರೆ ಮತ್ತಾವ ಖಾತೆಗಾದರೂ ಇವುಗಳ ಲೆಕ್ಕ ಬರೆದುಕೊಳ್ಳಲೇ ಬೇಕಾಗುತ್ತದೆ. ಆದರಿಂದ ಇವುಗಳ ವಿರುದ್ಧ ಜಮಾಖರ್ಚನ್ನು ಖುದ್ದುಖಾತೆಗೆ ಇಲ್ಲವೆ ನಫಾತೋಟಾಖಾತೆಗೆ ಮಾಡತಕ್ಕದ್ದು.

೨ ಖರೇದಿವಿಕರಿ ಇಲ್ಲವೆ ಜೀನಸವಾರಖಾತೆ, ಕಮಿಶನ, ಲಾಭಹಾನಿ, ಧರ್ಮಾದಾಯ, ಮನೆಯ ಖರ್ಚುಖಾತೆ, ಪಗಾರಖಾತೆ, ಸಾದಿಲವಾರಖಾತೆ ಮುಂತಾದ ಜೀನಸವಾರ ಬಾಬವಾರ ಮುಂತಾದ ಖಾತೆಗಳ ಸಂಬಂಧವಾಗಿ ಬರತಕ್ಕ ಕೊಗತಕ್ಕ ಹಣವನ್ನು ಯಾರಿಗೆ ಕೇಳತಕ್ಕದ್ದು? ಅನೇನು ಇಸಮುಗಳೋ? ಅವುಡ

ಳನ್ನು ಕೇಳಲಿಕ್ಕೆ ಬರುವಂತಿಲ್ಲವಷ್ಟೇ; ಅದರಿಂದ ಅವುಗಳನ್ನು ಬಾಯಿಗೂಡಿಸಿ ಅವುಗಳಿಂದಾದ ಲಾಭ ಹಾನಿಗಳನ್ನು ತಮ್ಮಷ್ಟಕ್ಕೆ ತಾವೇ ಸೋಸಿ ನಫಾತೋಟಾ ಖಾತೆಗೆ ಇಲ್ಲವೆ ಖುದ್ದ ಖಾತೆಗೆ ಬರೆದುಕೊಳ್ಳಬೇಕಾಗುತ್ತದೆ. ಮುಂದೆ ಆ ಖಾತೆಗಳಿಗೆ ಸಂಬಂಧಿಸಿದ ಹಣ ನಮಗೆ ಬರುವಂತಿಲ್ಲ, ಕೊಡುವಂತಿಲ್ಲ; ಆದರಿಂದ ಅವುಗಳ ಲೆಕ್ಕವನ್ನು ಮುಂದೆ ಎಲ್ಲಿಯೂ ಬರೆಯುಲಿಕ್ಕೆ ಕಾರಣವಿಲ್ಲ. ಕೊಡಕೊಳ್ಳುವ ಕೆಲಸವು ಮುಂದೆ ಈ ಖಾತೆಗಳಿಂದ ನಡೆಯದ ಕಾರಣ ಇವು ಅಪೂರ್ಣವಾದವುಗಳೆಂದು ಇವುಗಳಿಗೆ **ಕಚ್ಚಾ ಖಾತೆಗಳೆನ್ನು**ವರು. ಕಚ್ಚಾ ಎಂದರೆ **ಅಪೂರ್ಣತ್ವ**.

೩ ಆದರೆ ಇಸಮುವಾರ (ಮನುಷ್ಯರ) ಖಾತೆಗಳಿಂದ ಬರತಕ್ಕದ್ದೂ ಕೊಡತಕ್ಕದ್ದೂ ಇದ್ದರೆ ಅವರಿಂದ ನಾವು ಇಸಕೊಳ್ಳಬೇಕಾಗುತ್ತದೆ; ಅವರಿಗೆ ತಿರುಗಿ ಕೊಡಬೇಕಾಗುತ್ತದೆ. ಅದರಿಂದ ಅವುಗಳನ್ನು ಬಾಯಿಗೂಡಿಸಿ ಖುದ್ದ ಖಾತೆಗೆ ಬರೆದುಕೊಂಡು ಬಿಟ್ಟರೆ ತೀರಲಿಲ್ಲ. ವರ್ಷ ಪೂರ್ಣವಾಯಿತೆಂದು ಲೆಕ್ಕವನ್ನು ಬಾಯಿಗೂಡಿಸುವದಕ್ಕಾಗಿ ಈ ತರದ ಒತ್ತಾಯದ ಜವಾಖರ್ಚು ಮಾಡಲ್ಪಟ್ಟಿತಷ್ಟೇ; ಮುಂದಿನ ವ್ಯವಸ್ಥೆಯೇನು? ಬರತಕ್ಕದ್ದನ್ನು ಮುಳುಗಿಸಿಕೊಳ್ಳಬೇಕೇ? ಕೊಡತಕ್ಕದ್ದನ್ನು ಕೊಡದೆ ಬಿಟ್ಟರೆ ಜನರು ಕೇಳದೆ ಬಿಡುವರೇ? ಆದರಿಂದ ಅವುಗಳ ಯೋಗ್ಯ ಜವಾಖರ್ಚನ್ನು ಮುಂದೆ ಬರೆಯುಲೇ ಬೇಕಾಗುತ್ತದಲ್ಲವೇ? ಕೊಡಕೊಳ್ಳುವ ಕೆಲಸವು ಮುಂದೆ ಈ ಖಾತೆಗಳಿಂದ ನಡೆಯುವ ಕಾರಣ ಇವು ಪೂರ್ಣವಾದವುಗಳೆಂದು ಇವುಗಳಿಗೆ ಪಕ್ಕಾಖಾತೆಗಳೆಂದೆನ್ನುವರು. ಮನುಷ್ಯರ ಖಾತೆಗಳಂತೆ ಠೇವ, ತಸಲಮಾತ, ಅಮಾನತ, ರವಾನಿಗೆ, ಹುಂಡಿ ಕ್ಯಾಶ ಸರ್ಟಿಫಿಕೇಟು, ವಾರಬಾಂಡು ಈ ಖಾತೆಗಳು ವರ್ಷದ ಕೊನೆಗೆ ಮುಗಿಯದಿದ್ದರೆ ಮುಂದೆ ಇವುಗಳನ್ನು ಬರೆದುಕೊಳ್ಳಲೇ ಬೇಕಾಗುತ್ತದೆ, ಆದುದರಿಂದ ಇವಾದರೂ ಪಕ್ಕಾಖಾತೆಗಳೇ; ಖುದ್ದಖಾತೆಯುಂತೂ ಪಕ್ಕಾಖಾತೆಯೇ ಸೈ. ಪಕ್ಕಾ ಎಂದರೆ **ಪೂರ್ಣತ್ವ**.

ಸಾರಾಂಶವೇನಂದರೆ, ಖಾತೆಗಳಲ್ಲಿ ಕಚ್ಚಾಖಾತೆ, ಪಕ್ಕಾಖಾತೆ ಎಂದು ಎರಡು ವರ್ಗಗಳನ್ನು ಮಾಡಬಹುದು. ಯಾವ ಖಾತೆಗಳಿಗೆ ವರ್ಷದ ಕೊನೆಯು ಕೊಡಕೊಳ್ಳುವದನ್ನು ಮುಂದೆ ಕೇಳಲಿಕ್ಕೆ ಬರುವಂತಿಲ್ಲವೋ ಆ ಖಾತೆಗಳಿಗೆ **ಕಚ್ಚಾ ಖಾತೆಗಳೆಂ**ತಲೂ, ಯಾವ ಖಾತೆಗಳಿಂದ ವರ್ಷದ ಕೊನೆಗೆ ಕೊಡಕೊಳ್ಳುವದು ಹೊರಟು, ಮುಂದೆ ಅವುಗಳನ್ನು ಕೇಳಬೇಕಾಗಿ ಬರೆದುಕೊಳ್ಳುವದುಂಟೋ ಅವುಗಳಿಗೆ **ಪಕ್ಕಾ ಖಾತೆಗಳೆಂ**ತಲೂ ಅನ್ನುತ್ತಾರೆ. ಪಕ್ಕಾಖಾತೆಗಳಿಗೆ ಅಥಾವೆಯ ಖಾತೆಗಳೆಂದೆನ್ನುವರು. ಅಥಾವೆಯೆಂದರೆ ಕೊಡಕೊಳ್ಳುವದು. ಅಥಾವೆಯಲ್ಲಿ **ಆಖೇರ ಅಥಾವೆ, ಅವಲ ಅಥಾವೆ** ಎಂದು ಎರಡು ಭೇದಗಳುಂಟು.

೪ನೆಯ ಪ್ರಕರಣ.

ಅಂತ್ಯದ ಲೆಕ್ಕ (ತೋಂಡಮಿಳವಣೀ ಅಥಾವೆಗಳು.)

ಭಾಗಗಳು—೧ ತೋಂಡಮಿಳವಣಿ ಅಥಾವೆಗಳಂದರೇನು ? ೨ ವ್ಯಾಪಾರೀ ಖಾತೆಗಳ ಬಾಯಿಗೂಡುವಿಕೆ, ೩ ಬಾಬವಾರ ಖಾತೆಗಳ ಬಾಯಿಗೂಡುವಿಕೆ, ೪ ಪಕ್ಕಾ ಖಾತೆಗಳ ಬಾಯಿಗೂಡುವಿಕೆ, ೫ ಖುದ್ದ ಖಾತೆಯ ಬಾಯಿಗೂಡುವಿಕೆ, ೬ ತೋಂಡಮಿಳವಣಿ ಜಮಾಖರ್ಚಿನ ಕ್ರಮ, ೭ ಅಖೇರ ಅಥಾವೆಯ ಕ್ರಮ, ೮ ಮುಂದಿನ ವರ್ಷದ ಅವಲ ಅಥಾವೆ, ೯ ಅಖೇರ ಅವಲ ಅಥಾವೆಗಳಲ್ಲಿಯ ಭೇದ, ೧೦ ಅಥಾವೆ ಬರೆಯದೆ ಕೊಡತಕ್ಕ ಬರತಕ್ಕ ಬಾಕಿಗಳನ್ನು ತಿಳಿದುಕೊಳ್ಳುವ ಬಗೆ.

೧ ಕಚ್ಚಾ ಖಾತೆಗಳ ಬಾಕಿಗಳನ್ನು ಬಾಯಿಗೂಡಿಸುವ ಲೆಕ್ಕಕ್ಕೆ ತೋಂಡಮಿಳವಣಿಯನ್ನುವರು. ಪಕ್ಕಾಖಾತೆಗಳ ಬಾಕಿಗಳನ್ನು ಬಾಯಿಗೂಡಿಸುವ ಲೆಕ್ಕಕ್ಕೆ ಅಥಾವೆಯೆನ್ನುವರು; ಕಚ್ಚಾ ಮತ್ತು ಪಕ್ಕಾ ಖಾತೆಗಳ ಜಮೆಯ ಕಡೆಯ ಮತ್ತು ಖರ್ಚಿನ ಕಡೆಯ ಬೇರೀಜುಗಳಲ್ಲಿ ಯಾವದು, ಯಾವದಕ್ಕಿಂತ, ಎಷ್ಟರಿಂದ, ಕಡಿಮೆಯಿರುತ್ತದೋ, ಅಷ್ಟನ್ನು, ಅಷ್ಟರಿಂದ, ಅದೇ ಕಡೆಗೆ ತುಂಬಿ ಎರಡೂ ಕಡೆಯ ರಕಮುಗಳನ್ನು ಸಮಮಾಡಿ ತೋಂಡಮಿಳವಣಿ (ಬಾಯಿಗೂಡಿಸುವಿಕೆ) ಮಾಡುವರು.

ತೋಂಡಮಿಳವಣಿ ಅಖೈರ ಅಥಾವೆಗಳಿಂದ ಸಿಲಕು ಎಷ್ಟು ? ಲಾಭಹಾನಿಗಳೆಷ್ಟೆಷ್ಟು ? ಕೊಡಕೊಳ್ಳುವದೆಷ್ಟೆಷ್ಟು ? ಈ ಮುಂತಾದ ವ್ಯವಹಾರದ ಪರಿಣಾಮವೆಲ್ಲ ಗೊತ್ತಾಗುವದು. ಖುದ್ದಖಾತೆಯು ತನ್ನಷ್ಟಕ್ಕೆ ತಾನು ಬಾಯಿಗೂಡಿದರಂತು ಲೆಕ್ಕದ ಬಗ್ಗೆ ಮನದ ಮಳಮಳವೆಲ್ಲ ಹೋಗಿ ಜಳಜಳವಾಗುವದು.

೨ ಸಿಲಕು ಉಳಿದ ಮಾಲಿನ ಬೆಲೆಯನ್ನು ಪೇಟೆಯ ದರದಂತೆ ಮಾಡಿ ಆಯಾ ಖಾತೆಗಳಿಗೆ ಜಮೆ ಮಾಡುತ್ತದಷ್ಟೆ; ಅದರಿಂದ ಜೀನಸವಾರ ಖಾತೆಗಳ ಲಾಭಹಾನಿಗಳು ತಿಳಿಯಲಿಕ್ಕೆ ಮಾರ್ಗವಾಗುವದು. ಜಮೆ ಹೆಚ್ಚಾದರೆ ಲಾಭ, ಖರ್ಚು ಹೆಚ್ಚಾದರೆ ಹಾನಿಯೆಂಬದು ಸಹಜವೇ; ಯಾವ ಯಾವ ಖಾತೆಗಳಿಂದ ಲಾಭವಾಗಿರುವದೋ, ಆಯಾ ಖಾತೆಗಳಿಗೆ ಆ ಲಾಭದ ಹಣವನ್ನು ಖರ್ಚು ಹಾಕಿ ಅವುಗಳ ಒಟ್ಟನ್ನು ನಫಾ ತೋಟಾ ಖಾತೆಗೆ ಜಮೆ ಹಿಡಿಯಬೇಕು. ಅದರಂತೆ ಹಾನಿಯಾದ ರಕಮನ್ನು ಆಯಾ ಖಾತೆಗಳಿಗೆ ಜಮೆ ಮಾಡಿ, ಅವುಗಳ ಒಟ್ಟನ್ನು ನಫಾತೋಟಾಖಾತೆಗೆ ಖರ್ಚು ಬರೆಯಬೇಕು. ಅಂದರೆ ಜೀನಸವಾರ ಖಾತೆ

ಗಳೆಲ್ಲ ಬಾಯಿಗೂಡಿ ಹೋಗುವವು. ಇದೇ ಪ್ರಕಾರ ಕಮಿಶನ, ವರ್ತಾವಳಿ, ಸೂಟ, ಹುಂಡಾವಳಿ ಮುಂತಾದ ಬೇರೆ ವ್ಯಾಪಾರದ ಖಾತೆಗಳಿಂದ ಆದಲಾಭ ಹಾನಿಗಳ ರಕಮನ್ನು ಆಯಾ ಖಾತೆಗಳಿಗೆ ಕ್ರಮವಾಗಿ ಖರ್ಚಿನ ಕಡೆಗೆ, ಜಮೆಯು ಕಡೆಗೆ ಬರೆದುಕೊಂಡು ಅವುಗಳನ್ನು ಬಾಯಿಗೂಡಿಸಿ ನಫಾತೋಟಾ ಖಾತೆಗೆ ಅವುಗಳ ವಿರುದ್ಧ ಜಮಾಖರ್ಚನ್ನು ಬರೆಯಬೇಕು. ಅಂದರೆ ಆ ಖಾತೆಗಳೆಲ್ಲ ಬಾಯಿಗೂಡುವವು.

ಇನ್ನು ನಫಾತೋಟಾಖಾತೆಯನ್ನು ಬಾಯಿಗೂಡಿಸುವದಕ್ಕಾಗಿ ಆ ಖಾತೆಯ ಜಮೆಯ ರಕಮು ಖರ್ಚಿನ ರಕಮಿಗಿಂತ ಹೆಚ್ಚಾದರೆ ಹೆಚ್ಚಾದಷ್ಟು ರಕಮನ್ನು ಆ ಖಾತೆಗೆ ಖರ್ಚುಹಾಕಿ ಖುದ್ದಖಾತೆಗೆ ಜಮೆ ಹಿಡಿಯಬೇಕು. ಇದೇ ನಿಜ (ನಿವಳ) ಲಾಭವು. ಇದರಂತೆ ಖರ್ಚಿನ ರಕಮು ಹೆಚ್ಚಾದರೆ ಹೆಚ್ಚಾದ ಹಣವನ್ನು ಆ ಖಾತೆಗೆ ಜಮೆ ಹಿಡಿದು ಖುದ್ದ ಖಾತೆಗೆ ಖರ್ಚು ಹಾಕಬೇಕು. ಇದೇ ನಿಜ. (ನಿವಳ) ಹಾನಿಯು. ಇದರಿಂದ ನಫಾತೋಟಾಖಾತೆಯು ಬಾಯಿಗೂಡುವದು.

೩ ಬಾಬವಾರ ಖಾತೆಗಳೆಂದರೆ ಮನೆಯ ಖರ್ಚುಖಾತೆ, ಧರ್ಮಾದಾಯಖಾತೆ, ಪಗಾರ ಸಾದಿಲವಾರ ಮುಂತಾದ ಖಾತೆಗಳಿಂದ ಬರತಕ್ಕ ಕೊಡತಕ್ಕ ರಕಮುಗಳನ್ನು ಕ್ರಮವಾಗಿ ಆಯಾ ಖಾತೆಗಳಿಗೆ ಜಮೆ ಮತ್ತು ಖರ್ಚು ಹಾಕಿ, ಖುದ್ದ ಖಾತೆಗೆ ಕ್ರಮವಾಗಿ ಅವುಗಳ ವಿರುದ್ಧ ಅಂದರೆ ಖರ್ಚು ಮತ್ತು ಜಮೆ ಬರೆಯಬೇಕು. ಅಂದರೆ ಬಾಬವಾರ ಖಾತೆಗಳೆಲ್ಲ ಬಾಯಿಗೂಡುವವು.

೪ ಪಕ್ಕಾಖಾತೆಗಳ (ಇಸಮವಾರ, ಠೇವ, ತಸಲಮಾತ, ಅಮಾನತ, ರವಾನಿಗೆ, ಹುಂಡಿ ಇತ್ಯಾದಿ ಖಾತೆಗಳ) ಬರತಕ್ಕ ಕೊಡತಕ್ಕ ಬಾಕಿಗಳನ್ನು ಆಯಾ ಖಾತೆಗಳಿಗೆ ಜಮೆ ಮತ್ತು ಖರ್ಚು ಬರೆದು ಬಾಯಿಗೂಡಿಸಿ ಅವುಗಳ ವಿರುದ್ಧ ಜಮಾಖರ್ಚನ್ನು ಖುದ್ದಖಾತೆಗೆ ಬರೆಯಬೇಕು. (ಇವುಗಳ ಲೆಕ್ಕ ಅಖೇರ ಅಥಾವೆಯಲ್ಲಿ ಬರೆಯುತ್ತಾರೆ.) ಅಂದರೆ ಪಕ್ಕಾಖಾತೆಗಳು ಬಾಯಿಗೂಡಿ ಬಿಡುವವು.

೫ ಇನ್ನೊಂದು ಖಾತೆಯು ಮಾತ್ರ ಬಾಯಿಗೂಡುವದು ಉಳಿಯಿತು. ಅದಾವುದೆಂದರೆ ಖುದ್ದಖಾತೆಯು. ಇದನ್ನೇನು ಸುಳ್ಳುಸುಳ್ಳೇ ಬರೆದುಕೊಂಡು ಬಲುಮೆಯಿಂದ ಬಾಯಿಗೂಡಿಸಬೇಕಾಗುವದಿಲ್ಲ. ಅದರಲ್ಲಿ ಮೊಟ್ಟಮೊದಲು ಕೊಡತಕ್ಕ ಬರತಕ್ಕ (ಅವಲ ಅಥಾವೆಯ) ರಕಮುಗಳು ಇದ್ದರೆ ಅವುಗಳನ್ನು ಕ್ರಮವಾಗಿ ಜಮೆ ಮತ್ತು ಖರ್ಚು ಬರೆಯುತ್ತಾರೆ. ವರ್ಷಾರಂಭದ ಸಿಲಕನ್ನೂ ಜಮೆಯು ಕಡೆಗೆ ಕಾಣಿಸುವದುಂಟು. ಖುದ್ದದ (ಸ್ವಂತದ) ಸಂಬಂಧವಾಗಿ ನಡೆದ ವ್ಯವಹಾರಗಳ ರಕಮುಗಳಂತು ಅದರಲ್ಲಿ ಬರತಕ್ಕವೇ; ತೋಂಡಮಿಳವಣಿಯ ರಕಮುಗಳು ಹಿಂದೆ ಹೇಳಿದಂತೆ ಅದರಲ್ಲಿ ಬರೆಯಲ್ಪಡುವವು; ಅಖೇರ ಅಥಾವೆಯ ರಕಮುಗಳಾದರೂ ಅದರೊಳಗೆ ಬಂದು ಸೇರಿಕೊಳ್ಳುವವು. ಇನ್ನೊಂದು

ಮಹತ್ವದ ರಕಮು ಖರ್ಚಿನ ಕಡೆಗೆ ಬರೆಯತಕ್ಕದ್ದು ಉಳಿದಿರುತ್ತದೆ. ಅದಾವುದೆಂದರೆ ವರ್ಷದ ಕೊನೆಯ ಸಿಲಕು. ಇದನ್ನೊಂದು ಬರೆದು ಬಿಟ್ಟರೆ ತೀರಿತು. ಖುದ್ದಖಾತೆಯ ಒಟ್ಟು ಜಮೆಯ ಬೇರೀಜು, ಒಟ್ಟು ಖರ್ಚಿನ ಬೇರೀಜು ತಮ್ಮಿಂದ ತಾವೇ (ಆಯತವಾಗಿ) ಒಂದಕ್ಕೊಂದು ಸರಿಯಾಗುವವು. ಆದುದರಿಂದ ಖುದ್ದಖಾತೆಯು ಜಮಾಖರ್ಚಿನ ಮುಖ್ಯಸಾರವಾಗಿರುತ್ತದೆ. ಇದಲ್ಲದೆ ವ್ಯವಹಾರದ ಆರಂಬದ ಸ್ಥಿತಿ (ಅವಲ ಅಥಾವೆ, ಅವಲ ಸಿಲಕು), ಮಧ್ಯದಸ್ಥಿತಿ (ನಡೆದ ವ್ಯವಹಾರ), ಅಂತ್ಯದ ಸ್ಥಿತಿ (ತೋಂಡಮಿಳವಣಿ ಅಖೇರ ಅಥಾವೆ, ಅಖೇರ ಸಿಲಕು) ಇವೇ ಮುಂತಾದ ವ್ಯವಹಾರದ ಮುಖ್ಯ ಸಂಗತಿಗಳು ಅದನ್ನು ನೋಡಿದ ಕೂಡಲೆ ತಿಳಿಯುತ್ತವೆ. ಅದಕ್ಕಾಗಿ ಖುದ್ದಖಾತೆಯು ಇಡಿ ಜಮಾಖರ್ಚಿನ ಸಂಕ್ಷಿಪ್ತ ಇತಿಹಾಸವೇ ಆಗಿರುತ್ತದೆಂಲೂ ಹೇಳಬಹುದು.

ಇನ್ನು ಲೆಕ್ಕ ಹಸನವಾಗಿರುತ್ತದೆಂಬ ಸಂಗತಿಯು ಎಷ್ಟು ಬಗೆಗಳಿಂದ ತಿಳಿಯುತ್ತದೆಂಬದನ್ನು ಎಣಿಸೋಣ. ದಿನದ ಲೆಕ್ಕ ಸರಿಯಾಗಿರುತ್ತದೆಂಬದನ್ನು ತಿಳಿದುಕೊಳ್ಳಬೇಕಾದರೆ, ದಿನದ ಕೊನೆಯ ಸಿಲಕು ಪೆಟ್ಟಿಗೆಯ ಸಿಲಕಿಗೆ ಸರಿಯಾಗಿರಬೇಕು. ಇದು ಒಂದಾಯಿತು. ಕೀರ್ದಿಯ ತಾರೀಖವಾರ ತಿಂಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳು, ಖಾತೆಗಳ ಆ ತಿಂಗಳ ಜಮೆಯ ಮತ್ತು ಖರ್ಚಿನ ಬೇರೀಜುಗಳಿಗೆ ಸರಿಯಾದರೆ ಕೀರ್ದಿಯ ರಕಮುಗಳೆಲ್ಲ ಖಾತೆಗಳಿಗೆ ಏರಿದಂತಾಯಿತು. ಇದು ಎರಡನೆಯದು ಖುದ್ದಖಾತೆಯ ಜಮೆಯ ಬೇರೀಜುಗಳಿಗೆ, ಆ ಖಾತೆಯ ಖರ್ಚಿನ ಬೇರೀಜು ಮತ್ತು ಕೊನೆಯ ಸಿಲಕು ಇವುಗಳ ಬೇರೀಜು ಸರಿಯಾಗಿರಬೇಕು. ಇದು ಮೂರನೆಯದು **ಅಂತೂ ಜಮಾಖರ್ಚಿನ ತಾಳೆಗಳು ಮೂರು ಇದ್ದಂತಾಯಿತು.**

(೬) ತೋಂಡಮಿಳವಣಿಯ ಜಮಾಖರ್ಚು ಬರೆಯುವ ಕ್ರಮವು ಕೆಳಗೆ ಬರೆಯಲ್ಪಟ್ಟದೆ.

೧ ತೋಂಡಮಿಳವಣಿಗೆ ಬರುವ ಖಾತೆಗಳ ಬರತಕ್ಕ ಕೊಡತಕ್ಕ ಬಾಕಿಗಳ ಟಿಪ್ಪಣಿಯನ್ನು ಮಾಡಬೇಕು.

೨ ಕೀರ್ದಿಯಲ್ಲಿ ತೋಂಡಮಿಳವಣಿ ಎಂಬ ಮೇಲ್ಲಿಖಾಸವನ್ನು ಬರೆದು ಅದರ ಕೆಳಗೆ ಜಮೆ———— ರೂ. ಖರ್ಚು———— ರೂ. ಎಂದು ಬರೆಯಬೇಕು

೩ ಟಿಪ್ಪಣಿಯೊಳಗಿನ ಜೀನಸವಾರ ಮುಂತಾದ ವ್ಯಾಪಾರೀ ಖಾತೆಗಳಿಗೆ, ಬರತಕ್ಕ ರಕಮುಗಳನ್ನು ಆಯಾ ಖಾತೆಗಳಿಗೆ ಜಮೆಹಿಡಿದು ಅವುಗಳ ಒಟ್ಟನು ನಫಾತೋಟಾಖಾತೆಗೆ ಖರ್ಚುಬರೆಯಬೇಕು. ಕೊಡತಕ್ಕ ರಕಮುಗಳನ್ನು ಆಯಾ ಖಾತೆಗಳಿಗೆ ಖರ್ಚು ಹಿಡಿದು ನಫಾತೋಟಾಖಾತೆಗೆ ಜಮೆ ಬರೆಯಬೇಕು.

೪ ನಫಾತೋಟಾಖಾತೆಗೆ ಮತ್ತು ಬೇರೆ ಬಾಬವಾರ ಖಾತೆಗಳಿಗೆ ಬರತಕ್ಕ ರಕಮುನ್ನು ಆಯಾ ಖಾತೆಗಳಿಗೆ ಜಮೆ ಬರೆದು, ಅವುಗಳ ಒಟ್ಟನ್ನು ಖುದ್ದಖಾತೆಗೆ ಖರ್ಚು ಬರೆಯಬೇಕು. ಕೊಡತಕ್ಕ ರಕಮುಗಳನ್ನು ಆಯಾ ಖಾತೆಗಳಿಗೆ ಖರ್ಚು ಹಿಡಿದು ಅವುಗಳ ಒಟ್ಟನ್ನು ಖುದ್ದಖಾತೆಗೆ ಜಮೆ ಹಿಡಿಯಬೇಕು.

೫ ಬಳಿಕ ಜಮೆಯ ಮತ್ತು ಖರ್ಚಿನ ರಕಮುಗಳ ಬೇರೀಜನ್ನು ಮಾಡಿ ಅವುಗಳ ಕೆಳಗೆ ತಕ್ಕಷ್ಟು ಅಡ್ಡಗೆರೆ ಹೊಡೆದು ಬರೆಯಬೇಕು. ಈ ಬೇರೀಜುಗಳು ಒಂದಕ್ಕೊಂದು ಸರಿಯಾಗುವವು.

೬ **ಅಖೇರ ಅಧಾವೆಃ**—ವರ್ಷವಂತೂ ಮುಗಿದುಹೋಯಿತು, ಈ ವರ್ಷದ ಕೀರ್ದಿಪುಸ್ತಕವು ಸಹ ತುಂಬುತ್ತಬಂತು; ನಾಳಿನ ದಿವಸ ವರ್ಷದ ಆರಂಭವಿರುವದರಿಂದ ಹೊಸಕೀರ್ದಿಯನ್ನು ಕಟ್ಟಿ ಅದರಲ್ಲಿ ಲೆಕ್ಕ ಬರೆಯತಕ್ಕದ್ದು. ಆದರೆ ಇನ್ನೂವರೆಗೆ ಕೆಲವು ಜನರಿಂದ ಬರತಕ್ಕ ಬಾಕಿ ಬರಲಿಲ್ಲವಲ್ಲ? ನಾವು ಕೆಲವು ಮಂದಿಗೆ ಕೊಡತಕ್ಕದ್ದನ್ನು ಕೊಟ್ಟಿಲ್ಲವಲ್ಲ? ಈ ಲೆಕ್ಕದ ವ್ಯವಸ್ಥೆ ಹೇಗೆ? ಇದಕ್ಕಾಗಿ ವರ್ಷದ ಕೊನೆಗೆ ಕೀರ್ದಿಯಲ್ಲಿ ಬೇರೆ ಲೆಕ್ಕಬರೆಯುವರು. ಅದಕ್ಕೆ ಅಖೇರ ಅಧಾವೆಯನ್ನುವರು. ಅಂದ ಮೇಲೆ **ವರ್ಷದ ಕೊನೆಗೆ ಜನರಿಂದ ಬರತಕ್ಕ ಕೊಡತಕ್ಕ (ಪಕ್ಕಾ)ಖಾತೆಗಳ ಬಾಕಿಗಳನ್ನು ಬಾಯಿಗೂಡಿಸುವಿಕೆಯ ಜಮಾಖರ್ಚಿಗೆ ಅಖೇರ ಅಧಾವೆಯೆಂಬ ಹೆಸರು.** ಇದರ ಲೆಕ್ಕವನ್ನು ಕೆಳಗೆ ಬರೆದಂತೆ ಬರೆಯಬೇಕು.

೧ ಮೊದಲು ಪಕ್ಕಾಖಾತೆಗಳಿಂದ ಬರತಕ್ಕದ್ದೆಷ್ಟು? ಕೊಡತಕ್ಕದ್ದೆಷ್ಟು? ಇವುಗಳ ಟಿಪ್ಪಣಿ ತೆಗೆಯಬೇಕು; ಈ ಟಿಪ್ಪಣಿಗೆ ಕಚ್ಚಾ ಅಧಾವೆಯೆನ್ನುವರು. ೨ ಬಳಿಕ ಬೇತಬಳಿಯಲ್ಲಿ ಅಖೇರ ಅಧಾವೆಯೆಂಬ ಶಬ್ದವನ್ನೂ ಅದರ ಕೆಳಗೆ ವರ್ಷದ ಕೊನೆಯ ಮಿತಿಯನ್ನೂ ಅವರ ಕೆಳಗೆ ಎಡಭಾಗಕ್ಕೆ ಜಮಾ———ರೂ ಎಂತಲೂ ಬಲ ಭಾಗಕ್ಕೆ ಖರ್ಚು———ರೂ. ಎಂತಲೂ ಬರೆಯಬೇಕು. ೩ ಟಿಪ್ಪಣಿಯಲ್ಲಿ ಯಾವ ಯಾವ ಜನರಿಂದ ಬರತಕ್ಕದ್ದು ಹೊರಟಿರುವದೋ ಆಯಾ ಜನರಿಂದ ಬಂತೆಂದು ಬೇರೆ ಬೇರೆಯಾಗಿ ಜಮೆಹಿಡಿದು ಅವುಗಳ ಒಟ್ಟನ್ನು ಖುದ್ದ ಖಾತೆಗೆ ಖರ್ಚುಹಾಕಬೇಕು. ೪ ಟಿಪ್ಪಣಿಯಲ್ಲಿ ಯಾವ ಯಾವ ಜನರಿಗೆ ಕೊಡತಕ್ಕದ್ದು ಹೊರಟಿರುತ್ತದೋ ಆಯಾಜನರಿಗೆ ಕೊಟ್ಟಿತೆಂದು ಬೇರೆಬೇರೆಯಾಗಿ ಖರ್ಚು ಬರೆದು ಅವುಗಳ ಒಟ್ಟನ್ನು ಖುದ್ದಖಾತೆಗೆ ಜಮೆಹಿಡಿಯಬೇಕು. ೫ ಬಳಿಕ ಜಮೆಯ ರಕಮುಗಳನ್ನೂ ಖರ್ಚಿನ ರಕಮುಗಳನ್ನೂ ಬೇರೀಜು ಮಾಡುವರು. ಅವು ಒಂದಕ್ಕೊಂದು ಸರಿಯಾಗುತ್ತವೆ.

ಕಚ್ಚಾ ಮತ್ತು ಪಕ್ಕಾ ಈ ಎರಡೂ ಖಾತೆಗಳ ತೋಂಡಮಿಳವಣಿಯ ಜಮಾಖರ್ಚನ್ನು ಕೆಲವರು ಒಂದೇ ಕಚೆಯಲ್ಲಿ ಬರೆಯುವರು, ಆ ಬರಹಕ್ಕೆ ತೋಂಡ

ಮಿಳವಣಿ ಅಖೇರ ಅಥಾವೆಗಳ ಮಿಶ್ರಸ್ವರೂಪವು ಬರುವದಷ್ಟೇ; ಈ ಪ್ರಕಾರ ಅಖೇರ ಅಥಾವೆಯು ಮಿಶ್ರಸ್ವರೂಪವಲ್ಲಿ ಸೇರಿದಾಗ ಅದರೊಳಗಿನ ಕಚ್ಚಾ ಖಾತೆಗಳ ವಿವರಣೆಯು ಮುಂದಿನ ಅವಲ ಅಥಾವೆಯಲ್ಲಿ ಬರಲಾರದು. ಸ್ವತಂತ್ರ ಅಖೇರ ಅಥಾವೆಯನ್ನು ಬರೆದರೆ ಅದರೊಳಗಿನ ಎಲ್ಲ ರಕಮುಗಳು ಅವಲ ಅಥಾವೆಯಲ್ಲಿ ಬರುತ್ತವೆ. ಆದರೆ ಅವಲ ಅಥಾವೆಯ ಜಮಾಖರ್ಚನ್ನು ಬರೆಯುವ ಕ್ರಮವು ಅಖೇರ ಅಥಾವೆಯ ಕ್ರಮಕ್ಕೆ ವಿರುದ್ಧವಾಗಿರುತ್ತದೆ. ಅಂದರೆ ಅಖೇರ ಅಥಾವೆಯೊಳಗಿನ ಜಮೆಯು ಮತ್ತು ಖರ್ಚಿನ ರಕಮುಗಳು ಅವಲ ಅಥಾವೆಯಲ್ಲಿ ಕ್ರಮವಾಗಿ ಖರ್ಚಿನ ಮತ್ತು ಜಮೆಯ ಕಡೆಗೆ ಬರೆಯಲ್ಪಡುತ್ತವೆ, ಅವಲ ಅಥಾವೆಯ ಬಗ್ಗೆ ಮುಂದೆ ವಿವರಿಸಿರುತ್ತದೆ.

೮ ಇಲ್ಲಿಗೆ ವರ್ಷದ ಲೆಕ್ಕವನ್ನೆಲ್ಲ ಪೂರ್ಣವಾಗಿ ಬರೆದಂತಾಯಿತು; ಆದರೆ ಅಖೇರ ಅಥಾವೆಯಲ್ಲಿ ಜನರಿಂದ ಬರತಕ್ಕದ್ದನ್ನು ಬಂತೆಂತಲೂ, ಕೊಡತಕ್ಕದ್ದನ್ನು ಕೊಟ್ಟಿತೆಂತಲೂ ಬರೆದುಕೊಂಡು ಬಿಟ್ಟಿವಲ್ಲ? ಪುಸ್ತಕ ಸಹ ಮುಗಿದುಹೋಯಿತು. ಮುಂದಿನ ವ್ಯವಸ್ಥೆಯೇನು? ಮುಂದಿನ ವರ್ಷದ ಕೀರ್ದಿಯನ್ನು ಬರೆಯುವದಕ್ಕೆ ಹೊಸ ಪುಸ್ತಕವನ್ನು ಕಟ್ಟುವದಿಲ್ಲವೇ? ಆ ಹೊಸಕೀರ್ದಿಯ ಆರಂಭದ ಪಾನಿನಲ್ಲಿ ಜನರಿಂದ ಬರತಕ್ಕದ್ದೆಷ್ಟು? ಜನರಿಗೆ ಕೊಡತಕ್ಕದ್ದೆಷ್ಟು ಎಂಬ ಸಂಗತಿಗಳನ್ನು ಬರೆದು ಬಿಟ್ಟರಾಯಿತು. ಇದಕ್ಕೆ ಅವಲ ಅಥಾವೆಯೆನ್ನುವರು. ಹಾಗಾದರೆ ಅವಲ ಅಥಾವೆಯಂದರೆ ಏನೆಂದಹಾಗಾಯಿತು? ವರ್ಷದ ಆರಂಭಕ್ಕೆ ಜನರಿಂದ ತನಗೆ ಬರತಕ್ಕದ್ದೆಷ್ಟು? ಜನರಿಗೆ ತಾನು ಕೊಡತಕ್ಕದ್ದೆಷ್ಟು? ಎಂಬದನ್ನು ತಿಳಿಯುವದಕ್ಕಾಗಿ ಕೀರ್ದಿಯ ಆರಂಭದಲ್ಲಿ ಜಮಾಖರ್ಚು ಬರೆದುಕೊಳ್ಳುವದಕ್ಕೆ ಅವಲ ಅಥಾವೆಯೆನ್ನುವರು. ಈ ಅವಲ ಅಥಾವೆಯನ್ನು ಹೋದ ವರ್ಷದ ಅಖೇರ ಅಥಾವೆಯ ಮೇಲಿಂದ ಬರೆದುಕೊಳ್ಳುವರು. ಅದು ಹೇಗಂದರೆ:—

೧ ಮೊದಲು ಬೀತಖಳಿಯಲ್ಲಿ ಅವಲ ಅಥಾವೆಯೆಂಬ ಶಬ್ದ, ಆರಂಭದ ಮಿತಿಗಳನ್ನು ಬರೆದ ನಂತರ ಅದರ ಕೆಳಗೆ ಜ —— ರೂ ಎಂತಲೂ ಖ —— ರೂ ಎಂತಲೂ ಬರೆಯಬೇಕು. ೨ ಬಳಿಕ ಪಕ್ಕಾಖಾತೆಗಳಿಂದ ತನಗೆ ಬರತಕ್ಕ ರಕಮುಗಳನ್ನು ಬೇರೆ ಬೇರೆಯಾಗಿ ಆಯಾ ಖಾತೆಗಳಿಗೆ ಖರ್ಚು ಬರೆದು ಅವುಗಳ ಒಟ್ಟನ್ನು ಖುದ್ದುಖಾತೆಗೆ ಜಮೆ ಬರೆಯಬೇಕು. ೩ ಇದರಂತೆ ಪಕ್ಕಾ ಖಾತೆಗಳಿಗೆ ತಾನು ಕೊಡತಕ್ಕ ರಕಮುಗಳನ್ನು ಆಯಾ ಖಾತೆಗಳಿಗೆ ಜಮೆ ಹಿಡಿದು ಅವುಗಳ ಒಟ್ಟನ್ನು ಖುದ್ದುಖಾತೆಗೆ ಖರ್ಚು ಬರೆಯತಕ್ಕದ್ದು. ೪ ತರುವಾಯ ಜಮೆಯ ರಕಮುಗಳನ್ನೂ ಖರ್ಚಿನ ರಕಮುಗಳನ್ನೂ ಬೇರೀಜು ಮಾಡಬೇಕು. ಅವು ಪರಸ್ಪರ ಸರಿಯಾಗುವದು ಸಹಜವೇ.

ವಾಸ್ತವಿಕವಾಗಿ ಬರತಕ್ಕ ರಕಮು ಖರ್ಚಿನ ಕಡೆಗೂ ಕೊಡತಕ್ಕ ರಕಮು ಜಮೆಯ ಕಡೆಗೂ ಇರತಕ್ಕದ್ದು. ಇದೇ ಪ್ರಕಾರ ಅವಲ ಅಢಾವೆಯಲ್ಲಿ ಬರೆಯಲ್ಪಡುತ್ತದೆ. ಅಂದ ಮೇಲೆ ಅವಲ ಅಢಾವೆಯಲ್ಲಿ ಯೋಗ್ಯ ಜಮಾಖರ್ಚು ಆಗುತ್ತದೆ. ಈ ಅವಲ ಅಢಾವೆಯೇ ನಿಜವಾದದ್ದು. ಇದರಲ್ಲಿ ಬರೆದ ಪ್ರಕಾರ ಜನರಿಂದ ಬರತಕ್ಕದ್ದನ್ನು ವಸೂಲಮಾಡಬೇಕು. ಕೊಡತಕ್ಕದ್ದನ್ನು ಕೊಟ್ಟುಬಿಡಬೇಕು.

೯ ಅಂದ ಮೇಲೆ ಆಖೇರ ಅಢಾವೆ ಅವಲ ಅಢಾವೆ ಇವುಗಳಲ್ಲಿ ಭೇದವೇನೆಂಬದನ್ನು ವಿಚಾರಿಸುವ—ಆಖೇರ ಅಢಾವೆಯಲ್ಲಿ ಬರತಕ್ಕ ರಕಮುಗಳನ್ನು (ಬಂದವೆಂದು ಕಲ್ಪಿಸಿ) ಜಮೆ ಹಿಡಿಯುವರು; ಕೊಡತಕ್ಕ ರಕಮುಗಳನ್ನು (ಕೊಟ್ಟವೆಂದು ಕಲ್ಪಿಸಿ) ಖರ್ಚು ಬರೆಯುವರು; ಅಂತೂ ಆಖೇರ ಅಢಾವೆಯು ಕಾಲ್ಪನಿಕ ಜಮಾಖರ್ಚೇ ಹೊರತು ವಾಸ್ತವಿಕ ಜಮಾಖರ್ಚು ಅಲ್ಲ. ಆದರೆ ಅವಲ ಅಢಾವೆಯಲ್ಲಿ ಬರತಕ್ಕ ರಕಮುಗಳು ತಮ್ಮ ಸ್ಥಾನವಾದ ಖರ್ಚಿನ ಭಾಗದಲ್ಲಿಯೇ ಬರೆಯಲ್ಪಡುತ್ತವೆ. ಕೊಡತಕ್ಕ ರಕಮುಗಳು ತಾವು ಇರತಕ್ಕ ಜಮೆಯ ಸ್ಥಳವನ್ನೇ ಸೇರಿಕೊಳ್ಳುವವು. ಅಂದ ಮೇಲೆ ಅವಲ ಅಢಾವೆಯಲ್ಲಿ ಯೋಗ್ಯ ಜಮಾಖರ್ಚು ಆಗುವದು.

೧೦ ಅಢಾವೆಯ ಮೇಲಿಂದ ಸಾವುಕಾರರ ಬಂಡವಲವೆಲ್ಲ ತಿಳಿದು ಹೋಗುವದು, ಜನರಿಂದ ತಮಗೆ ಬರತಕ್ಕದ್ದೆಷ್ಟು? ಜನರಿಗೆ ತಾವು ಕೊಡತಕ್ಕದ್ದೆಷ್ಟು? ಈ ಸಂಗತಿಗಳು ವ್ಯವಹಾರದಲ್ಲಿ ಬಹು ಮಹತ್ವದವುಗಳಾಗಿವೆ. ಜನರಿಂದ ಬಹಳ ರಕಮು ಬರತಕ್ಕದ್ದಿದ್ದರೆ ವ್ಯವಹಾರಸ್ತನು ಸಂಪತ್ತುಳ್ಳವನೆಂದೂ, ಜನರಿಗೆ ಬಹಳ ಕೊಡತಕ್ಕದ್ದಿದ್ದರೆ ಸಾವುಕಾರನು ಸಾಲಬಡಕನೆಂದೂ ಜನರಲ್ಲಿ ಗ್ರಹಿಕೆಯಾಗುತ್ತದಷ್ಟೆ; ಆದುದರಿಂದ ಅಢಾವೆಯಿಂದ ವ್ಯವಹಾರಸ್ಥರ ಹುರುಳೆಲ್ಲ ಹೊರಬೀಳುವದು. ಅವರಿಂದ ಕೆಲವು ಸಾವುಕಾರರು ಅಢಾವೆಯನ್ನು ಕೀರ್ದಿಯ ಮೇಲೆ ಬರೆಯುವದಿಲ್ಲ. ಮತ್ತೊಂದು ಕಾಗದದಲ್ಲಿ ಖತಾವಣಿಯ ಮೇಲಿಂದ ತಾನು ಮುಂದಿಗೆ ಕೊಡತಕ್ಕದ್ದೆಷ್ಟು? ತನಗೆ ಮುಂದಿಯಿಂದ ಬರತಕ್ಕದ್ದೆಷ್ಟು? ಎಂಬದರ ಟಿಪ್ಪಣೆಯನ್ನು ತೆಗೆದು ಖತಾವಣಿಯಲ್ಲಿ ವರ್ಷದ ಕೊನೆಗೆ ಅಢಾವೆಯ ಖಾತೆಗಳನ್ನು ಜಾಯಿಗೂಡಿಸುವದಕ್ಕಾಗಿ ಬರತಕ್ಕ ರಕಮಿನ ಕೆಳಗೆ ಬರತಕ್ಕ ಬಾಕಿ, ಕೊಡತಕ್ಕ ರಕಮಿನ ಕೆಳಗೆ ಕೊಡತಕ್ಕ ಬಾಕಿಯೆಂದು ಬರೆಯುವರು. ಮತ್ತು ವರ್ಷಾರಂಭದಲ್ಲಿ ಆ ಟಿಪ್ಪಣೆಯ ಮೇಲಿಂದ ಆಯಾ ಖಾತೆಗಳಿಗೆ ಬರತಕ್ಕ ಕೊಡತಕ್ಕ ರಕಮುಗಳನ್ನು ಯೋಗ್ಯ ಸ್ಥಳಗಳಲ್ಲಿ ಬರೆದು ಅವುಗಳ ಕೆಳಗೆ ಹಿಂದಿನ ವರ್ಷದ ಬಾಕಿ ಎಂದು ಬರೆಯುವರು. ಆದರಿಂದ ಕೊಡಕೊಳ್ಳುವದು ತಿಳಿಯುವದು. (ಪಠಾಣಿ ವಹಿಯ ಬಸಪ್ಪ ಲಿಂಗಪ್ಪ ಅಂಗಡಿ ಈತನ ಖಾತೆ ನೋಡು

೫ನೆಯ ಪ್ರಕರಣ.

ಮಾದರಿಗಾಗಿ ಯೋಜಿಸಿದ ವ್ಯವಹಾರವು.

ಹಿಂದೆ ಬರೆದ ಸಂಗತಿಗಳು ಸ್ಪಷ್ಟವಾಗಿ ತಿಳಿಯಬೇಕೆಂದು “ **ಶಿವಪ್ಪ ಸಂಗಪ್ಪ ಸೆಟ್ಟರ** ” ಎಂಬ ಒಬ್ಬ ಕಲ್ಪಿತ ವ್ಯವಹಾರಸ್ತನ ಒಂದು ವರ್ಷದ ಜಮಾಖರ್ಚನ್ನು ಬರೆದು ತೋರಿಸುವಾ:—

(ಇದರಲ್ಲಿ ಕೆಲವು ವರ್ಷಗಳ ವ್ಹ. ಫಾ. ಪರೀಕ್ಷೆಗೆ ಬಿದ್ದ ಪ್ರಶ್ನಗಳನ್ನು ಬಿಡಿಸಿ ತೋರಿಸಿರುತ್ತದೆ.)

ಕಾರ್ತಿಕ ಶುದ್ಧ ಪ್ರತಿಪದೆ ಶಕೆ ೧೮೪೦.

ವರ್ಷಾರಂಭದ ಸ್ಥಿತಿ.

ಅವಲ ಅಥಾವೆ.

ಜನರಿಂದ ಬರತಕ್ಕದ್ದು.	ಜನರಿಗೆ ಕೊಡತಕ್ಕದ್ದು.
೧೫೦೦ ಶಂಕರೆಪ್ಪ ಬೆಲ್ಲದ	೮೦೦ ಶಿವಪ್ಪ ಜವಳಿ.
೫೦೦ ಬಸಪ್ಪ ಸಕ್ಕರಿ	೧೨೦೦ ರಾಮಪ್ಪ ತುಪ್ಪದ
೩೪೫ ಭೀಮರಾವ ಪಾಟೀಲ	
೨೩೪೫ ರೂಪಾಯಿ	೨೦೦೦

ಸಿಲಕು.

ರೋಖಹಣ.	ಮಾಲಿನ ಬೆಲೆ.
೧೦೦೦ ರೂಪಾಯಿ	೫೦೦ ರೂಪಾಯಿ
	೨೦೦ ರೂ. ಬೆಲ್ಲ ೫೦ ಮಣ ದರ ೪ ರೂ.
	೩೦೦ ರೂ. ಸೀರಿ ೨೦ ದರ ೧೫ರೂ.
	೫೦೦

ಈ ದಿವಸ ನಡೆದ ವ್ಯವಹಾರ.

(೧) ಗುರಪ್ಪಸೆಟ್ಟಿ ಇವರಿಗೆ ಪ್ರಾಮಿಸರಿ ನೋಟು ಬರಿಸಿಕೊಂಡು ೫೦ ರೂ. ಸಾಲಕೊಟ್ಟಿತು. (ಈ ಪ್ರಾಮಿಸರೀ ನೋಟಿನ ನಮೂನೆಯನ್ನು ೨ನೆಯ ಭಾಗದ ೩ನೆಯ ಪ್ರಕರಣದಲ್ಲಿ ಬರದಿರುತ್ತದೆ) (೨) ಚಂದ್ರಪ್ಪ ಇವರಿಗೆ ದಾಗೀನೆ ಒತ್ತಿ ಇಟ್ಟುಕೊಂಡು ೨೦೦ರೂ. ಸಾಲಕೊಟ್ಟಿತು. ಬಡ್ಡಿಯ ದರ ೧೦೦ಕ್ಕೆ ೧ತಿಂಗಳಿಗೆ -॥- ರೂ. ಪ್ರಕಾರ. ಮುದ್ದತು ಒಂದು ವರ್ಷ.

ಕಾರ್ತಿಕ ಶುದ್ಧ ೨.

(ಸನ್ ೧೯೧೪ ನೆಯ ಇಸ್ವಿಯಲ್ಲಿ ವ್ಹ. ಫಾ. ಪರೀಕ್ಷೆಗೆ ಬಿದ್ದ ಜಮಾ
ರ್ಚಿನ ಪ್ರಶ್ನ ೪ನೆಯದು.)

(೧) ಶಂಕರಪ್ಪ ಬೆಲ್ಲದ ಇವರಿಂದ ಬರತಕ್ಕ ೧೫೦೦ ರೂಪಾಯಿಗಳಲ್ಲಿ
೧೨೦೦ ರೂಪಾಯಿಗಳ ಬಂಗಾರ ೧ ತೊಲಿಗೆ ೨೫ ರಂತೆ ಕೊಂಡಿತು; (೨) ೨೦
ರೂಪಾಯಿಗಳ ಶಹಜೋಗದರ್ಶನಿ ಹುಂಡಿ ಮುಂಬಯಿ ಸಾವ್ಕಾರ ಕರೀಮಭ
ಯಿ ಇವರ ಮೇಲಿನದನ್ನು ತೆಗೆದುಕೊಂಡಿತು; ಉಳಿದ ರೂ. ಸೂಟು ಬಿಟ್ಟಿತು
(೩)ಭೀಮರಾವ ದೇಶಪಾಂಡೆ ಇವರಿಗೆ ಕೈಗಡ(ಬಡ್ಡಿಯಿಲ್ಲದೆ) ೪೦ ರೂ. ಕೊಟ್ಟಿತು

ಕಾರ್ತಿಕ ಶುದ್ಧ ೩.

(೧) ಮುಂಬಯಿ ಕರೀಮಭಾಯಿ ಇವರ ಮೇಲಿನ ಹುಂಡಿಯನ್ನು ನಾ
ರಾಯಣರಾವ ಸುಗಂಧಿ ಇವರಿಗೆ ೨೦೧ ರೂಪಾಯಿಗಳಿಗೆ ಮಾರಿತು (೨) ಹತ್ತಿ
ಯನ್ನು ನಗ ೨೦. ದರ ೪೦ ರಂತೆ ರೋಖ ಖರೇದಿ ಮಾಡಿತು. (೩) ಸಂಜಾಯ
ತಕರಾರಿನಿಂದ ಗಂಗಪ್ಪ ಇವರಿಗೆ ೬೫೦ ರೂ. ಗಳ ಹತ್ತಿ ಉದ್ದರಿ ಕೊಟ್ಟಿತು. (೪)
ರಸ್ತೆಯಲ್ಲಿ ೧೦೦ ರೂ. ನೋಟ ಸಿಕ್ಕಿತು. (೫) ಬಂಗಾರ ೪೦ ತೊಲಿ ದರ ೨೫
ರಂತೆ ರೋಖ ಮಾರಿತು; (೬) ೪೦ ರೂ. ಗಳ ಅಕ್ಕಿ ತರಲಿಕ್ಕೆ ರಾಮಾ ಕದಮ
ಇವನನ್ನು ಕಳುಹಿತು. (೭) ಧರ್ಮಾದಾಯ ೧ ರೂ. ಮಾಡಿತು.

ಕಾರ್ತಿಕ ಶುದ್ಧ ೪.

(ಸನ್ ೧೯೧೫ ನೆಯ ಇಸ್ವಿಯ ವ್ಹ. ಫಾ. ಪರೀಕ್ಷೆಗೆ ಬಿದ್ದ ಜಮಾಖರ್ಚಿನ
ಪ್ರಶ್ನ ೪ ನೆಯದು)

(೧) ಗದಗಿನ ರಾಚಪ್ಪನಲ್ಲಿ ೫೦ ರೂ. ಗೆ ನಗದಂತೆ ೧೦ ನಗ ಅರಳೆ ರೋ
ಖ ಖರೇದಿ ಮಾಡಿತು. (೨) ಬಸಪ್ಪನ ಕಡೆಯಿಂದ ೫೦೦ ರೂ. ಅಸಲು ೧೨೫
ರೂ. ಬಡ್ಡಿ ಬರತಕ್ಕದ್ದಿದ್ದು, ಅವನು ೪೫೦ ರೂ. ರೋಖ ಕೊಟ್ಟು, ೫೦
ರೂ. ಗಳನ್ನು ಗುರಪ್ಪನಿಗೆ ಹವಾಲೆ ಕೊಟ್ಟು ೨೫ ರೂ. ಸೂಟ ಬಿಡಿಸಿಕೊಂಡು
ಉಳಿದ ರೂಪಾಯಿಗಳಲ್ಲಿ ೧೦ ಚೀಲ ಗೋದಿ ಕೊಟ್ಟು ಸಾಲ ತೀರಿಸಿದನು.

(೩) ರಾಜಶೇಖರ ಸೆಟ್ಟಿ ಹುಬ್ಬಳ್ಳಿ ಅಂಗಡಿ ಇವರ ಮೇಲೆ ೧೨೫ ರೂ.
ಯ ೨೦ ದಿವಸಗಳ ಮುದ್ದತಿ ಶಹಜೋಗ ಹುಂಡಿ ಕೊಟ್ಟಿತು. ಹುಂಡಾವಳಿ ೧ರೂ.
ಬಂತು. (೪) ತೋಟದ ಬಾವಿಯ ಯಾತದ ದುರಸ್ತಿಯ ಬಗ್ಗೆ ಉಪ್ಪಾರ ಭೀಮ
ಪ್ಪನಿಗೆ ೨೫ ರೂ. ಕೊಟ್ಟಿತು. (೫) ರಸ್ತೆಯಲ್ಲಿ ಸಿಕ್ಕಿದ್ದ ೧೦೦ ರೂ. ನೋಟು
ಭೀಮರಾವ ದೇಶಪಾಂಡೆ ಇವರು ತಮ್ಮದೆಂದು ಸಿದ್ಧಮಾಡಿ ಕೊಟ್ಟರು. (೬)
ಅಂಗಡಿ ಸಾರಿಸಿದ ಕೂಲಿ ೧ ರೂ. ಕೊಟ್ಟಿತು.

ಕಾರ್ತಿಕ ಶುದ್ಧ ೫.

(ಸನ್ ೧೯೧೬ ನೆಯ ಇಸ್ವಿಯ ವ್ಹ. ಫಾ. ಪರೀಕ್ಷೆಗೆ ಬಿದ್ದ ಜಮಾಖರ್ಚಿನ ಪ್ರಶ್ನ ೪ ನೆಯದು).

(೧) ೨೦೦ ರಾಮಾ ಕದಮ ಇವನ ಕಡೆಯಿಂದ ಹೊಲದ ಲಾವಣಿ ಬರತಕ್ಕದ್ದಿತ್ತು. ಅವನು ೫೦ ರೂ. ಸರಕಾರೀ ಹಪ್ತೆ ತಾನೇ ಕೊಟ್ಟನು; ಉಳಿದ ರಕಮಿನಲ್ಲಿ ೧೫ ರೂಪಾಯಿಗೊಂದು ಹೇರಿನಂತೆ ೧೦ ಹೇರು ಗೋದಿ ಕೊಟ್ಟನು (೨) ೪೦೦ ಗದಗಿನ ರಾಚಪ್ಪನಲ್ಲಿ ಗೋದಿ ಖರೇದಿ ಮಾಡಿ ಅದರಲ್ಲಿ ೩೦೦ ರೋಖ ಕೊಟ್ಟು ೫೦ ಚಂದ್ರಪ್ಪನ ಹವಾಲೆ ಕೊಟ್ಟು ೫೦ ರೂ. ಬಾಕಿ ಮಾಡಿಕೊಂಡಿತು. (೩) ಭೀಮರಾವ ಪಾಟೀಲ ಇವರ ಕಡೆಯಿಂದ ೩೪೫ ರೂ. ಆಸಲು ೪೦ ರೂ. ಬಡ್ಡಿ ಬರತಕ್ಕದ್ದು ಇತ್ತು; ಬಡ್ಡಿಯಲ್ಲಿ ಆರ್ಧ ಸೂಟು ಬಿಡಿಸಿಕೊಂಡು ಆಸಲಿನಲ್ಲಿ ೨೨೫ ರೋಖ ಕೊಟ್ಟು ಉಳಿದ ರೂಪಾಯಿಗೆ ಕತಬಿ ಬರೆದುಕೊಟ್ಟರು. (೪) ೧೫೦ ರೂಪಾಯಿಯ ಕಾಗದ ಕೊಂಡಿತು. ೧೦೦ ಕ್ಕೆ ೧೦ ರಂತೆ ಕಮಿಶನ ದೊರೆಯಿತು. (೫) ರಾಮಾ ಕದಮ ಇವನ ಕಯ್ಯಲ್ಲಿ ಅಕ್ಕಿ ಖರೇದಿಗೆ ಕೊಟ್ಟ ೪೦ ರೂಪಾಯಿಗಳಲ್ಲಿ ೧ ರೂ. ದಲಾಲಿ ಕೊಟ್ಟು ೨ ರೂ. ಕಳೆದುಕೊಂಡು ಉಳಿದ ರೂಪಾಯಿಗಳ ಅಕ್ಕಿ ತಂದುಕೊಟ್ಟನು. ಕಳೆದ ರೂಪಾಯಿಗಳನ್ನು ಆವನ ಸಂಬಳದಲ್ಲಿ ಮುರಿಯುತಕ್ಕದ್ದು.

ಕಾರ್ತಿಕ ಶುದ್ಧ ೬.

(ಸನ್ ೧೯೨೧ ನೆಯ ಇಸ್ವಿಯಲ್ಲಿ ಹ್ವ. ಫಾ. ಪರೀಕ್ಷೆಗೆ ಬಿದ್ದ ಜಮಾಖರ್ಚಿನ ಪ್ರಶ್ನ ೫ ನೆಯದು.)

(೧) ೨೦೦ ರೂಪಾಯಿಗಳ ಬೆಲ್ಲ ಶಿವಪ್ಪನಿಗೆ ಸಂಜಾಯತ ಕರಾರಿನಿಂದ ರೋಖ ಹಣಕ್ಕೆ ಕೊಟ್ಟಿತು. (೨) ಗುರಪ್ಪ ಸೆಟ್ಟಿ ಇವರು ಪ್ರಾಮಿಸರಿನೋಟು ಬರಕೊಟ್ಟು ಒಯ್ದ ೫೦ ರೂಪಾಯಿಗಳನ್ನು ೧೦ ಬಡ್ಡಿ ಸಹಿತ ತಂದುಕೊಟ್ಟರು. (೩) ಮನೆಯ ಬಗ್ಗೆ ೨೫ ರೂಪಾಯಿ ಬೆಲೆಯ ಸೀರಿಗಳನ್ನು ಅಂಗಡಿಯೊಳಗಿಂದ ತೆಗೆದುಕೊಂಡಿತು. (೪) ಭೀಮರಾಯರು ಕೊಡತಕ್ಕ ೪೦ ರೂಪಾಯಿಗಳಲ್ಲಿ ೩೦ ರೂ ರೋಖಕೊಟ್ಟು ಉಳಿದ ರೂಪಾಯಿಗಳಿಗೆ ರಾಮಪ್ಪನ ಹವಾಲೆ ಕೊಟ್ಟರು. (೫) ಸರಕಾರಕ್ಕೆ ಉತ್ಪನ್ನದ ಮೇಲಿನ ಕರ ೧೨೦ ರೂಪಾಯಿ ಕೊಟ್ಟಿತು. (೬) ಶಿವಪ ಜವಳಿ ಇವರಿಗೆ ಕೊಡತಕ್ಕ ೮೦೦ ರೂಪಾಯಿಗಳಲ್ಲಿ ಆರಳಿನಗ ೧೦ ದರ ೮೦ ರಂತೆ ಕೊಟ್ಟಿತು. (೭) ರಾಚಪ್ಪ ಇವರ ಗೋದಿಯ ಲೆಕ್ಕ ೫೦ ರೂ. ಕೊಟ್ಟಿತು.

ಮಾರ್ಗಶೀರ್ಷ ಶುದ್ಧ ೧.

(೧) ೭೫ ಗಡ್ಡಿ ಕಾಗದ ದರ ೩ ರಂತೆ ಮಾರಿತು. ೨೦ ರೂ. ಕಮಿಶನ ಕೊಟ್ಟಿತು. (೨) ಗೋದಿ ೬೦ ಹೇರು, ದರ ಹೇರಿಗೆ ೧೫ ರಂತೆ ರೋಖ ಮಾರಿತು.

(೩) ರಾಮಪ್ಪ ತುಪ್ಪದ ಹುಬ್ಬಳ್ಳಿ ಅಂಗಡಿ ಇವರು ನಮ್ಮ ಮೇಲೆ ಮಾಡಿದ ೧೦೦೦ ರೂಪಾಯಿಗಳ ಹುಂಡಿ ಸ್ವೀಕರಿಸಿದೆವು. (೪) ರಾಮಪ್ಪ ತುಪ್ಪದ ಹುಬ್ಬಳ್ಳಿ ಅಂಗಡಿ ಇವರ ಮೇಲೆ ರಾಖಲೆ ನಾರಾಯಣ ನೀಲಕಂಠ ಇವರಿಗೆ ೧೦೦ ರೂಪಾಯಿಗಳ ದರ್ಶನಿ ಶಹಜೋಗ ಹುಂಡಿ ಕೊಟ್ಟಿತು. (೫) ಸದಾಶಿವ ಶಂಕರ ಗೋಕಾವಿ ರಾಖಲೆ; ಶಂಕರೆಪ್ಪಾ ಬೆಲ್ಲದ ಮುಂಬಯಿ ಅಂಗಡಿ ಇವರ ಮೇಲೆ ೧೦೦ ರೂಪಾಯಿಗಳ ೪ ದಿವಸಗಳ ಮುದ್ದತಿಯ ಶಹಜೋಗ ಹುಂಡಿ ಕೊಟ್ಟಿತು. (ಈ ಹುಂಡಿಯ ನಮೂನೆಯನ್ನು ೩ನೆಯ ಭಾಗದ ೩ನೆಯ ಪ್ರಕರಣದಲ್ಲಿ ಬರೆದಿರುತ್ತದೆ.) (೬) ಇವೆರಡು ಹುಂಡಿಗಳ ಬಗ್ಗೆ ಹುಂಡಾವಳಿ -॥- ಬಂತು. (೭) ಗಂಗಪ್ಪ ಇವರಿಗೆ ಸಂಜಾಯತ ಕರಾರಿನಿಂದ ೭೫೦ ರೂಪಾಯಿಗಳ ಹತ್ತಿ ಮಾರಲಿಕ್ಕೆ ಕೊಟ್ಟಿದ್ದು, ೧೦೦ ರೂಪಾಯಿಗಳ ಹತ್ತಿ ಪರತ ಬಂತು. (೮) ಉಪ್ಪಾರ ಭೀಮಪ್ಪನಿಗೆ ತೋಟದ ಬಾವಿಯ ಯಾತದ ದುರಸ್ತಿಯ ಸಲುವಾಗಿ ಕೊಟ್ಟ ೨೫ ರೂಪಾಯಿಗಳಲ್ಲಿ ಸದ್ಯದ ಜರೂರಿಯ ಪೂರ್ತೆ ೫ರೂ. ವೆಚ್ಚ ಮಾಡಿ ಉಳಿದವುಗಳನ್ನು ತಂದುಕೊಟ್ಟನು. (೯) ಬಸಪ್ಪ ಸಕ್ಕರಿ ಧಾರವಾಡ ಇವರ ಮೇಲೆ ರಾಖಲೆ ಶಿವಪ್ಪ ಬೆಣ್ಣಿ ಇವರಿಗೆ ೪ ದಿವಸಗಳ ಮುದ್ದತಿಯ ಶಹಜೋಗ ಹುಂಡಿ ಕೊಟ್ಟಿತು. ಹುಂಡಾವಳಿ -॥- ಬಂತು.

ಮಾರ್ಗಶೀರ್ಷ ಶುದ್ಧ. ೫.

(೧) ರಾಜಶೇಖರ ಸೆಟ್ಟಿ ಹುಬ್ಬಳ್ಳಿ ಅಂಗಡಿ ಇವರ ಮೇಲೆ ಕೊಟ್ಟ ೧೨೫ ರೂ. ಗಳ ಹುಂಡಿಯೂ, ಶಂಕರೆಪ್ಪ ಬೆಲ್ಲದ ಮುಂಬಯಿ ಅಂಗಡಿ ಇವರ ಮೇಲೆ ಕೊಟ್ಟ ಹುಂಡಿಯೂ ಪಟಾಯಿಸಿ ಭರಪಾಯ ಆದ ಬಗ್ಗೆ ಖೋಕೆ ಬಂದವು. (೨) ಬಸಪ್ಪ ಸಕ್ಕರಿ ಧಾರವಾಡ ಇವರ ಮೇಲೆ ಕೊಟ್ಟ ಹುಂಡಿ ಸ್ವೀಕರಿಸಲ್ಪಡಲಿಲ್ಲ. ರಾಖಲೆಗೆ ಅವನ ಹಣ ತಿರುಗಿಕೊಟ್ಟು ಸಕರಾಯಿ ನಕರಾಯಿ ೧ ರೂ. ಕೊಟ್ಟಿತು. (೩) ಕುರುಡರ ಶಾಲೆಗೆ ೪ ರೂ. ಕೊಟ್ಟಿದ್ದು ಅವುಗಳನ್ನು ಮರೆತು ಜಮೆಯ ಕಡೆಗೆ ಬರೆದುಕೊಂಡಿತು. (೪) ರಾಚಪ್ಪ ಗದಗ ಇವರು ೧೦೦ ರೂ. ಗಳನ್ನು ಇಡಗಂಟಾಗಿ ಇಟ್ಟರು. (೫) ರಾಮಪ್ಪ ತುಪ್ಪದ ಇವರಿಂದ ೧೦ ರೂ. ಬಂದವು. (೬) ಕುರುಡರ ಶಾಲೆಗೆ ಕೊಟ್ಟ ೪ ರೂ. ಗಳನ್ನು ಜಮೆ ಬರೆದುಕೊಂಡ ತಪ್ಪು ಶಿಲಕು ಎಣಿಸಲಾಗಿ ತಿಳಿಯಿತು. (೭) ರಾಮಪ್ಪ ತುಪ್ಪದ ಹುಬ್ಬಳ್ಳಿ ಅಂಗಡಿ ಇವರ ಮೇಲೆ ಕೊಟ್ಟ ದರ್ಶನಿ ಶಹಜೋಗ ಹುಂಡಿ ಭರಪಾಯಿ ಆದ ಬಗ್ಗೆ ಖೋಕೆ ಬಂತು.

ಆಶ್ವಿನ ಶು॥ ೧.

(೧) ತಂಬಾಕ ೧೨॥ ಮಣ ದರ ೧೪ ರಂತೆ ಕೊಂಡು ಮುಣಗೆ ಸಯ್ಯದಸಾ॥ ದಲಾಲ ಇವರ ಕಡೆಗೆ ಕನಿಷ್ಟ ಪಕ್ಷಕ್ಕೆ ಮಣಕ್ಕೆ ೧೬ ರಂತೆ ಮಾರುವದಕ್ಕೆ ಕಳಿಸಿತು. ದಲಾಲಿ ೧೦೦ ಕ್ಕೆ ೨ ರಂತೆ, (೨)ಸದರಿ ತಂಬಾಕ ಮುಣಗೆ ಕಳಿಸುವದಕ್ಕೆ

೭ ರೂ. ರೇಲವೆ ಚಾರ್ಜ, ೩ ರೂ. ಬಂಡಿಯ ಬಾಡಿಗೆ, ೧ ಹಮಾಲಿ ಮುಂತಾದ್ದು ಬಂತು. (೩) ಹುಸೇನ ಸಾ॥ ನರಗುಂದ ಇವರು ನಮ್ಮಲ್ಲಿ ೧೨॥ ಹೇರು ಗೋದಿ ಮಾರಲಿಕ್ಕೆ ಇಟ್ಟ ಪ್ರಕಾರ ಜೀನಸಿನ ಯಾದಿಗೆ ಜಮೆ ಬರೆದುಕೊಂಡಿದ್ದು ಈಗ ಅವರ ಹೇಳಿಕೆಯಂತೆ ಹೇರಿಗೆ ೧೭ ರಂತೆ ಧಾರಣಿಯಾದ ಕಾರಣ ಮಾರಿ ಅವರಿಗೆ ಯಾದಿ ಕಳುಹಿತು. (೪) ಸದರಿ ಹುಸೇನ ಸಾ॥ ರಿಂದ ೧೦೦ ಕ್ಕೆ ೩ ದಲಾಲಿ, ವಖಾರದ ಬಾಡಿಗೆ ೩ ರೂ. ಧರ್ಮಾದಾಯ ೧ ಬರತಕ್ಕದ್ದದೆ.

ಆಶ್ವಿನ ಶುದ್ಧ॥ ೧೫.

(೧) ಮಗೆಯ ದಲಾಲ ಸಯ್ಯದ ಸಾ॥ ರಿಂದ ತಂಬಾಕ ೧೨॥ ಮಣ ದರ ೨೪ ರಂತೆ ಮಾರಾಟವಾಗಿ ಯಾದಿ ಬಂತು. (೨) ಸಯ್ಯದ ಸಾ॥ ರಿಗೆ ಕರಾರಿನ ಪ್ರಕಾರ ದಲಾಲಿ ೭ ರೂ. ವಖಾರದ ಬಾಡಿಗೆ ೩ ರೂ. ಧರ್ಮಾದಾಯ ೧ ರೂ. ಕೊಡತಕ್ಕದ್ದಾಗಿದೆ.

ಆಶ್ವಿನ ವ. ೩೦.

(೧) ಚಂದ್ರಪ್ಪ ಇವರಿಗೆ ಕಾರ್ತಿಕ ಶು. ೧ ದಿವಸ ೨೦೦ ರೂ. ಗಳನ್ನು ೧೦೦ಕ್ಕೆ ತಿಂಗಳಿಗೆ -॥- ರೂ. ಬಡ್ಡಿಯಂತೆ ೧ ವರ್ಷದ ಕರಾರಿನಿಂದ ಕೊಟ್ಟದ್ದು ಈ ಪೊತ್ತಿಗೆ ಮುದ್ದತು ತೀರಿದರೂ ಬಡ್ಡಿ ಬರಲಿಲ್ಲ (೨) ಮಾರ್ಗಶೀರ್ಷ ಶು. ೫ ದಿವಸ ರಾಮಪ್ಪ ತುಪ್ಪದ ಇವರಿಂದ ರೋಖ ೧೦ ರೂ. ಬಂದವೆಂದು ಜಮೆ ಹಿಡಿದಿರುತ್ತದಷ್ಟೆ; ಆದರೆ ಆ. ೧೦ ರೂ. ರಾಮಪ್ಪ ತುಪ್ಪದ ಇವರಿಂದ ಬಾರದೆ ರಾಚಪ್ಪ ಗದಗ ಇವರಿಂದ ಬಂದಿರುತ್ತವೆಂಬ ಸಂಗತಿ ಈಗ ತಿಳಿಯಿತು. (೩) ರಾಮಪ್ಪ ತುಪ್ಪದ ಇವರಿಗೆ ಕೊಡತಕ್ಕ ಬಾಕಿ ೨೯೦ ರೂ. ಗಳಲ್ಲಿ ೧೫ ರೂ. ದರದ ೧೮ ಸೀರಿ, ೧೦ ರೂ. ದರದ ೨ ಹೇರು ಅಕ್ಕಿ ಕೊಟ್ಟಿತು. (೪) ರಾಚಪ್ಪ ಗದಗ ಇವರ ಬಾಕಿಯು ಬಗ್ಗೆ ೧೦ ರೂ. ಕೊಟ್ಟಿತು.

ವರ್ಷದ ಅತ್ಯಂದ ಸ್ಥಿತಿ.

ಸಿಲ್ಕು.

ರೋಖಹಣ.	ಮಾಲಿನ ಬೆಲೆ.
೨೧೩೧ ರೂಪಾಯಿಗಳು	೫೩೦ ರೂ.
	೫೦ ಬೆಲ್ಲ ಮಣ ೧೦ ದರ ೫
	೨೦೦ ಬಂಗಾರ ತೊಲಿ ೮ ದರ ೨೫
	೨೮೦ ಹತ್ತಿ ನಗ ೭ ದರ ೪೦
	೫೩೦

ತೋಂಡಮಿಳವಣಿ.

ಲಾಭ.	ಹಾನಿ.
೫೦ ಚೆಲ್ಲದ ಖಾತೆ	೫ ಸೀರಿ ಖಾತೆ
೧೩೦ ಹತ್ತಿಯ ಖಾತೆ	೧೪೫ ಸೂಟಬಟ್ಟಾ ಖಾತೆ
೧ ಹುಂಡಿ ಖರೇದಿ ಖಾತೆ	೧೦ ಕಮಿಶನ ಖಾತೆ
೧೮೭ ಬಡ್ಡಿಯ ಖಾತೆ	೧೭ ಅಕ್ಕಿಯ ಖಾತೆ
೨ ಹುಂಡಾವಳಿ ಖಾತೆ	೧ ದಲಾಲಿ ಖಾತೆ
೩೦೦ ಅರಳಿ ಖಾತೆ	೧ ಸಕರಾಯಿ ನಕರಾಯಿ
೨೫೦ ಗೋದಿಯ ಖಾತೆ	೧೦ ಬಾಡಿಗೆ
೭೫ ಕಾಗದ ಖಾತೆ	———
೨೫ ತಂಬಾಕದ ಖಾತೆ	೧೮೯
೧೦೦ ದಲಾಲಿ ಮಾಲಿನ ಖಾತೆ	
———	
೧೧೨೦	

ಬಾಬವಾರ ಖಾತೆಗಳಿಂದ ಬರತಕ್ಕದ್ದು.	ಬಾಬವಾರ ಖಾತೆಗಳಿಗೆ ಕೊಡತಕ್ಕದ್ದು.
೫ ಧರ್ಮಾದಾಯ ಖಾತೆ	೧೯೫ ಜಮೀನಬಾಬ ಖಾತೆ
೧೬೦ ತೆರಿಗೆಯ ಖಾತೆ	
೨ ಪಗಾರ ಖಾತೆ	
೨೫ ಮನೆಯ ಖರ್ಚು ಖಾತೆ	
೧ ಸಾದಿಲವಾರ ಖಾತೆ	
———	
೨೦೩	

ಅಖೇರ ಅಢಾವೆ.

ಜನರಿಂದ ಬರತಕ್ಕ ರಕಮು	ಜನರಿಗೆ ಕೊಡತಕ್ಕ ರಕಮು.
೫೦ ಗುರಪ್ಪನಿಂದ	೧೦೦ ಶಂಕರಪ್ಪ ಚೆಲ್ಲದ ಇವನಿಗೆ
೧೬೨ ಚಂದ್ರಪ್ಪನಿಂದ	೧೨೫ ರಾಜಶೇಖರ ಸೆಟ್ಟರಿಗೆ
೧೨೦ ಭೀಮರಾವ ಪಾಟೀಲರಿಂದ	೧೦೦ ಠೇವ ಖಾತೆಗೆ
೨೯೦ ಸಯ್ಯದಸಾಹೇಬರಿಂದ	೧೯೦ ಹುಸೇನಸಾಹೇಬರಿಗೆ
———	———
೬೨೨	೫೧೫

೬ ನೆಯ ಪ್ರಕರಣ.

ಕೀರ್ದಿಯ ನಮೂನೆ.

ರೋಜಕೀರ್ದಿ ಖಾಸಗತ ಶಿವಪ್ಪ ಸಂಗಪ್ಪ ಸೆಟ್ಟರ ಬೆಳಗಾಂವಿ.
ಮಿತಿ ಕಾರ್ತಿಕ ಶುದ್ಧ ೧ ಶಕೆ ೧೮೪೦ ರಿಂದ ಮಿತಿ ಆಶ್ವಿನ ವ. ೩೦ ಶಕೆ ೧೮೪೧ ರ ವರೆಗೆ.

ಕೀರ್ದಿಪಾನು. ೧

ಅವಲ ಆಢಾವೆ.

ಆಶ್ವಿನ ಶಕೆ ೧೮೪೦ ರ ಕೊನೆಗೆ ಕೊಡಕೊಳ್ಳುವದು ಹೊರಟಿದ್ದು.

ಜಮೆ	ರೂ.	ಖರ್ಚು	ರೂ.
ಖುದ್ದಖಾತೆ; ಜನರಿಂದ ಬರತಕ್ಕದ್ದು ಅವರವರ ಹೆಸರಿನಿಂದ ಖರ್ಚು ಬರೆದು ಖಾ. ಪಾ. ೩	೨೩೪೫*	ಜನರಿಂದ ಬರತಕ್ಕದ್ದು ಕೆಳಗೆ ಬರೆದಂತೆ	೨೩೪೫
ಜನರಿಗೆ ಕೊಡತಕ್ಕದ್ದು ಕೆಳಗೆ ಬರೆದ ಪ್ರಕಾರ	೨೦೦೦	ಶಂಕರಪ್ಪ ಬೆಲ್ಲದ ಖಾ. ಪಾ. ೬	೧೫೦೦
ಶಿವಪ್ಪ ಜವಳಿ ಖಾ. ಪಾ. ೬	೮೦೦	ಬಸಪ್ಪ ಸಕ್ಕರಿ ಖಾ. ಪಾ. ೫	೫೦೦
ರಾಮಪ್ಪ ತುಪ್ಪದ ಖಾ. ಪಾ. ೬	೧೨೦೦	ಭೀಮರಾವ ಪಾಟೀಲ ಖಾ. ಪಾ. ೫	೩೪೫
ಈ ರಕಮನ್ನು ಖುದ್ದ ಖಾತೆಗೆ ಖರ್ಚು ಬರೆದು	೨೦೦೦	ಈ ರಕಮನ್ನು ಖುದ್ದ ಖಾತೆಗೆ ಜಮೆ ಬರೆದು	೨೩೪೫
		ಖುದ್ದಖಾತೆ; ಜನರಿಗೆ ಕೊಡತಕ್ಕದ್ದು ಅವರವರ ಹೆಸರಿಲೆ ಜಮೆ ಬರೆದು ಖಾ. ಪಾ. ೩	೨೦೦೦
ಅಂತು ನಾಲ್ಕು ಸಾವಿರದ ಮುನ್ನೂರಾ ನಾಲ್ವತ್ತೈದು ರೂಪಾಯಿಗಳು ದಸ್ತೂರ ಶಿವಪ್ಪಸೆಟ್ಟಿ	೪೩೪೫	ಅಂತು ನಾಲ್ಕುಸಾವಿರದ ಮುನ್ನೂರಾ ನಾಲ್ವತ್ತೈದು ರೂಪಾಯಿಗಳು ದ. ಶಿವಪ್ಪ ಸೆಟ್ಟಿ	೪೩೪೫

* ಈ ರಕಮುಗಳನ್ನು ಖತಾವಣಿಯಲ್ಲಿ ಚಾಲಮಾಡಿದ ಬಗ್ಗೆ ✓ + ಇವೇ ಮುಂತಾದ ಗುರುತುಗಳಲ್ಲಿ ಯಾವದೊಂದನ್ನು ಮಾಡತಕ್ಕದ್ದು. ಮುದ್ರಣದ ಅನನುಕೂಲಕ್ಕಾಗಿ ಇಲ್ಲಿ ಮಾಡಿಲ್ಲ.

ಕೀರ್ದಿಪಾನು ೨.

ಕಾರ್ತಿಕ ಶುದ್ಧ ಪ್ರತಿಪದೆ ಶಕೆ ೧೮೪೦.

ಜಮೆ ——— ರೂ.

೧೫೦೦ ಖುದ್ದ ಖಾತೆ ಹೋದವರ್ಷದ ಸಿಲಕು
೧೦೦೦ ರೋಖ
೫೦೦ ಮಾಲು; ಖರೇದಿವಿಕರಿಖಾತೆಗೆ ಖರ್ಚು ಬರೆದು.
ಖಾ. ಪಾ. ೩

ಈವೊತ್ತಿನ ಜಮೆ.

೫೦೦ ಖರೆದಿವಿಕರಿಖಾತೆ; ಜೀನಸವಾರ ಖಾತೆಗಳಿಗೆ ಖರ್ಚುಬರೆದ ವಿವರ.
೨೦೦ ರೂ. ಬೆಲ್ಲ.
೩೦೦ ರೂ. ಸೀರಿ
———
೫೦೦
ಖಾ. ಪಾ. ೩

೧೦೦೦ ಒಟ್ಟು ಜಮೆ (ಮಾಲು ಸಹ)
೦ ರೋಖ
೧೦೦೦ ಪರಭಾರೆ
———
೧೦೦೦

೨೦೦೦ ಅಂತೂ ಎರಡುಸಾವಿರ ರೂಪಾಯಿಗಳು ದಸ್ತೂರ ಶಿವಪ್ಪಸೆಟ್ಟಿ.
೧೦೦೦ ಪರಭಾರೆ

ಖರ್ಚು ——— ರೂ.

ಈವೊತ್ತಿನ ಖರ್ಚು.

೫೦೦ ಖರೇದಿವಿಕರಿಖಾತೆ; ಸಿಲಕುಮಾಲಿನ ಬೆಲೆಯನ್ನು ಸಿಲಕಿನಲ್ಲಿ ತೋರಿಸಿದ್ದರ ವಿವರ.
೨೦೦ ಬೆಲ್ಲ ೫೦ ಮಣ ದರ ೪ ರೂ. ಪ್ರಕಾರ.
೩೦೦ ಸೀರಿ ೨೦ ದರ ೧೫ ರೂ. ಪ್ರ.
———
೫೦೦
ಖಾ. ಪಾ. ೩.

೨೦೦ ಬೆಲ್ಲದ ಖಾತೆ; ಖರೇದಿವಿಕರಿ ಖಾತೆಗೆ ಜಮೆ ಹಿಡಿದು.
ಖಾ. ಪಾ. ೫.

೩೦೦ ಸೀರಿಖಾತೆ; ಖರೇದಿವಿಕರಿ ಖಾತೆಗೆ ಜಮೆ ಹಿಡಿದು.
ಖಾ. ಪಾ. ೬.

೫೦ ಗುರಪ್ಪ ಸೆಟ್ಟಿ ಈವರಖಾತೆ; ಇವರಿಗೆ ಈವೊತ್ತಿನ ದಿವಸ ಪ್ರಾಮಿಸರಿ ನೋಟು ಬರೆಯಿಸಿಕೊಂಡು ಸಾಲಕೊಟ್ಟದ್ದು.
ಖಾ. ಪಾ. ೩.

೨೦೦ ಚಂದ್ರಪ್ಪ ಇವರ ಖಾತೆ ಇವರಿಗೆ ಈವೊತ್ತು ಸರಿಗೆ ೧೦ ತೊಲಿ, ೧೦೦ ಬಣ್ಣದ್ದು ದರ ೨೫ ರೂ. ಯದು ಒತ್ತಿ ಇಟ್ಟುಕೊಂಡು ಸಾಲಾ ಕೊಟ್ಟದ್ದು ಬಡ್ಡಿದರ ೧೦೦ಕ್ಕೆ ತಿಂಗಳಿಗೆ -||- ಪ್ರ. ಮುದ್ದತ್ತು ಒಂದು ವರ್ಷ.
ಖಾ. ಪಾ. ೩.

೧೨೫೦ ಒಟ್ಟು ಖರ್ಚು.
೨೫೦ ರೋಖ
೧೦೦೦ ಪರಭಾರೆ
———
೧೨೫೦

ಕೀರ್ದಿಪಾನು ೩.

೭೫೦ ನಾಳಿನ ಸಿಲಕು.

೨೦೦೦ ಅಂತು ಎರಡು ಸಾವಿರ ರೂಪಾಯಿಗಳು ದಸ್ತೂರ ಶಿವಪ್ಪ ಸೆಟ್ಟಿ.

ಕಾರ್ತಿಕ ಶುದ್ಧ ೨.

ಜಮೆ——— ರೂ.

೭೫೦ ನಿನ್ನಿನ ಸಿಲಕು

ಈಪೊತ್ತಿನ ಜಮೆ

೧೫೦೦ **ಶಂಕರಪ್ಪಾ ಬೆಲ್ಲದ ಇವರ ಖಾತೆ,** ಇವರಿಂದ ಹಿಂದಿನ ಬಾಕಿ ಬಂದ ವಿವರ.

೧೨೦೦ ಬಂಗಾರ ೪೦ ತೊಲಿ, ದರ ೩೦ಪ್ರ. ಬಂಗಾರ ಖಾತೆಗೆ ಖರ್ಚುಬರೆದು

೨೦೦ ಹುಂಡಿ, ಮುಂಬಯಿ ಕರೀಮಭಾಯಿ ಇವರ ಮೇಲೆ ಇದ್ದದ್ದು ಹುಂಡೀ ಖರೇದಿ ಖಾತೆಗೆ ಖರ್ಚು ಬರೆದು

೧೦೦ ಸೂಟು ಬಿಟ್ಟದ್ದರಿಂದ ಸೂಟಬಟ್ಟಾ ಖಾತೆಗೆ ಖರ್ಚು ಬರೆದು

೧೫೦೦

ಖಾ. ಪಾ. ೬

೧೫೦೦ ಒಟ್ಟು ಜಮೆ
೦ ರೋಖ
೧೫೦೦ **ಪರಭಾರೆ**

೧೫೦೦

೨೨೫೦ ಅಂತು ಇಪ್ಪತ್ತೆರಡುನೂರಾ ಐವತ್ತು ರೂಪಾಯಿಗಳು. ದ. ಶಿವಪ್ಪಾ

ಖರ್ಚು——— ರೂ.

ಈಪೊತ್ತಿನ ಖರ್ಚು

೧೨೦೦ **ಬಂಗಾರಖಾತೆ** ಶಂಕರಪ್ಪ ಬೆಲ್ಲದ ಇವರ ಖಾತೆಗೆ ಜಮೆ ಹಿಡಿದು, ತೊಲಿ ೪೦ ದರ ೩೦

ಖಾ. ಪಾ. ೫.

೨೦೦ **ಹುಂಡಿಖರೇದಿಖಾತೆ** ಮುಂಬಯಿ ಕರೀಮಭಾಯಿ ಇವರ ಮೇಲಿನ ಶಹಜೋಗ ದರ್ಶನಿ ಶಂಕರಪ್ಪಾ ಇವರ ಹೆಸರಿಲೆ ಜಮೆ ಹಿಡಿದು

ಖಾ. ಪಾ. ೭.

೧೦೦ **ಸೂಟಬಟ್ಟಾಖಾತೆ,** ಶಂಕರಪ್ಪ ಇವರ ಹೆಸರಿಲೆ ಜಮೆ ಹಿಡಿದು

ಖಾ. ಪಾ. ೭.

೪೦ **ಭೀಮರಾವ ದೇಶಪಾಂಡೆ ಇವರಖಾತೆ** ಇವರಿಗೆ ಕೈಗಡ ಕೊಟ್ಟದ್ದು ರೋಖ

ಖಾ. ಪಾ. ೫.

೧೫೪೦ ಒಟ್ಟು ಖರ್ಚು
೪೦ ರೋಖ
೧೫೦೦ **ಪರಭಾರೆ**

೧೫೪೦

೭೧೦ ನಾಳಿನ ಸಿಲಕು

೨೨೫೦ ಅಂತು ಇಪ್ಪತ್ತೆರಡುನೂರಾ ಐವತ್ತು ರೂಪಾಯಿಗಳು ದ. ಸೆಟ್ಟಿ

ಕೀರ್ದಿಪಾನು ೪.

ಕಾರ್ತಿಕ ಶುದ್ಧ ೩.

ಜಮೆ ——— ರೂ.

೭೧೦ ನಿನ್ನಿನ ಸಿಲಕು.

ಈವೊತ್ತಿನ ಜಮೆ.

೨೦೧ **ಹುಂಡಿ ಖರೇದಿ ಖಾತೆ,** ಮುಂಬಯಿ ಕರೀಮಭಾಯಿ ಇವರ ಮೇಲಿನ ಹುಂಡಿ ಹುಬ್ಬಳ್ಳಿಯ ರಾಜಶೇಖರ ಸೆಟ್ಟಿ ಇವರು ಬರೆದದ್ದು ನಾರಾಯಣರಾವ ಸುಗಂಧಿ ಇವರಿಗೆ ಮಾರಿತು. ರೋಖ

ಖಾ. ಪಾ. ೭.

೭೫೦ **ಹತ್ತಿಯ ಖಾತೆ,** ಉದ್ಧರಿ ಸಂಜಾಯತ ಕರಾರಿನಿಂದ ಗಂಗಪ್ಪ ಇವರಿಗೆ ನಗ ೧೫ ದರ ೫೦ ಪ್ರ. ಕೊಟ್ಟದ್ದರಿಂದ ಅವರ ಹೆಸರಿನಿಂದ ಖರ್ಚು ಬರೆದು.

ಖಾ. ಪಾ. ೭.

೧೦೦ **ಅಮಾನತ ಖಾತೆ,** ರಸ್ತೆಯಲ್ಲಿ ೧೦೦ ರೂಪಾಯಿಗಳ ನೋಟು ಸಿಕ್ಕದ್ದರಿಂದ.

ಖಾ. ಪಾ. ೨.

೧೦೦೦ **ಬಂಗಾರ ಖಾತೆ,** ತೊಲಿ ೪೦ ದರ ೨೫ ರಂತೆ ರೋಖ ಮಾರಿದ್ದು.

ಖಾ. ಪಾ. ೫.

೨೦೫೧ ಒಟ್ಟು ಜಮೆ.
೧೩೦೧ ರೋಖ
೭೫೦ ಪರಭಾರೆ
———
೨೦೫೧

೨೭೬೧ ಅಂತು ಇಪ್ಪತ್ತೇಳು ನೂರಾ ಅರವತ್ತೊಂದು ರೂಪಾಯಿಗಳು ದ॥ ಶಿವಪ್ಪ ಸೆಟ್ಟಿ

ಖರ್ಚು ——— ರೂ.

ಈ ಹೊತ್ತಿನ ಖರ್ಚು.

೮೦೦ **ಹತ್ತಿಯ ಖಾತೆ,** ನಗ ೨೦ ದರ ೪೦ ರಂತೆ ರೋಖ ಖರೇದಿ ಮಾಡಿತು.

ಖಾ. ಪಾ. ೭.

೪೦ **ರವಾನಗೀ ಖಾತೆ,** ಅಂಗಡಿಯ ನೌಕರನಾದ ರಾಮಾ ಕದಮ ಇವನನ್ನು ಅಕ್ಕಿ ತರಲಿಕ್ಕೆ ಹಲ್ಯಾಳಕ್ಕೆ ಕಳುಹಿತು.

ಖಾ. ಪಾ. ೫.

೭೫೦ **ಗಂಗಪ್ಪ ಇವರ ಖಾತೆ,** ಸಂಜಾಯತ ಕರಾರಿನಿಂದ ಹತ್ತಿ ಮಾರಲಿಕ್ಕೆ ಕೊಟ್ಟದ್ದರಿಂದ ಹತ್ತಿಯ ಖಾತೆಗೆ ಜಮೆ ಬರೆದು.

ಖಾ. ಪಾ. ೩.

೧ **ಧರ್ಮಾದಾಯ ಖಾತೆ,** ಕೀರ್ತನ ಕಾರನಿಗೆ ಕೊಟ್ಟದ್ದು.

ಖಾ. ಪಾ. ೪.

೧೫೯೧ ಒಟ್ಟು ಖರ್ಚು.
೮೪೧ ರೋಖ
೭೫೦ ಪರಭಾರೆ
———
೧೫೯೧

೧೧೭೦ ನಾಳಿನ ಸಿಲಕು.

೨೭೬೧ ಅಂತು ಇಪ್ಪತ್ತೇಳು ನೂರಾ ಅರವತ್ತೊಂದು ರೂಪಾಯಿಗಳು.
ದ॥ ಶಿವಪ್ಪ ಸೆಟ್ಟಿ.

ಕೀರ್ದಿಪಾನು ೫.

ಕಾರ್ತಿಕ ಶುದ್ಧ ೪.

ಜಮೆ —— ರೂ.

೧೧೭೦ ನಿನ್ನಿನ ಸಿಲಕು.

ಈನ್ರೊತ್ತಿನ ಜಮೆ.

೫೦೦ ಬಸಪ್ಪ ಸಕ್ಕರಿ ಇವರ ಖಾತೆ ಇವರಿಂದ ಹಿಂದಿನ ಬಾಕಿ ೫೦೦ ರೂ. ಅದರ ಬಡ್ಡಿ ೧೨೫ ವಸೂಲಾದ ವಿವರ.

೪೫೦ ರೋಖ.

೫೦ ಗುರಪ್ಪನ ಹವಾಲೆ ಕೊಟ್ಟದ್ದರಿಂದ ಅವನ ಖಾತೆಗೆ ಖರ್ಚು ಬರೆದು.

೧೦೦ ಗೋದಿ ಹೇರು ೧೦ ದರ ೧೦ ರಂತೆ ಕೊಟ್ಟದ್ದರಿಂದ ಗೋದಿಯ ಖಾತೆಗೆ ಖರ್ಚು ಬರೆದು.

೨೫ ಸೂಟ ಬಿಟ್ಟ ಕಾರಣ ಸೂಟಬಟ್ಟಾ ಖಾತೆಗೆ ಖರ್ಚು ಬರೆದು.

೬೨೫

೧೨೫ ಬಡ್ಡಿಯ ಹಣ ಬಡ್ಡಿಯ ——ಖಾತೆಗೆ ಜಮೆ ಮಾಡಿದ್ದು ೫೦೦ ರಿಂದ ವಜಾ.

ಖಾ. ಪಾ. ೫.

೧೨೫ ಬಡ್ಡಿಯ ಖಾತೆ, ಬಸಪ್ಪ ಸಕ್ಕರಿ ಈತನಿಂದ ಬಡ್ಡಿ ಬಂದದ್ದು.

ಖಾ. ಪಾ. ೫.

೧೨೫ ಹುಂಡಿ ಖಾತೆ ರಾಜಶೇಖರ ಸೆಟ್ಟಿ ಹುಬ್ಬಳಿ ಅಂಗಡಿ ಇವರ

ಖರ್ಚು —— ರೂ.

ಈನ್ರೊತ್ತಿನ ಖರ್ಚು.

೫೦೦ ಅರಳಿ ಖಾತೆ ಗದಗಿನ ರಾಚಪ್ಪನಲ್ಲಿ ೧೦ ನಗ ದರ ೫೦ ರಂತೆ ರೋಖ ಖರೇದಿ ಮಾಡಿದ್ದು.

ಖಾ. ಪಾ. ೧

೫೦ ಗುರಪ್ಪ ಸೆಟ್ಟಿ ಇವರ ಖಾತೆ, ಬಸಪ್ಪ ಸಕ್ಕರಿ ಇವರ ಹವಾಲೆಗೆ ಒಪ್ಪಿಕೊಂಡ ಕಾರಣ ಬಸಪ್ಪ ಸಕ್ಕರಿ ಇವರ ಖಾತೆಗೆ ಜಮೆ ಬರೆದು.

ಖಾ. ಪಾ. ೨.

೧೦೦ ಗೋದಿಯ ಖಾತೆ; ಹೇರು ೧೦ ದರ ೧೦ರ ಪ್ರಕಾರ ಬಸಪ್ಪನ ಕಡಿಂದ ಬರತಕ್ಕ ಹಣದಲ್ಲಿ ತಕ್ಕೊಂಡದ್ದರಿಂದ ಅವನ ಖಾತೆಗೆ ಜಮೆ ಬರೆದು.

ಖಾ. ಪಾ. ೩.

೨೫ ಸೂಟಬಟ್ಟಾ ಖಾತೆ, ಸೂಟಬಿಟ್ಟ ಕಾರಣ ಬಸಪ್ಪನ ಖಾತೆಗೆ ಜಮೆ ಬರೆದು.

ಖಾ. ಪಾ. ೭.

೨೫ ತಸಲ್ಮಾತ ಖಾತೆ, ತೋಟದ ಬಾವಿಯ ಯಾತದ ದುರಸ್ತಿಗಾಗಿ ಉಪ್ಪಾರ ಭೀಮಪ್ಪನಿಗೆ ಕೊಟ್ಟದ್ದು.

ಖಾ. ಪಾ. ೪.

ಕೀರ್ದಿಪಾನು ೬.

ಮೇಲೆ ರಾಖಲೆ ಗೋಪಾಳ ರಾವ ಇವರಿಗೆ ೨೦ ದಿವಸ ಮುದ್ದತಿಯ ಶಹಜೋಗ ಹುಂಡಿ ಕೊಟ್ಟದ್ದು.
ಖಾ. ಪಾ. ೭.

೧ ಹುಂಡಾವಳಿ ಖಾತೆ, ಮೇಲಿನ ಹುಂಡಿಯ ಬಾಬತು ಬಂದದ್ದು.
ಖಾ. ಪಾ. ೭.

೭೫೧ ಒಟ್ಟು ಜಮೆ.
೫೭೬ ರೋಖ
೧೭೫ ಪರಭಾರೆ
೭೫೧

೧೯೨೧ ಅಂತು ಹತ್ತೊಂಬತ್ತು ನೂರಾ ಇಪ್ಪತ್ತೊಂದು ರೂಪಾಯಿಗಳು ದ|| ಶಿವಪ್ಪ ಸೆಟ್ಟಿ.

೧೦೦ ಅವಮಾನತ ಖಾತೆ, ಹಾದಿಯಲ್ಲಿ ಸಿಕ್ಕ ನೋಟು ಭೀಮರಾವ ದೇಶ ಪಾಂಡೆ ಇವರು ತಮ್ಮದೆಂದು ಸಿದ್ಧಮಾಡಿ ಕೊಟ್ಟ ಕಾರಣ ಅವರ ನೋಟು ಅವರಿಗೆ ತಿರುಗಿ ಕೊಟ್ಟ ಬಗ್ಗೆ.
ಖಾ. ಪಾ. ೨

೧ ಸಾದಿಲವಾರ ಖಾತೆ; ಅಂಗ ಸಾರಿಸಿದ ಬಗ್ಗೆ.
ಖಾ. ಪಾ. ೬

೮೦೧ ಒಟ್ಟು ಖರ್ಚು.
೬೨೬ ರೋಖ
೧೭೫ ಪರಭಾರೆ
೮೦೧

೧೧೨೦ ನಾಳಿನ ಸಿಲಕು.

೧೯೨೧ ಅಂತು ಹತ್ತೊಂಬತ್ತು ನೂರಾ ಇಪ್ಪತ್ತೊಂದು ರೂಪಾಯಿಗಳು ದ|| ಶಿವಪ್ಪ ಸೆಟ್ಟಿ.

ಕಾರ್ತಿಕ ಶು. ೫

ಜಮೆ ರೂ.

೧೧೨೦ ನಿನ್ನಿನ ಸಿಲಕು

ಈ ವೊತ್ತಿನ ಜಮೆ

೨೦೦ ಜಮೀನ ಬಾಬ ಖಾತೆ; ರಾಮಾ ಕದಮ ಇವನಿಂದ ಹೊಲದ ಲಾವಣಿ ವಸೂಲಾದ ವಿವರ.

೫೦ ಸರಕಾರೀ ತೆರಿಗೆ ಕೊಟ್ಟ ಕಾರಣ ತೆರಿಗೆಯ ಖಾತೆಗೆ ಖರ್ಚು ಬರೆದು.

೧೫೦ ಗೋದಿ ಹೇರು ೧೦, ದರ ೧೫ ರಂತೆ ಕೊಟ್ಟ ಕಾರಣ ಗೋದಿಯ ಖಾತೆಗೆ

ಖರ್ಚು ರೂ.

ಈವೊತ್ತಿನ ಖರ್ಚು

೫೦ ತೆರಿಗೆಯ ಖಾತೆ; ಹೊಲದ ಬಾಬತು ಸರಕಾರಕ್ಕೆ ತೆರಿಗೆ ಕೊಟ್ಟ ಬಗ್ಗೆ ಜಮೀನ ಬಾಬ ಖಾತೆಗೆ ಜಮೆ ಬರೆದು.
ಖಾ. ಪಾ. ೪.

೧೫೦ ಗೋದಿಯ ಖಾತೆ; ಹೇರು ೧೦ ದರ ೧೫ ರಂತೆ; ಜಮೀನ ಬಾಬ ಖಾತೆಗೆ ಜಮೆ ಬರೆದು
ಖಾ. ಪಾ. ೩.

ಕೀರ್ದಿಪಾನು ೭

ಖರ್ಚು ಬರೆದು.

೨೦೦

ಖಾ. ಪಾ. ೩.

೫೦ ಚಂದ್ರಪ್ಪನ ಖಾತೆ; ಗೋದಿ ಕೊಂಡ ಬಗ್ಗೆ ರಾಚಪ್ಪನ ಹವಾಲೆಗೆ ಒಪ್ಪಿಕೊಂಡ ಕಾರಣ ಗೋದಿಯ ಖಾತೆಗೆ ಖರ್ಚು ಬರೆದು.

ಖಾ. ಪಾ. ೩.

೫೦ ರಾಚಪ್ಪ ಗದಗ ಇವನ ಖಾತೆ; ಗೋದಿಯ ಬಾಬತು ಬಾಕಿ ಕೊಡತಕ್ಕದ್ದಿರುವ ಕಾರಣ ಗೋದಿಯ ಖಾತೆಗೆ ಖರ್ಚು ಬರೆದು.

ಖಾ. ಪಾ. ೫.

೩೪೫ ಭೀಮರಾವ ಪಾಟೀಲರ ಖಾತೆ; ಇವರಿಂದ ಬರತಕ್ಕ ೩೪೫ ಆಸಲು ಬಂದ ವಿವರ—

೨೨೫ ರೋಖ.

೧೨೦ ಕತಬಿ ಬರಕೊಟ್ಟ ಕಾರಣ ಅವರ ಖಾತೆಗೆ ಖರ್ಚು ಬರೆದು.

೩೪೫.

ಖಾ ಪಾ. ೫.

೪೦ ಬಡ್ಡಿ ಖಾತೆ; ಪಾಟೀಲ ಭೀಮರಾಯರಿಂದ ಬಂದ ಬಡ್ಡಿ ವಿವರ.

೨೦ ರೋಖ

೨೦ ಸೂಟ ಬಿಟ್ಟದ್ದರಿಂದ ಸೂಟಬಟ್ಟ ಖಾತೆಗೆ ಖರ್ಚು ಬರೆದು.

೪೦

ಖಾ. ಪಾ. ೫.

೪೦೦ ಗೋದಿಯ ಖಾತೆ; ಗದಗಿನ ರಾಚಪ್ಪನಲ್ಲಿ ಗೋದಿ ಹೇರು ೪೦, ದರ ೧೦ ರಂತೆ ಕೊಂಡು ಹಣ ಕೊಟ್ಟದ್ದರ ವಿವರ.

೩೦೦ ರೋಖ

೫೦ ಚಂದ್ರಪ್ಪನ ಹವಾಲೆ ಕೊಟ್ಟದ್ದರಿಂದ ಅವನ ಖಾತೆಗೆ ಜಮೆ ಹಿಡಿದು.

೫೦ ಬಾಕಿ ಮಾಡಿಕೊಂಡ ಕಾರಣ ರಾಚಪ್ಪನ ಖಾತೆಗೆ ಜಮೆ ಹಿಡಿದು.

೪೦೦

ಖಾ. ಪಾ. ೩.

೧೨೦ ಭೀಮರಾವ ಪಾಟೀಲರ ಖಾತೆ ಇವರಿಂದ ಸಾಲದ ಕತಬಿ ಬರಸಿಕೊಂಡದ್ದರಿಂದ ಸದರಿಯವರ ಹೆಸರಿನಿಂದ ಜಮೆ ಹಿಡಿದು.

ಖಾ. ಪಾ. ೫.

೨೦ ಸೂಟಬಟ್ಟ ಖಾತೆ; ಭೀಮರಾಯರಿಗೆ ಬಡ್ಡಿಯಲ್ಲಿ ಸೂಟಬಿಟ್ಟದ್ದರಿಂದ ಬಡ್ಡಿಯ ಖಾತೆಗೆ ಜಮೆ ಹಿಡಿದು.

ಖಾ. ಪಾ. ೭.

೧೫೦ ಕಾಗದ ಖಾತೆ; ಗಡ್ಡಿ ೭೫ ದರ ೨ ರಂತೆ ಖರೀದಿಮಾಡಿ ಹಣ ಕೊಟ್ಟದ್ದರ ವಿವರ.

೧೩೫ ರೋಖ.

೧೫ ಕಮಿಶನ ೧೦೦ಕ್ಕೆ ೧೦ ಪ್ರ. ಬಂದದ್ದರಿಂದ ಕಮಿಶನ ಖಾತೆಗೆ ಜಮೆ ಬರೆದು,

೧೫೦

ಕೀರ್ದಿಪಾನು ೮.

೧೫ ಕಮಿಶನ ಖಾತೆ; ಕಾಗದ ಖರೇದಿಯಲ್ಲಿ ಕಮೀಶನ ಸಿಕ್ಕಬಾಬತು.
ಖಾ. ಪಾ. ೨

೪೦ ರವಾನಗಿ ಖಾತೆ; ರಾಮಾ ಕದಮನನ್ನು ಅಕ್ಕಿತರಲಿಕ್ಕೆ ಕಳಿಸಿದ್ದು ತಂದವಿವರ.
೩೭ ಅಕ್ಕಿ ತಂದಕಾರಣ ಅಕ್ಕಿ ಖಾತೆಗೆ ಖರ್ಚು ಬರೆದು.
೧ ದಲಾಲಿ ಕೊಟ್ಟದ್ದರಿಂದ ದಲಾಲಿ ಖಾತೆಗೆ ಖರ್ಚು ಬರೆದು.
೨ ರೂ. ಕಳೆದುಕೊಂಡದ್ದರಿಂದ ಪಗಾರ ಖಾತೆಗೆ ಖರ್ಚು ಬರೆದು.
೪೦
ಖಾ. ಪಾ. ೫

೭೪೦ ಒಟ್ಟು ಜಮೆ.
೨೪೫ ರೋಖ
೪೯೫ ಪರಭಾರೆ
೭೪೦

೧೮೬೦ ಅಂತು ಹದಿನೆಂಟು ನೂರಾ ಅರವತ್ತು ರೂಪಾಯಿಗಳು ದ॥ ಶಿವಪ್ಪ ಸೆಟ್ಟಿ.

೩೭ ಅಕ್ಕಿ ಖಾತೆ; ಹೇರು ೨ ದರ ೧೮॥ ಯಂತೆ ರವಾನಿಗೆ ಖಾತೆಗೆ ಜಮೆ ಹಿಡಿದು.
ಖಾ. ಪಾ. ೨

೧ ದಲಾಲಿ ಖಾತೆ; ಅಕ್ಕಿ ಖರೇದಿಯಬಗ್ಗೆ ದಲಾಲಿಕೊಟ್ಟಬಗ್ಗೆ.
ಖಾ. ಪಾ. ೪

೨ ಪಗಾರ ಖಾತೆ; ರಾಮಾ ಕದಮ ಇವನು ಅಕ್ಕಿ ತರಲಿಕ್ಕೆ ಹೋದಾಗ ಕಳೆದುಕೊಂಡಕಾರಣ ಅವನ ಪಗಾರದಲ್ಲಿ ಮುರಿದ ಬಗ್ಗೆ
ಖಾ. ಪಾ. ೪

೯೩೦ ಒಟ್ಟು ಖರ್ಚು
೪೩೫ ರೋಖ
೪೯೫ ಪರಭಾರೆ

೯೩೦
೯೩೦ ನಾಳಿನ ಸಿಲಕು

೧೮೬೦ ಅಂತು ಹದಿನೆಂಟು ನೂರಾ ಅರವತ್ತು ರೂಪಾಯಿಗಳು ದ॥ ಶಿವಪ್ಪ ಸೆಟ್ಟಿ.

ಕಾರ್ತಿಕ ಶುದ್ಧ ೬.

ಜಮೆ ———————— ರೂ.
೯೩೦ ನಿನ್ನಿನ ಸಿಲಕು.

ಈಪ್ರೊತ್ತಿನ ಜಮೆ.
೨೦೦ ಬೆಲ್ಲದ ಖಾತೆ; ಬೆಲ್ಲಮಣ ೪೦, ದರ ೫ ರಂತೆ ಶಿವಪ್ಪನಿಗೆ ಸಂಜಾ

ಖರ್ಚು ———————— ರೂ.
ಈಪ್ರೊತ್ತಿನ ಖರ್ಚು.
೨೫ ಮನೆಯ ಖರ್ಚು ಖಾತೆ; ಮನೆಯ ದೆಸೆಯಿಂದ ೨ ಸೀರೆ ಅಂಗಡಿಯೊಳಗಿಂದ ದರ ೧೨॥

ಕೀರ್ದಿಪಾನ ೯

೫೦ ಗುರಪ್ಪ ಇವರ ಖಾತೆ; ಇವರು ಪ್ರಾಮಿಸರಿನೋಟು ಬರಕೊಟ್ಟು ಸಾಲ ಒಯ್ದಿದ್ದು ತಂದು ಕೊಟ್ಟ ಬಗ್ಗೆ.

ಖಾ. ಪಾ. ೩.

---

೧೦ ಬಡ್ಡಿಖಾತೆ; ಸದರಿಯವರಿಂದ ಬಡ್ಡಿ ಬಂದದ್ದು.

ಖಾ. ಪಾ. ೫.

---

೨೫ ಸೀರಿಯಖಾತೆ; ಮನೆಯ ದೆಸೆಯಿಂದ ೨ ಸೀರಿ ತೆಗೆದುಕೊಂಡದ್ದು. ಪೇಟೆಯ ದರ ೧೨||; ಮನೆಯ ಖರ್ಚುಖಾತೆಗೆ ಖರ್ಚು ಬರೆದು.

ಖಾ. ಪಾ. ೬.

---

೪೦ ಭೀಮರಾವ ದೇಶಪಾಂಡೆ ಇವರ ಖಾತೆ ಇವರು ಕೈಗಡ ಒಯ್ದ ರೂ. ಗಳನ್ನು ತಂದುಕೊಟ್ಟವಿವರ.

೩೦ ರೋಖ.

೧೦ ರಾಮಪ್ಪ ತುಪ್ಪದ ಇವರ ಹವಾಲೆ ಕೊಟ್ಟದ್ದರಿಂದ ಅವರ ಹೆಸರಿನಿಂದ ಖರ್ಚು ಬರೆದು.

೪೦

ಖಾ. ಪಾ. ೫.

---

೮೦೦ ಅರಳಿಖಾತೆ; ನಗ ೧೦ ದರ ೮೦ ರಂತೆ ಶಿವಪ್ಪ ಜವಳಿ ಇವರಿಂದ ಕರಾರಿನಿಂದ ರೋಖ ಪಣಕ್ಕೆ ಕೊಟ್ಟ ಬಾಬತು.

ಖಾ. ಪಾ. ೫

---

೧೦ ರಾಮಪ್ಪ ತುಪ್ಪದ ಇವರ ಖಾತೆ; ಭೀಮರಾವ ದೇಶಪಾಂಡೆ ಇವರ ಹವಾಲೆ ಹಿಡಿದಕಾರಣ ಭೀಮರಾಯರ ಖಾ. ಗೆ ಜ. ಹಿಡಿದು

ಖಾ. ಪಾ. ೬.

---

೧೨೦ ತೆರಿಗೆಯ ಖಾತೆ, ಸರಕಾರಕ್ಕೆ ಉತ್ಪನ್ನದ ಮೇಲಿನ ಕರಕೊಟ್ಟದ್ದು

ಖಾ. ಪಾ. ೪.

---

೮೦೦ ಶಿವಪ್ಪ ಜವಳಿ ಖಾತೆ; ಇವರಿಗೆ ಕೊಡತಕ್ಕ ಹಣದಲ್ಲಿ ಅರಳಿ ನಗ ೧೦ದರ ೮೦ ರಂತೆ ಕೊಟ್ಟ ಕಾರಣ ಅರಳಿಖಾತೆಗೆ ಜಮೆಹಿಡಿದು.

ಖಾ. ಪಾ. ೬.

---

೫೦ ರಾಚಪ್ಪನ ಖಾತೆ, ಗೋದಿಯ ಬಾಬತು ಲೆಕ್ಕ ಕೊಟ್ಟಕಾರಣ.

ಖಾ. ಪಾ. ೫.

೧೦೦೫ ಒಟ್ಟು ಖರ್ಚು.

೧೭೦ ರೋಖ

೮೩೫ ಪರಭಾರೆ

೧೦೦೫

೧೦೫೦ ನಾಳಿನ ಸಿಲಕು

೨೦೫೫ ಅಂತು ಎರಡುಸಾವಿರದ ಐವತ್ತೈದು ರೂ. ಗಳು ದ. ಶಿವಪ್ಪಸೆಟ್ಟಿ.

ಕೀರ್ದಿಪಾನ ೧೦

ರು ನಮಗೆ ಕೊಡತಕ್ಕ ಹಣದ
ಲ್ಲಿ ಮುರಕೊಂಡದ್ದರಿಂದ ಅವ
ರ ಖಾತೆಗೆ ಖರ್ಚು ಬರೆದು.

ಖಾ. ಪಾ. ೨

೧೧೨೫ ಒಟ್ಟು ಜಮೆ
೨೯೦ ರೋಖ
೮೩೫ ಪರಭಾರೆ

——

೧೧೨೫

೨೦೫೫ ಅಂತು ಎರಡುಸಾವಿರದ ಐವ
ತ್ತೈದು ರೂ. ಗಳು. ದ. ಸೆಟ್ಟಿ.

ಸೂಚನೆ—ಇದರಂತೆ ತಿಂಗಳದೊಳಗಿನ ಎಲ್ಲ ಮಿತಿಗಳ ಜಮಾಖರ್ಚನ್ನು ಬರೆಯತಕ್ಕದ್ದು.

ಕೀರ್ದಿಯ ತಿಂಗಳ ತೇರೀಜು.

ಶಕೆ ೧೮೪೦ ರ ಕಾರ್ತಿಕ ಮಾಸದ ಬಗ್ಗೆ.

	ಜ. ——— ರೂ.	ಖ. ——— ರೂ.
ಹಿಂದಿನ ತಿಂಗಳ ಸಿಲಕು	೧೫೦೦	೦
	ಈ ತಿಂಗಳ ಜಮೆ.	ಈ ತಿಂಗಳ ಖರ್ಚು.
ಕಾರ್ತಿಕ ಶು. ೧	೫೦೦	೧೨೫೦
,, ೨	೧೫೦೦	೧೫೪೦
,, ೩	೨೦೫೧	೧೫೯೧
,, ೪	೭೫೧	೮೦೧
,, ೫	೭೪೦	೯೩೦
,, ೬	೧೧೨೫	೧೦೦೫
	೬೬೬೭	೭೧೧೭
ಮುಂದಿನ ತಿಂಗಳ ಸಿಲಕು.	೦	೧೦೫೦
	೮೧೬೭	೮೧೬೭

ಖತಾವಣಿಯ ತಿಂಗಳ ತೇರೀಜು.

ಶಕೆ ೧೮೪೦ ರ ಕಾರ್ತಿಕ ಮಾಸದ ಬಗ್ಗೆ.

ಖಾತೆಗಳ ಹೆಸರು.	ಜ. ——— ರೂ.	ಖ. ——— ರೂ.
೧ ಅಕ್ಕಿಖಾತೆ.	೦	೩೭
೨ ಅಮಾನತಖಾತೆ	೧೦೦	೧೦೦

ಕೀರ್ದಿಪಾನು ೧೧.

೩ ಅರಳಿಖಾತೆ	೮೦೦	೫೦೦
೪ ಕಮಿಶನಖಾತೆ	೧೫	೦
೫ ಕಾಗದಖಾತೆ	೦	೧೫೦
೬ ಖರೇದಿವಿಕರಿಖಾತೆ	೫೦೦	೫೦೦
೭ ಗುರಪ್ಪನಖಾತೆ	೫೦	೧೦೦
೮ ಗೋದಿಖಾತೆ	೦	೬೫೦
೯ ಗಂಗಪ್ಪನಖಾತೆ	೦	೭೫೦
೧೦ ಚಂದ್ರಪ್ಪನಖಾತೆ	೫೦	೨೦೦
೧೧ ಜಮೀನಬಾಬಖಾತೆ	೨೦೦	೦
೧೨ ತಸಲ್ಮಾತಖಾತೆ	೦	೨೫
೧೩ ತೆರಿಗೆಯಖಾತೆ	೦	೧೭೦
೧೪ ದಲಾಲಿಖಾತೆ	೦	೧
೧೫ ಧರ್ಮಾದಾಯಖಾತೆ	೦	೧
೧೬ ಪಗಾರಖಾತೆ	೦	೨
೧೭ ಬಡ್ಡಿಯಖಾತೆ	೧೭೫	೦
೧೮ ಬಸಪ್ಪನಖಾತೆ	೫೦೦	೦
೧೯ ಬೆಲ್ಲದಖಾತೆ	೨೦೦	೨೦೦
೨೦ ಬಂಗಾರದಖಾತೆ	೧೦೦೦	೧೨೦೦
೨೧ ಭೀಮರಾವದೇಶಪಾಂಡೆ	೪೦	೪೦
೨೨ ಭೀಮರಾವ ಪಾಟೀಲ	೩೪೫	೧೨೦
೨೩ ಮನೆಯ ಖರ್ಚುಖಾತೆ	೦	೨೫
೨೪ ರವಾನಗಿಖಾತೆ	೪೦	೪೦
೨೫ ರಾಜಪ್ಪನಖಾತೆ	೫೦	೫೦
೨೬ ರಾಮಪ್ಪನಖಾತೆ	೦	೧೦
೨೭ ಶಂಕರಪ್ಪನಖಾತೆ	೧೫೦೦	೦
೨೮ ಶಿವಪ್ಪನಖಾತೆ	೦	೮೦೦
೨೯ ಸಾದಿಲವಾರಖಾತೆ	೦	೧
೩೦ ಸೀರಿಖಾತೆ	೨೫	೩೦೦
೩೧ ಸೂಟಬಟ್ಟ್ಯಾಖಾತೆ	೦	೧೪೫
೩೨ ಹತ್ತಿಯಖಾತೆ	೬೫೦	೮೦೦
೩೩ ಹುಂಡಾವಳಿಖಾತೆ	೧	೦
೩೪ ಹುಂಡಿಖಾತೆ	೧೨೫	೦

ಕೀರ್ದಿಪಾನು ೧೨.

೩೫ ಹುಂಡಿಖರೀದಿಖಾತೆ ೨೦೧ ೨೦೦

೬೨೬೭ ೭೧೧೭

ಈ ಬೇರೀಜುಗಳು ಹಿಂದಿನ ಕೀರ್ದಿಯ ಬೇರೀಜಿಗೆ (ಸಿಲಕಿನ ಹೊರತು) ಸರಿಯಾಗಿರುವವು. ಆದರಿಂದ ಕೀರ್ದಿಯ ಎಲ್ಲ ರಕಮು ಖತಾವಣಿಯಲ್ಲಿ ಬಾರ ಮಾಡಿಕೊಂಡಂತಾಯಿತು

ಮಾರ್ಗಶೀರ್ಷ ಶುದ್ಧ ೧.

ಜ. —— ರೂ.

೧೮೫೦ ಹೋದ ತಿಂಗಳ ಶಿಲಕು.

ಉಪ್ತೊತ್ತಿನ ಜಮೆ.

೨೨೫ ಕಾಗದ ಖಾತೆ; ಗಡ್ಡಿ ೭೫ ದರ ೩ ರಂತೆ ಮಾರಿದ ವಿವರ.

೨೦೦ ರೋಖ.

೬೫ ಕಮಿಶನ ಕೊಟ್ಟದ್ದ ರಿಂದ ಕಮಿಶನಖಾತೆಗೆ ಖರ್ಚು ಬರೆದು

೨೨೫

ಖಾ. ಪಾ. ೩.

೯೦೦ ಗೋದಿಯ ಖಾತೆ,೬೦ಹೇರು ದರ೧೫ರಂತೆ ರೋಖ ಮಾರಿದ್ದು

ಖಾ. ಪಾ. ೩.

೧೦೦ ರಾಮಪ್ಪಶೇಷ್ಪದ ಹುಬ್ಬಳ್ಳಿ ಅಂಗಡಿ, ಇವರಖಾತೆ ರಾಖಲೆ ನಾರಾಯಣ ನೀಲಕಂಠ ಇವರಿಗೆ ದರ್ಶನಿ ಶಹಜೋಗ ಹುಂಡಿ ಕೊಟ್ಟದ್ದು ಹಸ್ತೆ ಗೋಪಾಳ ನೀಲಕಂಠ. (ಹುಂಡಿಭರಪಾಯಿ ಯಾದ ಮಿತಿ ಮಾರ್ಗಶೀರ್ಷ ಶುದ್ಧ ೫.)

ಖಾ. ಪಾ.೬.

ಖರ್ಚು —— ರೂ.

ಉಪ್ತೊತ್ತಿನ ಖರ್ಚು.

೨೫ ಕಮಿಶನಖಾತೆ, ಕಾಗದ ಮಾರಾಟದಲ್ಲಿ ಕಮಿಶನ ಕೊಟ್ಟದ್ದರಿಂದ ಕಾಗದ ಖಾತೆಗೆ ಜಮೆ ಬರೆದು.

ಖಾ. ಪಾ. ೨.

೧೦೦೦ ರಾಮಕೃಷ್ಣ ತುಪ್ಪದ ಹುಬ್ಬಳ್ಳಿ ಅಂಗಡಿ ಖಾತೆ ರಾಖಲೆ ಸದಾಶಿವ ಶಂಕರ ಇವರಿಗೆ ಕಾರ್ತಿಕ ಶು. ೫ ದರ್ಶನಿ ಶಹಜೋಗಹುಂಡಿ ಲಾಗು ಆದಕಾರಣ ರೋಖ ಕೊಟ್ಟ ಬಗ್ಗೆ.

ಖಾ. ಪಾ. ೬.

೧೦೦ ಹತ್ತಿಯ ಖಾತೆ, ಗಂಗಪ್ಪ ಇವರಿಗೆ ಸಂಚಾಯತ ಕರಾರಿನಿಂದ ಮಾರಲಿಕ್ಕೆ ಕೊಟ್ಟದ್ದು ಪರತ ಬಂದ ಕಾರಣ ಗಂಗಪ್ಪನ ಖಾ. ಗೆ ಜ. ಬರೆದು ನಗ ೨ ದರ ೫೦.

ಖಾ. ಪಾ ೭.

೫ ಜಮೀನಬಾಬಖಾತೆ, ಯಾತ ದದುರಸ್ತಿಯ ಬಗ್ಗೆ ತಸಲ್ಮಾತ ಖಾತೆಗೆ ಜಮೆ ಬರೆದು.

ಖಾ. ಪಾ. ೩.

ಕೀರ್ದಿಪಾನು. ೧೩

೧೦೦ ಸದಾಶಿವ ಶಂಕರ ಗೋ
ಕಾವಿ ಖಾತೆ, ಇವರ ದಾಖಲೆ
ಯಿಂದ ಶಂಕರಪ್ಪ ಬೆಲ್ಲದ ಮುಂ
ಬಯಿ ಅಂಗಡಿ ಇವರ ಮೇಲೆ
ನಾಲ್ಕು ದಿವಸಗಳ ಮುದ್ದತಿ
ಶಹಜೋಗ ಹುಂಡಿಯನ್ನು ಈ
ಪೊತ್ತಿನ ಮಿತಿಯದು ಕೊ
ಟ್ಟಿದ್ದು.
ಖಾ. ಪಾ. ೬

-॥- ಹುಂಡಾವಳಿ ಖಾತೆ, ಕೆಳ
ಗಿನ ವಿವರದಂತೆ.
-|- ನಾರಾಯಣ ನೀಲಕಂಠ
ಇವರ ಬಗ್ಗೆ.
-|- ಸದಾಶಿವ ಶಂಕರ ಇವರ
ಬಗ್ಗೆ.
ಖಾ. ಪಾ. ೭

೭೫೦ ಗಂಗಪ್ಪನ ಖಾತೆ, ರೋಖ
ಸಂಜಾಯತ ಕರಾರಿನಿಂದ ಹತ್ತಿ
ಮಾರಲಿಕ್ಕೆ ಕೊಟ್ಟಿದ್ದು ಅದರ
ಲೆಕ್ಕ ಬಂದ ವಿವರ.
೬೫೦ ರೋಖ, ನಗ ೧೩ರ ಬೆಲೆ
೧೦೦ ನಗ ೨ ಪರತ ಕೊಟ್ಟದ್ದ
ರಿಂದ ಹತ್ತಿಯ ಖಾತೆಗೆ
ಖರ್ಚು ಬರೆದು.
ಖಾ. ಪಾ. ೩.

೨೫ ತಸಲ್ಮಾತ ಖಾತೆ, ತೋಟದ
ಬಾವಿಯ ಯಾತದ ಬಗ್ಗೆ ಉ
ಪ್ಪಾರ ಭೀಮನಿಗೆ ಕೊಟ್ಟಿದ್ದು
ಆ ಬಗ್ಗೆ ಬಂದ ಯಾದಿಯ
ವಿವರ.
೫ ಯಾತದ ಬಗ್ಗೆ ಖರ್ಚಾದ
ತ ೧೧

೧೧೩೦ ಒಟ್ಟು ಖರ್ಚು.
೧೦೦೦ ರೋಖ
೧೩೦ ಪರಭಾರೆ

೧೧೩೦
೨೧೨೧ ನಾಳಿನ ಸಿಲಕು.

೩೨೫೧ ಅಂತು ಮೂವತ್ತೆರಡು ನೂರಾ
ಐವತ್ತೊಂದು ರೂ. ದ. ಶಿವಪ್ಪ
ಸೆಟ್ಟಿ.

ಕೀರ್ದಿಪಾನು ೧೪

ಕಾರಣ ಜಮೀನಜಾಬ ಖಾ
ತೆಗೆ ಖರ್ಚು ಬರೆದು.
೨೦ ರೋಖ

೨೫
ಖಾ. ಪಾ. ೪

೧೦೦ ಬಸಪ್ಪ ಸಕ್ಕರಿ ಧಾರವಾಡ
ಅಂಗಡಿ ಖಾತೆ, ಇವರ ಮೇ
ಲೆ, ಶಿವಪ್ಪ ಬೆಣ್ಣಿ ಇವರ ರಾ
ಖಲೆಯಿಂದ ನಾಲ್ಕು ದಿವಸ
ಮುದ್ದತಿನ ಶಹಜೋಗ ಹುಂಡಿ
ಯನ್ನು ಕೊಟ್ಟಿದ್ದು.
ಖಾ. ಪಾ. ೫

-||- ಹುಂಡಾವಳಿ ಖಾತೆ, ಮೇ
ಲಿನ ಹುಂಡಿ ಜಾಬಳು.
ಖಾ. ಪಾ. ೭.

೨೨೦೧ ಒಟ್ಟು ಜಮೆ.
೨೦೭೧ ರೋಖ
೧೩೦ ಪರಭಾರೆ
೨೨೦೧

೩೨೫೧ ಅಂತು ಮೂವತ್ತೆರಡು ನೂ
ರಾ ಐವತ್ತೊಂದು ರೂಪಾಯಿ
ಗಳು. ದ|| ಶಿವಪ್ಪ ಸೆಟ್ಟಿ.

ಮಾಗಶೀರ್ಷ ಶುದ್ಧ ೨ ರಿಂದಮಾರ್ಗಶೀರ್ಷ ಶು. ೪ರ ವರೆಗೆ ಜಮಾಖರ್ಚು. (೦)

ಮಾರ್ಗಶೀರ್ಷ ಶು. ೫.

ಜಮೆ ರೂ.	ಖ. ರೂ
೨೧೨೧ ನಿನ್ನಿನ ಸಿಲಕು.	ಈಪ್ರೊತ್ತಿನ ಖರ್ಚು
ಈಪ್ರೊತ್ತಿನ ಜಮೆ.	೧೨೫ ಹುಂಡಿಯು ಖಾತೆ, ರಾಜಶೇ
೧೨೫ ರಾಜಶೆ ಖರ ಸೆಟ್ಟಿ ಇವರ	ಖರ ಸೆಟ್ಟಿ ಹುಬ್ಬಳಿಯು ಅಂಗಡಿ
ಖಾತೆ, ರಾಖಲೆ ಗೋಪಾಳ	ಇವರ ಮೇಲಿನ ರಾಖಲೆ ಗೋಪಾ

ಕೀರ್ದಿ ಪಾನು ೧೫.

ರಾವ ಇವರಿಗೆ ಹುಂಡಿಯ ಹಣ ಭರಪಾಯಿ ಮಾಡಿ ಜೋಕೆ ಕಳಿಸಿದ್ದರಿಂದ ಹುಂಡಿಯ ಖಾತೆಗೆ ಖ. ಬರೆದು

ಖಾ. ಪಾ. ೬

೧೦೦ ಶಂಕರಪ್ಪ ಬೆಲ್ಲದ ಮುಂಬಯಿ ಅಂಗಡಿ ಖಾತೆ, ಇವರ ಮೇಲೆ ಮಾಡಿದ ನಾಲ್ಕು ದಿವಸಗಳ ಮುದ್ದತಿ ಹುಂಡಿ ಮಾರ್ಗಶೀರ್ಷ ಶು. ೧ ಮಿತಿಯದು ಶಹಜೋಗ ಹುಂಡಿ ಪಟಾಯಿಸಿ ಜೋಕೆ ಬಂದಕಾರಣ ರಾಖಲೆ ಸದಾಶಿವ ಶಂಕರ ಇವರ ಹೆಸರಿಲೆ ಖರ್ಚು ಬರೆದು.

ಖಾ. ಪಾ. ೭

೪ ಧರ್ಮಾದಾವ ಖಾತೆ, ಕುರುಡರ ಶಾಲೆಗೆ ಕೊಟ್ಟಬಾಬತು

ಖಾ. ಪಾ. ೪.

೧೦೦ ಠೇವ ಖಾತೆ, ರಾಚಪ್ಪ ಗದಗ ಇವರು ಠೇವ ಇಟ್ಟಬಗ್ಗೆ ಬಡ್ಡಿದರ ೧೦೦ಕ್ಕೆ ತಿಂಗಳಿಗೆ -॥- ಪ್ರ.

ಖಾ. ಪಾ. ೪.

೧೦ ರಾಮಪ್ಪ ತುಪ್ಪದ ಖಾತೆ, ಇವರಿಂದ ಕೈಗಡ ತಂದದ್ದು

ಖಾ. ಪಾ. ೬.

೩೩೯ ಒಟ್ಟು ಜಮೆ.
೧೧೦ ರೋಖ
೨೨೯ ಪರಭಾರೆ
೩೩೯

ಳರಾವ ಇವರ ಮಿ. ಕಾ. ಶು. ೪, ಮು. ೨೦ ದಿ. ಈ ಹುಂಡಿ ಭರಪಾಯಿ ಆಗಿ ಜೋಕೆ ಬಂದಕಾರಣ ರಾಜಶೇಖರ ಸೆಟ್ಟಿ ಇವರ ಖಾತೆಗೆ ಜಮೆ ಮಾಡಿ.

ಖಾ. ಪಾ. ೭

೧೦೦ ಸದಾಶಿವ ಶಂಕರ ಇವರ ಖಾತೆ, ಶಂಕರಪ್ಪ ಬೆಲ್ಲದ ಮುಂಬಯಿ ಅಂಗಡಿ ಇವರು ಹುಂಡಿ ಸ್ವೀಕರಿಸಿ ಜೋಕೆ ಕಳುಹಿದ ಕಾರಣ ಶಂಕರಪ್ಪ ಬೆಲ್ಲದ ಇವರ ಹೆಸರಿಲೆ ಜಮೆ ಬರೆದು.

ಖಾ. ಪಾ. ೭.

೧೦೦ ಬಸಪ್ಪ ಸಕ್ಕರಿ ಧಾರವಾಡ ಅಂಗಡಿ ಖಾತೆ, ಇವರು ರಾಖಲೆ ಶಿವಪ್ಪ ಬೆಣ್ಣಿ ಈ ಹುಂಡಿಯನ್ನು ನಾಕಾರಿಸಿದ ಕಾರಣ ರಾಖಲೆ ಶಿವಪ್ಪ ಬೆಣ್ಣಿ ಇವರಿಗೆ ರೂಪಾಯಿ ತಿರುಗಿ ಕೊಟ್ಟದ್ದು.

ಖಾ ಪಾ. ೫.

೧ ಸಕರಾಯಿ ನಕರಾಯಿ ಖಾತೆ; ಬಸಪ್ಪ ಸಕ್ಕರಿ ಇವರು ಮೇಲಿನ ಹುಂಡಿ ನಾಕಾರಿಸಿದ ಕಾರಣ ಸಕರಾಯಿ ನಕರಾಯಿ ಶಿವಪ್ಪ ಬೆಣ್ಣಿ ಇವರಿಗೆ ಕೊಟ್ಟದ್ದು.

ಖಾ. ಪಾ. ೬.

೮ ಧರ್ಮಾದಾಯ ಖಾತೆ; ಕುರುಡರ ಶಾಲೆಗೆ ೪ ರೂ. ಧರ್ಮಾದಾಯ ಮಾಡಿದ್ದು ೪ ರೂ. ಧರ್ಮಾದಾಯ ಖಾತೆಗೆ ಖರ್ಚು ಬೀಳತಕ್ಕದ್ದು; ಸಿಲಕು ಎಣಿಸಿ ನೋಡ

ಕೀರ್ದಿಪಾನ ೧೬.

೨೪೬೦ ಅಂತು ಇಪ್ಪತ್ತು ನಾಲ್ಕು ನೂರಾ ಅರವತ್ತು ರೂ. ಗಳು ದ. ಶಿವಪ್ಪ ಸೆಟ್ಟಿ

ಲಾಗಿ ತಪ್ಪು ತಿಳಿದು ಬಂದಕಾರಣ
೪ ತಪ್ಪಿ ಜಮೆಯಾದ ಬಾಬತು.
೪ ವಾಸ್ತವಿಕ ಧರ್ಮಾದಾಯ ಮಾಡಿದ್ದು.

೮

ಖಾ. ಪಾ. ೪.

೩೩೪ ಒಟ್ಟು ಖರ್ಚು.
೧೦೫ ರೋಖ
೨೨೯ ಪರಭಾರೆ

೩೩೪

೨೧೨೬ ನಾಳಿನ ಸಿಲಕು.

೨೪೬೦ ಅಂತು ಇಪ್ಪತ್ತುನಾಲ್ಕುನೂರಾ ಅರವತ್ತು ರೂ. ಗಳು, ದ. ಶಿವಪ್ಪ ಸೆಟ್ಟಿ.

ಕೀರ್ದಿಯ ತಿಂಗಳ ತೇರೀಜು.

ಶಕೆ ೧೮೪೦ ರ ಮಾರ್ಗಶೀರ್ಷ ಮಾಸದ ಬಗ್ಗೆ.

	ಜಮೆ———ರೂ.	ಖ.———ರೂ.
ಹೋದ ತಿಂಗಳ ಸಿಲಕು	೧೦೫೦	೦
	ಈ ತಿಂಗಳ ಜಮೆ.	ಈ ತಿಂಗಳ ಖರ್ಚು
ಮಾರ್ಗಶೀರ್ಷ ಶು. ೧	೨೨೦೧	೧೧೩೦
ಮಾರ್ಗಶೀರ್ಷ ಶು. ೫	೩೩೯	೩೩೪
	೨೫೪೦	೧೪೬೪
ಮುಂದಿನ ತಿಂಗಳ ಸಿಲಕು	೦	೨೧೨೬
	೩೫೯೦	೩೫೯೦

ಖತಾವಣಿಯ ತಿಂಗಳ ತೇರೀಜು.

ಶಕೆ ೧೮೪೦ ಮಾರ್ಗಶೀರ್ಷ ಮಾಸದ ಬಗ್ಗೆ.

ಖಾತೆಗಳ ಹೆಸರು.	ಜಮೆ———ರೂ.	ಖ.———ರೂ.
೧ ಕಮಿಶನ ಖಾತೆ	೦	೨೫

ಕೀರ್ದೀಪಾನ ೧೭.

೨ ಕಾಗದ ಖಾತೆ	೨೨೫	೦
೩ ಗೋದಿಖಾತೆ	೯೦೦	೦
೪ ಗಂಗಪ್ಪನ ಖಾತೆ	೭೫೦	೦
೫ ಜಮೀನಬಾಬಖಾತೆ	೦	೫
೬ ಠೇವಖಾತೆ	೧೦೦	೦
೭ ತಸಲ್ಮಾತಖಾತೆ	೨೫	೦
೮ ಧರ್ಮಾದಾಯ ಖಾತೆ	೪	೮
೯ ಬಸಪ್ಪ ಸಕ್ಕರಿ	೧೦೦	೧೦೦
೧೦ ರಾಜಶೇಖರ ಶೆಟ್ಟಿ	೧೨೫	೦
೧೧ ರಾಮಪ್ಪ ತುಪ್ಪದ	೧೧೦	೧೦೦೦
೧೨ ಶಂಕರಪ್ಪ ಬೆಲ್ಲದ	೧೦೦	೦
೧೩ ಸಕರಾಯಿ ನಕರಾಯಿ	೦	೧
೧೪ ಸದಾಶಿವ ಶಂಕರ	೧೦೦	೧೦೦
೧೫ ಹತ್ತಿಯ ಖಾತೆ	೦	೧೦೦
೧೬ ಹುಂಡಾವಳಿಯ ಖಾತೆ	೧	೦
೧೭ ಹುಂಡಿಯ ಖಾತೆ	೦	೧೨೫
	೨೫೪೦	೧೪೬೪

ಈ ಬೇರೀಜುಗಳು ಕೀರ್ದಿಯ ಜಮೆಯ ಮತ್ತು ಖರ್ಚಿನ ಬೇರೀಜುಗಳಷ್ಟಿರುತ್ತವೆ.

ಆಶ್ವೀನ ಶು॥ ೧.

ಜಮೆ ______________ ರೂ ಖರ್ಚು ______________ ರೂ,

೨೧೨೬ ಹೋದ ತಿಂಗಳ ಸಿಲಕು

ಈ ಪೊತ್ತಿನ ಜಮೆ.

೨೦೦ ತಂಬಾಕದಖಾತೆ, ತಂಬಾಕ ೧೨॥ ಮಣ ಪುಣೆಯ ಸಯ್ಯದ ಸಾ॥ ದಲಾಲ ಇವರ ಕಡೆಗೆ ಕನಿಷ್ಟಪಕ್ಷಕ್ಕೆ ೧೬ ರೂ. ಪ್ರ॥ ಮಾರಬೇಕೆಂದು ಕಳಿಸಿದ್ದು. ದಲಾಲಿ ಮಾಲಿನ ಖಾತೆಗೆ ಖರ್ಚು ಬರೆದು.

ಖಾ. ಪಾ. ೪.

ಈ ಪೊತ್ತಿನ ಖರ್ಚು

೧೭೫ ತಂಬಾಕದಖಾತೆ; ಆಕ್ಯೋಳದ ತಂಬಾಕ ೧೨॥ ಮಣ ದರ ೧೪ ರಂತೆ ಖರೇದಿ ಮಾಡಿದ್ದು.

ಖಾ. ಪಾ. ೪.

೨೦೦ ದಲಾಲಿನಮಾಲಿನ ಖಾತೆ; ಸಯ್ಯದ ಸಾ॥ ದಲಾಲ ಪುಣೆ ಇವರ ಕಡೆಗೆ ನೂರಕ್ಕೆ ೨ ರಂತೆ ದಲಾಲಿ ಕೊಡುವ ಗೊತ್ತುಮಾಡಿ ಕಳಿಸಿದ್ದು, ತಂಬಾಕದ ಖಾತೆಗೆ

ಕೀರ್ದಿಪಾನು ೧೮.

೨೦೦ ಹುಸೇನಸಾ॥ ನರಗುಂದ ಇವರ ಖಾತೆ, ಇವರು ನಮ್ಮಲ್ಲಿ ೧೨॥ ಹೇರು ಗೋದಿ ಮಾರಲಿಕ್ಕೆ ಇಟ್ಟ ಪ್ರಕಾರ ಜೇನಸಿನ ಯಾದಿಗೆ ಜಮೆ ಮಾಡಿಕೊಂಡಿದ್ದು ಈಗ ಅವರ ಹೇಳಿಕೆಯ ಪ್ರ. ಹೇರಿಗೆ ೧೬ ರಂತೆ ದಾರಣಿಯಾದ ಕಾರಣ ಮಾರಿ ಅವರಿಗೆ ಯಾದಿಪಟ್ಟಿ ಕಳುಹಿದ ಬಾಬತು.

ಖಾ. ಪಾ. ೭.

---

೬ ದಲಾಲಿ ಖಾತೆ ಹುಸೇನಸಾ॥ರ ಖಾತೆಗೆ ಖರ್ಚು ಬರೆದು.

ಖಾ. ಪಾ. ೪.

---

೩ ಬಾಡಿಗೆ ಖಾತೆ ಹುಸೇನಸಾ॥ರ ಖಾತೆಗೆ ಖರ್ಚು ಬರೆದು.

ಖಾ. ಪಾ. ೫

---

೧ ಧರ್ಮಾದಾಯ ಖಾತೆ ಹುಸೇನಸಾ॥ರ ಖಾತೆಗೆ ಖರ್ಚು ಬರೆದು.

ಖಾ. ಪಾ. ೪.

---

೪೧೦ ಒಟ್ಟು ಜಮೆ.
೨೦೦ ರೋಖ
೨೧೦ ಪರಭಾರೆ

೪೧೦

೨೫೩೬ ಅಂತು ಇಪ್ಪತ್ತ್ಯುದ್ನೂರಾ ಮೂವತ್ತಾರು ರೂಪಾಯಿಗಳು ದ. ಶಿವಪ್ಪ ಸೆಟ್ಟಿ.

ಜಮೆ ಬರೆದು.

ಖಾ. ಪಾ. ೪.

---

೧೦ ಬಾಡಿಗೆ ಖಾತೆ, ಸದರಿ ತಂಬಾಕ ಪುಣೆಗೆ ಕಳಿಸಿದ ಬಾಡಿಗೆಯ ವಿವರ.
೬ ರೇಲವೆಯ ಬಾಬತು
೩ ಎತ್ತಿನ ಬಂಡಿಯ ಬಾಬತು
೧ ಹಮಾಲಿ ಮುಂತಾದ್ದು.

೧೦

ಖಾ. ಪಾ. ೫.

---

೧೦ ಹುಸೇನಸಾ॥ ನರಗುಂದ ಖಾತೆ, ಇವರು ೧೨॥ ಹೇರು ಗೋದಿ ಮಾರಲಿಕ್ಕೆ ಇಟ್ಟದ್ದು ಆ ಬಗ್ಗೆ ಆವರಿಂದ ಬರತಕ್ಕ ಹಣದ ವಿವರ.
೬ ದಲಾಲಿ ೧೦೦ ಕ್ಕೆ ೩ ರಂತೆ ೨೦೦ ರೂ. ಗಳ ಗೋದಿ ಮಾರಿದ ಬಗ್ಗೆ.
೩ ವಖಾರದ ಬಾಡಿಗೆ.
೧ ಧರ್ಮಾದಾಯದ ಬಾ॥

೧೦ ಈ ಹಣವನ್ನು ಅಯಾ ಖಾತೆಗಳಿಗೆ ಜಮೆ ಬರೆದು.

ಖಾ. ಪಾ. ೭.

---

೩೯೫ ಒಟ್ಟು ಖರ್ಚ.
೧೮೫ ರೋಖ
೨೧೦ ಪರಭಾರೆ

೩೯೫

ಕೀರ್ದಿಪಾನ ೧೯.

೨೧೪೧ ನಾಳಿನ ಸಿಲಕು

೨೫೩೬ ಅಂತು ಇಪ್ಪತ್ತ್ಯೈದುನೂರಾ ಮೂವತ್ತಾರು ರೂಪಾಯಿಗಳು. ದ. ಶಿವಪ್ಪ ಸೆಟ್ಟಿ.

ಆಶ್ವಿನ ಶು. ೨ ರಿಂದ ಆಶ್ವಿನ ಶು. ೧೪ ವರೆಗೆ ಜಮಾಖರ್ಚು (೦)

ಆಶ್ವಿನ ಶು. ೧೫.

ಜಮೆ	ರೂ.	ಖರ್ಚು	ರೂ.
ನಿನ್ನಿನ ಸಿಲಕು	೨೧೪೧	ಈವೊತ್ತಿನ ಖರ್ಚು	
ಈವೊತ್ತಿನ ಜಮೆ.		**ಸಯ್ಯದಸಾ. ದಲಾಲ ಇವರ ಖಾತೆ;** ತಂಬಾಕ ಮಾರಾಟವಾಗಿ ಯಾದಿಬಂದ ಕಾರಣ ದಲಾಲಿಮಾಲಿನ ಖಾತೆಗೆ ಜಮೆ ಬರೆದು. ಖಾ. ಪಾ. ೬.	೩೦೦
ದಲಾಲಿಮಾಲಿನ ಖಾತೆ. ಸಯ್ಯದಸಾ॥ ದಲಾಲ ಪುಣೆ ಇವರಿಂದ ತಂಬಾಕ ೧೨॥ ಮಣ ದರ ೨೪ ಪ್ರ. ಮಾರಾಟವಾಗಿ ಯಾದಿ ಬಂದಕಾರಣ ಸಯ್ಯದಸಾ. ರ ಖಾತೆಗೆ ಖರ್ಚು ಬರೆದು. ಖಾ. ಪಾ. ೪.	೩೦೦	**ದಲಾಲಿ ಖಾತೆ,** ಸಯ್ಯದಸಾ॥ರ ಖಾತೆಗೆ ಜಮೆ ಬರೆದು. ಖಾ. ಪಾ. ೪	೬
ಸಯ್ಯದಸಾ. ದಲಾಲ ಇವರ ಖಾತೆ, ದಲಾಲಿಮಾಲಿನ ಸಂಬಂಧವಾಗಿ ಖರ್ಚಾದ ಹಣದ ವಿವರ. ೬ ದಲಾಲಿ ೩ ಬಾಡಿಗೆ ೧ ಧರ್ಮಾದಾಯ —— ೧೦ ಈ ಹಣವನ್ನು ಆಯಾ ಖಾತೆಗಳಿಗೆ ಖರ್ಚು ಬರೆದು. ಖಾ. ಪಾ. ೬.	೧೦	**ಬಾಡಿಗೆ ಖಾತೆ,** ಸಯ್ಯದಸಾ॥ರ ಖಾತೆಗೆ ಜಮೆ ಬರೆದು. ಖಾ. ಪಾ. ೫.	೩
		ಧರ್ಮಾದಾಯ ಖಾತೆ; ಸಯ್ಯದಸಾ॥ರ ಖಾತೆಗೆ ಜಮೆ ಬರೆದು. ಖಾ. ಪಾ. ೪.	೧
ಒಟ್ಟು ಜಮೆ.	೩೧೦	ಒಟ್ಟು ಖರ್ಚು ೦ ರೋಖ ೩೧೦ ಪರಭಾರೆ —— ೩೧೦	೩೧೦

ಕೇರ್ದಿಪಾನು ೨೦.

೧ ರೋಖು
೩೧೦ ಪರಭಾರೆ

೩೧೦

೨೪೫೧ ಅಂತು ಇಪ್ಪತ್ತುನಾಲ್ಕುನೂರಾ ಐವತ್ತೊಂದು ರೂಪಾಯಿಗಳು. ದ. ಶಿವಪ್ಪ ಸೆಟ್ಟಿ

೨೧೪೧ ನಾಳಿನ ಸಿಲಕು.

೨೪೫೧ ಅಂತು ಇಪ್ಪತ್ತುನಾಲ್ಕುನೂರಾ ಐವತ್ತೊಂದು ರೂಪಾಯಿಗಳು. ದ. ಶಿವಪ್ಪ ಸೆಟ್ಟಿ.

ಆಶ್ವಿನ ವ. ೩೦.

ಜಮೆ	ರೂ.	ಖರ್ಚು	ರೂ.

೨೧೪೧ ಹಿಂದಿನ ಸಿಲಕು.

ಈವೊತ್ತಿನ ಜಮೆ.

೧೨ ಬಡ್ಡಿ ಖಾತೆ, ಚಂದ್ರಪ್ಪನಿಗೆ ೨೦೦ ರೂಪಾಯಿಗಳನ್ನು ೧೦ ತೊಲಿಯ ಸರಿಗೆ ಒತ್ತಿ ಇಟ್ಟುಕೊಂಡು ೧ ವರ್ಷದ ಮುದ್ದತಿನಿಂದ ಸಾಲ ಕೊಟ್ಟದ್ದು ಮುದ್ದತು ಪೂರ್ಣವಾದ ಕಾರಣ ಬಡ್ಡಿಯ ಆಕಾರಮಾಡಿ ಚಂದ್ರಪ್ಪನ ಖಾತೆಗೆ ಖರ್ಚು ಬರೆದು.

ಖಾ. ಪಾ. ೫.

೧೦ ರಾಚಪ್ಪಾ ಗದಗ ಇವರ ಖಾತೆ, ಮಾರ್ಗಶೀರ್ಷ ಶು. ೫ ದಿವಸ ಇವರಿಂದ ತಂದಿದ್ದು ತಪ್ಪಿ ರಾಮಪ್ಪ ತುಪ್ಪದ ಇವರ ಖಾತೆಗೆ ಜಮೆ ಬಿದ್ದ ಕಾರಣ ರಾಮಪ್ಪ ತುಪ್ಪದ ಇವರ ಖಾತೆಗೆ ಖರ್ಚು ಬರೆದು.

ಖಾ. ಪಾ. ೫.

ಈವೊತ್ತಿನ ಖರ್ಚು.

೧೨ ಚಂದ್ರಪ್ಪನ ಖಾತೆ, ೨೦೦ ರೂ. ಕಾರ್ತಿಕ ಶು. ೧ ದಿವಸ ಒಂದು ವರ್ಷ ಮುದ್ದತಿನಿಂದ ೧೦೦ ಕ್ಕೆ ತಿಂಗಳಿಗೆ -||- ಬಡ್ಡಿಯಂತೆ ಸಾಲ ಕೊಟ್ಟದ್ದು, ಬಡ್ಡಿ ಬಾರದ್ದರಿಂದ ಬಡ್ಡಿಯ ಖಾತೆಗೆ ಜಮೆ ಹಿಡಿದು

ಖಾ. ಪಾ. ೩.

೧೦ ರಾಮಪ್ಪ ತುಪ್ಪದ ಖಾತೆ, ರಾಚಪ್ಪ ಗದಗ ಇವರ ಖಾತೆಗೆ ಜಮೆ ಬೀಳತಕ್ಕದ್ದು ತಪ್ಪಿ ಇವರ ಖಾತೆಗೆ ಜಮೆ ಬಿದ್ದಕಾರಣ ರಾಚಪ್ಪ ಗದಗ ಇವರ ಖಾತೆಗೆ ಜಮೆ ಹಿಡಿದು.

ಖಾ. ಪಾ. ೬.

೨೯೦ ರಾಮಪ್ಪ ತುಪ್ಪದ ಖಾತೆ, ಇವರಿಗೆ ಕೊಡತಕ್ಕ ಬಾಕಿಯಲ್ಲಿ ಕೊಟ್ಟ ಮಾಲಿನ ವಿವರ.

೨೭೦ ರೂ. ಸೀರಿ ೧೮ ದರ ೧೫ ಪ್ರಕಾರ

ಕೀರ್ದಿ ಪಾನು ೨೧.

೨೭೦ ಸೀರಿಯ ಖಾತೆ, ಸೀರಿಗಿಲದರ ೧೫ ರಂತೆ, ರಾಮಪ್ಪ ತುಪ್ಪದ ಇವರ ಖಾತೆಗೆ ಖರ್ಚು ಬರೆದು.

ಖಾ. ಪಾ. ೭.

೨೦ ಅಕ್ಕಿಯ ಖಾತೆ, ಹೇರು ೨ ದರ ೧೦ ರಂತೆ, ರಾಮಪ್ಪ ತುಪ್ಪದ ಇವರ ಖಾತೆಗೆ ಖರ್ಚು ಬರೆದು.

ಖಾ. ಪಾ. ೨.

೫೩೦ ವರ್ಷದ ಕೊನೆಗೆ ಸಿಲಕು ಉಳಿದ ಮಾಲಿನ ಬೆಲೆಯನ್ನು ಪೇಟೆಯ ದರದಂತೆ ಆಕಾರ ಮಾಡಿದ್ದರ ವಿವರ.

೫೦ ಬೆಲ್ಲ, ೧೦ ಮಣ ದರ ೫ ಪ್ರಕಾರ.

ಖಾ. ಪಾ. ೫.

೨೦೦ ಬಂಗಾರ, ತೊಲಿ ೮ ದರ ೨೫ ಪ್ರಕಾರ.

ಖಾ. ಪಾ. ೫

೨೮೦ ಹತ್ತಿ, ನಗ ೭ ದರ ೪೦ ಪ್ರಕಾರ.

ಖಾ. ಪಾ. ೭.

೫೩೦ ಈ ರಕಮನ್ನು ಕೊನೆಯ ಸಿಲಕಿನಲ್ಲಿ ಬರಕೊಂಡು

೮೪೨ ಒಟ್ಟು ಜಮೆ

೦ ರೋಖ

೮೪೨ ಪರಭಾರೆ

೮೪೨

೨೯೮೩ ಅಂತು ಇಪ್ಪತ್ತರೊಂಬೈನೂರಾ ಎಂಬತ್ತು ಮೂರು ರೂಪಾಯಿಗಳು. ದ. ಸಿವಪ್ಪ ಸೆಟ್ಟಿ.

ಜ. ೧೨

೨೦ ರೂ. ಅಕ್ಕಿ ೨ ಹೇರು ದರ ೧೦ ಪ್ರಕಾರ.

೨೯೦ ಈ ರಕಮನ್ನು ಆಯಾ ಖಾತೆಗೆಗಳಿಗೆ ಜಮೆಮಾಡಿ

ಖಾ. ಪಾ. ೬

೧೦ ರಾಚಪ್ಪ ಗದಗ ಇವರ ಖಾತೆ; ಇವರ ಬಾಕಿ ಕೊಟ್ಟ ಬಗ್ಗೆ.

ಖಾ ಪಾ. ೫.

೩೨೨ ಒಟ್ಟು ಖರ್ಚು.

೧೦ ರೋಖ

೩೧೨ ಪರಭಾರೆ

೩೨೨

೨೬೬೧ ಸಿಲಕು ಮುಂದಿನ ವರ್ಷದಬಗ್ಗೆ.

೨೧೩೧ ರೋಖ ಸಿಲಕು.

೫೩೦ ಮಾಲು.

೫೦ ಬೆಲ್ಲ.

೨೦೦ ಬಂಗಾರ.

೨೮೦ ಹತ್ತಿ.

೫೩೦

೨೬೬೧

ಖಾ. ಪಾ. ೩.

೨೯೮೩ ಅಂತು ಇಪ್ಪತ್ತರೊಂಬೈನೂರಾ ಎಂಬತ್ತು ಮೂರು ರೂಪಾಯಿಗಳು. ದ. ಶಿವಪ್ಪ ಸೆಟ್ಟಿ.

ಕೀರ್ದಿಪಾನು. ೨೨

ಕೀರ್ದಿಯ ತಿಂಗಳ ತೇರೀಜು.

ಶಕೆ ೧೮೪೧ ರ ಆಶ್ವಿನಮಾಸದ ಬಗ್ಗೆ.

	ಜ. —— ರೂ.	ಖ. —— ರೂ.
ಹೋದ ತಿಂಗಳ ಸಿಲಕು	೨೧೨೬	೦
	ಈ ತಿಂಗಳ ಜಮೆ.	ಈ ತಿಂಗಳ ಖರ್ಚು
ಆಶ್ವಿನ ಶು. ೧	೪೧೦	೩೯೫
ಆಶ್ವಿನ ಶು. ೧೫	೩೧೦	೩೧೦
ಆಶ್ವಿನ ವ. ೩೦	೮೪೨	೩೨೨
	೧೫೬೨	೧೦೨೭
ಮುಂದಿನ ತಿಂಗಳ ಸಿಲಕು	೦	೨೬೬೧
	೩೬೮೮	೩೬೮೮

ಖತಾವಣಿಯ ತಿಂಗಳ ತೇರೀಜು.

ಶಕೆ ೧೮೪೧ ರ ಆಶ್ವಿನ ಮಾಸದ ಬಗ್ಗೆ.

ಖಾತೆಗಳ ಹೆಸರು.	ಜ. —— ರೂ.	ಖ. —— ರೂ.
೧ ಅಕ್ಕಿಯ ಖಾತೆ	೨೦	೦
೨ ಚಂದ್ರಪ್ಪನ ಖಾತೆ	೦	೧೨
೩ ತಂಬಾಕದ ಖಾತೆ	೨೦೦	೧೭೫
೪ ದಲಾಲಿ ಖಾತೆ	೬	೬
೫ ದಲಾಲಿ ಮಾಲಿನ ಖಾತೆ ...	೩೦೦	೨೦೦
೬ ಧರ್ಮಾದಾಯ ಖಾತೆ... ...	೧	೧
೭ ಬಡ್ಡಿ ಖಾತೆ	೧೨	೦
೮ ಬಾಡಿಗೆ ಖಾತೆ	೩	೧೩
೯ ಬೆಲ್ಲದ ಖಾತೆ	೫೦	೦
೧೦ ಬಂಗಾರ ಖಾತೆ	೨೦೦	೦
೧೧ ರಾಚಪ್ಪ ಗದಗ	೧೦	೧೦
೧೨ ರಾಮಪ್ಪ ತುಪ್ಪದ	೦	೩೦೦
೧೩ ಸಯ್ಯದಸಾಹೇಬ	೧೦	೩೦೦
೧೪ ಸೀರಿಯ ಖಾತೆ	೨೭೦	೦
೧೫ ಹತ್ತಿಯ ಖಾತೆ	೨೮೦	೦
೧೬ ಹುಸೇನ ಸಾ॥ ರಖಾತೆ ...	೨೦೦	೧೦
	೧೫೬೨	೧೦೨೭

ಕೀರ್ದಿಪಾನು ೨೩.

ಕೀರ್ದಿಯ ಹನ್ನೆರಡು ತಿಂಗಳ ತೇರೀಜು.

ಶಕೆ ೧೮೪೦ ಕಾರ್ತಿಕ ಶು. ೧ ರಿಂದ ಶಕೆ ೧೮೪೧ ಅಶ್ವಿನ ವ. ೩೦ ರ ವರೆಗೆ.

	ಜ.—ರೂ.	ಖ.—ರೂ.
ಹೋದ ವರ್ಷದ ಸಿಲಕು. ...	೧೫೦೦	೦
	ಈ ವರ್ಷದ ಜಮೆ.	ಈ ವರ್ಷದ ಖರ್ಚು
ಕಾರ್ತಿಕ ಮಾಸ	೬೬೬೭	೭೧೧೭
ಮಾರ್ಗಶೀರ್ಷ ಮಾಸ ...	೨೫೪೦	೧೪೬೪
ಅಶ್ವಿನ ಮಾಸ ...	೧೫೬೨	೧೦೨೭
	೧೦೭೬೯	೯೬೦೮
ಮುಂದಿನ ವರ್ಷದ ಸಿಲಕು	೦	೨೬೬೧
	೧೨೨೬೯	೧೨೨೬೯

ಖತಾವಣಿಯ ಹನ್ನೆರಡು ತಿಂಗಳ ತೇರೀಜು.

ಖಾತೆಗಳ ಹೆಸರು	ಜ.—ರೂ.	ಖ—ರೂ.
೧ ಅಕ್ಕಿಯ ಖಾತೆ	೨೦	೩೭
೨ ಅಮಾನತ ಖಾತೆ	೧೦೦	೧೦೦
೩ ಅರಳಿ ಖಾತೆ	೮೦೦	೫೦೦
೪ ಕಮಿಶನ ಖಾತೆ	೧೫	೨೫
೫ ಕಾಗದ ಖಾತೆ	೨೨೫	೧೫೦
೬ ಖರೇದಿವಿಕರಿಖಾತೆ ...	೫೦೦	೫೦೦
೭ ಗುರಪ್ಪನ ಖಾತೆ	೫೦	೧೦೦
೮ ಗೋದಿಯ ಖಾತೆ... ...	೯೦೦	೬೫೦
೯ ಗಂಗಪ್ಪನ ಖಾತೆ... ...	೭೫೦	೭೫೦
೧೦ ಚಂದ್ರಪ್ಪನ ಖಾತೆ ...	೫೦	೨೧೨
೧೧ ಜಮೀನಜಾಬ	೨೦೦	೫
೧೨ ಠೇವ	೧೦೦	೦
೧೩ ತಸಲ್ಮಾತ	೨೫	೨೫
೧೪ ತೆರಿಗೆ	೦	೧೭೦

ಕೀರ್ದಿಪಾನ ೨೪.

೧೫	ತಂಬಾಕ	೨೦೦	೧೭೫
೧೬	ದಲಾಲಿ	೬	೭
೧೭	ದಲಾಲಿ ಮಾಲಿನ ಖಾತೆ ...	೩೦೦	೨೦೦
೧೮	ಧರ್ಮಾದಾಯ	೫	೧೦
೧೯	ಪಗಾರ	೦	೦
೨೦	ಬಡ್ಡಿ	೧೮೭	೦
೨೧	ಬಸಪ್ಪ ಸಕ್ಕರಿ	೬೦೦	೧೦೦
೨೨	ಬಾಡಿಗೆ	೩	೧೩
೨೩	ಬೆಲ್ಲದ ಖಾತೆ	೨೫೦	೩೦೦
೨೪	ಬಂಗಾರ	೧೨೦೦	೧೩೦೦
೨೫	ಭೀಮರಾವ ದೇಶಪಾಂಡೆ ...	೪೦	೪೦
೨೬	ಭೀಮರಾವ ಪಾಟೀಲ ...	೩೪೫	೧೨೦
೨೭	ಮನೆಯ ಖರ್ಚುಖಾತೆ ...	೦	೨೫
೨೮	ರವಾನಿಗೆಯ ಖಾತೆ	೪೦	೪೦
೨೯	ರಾಚಪ್ಪ ಗದಗ	೬೦	೬೦
೩೦	ರಾಜಶೇಖರ ಸೆಟ್ಟಿ	೧೨೫	೦
೩೧	ರಾಮಪ್ಪ ತುಪ್ಪದ	೧೧೦	೧೩೧೦
೩೨	ಶಂಕರಪ್ಪ ಬೆಲ್ಲದ	೧೬೦೦	೦
೩೩	ಶಿವಪ್ಪ ಜವಳಿ	೦	೮೦೦
೩೪	ಸಕರಾಯಿ ನಕರಾಯಿ	೦	೧
೩೫	ಸದಾಶಿವ ಶಂಕರ	೧೦೦	೧೦೦
೩೬	ಸಯ್ಯದಸಾಹೇಬ	೧೦	೩೦೦
೩೭	ಸಾದಿಲವಾರ	೦	೧
೩೮	ಸೀರಿಯ ಖಾತೆ	೨೯೫	೩೦೦
೩೯	ಸೂಟ ಬಟ್ಟಾ	೦	೧೪೫
೪೦	ಹತ್ತಿಯ ಖಾತೆ	೧೦೩೦	೯೦೦
೪೧	ಹುಸೇನಸಾ. ರ ಖಾತೆ... ...	೨೦೦	೧೦
೪೨	ಹುಂಡಾವಳಿ ಖಾತೆ	೨	೦
೩೩	ಹುಂಡಿ ಖಾತೆ	೧೨೫	೧೭೫
೪೪	ಹುಂಡಿ ಖರೇದಿ ಖಾತೆ... ...	೩೦೧	೨೦೦
		೧೦೭೬೯	೯೬೦೮

ಕೀರ್ದಿಪಾನು ೨೫.

ತೋಂಡವಿಳವಣಿಯ ಜಮಾಖರ್ಚು.

ಆಶ್ವಿನ ವ. ೩೦ ಶಕೆ ೧೮೪೧.

ಜಮೆ ———— ರೂ.

೧೧೨೦ ನಫಾತೋಟಾ ಖಾತೆ, ವರ್ಷದ ಅಂತ್ಯಕ್ಕೆ ಬೇರೆಬೇರೆ ಖಾತೆಗಳಿಂದಾದ ನಫೆಯನ್ನು ಖಾತೆಗಳ ಬಾಯಿಗೂಡಿಸುವದಕ್ಕಾಗಿ ಆಯಾ ಖಾತೆಗಳಿಗೆ ಖರ್ಚು ಬರೆದು.
ಖಾ. ಪಾ. ೪.

೧೮೯ ಬೇರೆ ಬೇರೆ ಖಾತೆಗಳಿಂದಾದ ಹಾನಿಗಳ ವಿವರ.

೧೦ ಬಾಡಿಗೆಯ ಖಾತೆ;
ಖಾ. ಪಾ. ೫.

೫ ಸೀರಿಯ ಖಾತೆ;
ಖಾ. ಪಾ. ೬.

೧೪೫ ಸೂಟಬಟ್ಟಾ ಖಾತೆ;
ಖಾ. ಪಾ. ೭.

೧೦ ಕಮಿಶನಖಾತೆ;
ಖಾ. ಪಾ. ೨.

೧೭ ಅಕ್ಕಿಖಾತೆ;
ಖಾ. ಪಾ. ೨.

೧ ಸಕರಾಯಿ ಸಕರಾಯಿ
ಖಾ. ಪಾ. ೬.

೧ ದಲಾಲಿಖಾತೆ;
ಖಾ. ಪಾ. ೪.

೧೮೯ ಈ ರಕಮನ್ನು ನಫಾತೋಟಾಖಾತೆಗೆ ಖರ್ಚು ಬರೆದು.

ಖರ್ಚು ———— ರೂ.

೧೧೨೦ ಬೇರೆಬೇರೆ ಖಾತೆಗಳಿಂದಾದ ಲಾಭಗಳ ವಿವರ.

೫೦ ಬೆಲ್ಲದಖಾತೆ
ಖಾ. ಪಾ. ೫.

೧೩೦ ಹತ್ತಿಯ ಖಾತೆ
ಖಾ. ಪಾ. ೭.

೧ ಹುಂಡಿಖರೇದಿಖಾತೆ
ಖಾ. ಪಾ. ೭.

೧೮೭ ಬಡ್ಡಿಖಾತೆ
ಖಾ. ಪಾ. ೫.

೨ ಹುಂಡಾವಳಖಾತೆ
ಖಾ. ಪಾ. ೭.

೩೦೦ ಅರಳಿಖಾತೆ
ಖಾ. ಪಾ. ೨.

೩೫೦ ಗೋದಿಖಾತೆ
ಖಾ. ಪಾ. ೩.

೭೫ ಕಾಗದಖಾತೆ
ಖಾ. ಪಾ. ೩.

೨೫೦ ತಂಬಾಕದಖಾತೆ
ಖಾ. ಪಾ. ೩.

೧೦೦ ದಲಾಲಿ ಮಾಲಿನ ಖಾತೆ
ಖಾ. ಪಾ. ೪.

೧೧೨೦ ಈ ರಕಮನ್ನು ನಫಾ

ಕೇರ್ದಿಪಾನು ೨೬.

೯೩೧ ಖುದ್ದಖಾತೆ; ನಫಾತೋಟಾ ಖಾತೆಯನ್ನು ಬಾಯಿಗೂಡಿಸುವದಕ್ಕಾಗಿ ನಫಾತೋಟಾ ಖಾತೆಗೆ ಖರ್ಚು ಬರೆದು.
ಖಾ. ಪಾ. ೩.

---

೨೦೩ ಬೇರೆ ಬೇರೆ ಖಾತೆಗಳಿಂದ ಬರತಕ್ಕ ರಕಮುಗಳ ವಿವರ.

೫ ಧರ್ಮಾದಾಯ ಖಾತೆ.
ಖಾ. ಪಾ. ೪.

---

೧೭೦ ತೆರಿಗೆಯ ಖಾತೆ;
ಖಾ. ಪಾ. ೪.

---

೨ ಪಗಾರಖಾತೆ;
ಖಾ. ಪಾ. ೪.

---

೨೫ ಮನೆಯ ಖರ್ಚಿ ಖಾತೆ;
ಖಾ. ಪಾ. ೫.

---

೧ ಸಾದಿಲವಾರಖಾತೆ
ಖಾ. ಪಾ. ೬.

---

೨೦೩ ಈ ರಕಮನ್ನು ಖುದ್ದ ಖಾತೆಗೆ ಖರ್ಚು ಬರೆದು.

---

೧೯೫ ಖುದ್ದಖಾತೆ; ಜಮೀನಬಾಬಖಾತೆಗೆ ಕೊಡತಕ್ಕದ್ದು ಹೊರಟ ಕಾರಣ ಆ ಖಾತೆಗೆ ಖರ್ಚು ಬರೆದು.
ಖಾ. ಪಾ. ೩.

೨೬೩೮ ಅಂತು ಇಪ್ಪತ್ತಾರುನೂರಾ ಮೂವತ್ತೆಂಟು ರೂಪಾಯಿಗಳು. ದ|| ಶಿವಪ್ಪ ಸೆಟ್ಟಿ.

ತೋಟಾಖಾತೆಗೆ ಜಮೆ ಹಿಡಿದು.

---

೧೮೯ ನಫಾತೋಟಾಖಾತೆ ವರ್ಷಾಂತ್ಯಕ್ಕೆ ಬೇರೆ ಬೇರೆ ಖಾತೆಗಳಿಂದಾದ ಹಾನಿಯನ್ನು ಖಾತೆಗಳ ಬಾಯಿಗೂಡಿಸುವದಕ್ಕಾಗಿ ಆಯಾ ಖಾತೆಗಳಿಗೆ ಜಮೆ ಹಿಡಿದು.
ಖಾ. ಪಾ. ೪.

---

೯೩೧ ನಫಾತೋಟಾಖಾತೆ; ನಿವಳ ಲಾಭ ಹೊರಟದ್ದು ಖುದ್ದ ಖಾತೆಗೆ ಜಮೆ ಹಿಡಿದು.
ಖಾ. ಪಾ. ೪.

---

೨೦೩ ಖುದ್ದಖಾತೆ; ಬೇರೆ ಬೇರೆ ಖಾತೆಗಳಿಂದ ಬರತಕ್ಕ ರಕಮನ್ನು ಆಯಾಖಾತೆಗಳಿಗೆ ಜಮೆ ಹಿಡಿದು.
ಖಾ. ಪಾ. ೩.

---

೧೯೫ ಜಮೀನಬಾಬಖಾತೆ; ಈ ಖಾತೆಗೆ ಕೊಡತಕ್ಕದ್ದು ಹೊರಟ ಕಾರಣ ಖುದ್ದ ಖಾತೆಗೆ ಜಮೆ ಹಿಡಿದು.
ಖಾ. ಪಾ. ೩.

೨೬೩೮ ಅಂತು ಇಪ್ಪತ್ತಾರುನೂರಾ ಮೂವತ್ತೆಂಟು ರೂಪಾಯಿಗಳು. ದ|| ಶಿವಪ್ಪ ಸೆಟ್ಟಿ.

ಕೀರ್ದಿಪಾನು ೨೭.

ಅಖೇರ ಅಢಾವೆ.

ಆಶ್ವಿನ ವ. ೩೦ ಶಕೆ ೧೮೪೧.

ಜ.————————————————ರೂ.

೬೨೨ ವರ್ಷದ ಕೊನೆಗೆ ಜನರಿಂದ ಬರತಕ್ಕದ್ದರ ವಿವರ.

೫೦ ಗುರಪ್ಪನ ಖಾತೆ;
ಖಾ. ಪಾ. ೩.

೧೬೨ ಚಂದ್ರಪ್ಪನ ಖಾತೆ
ಖಾ. ಪಾ. ೩.

೧೨೦ ಭೀಮರಾವ ಪಾಟೀಲ
ಖಾ. ಪಾ. ೫.

೨೯೦ ಸಯ್ಯದಸಾಹೇಬ.
ಖಾ. ಪಾ. ೬.

೬೨೨ ಈ ರಕಮನ್ನು ಖುದ್ದ ಖಾತೆಗೆ ಖರ್ಚು ಬರೆದು.

೫೧೫ ಖುದ್ದ ಖಾತೆ; ಜನರಿಗೆ ಕೊಡತಕ್ಕದ್ದು ಅವರವರ ಖಾತೆಗೆ ಖರ್ಚು ಬರೆದು.
ಖಾ. ಪಾ. ೩.

೧೧೩೭ ಅಂತು ಹನ್ನೊಂದು ನೂರಾ ಮೂವತ್ತೇಳು ರೂಪಾಯಿಗಳು. ದ. ಶಿವಪ್ಪ ಶೆಟ್ಟಿ.

ಖ.————————————————ರೂ

೬೨೨ ಖುದ್ದ ಖಾತೆ; ಜನರಿಂದ ಬರತಕ್ಕದ್ದು ಅವರವರ ಖಾತೆಗೆ ಜಮೆ ಬರೆದು.
ಖಾ. ಪಾ. ೩.

೫೧೫ ವರ್ಷದ ಕೊನೆಗೆ ಜನರಿಗೆ ಕೊಡತಕ್ಕದ್ದರ ವಿವರ.

೧೦೦ ಶಂಕರಪ್ಪ ಬೆಲ್ಲದ;
ಖಾ. ಪಾ. ೭.

೧೨೫ ರಾಜಶೇಖರ ಶೆಟ್ಟಿ.
ಖಾ. ಪಾ. ೮.

೧೦೦ ಶೇವ ಖಾತೆ;
ಖಾ. ಪಾ. ೪.

೧೯೦ ಹುಸೇನಸಾ। ರ ಖಾತೆ
ಖಾ. ಪಾ. ೭.

೫೧೫ ಈ ರಕಮನ್ನು ಖುದ್ದ ಖಾತೆಗೆ ಜಮೆ ಹಿಡಿದು.

೧೧೩೭ ಅಂತು ಹನ್ನೊಂದು ನೂರಾ ಮೂವತ್ತೇಳು ರೂಪಾಯಿಗಳು. ದ. ಶಿವಪ್ಪ ಸೆಟ್ಟಿ.

ಪರಿಣಾಮ.

ಈ ವರ್ಷದ ಆರಂಭದಲ್ಲಿ ೧೫೦೦ ರೂ. ಸಿಲಕು ಇದ್ದು, ಜನರಿಂದ ಬರುವದು ಕೊಡುವದಕ್ಕಿಂತ ೩೪೫ ಹೆಚ್ಚು ಇತ್ತು. ಅಂತ್ಯದಲ್ಲಿ ೨೬೬೧ ಸಿಲಕು ಇದ್ದು ಬರುವದು ಕೊಡುವದಕ್ಕಿಂತ ೧೦೭ ಹೆಚ್ಚಾಗಿದೆ. ಅಂದ ಮೇಲೆ ೯೨೩ ಬಂಡವಲು ಬೆಳೆದಂತಾಯಿತು. ಇದು ಜಮಾಖರ್ಚ ಇಟ್ಟಿದ್ದರಿಂದ ತಿಳಿಯಿತು.

ಕೀರ್ದಿಪಾನು ೨೮.

ಆವಲ ಅಧಾವೆ.

ಆಶ್ವಿನ ವ. ೩೦ ಶಕೆ ೧೮೪೧ ದಿವಸ ಕೊಡಕೊಳ್ಳುವದು ಹೊರಟದ್ದು.

ಜಮೆ — ರೂ.

೬೨೨ ಖುದ್ದ ಖಾತ್ಯೆ ಜನರಿಂದ ಬರತಕ್ಕದ್ದು. ಹೊರಟದ್ದರಿಂದ ಆಯಾ ಖಾತೆಗಳಿಗೆ ಖರ್ಚು ಬರೆದು.
ಖಾ. ಪಾ.

೫೧೫ ಜನರಿಗೆ ಕೊಡತಕ್ಕದ್ದರ ವಿವರ

೧೦೦ ಶಂಕರಪ್ಪಬೆಲ್ಲದ.
ಖಾ. ಪಾ.

೧೨೫ ರಾಜಶೇಖರ ಸೆಟ್ಟಿ.
ಖಾ. ಪಾ.

೧೦೦ ಶೇವಖಾತೆ.
ಖಾ. ಪಾ.

೧೯೦ ಹುಸೇನಸಾ.ರಖಾತೆ
ಖಾ. ಪಾ.

೫೧೫ ಈ ರಕಮನ್ನು ಖುದ್ದಖಾತೆಗೆ ಖರ್ಚು ಬರೆದು.

೧೧೩೭ ಅಂತು ಹನ್ನೊಂದುನೂರಾ ಮೂವತ್ತೇಳು ರೂಪಾಯಿಗಳು ದ|| ಶಿವಪ್ಪ ಸೆಟ್ಟಿ.

ಖರ್ಚು — ರೂ.

೬೨೨ ಜನರಿಂದ ಬರತಕ್ಕ ವಿವರ.

೫೦ ಗುರಪ್ಪನ ಖಾತೆ.
ಖಾ. ಪಾ.

೧೬೨ ಚಂದ್ರಪ್ಪನ ಖಾತೆ.
ಖಾ. ಪಾ.

೧೨೦ ಭೀಮರಾವ ಪಾಟೀಲ
ಖಾ. ಪಾ.

೨೯೦ ಸಯ್ಯದಸಾಹೇಬ.
ಖಾ. ಪಾ.

೬೨೨ ಈ ರಕಮನ್ನು ಖುದ್ದ ಖಾತೆಗೆ ಜಮೆ ಬರೆದು.

೫೧೫ ಖುದ್ದ ಖಾತೆ, ಜನರಿಗೆ ಕೊಡತಕ್ಕದ್ದು ಅವರವರ ಖಾತೆಗೆ ಜಮೆ ಬರೆದು.
ಖಾ. ಪಾ.

೧೧೩೭ ಅಂತು ಹನ್ನೊಂದುನೂರಾ ಮೂವತ್ತೇಳು ರೂಪಾಯಿಗಳು. ದ|| ಶಿವಪ್ಪ ಸೆಟ್ಟಿ.

೭ನೆಯ ಪ್ರಕರಣ.

ಖತಾವಣಿಯ ನಮೂನೆ.

ಖತಾವಣಿ ಖಾಸಗತ ಶಿವಪ್ಪ ಸಂಗಪ್ಪ ಸೆಟ್ಟಿ ಬೆಳಗಾಂವಿ.

ಮಿತಿ ಕಾರ್ತಿಕ ಶು. ೧ ಶಕೆ ೧೮೪೦ರಿಂದ ಮಿತಿ ಆಶ್ವೀನ ವ. ೩೦ ಶಕೆ ೧೮೪೧ ರ ವರೆಗೆ.

ಖಾತೆಯ ಪಾನು ೧.

ಖಾತೆಗಳ ಅನುಕ್ರಮಣಿಕೆಯು.

ಖಾತೆವಾನ ೨.

೫	೨೩	ಬಸಪ್ಪ ಸಕ್ಕರಿ	೬	೩೫	ಶಿವಪ್ಪ ಜವಳಿ
೫	೨೪	ಬಾಡಿಗೆ ಖಾತೆ	೬	೩೬	ಸಕರಾಯಿ ನಕರಾಯಿ
೫	೨೫	ಬೆಲ್ಲದಖಾತೆ	೬	೩೭	ಸದಾಶಿವ ಶಂಕರ
೫	೨೬	ಬಂಗಾರಖಾತೆ	೬	೩೮	ಸಯ್ಯದಸಾ॥ ದಲಾಲ
೫	೨೭	ಭೀಮರಾ. ದೇಶಪಾಂಡೆ	೬	೩೯	ಸಾದಿಲವಾರ ಖಾತೆ
೫	೨೮	ಭೀಮರಾವ ಪಾಟೀಲ	೬	೪೦	ಸೀರಿಯ ಖಾತೆ
೫	೨೯	ಮನೆಯ ಖರ್ಚು ಖಾತೆ	೭	೪೧	ಸೂಟಬಟ್ಯಾಖಾತೆ
		ರ, ಸ, ಹ.			
೫	೩೦	ರವಾನಿಗೆ ಖಾತೆ	೭	೪೨	ಹತ್ತಿಯಖಾತೆ
೫	೩೧	ರಾಚಪ್ಪ ಗದಗ	೭	೪೩	ಹುಸೇನಸಾ. ನರಗುಂದ
೬	೩೨	ರಾಜಶೇಖರಸೆಟ್ಟಿ	೭	೪೪	ಹುಂಡಾವಳಿ ಖಾತೆ
೬	೩೩	ರಾಮಪ್ಪ ತುಪ್ಪದ	೭	೪೫	ಹುಂಡಿಖಾತೆ
೬	೩೪	ಶಂಕರಪ್ಪ ಬೆಲ್ಲದ	೭	೪೬	ಹುಂಡಿಖರೇದಿ ಖಾತೆ

ಅಕ್ಕಿಖಾತೆ.

ಜ———ರೂ. ಖ———ರೂ.
೨೦ ಕೀ. ಪಾ. ೨೧ ೩೬ ಕೀ. ಪಾ. ೮
ಆ. ವ. ೩೦ ಕಾ. ಶು. ೫
ಹೇರು ೨. ಹೇರು ೨.
೧೬ ತೋಂ. ಮಿ. ೦ ಲಂಗ.
— ೨೫ —
೩೬ ೩೬

೨ ಅವಾನತ ಖಾತೆ,

೧೦೦ ಕಿ. ಪಾ. ೪ ೧೦೦ ಕಿ. ಸಾ. ೬
ಕಾ. ಶು. ೩ ಕಾ. ಶು. ೪
——— ———
೧೦೦ ೧೦೦

೩ ಅರಳಿಖಾತೆ.

ಜ———ರೂ. ಖ———ರೂ.
೮೦೦ ಕಿ. ಪಾ. ೯ ೫೦೦ ಕಿ. ಪಾ. ೫
ಕಾ. ಶು. ೬ ಕಾ. ಶು. ೪
ನಗ ೧೦ ನಗ ೧೦
೦ ಲಂಗ ೩೦೦ ತೋ. ಮಿ.
——— ——— ೨೫
೮೦೦ ೮೦೦

೪ ಕಮಿಶನಖಾತೆ.

೧೫ ಕಿ. ಪಾ. ೮ ೨೫ ಕಿ. ಪಾ. ೧೨
ಕಾ. ಶು. ೫ ಮಾ. ಶು. ೧
೧೦ ತೋ. ಮಿ. ೦ ಲಂಗ
— ೨೫ —
೨೫ ೨೫

೫ ಕಾಗದ ಖಾತೆ.

ಖಾತೆಪಾನ ೩.

ಜ——ರೂ.	ಖ——ರೂ.
೨೨೫ ಕಿ. ಪಾ. ೧೨	೧೫೦ ಕಿ. ಪಾ. ೭
ಮಾ. ಶು. ೧	ಕಾ. ಶು. ೫
ಗಡ್ಡಿ ೭೫	ಗಡ್ಡಿ ೭೫
೦ ಲಂಗ	೭೫ ತೋ. ಮಿ.
——	—— ೨೫
೨೨೫	೨೨೫

೬ ಖರೇದಿ ವಿಕರಿ ಖಾತೆ.

ಜ——ರೂ.	ಖ——ರೂ.
೫೦೦ ಕಿ. ಪಾ. ೨	೫೦೦ ಕಿ. ಪಾ. ೨
ಕಾ. ಶು. ೧	ಕಾ. ಶು. ೧
——	——
೫೦೦	೫೦೦

೭ ಖುದ್ದ ಖಾತೆ.

ಜ——ರೂ.	ಖ——ರೂ.
೨೩೪೫ ಅವಲ ಅ.	೨೦೦೦ ಅವಲ ಅ.
ಕಿ. ಪಾ. ೧	ಕಿ. ಪಾ. ೧
೧೫೦೦ ಅವಲ ಸಿ.	೨೦೩ ತೋ. ಮಿ.
ಕಿ. ಪಾ. ೨	ಕಿ. ಪಾ. ೨೬
೯೩೧ ತೋ. ಮಿ.	೬೨೨ ಅಖೇ. ಅ.
ಕಿ ಪಾ. ೨೬	ಕಿ. ಪಾ. ೨೭
೧೯೫ ತೋ. ಮಿ.	೨೬೬೧ ಅಖೇ. ಸಿ.
ಕಿ. ಪಾ. ೨೬	ಕಿ. ಪಾ. ೩೧
೫೧೫ ಅಖೇ. ಅ.	
ಕಿ. ಪಾ. ೨೭	
——	——
೫೪೮೬	೫೪೮೬

೮ ಗುರಪ್ಪನ ಖಾತೆ.

ಜ——ರೂ.	ಖ——ರೂ.
೫೦ ಕಿ. ಪಾ. ೯	೫೦ ಕಿ. ಪಾ. ೨
ಕಾ. ಶು. ೭	ಕಾ. ಶು. ೧
೫೦ ಅಖೇ. ಅ.	೫೦ ಕಿ. ಪಾ. ೫.
ಕಿ. ಪಾ. ೨೭	ಕಾ. ಶು. ೪.
——	——
೧೦೦	೧೦೦

೯ ಗೋದಿಯ ಖಾತೆ.

ಜ——ರೂ.	ಖ——ರೂ.
೯೦೦ ಕಿ ಪಾ. ೧೨	೧೦೦ ಕಿ. ಪಾ. ೫
ಮಾ. ಶು. ೧	ಕಾ. ಶು. ೪
ಹೇರು ೬೦	ಹೇರು ೧೦
೦ ಲಂಗ	೧೫೦ ಕಿ. ಪಾ. ೭
——	ಕಾ. ಶು. ೫
೯೦೦	ಹೇರು ೧೦
	೪೦೦ ಕಿ. ಪಾ. ೭
	ಕಾ. ಶು. ೫
	ಹೇರು ೪೦
	——
	೬೫೦
	೨೫೦ ತೋ. ಮಿ.
	ಕಿ. ಪಾ. ೨೫
	——
	೯೦೦

೧೦ ಗಂಗಪ್ಪನ ಖಾತೆ.

ಜ——ರೂ.	ಖ——ರೂ.
೭೫೦ ಕಿ. ಪಾ. ೧೩	೭೫೦ ಕಿ. ಪಾ. ೪.
ಮಾ. ಶು. ೧	ಕಾ. ಶು. ೩.
——	——
೭೫೦	೭೫೦

೧೧ ಚಂದ್ರಪ್ಪನ ಖಾತೆ.

ಜ——ರೂ.	ಖ——ರೂ.
೫೦ ಕಿ. ಪಾ. ೭.	೨೦೦ ಕಿ. ಪಾ. ೨.
ಕಾ. ಶು. ೫	ಕಾ. ಶು. ೫.
೧೬೨ ಅಖೇರ. ಅ.	೧೨ ಕಿ. ಪಾ. ೨೦
ಕಿ. ಪಾ. ೨೭	——
——	೨೧೨
೨೧೨	

೧೨ ಜಮೀನ ಬಾಬ ಖಾತೆ.

ಜ——ರೂ.	ಖ——ರೂ.
೨೦೦ ಕಿ. ಪಾ. ೭.	೫ ಕಿ. ಪಾ. ೧೨
ಕಾ. ಶು. ೫	ಮಾ. ಶು. ೧
೦ ಲಂಗ	೧೯೫ ತೋ. ಮಿ.
——	ಕಿ. ಪಾ. ೨೬
೨೦೦	——
	೨೦೦

ಖಾತೆಪಾನು ೪.

೧೩ ಶೇವಖಾತೆ.

ಜ — ರೂ.	ಖ — ರೂ.
೧೦೦ ಕಿ.ಪಾ.೧೫ ಮಾ. ಶು.೫.	೧೦೦ ಅಪೇರ ಅ. ಕೀ.ಪಾ.೨೭
೧೦೦	೧೦೦

೧೪ ತಸಲ್ಮಾತಖಾತೆ.

ಜ — ರೂ.	ಖ — ರೂ.
೨೫ಕೀ.ಪಾ.೧೩. ಮಾ.ಶು.೧.	೨೫ ಕೀ. ಪಾ. ೫. ಕಾ. ಶು. ೪.
೨೫	೨೫

೧೫ ತಂಬಾಕದ ಖಾತೆ.

ಜ — ರೂ.	ಖ — ರೂ.
೨೦೦ಕೀ.ಪಾ.೧೭ ಆಶ್ವಿನ ಶು.೧.	೧೭೫ಕೀ.ಪಾ.೧೭ ಆಶ್ವಿನ ಶು. ೧.
೦ ಲಂಗ.	೨೫ ತೊ.ಮಿ. ಕೀ.ಪಾ.೨೫.
೨೦೦	೨೦೦

೧೬ ತೆರಿಗೆಯು ಖಾತೆ.

ಜ — ರೂ.	ಖ — ರೂ.
೧೭೦ ತೋ.ಕೀ. ಪಾ. ೨೯.	೫೦ ಕೀ. ೬. ಕಾ. ಶು. ೫.
೦ ಲಂಗ.	೧೨೦ ಕೀ. ಪಾ. ೯ ಕಾ. ಶು. ೬.
೧೭೦	೧೭೦

೧೭ ದಲಾಲಿಖಾತೆ.

ಜ — ರೂ.	ಖ — ರೂ.
೬ ಕಿ. ಪಾ. ೧೮. ಆ. ಶು. ೧	೧ ಕೀ. ಪಾ. ೮ ಕಾ. ಶು. ೫.
೧ ತೋ. ಮಿ. ಕಿ.ಪಾ. ೨೫	೬ ಕಿ. ಪಾ. ೧೯. ಆ. ಶು. ೧೫.
೭	೭

೧೮ ದಲಾಲಿಮಾಲಿನಖಾತೆ.

ಜ — ರೂ.	ಖ — ರೂ.
೩೦೦ ಕಿ. ಪಾ ೧೯ ಆ. ಶು.೧೫	೨೦೦ ಕಿ. ಪಾ ೧೭ ಆ. ಶು. ೧
೦ ಲಂಗ.	೧೦೦ ತೋ. ಮಿ. ಕಿ. ಪಾ. ೨೫
೩೦೦	೩೦೦

೧೯ ಧರ್ಮಾದಾಯಖಾತೆ.

ಜ — ರೂ.	ಖ — ರೂ.
೪ ಕಿ. ಪಾ.೧೫ ಮಾ. ಶು.೫	೧ ಕೀ. ಪಾ. ೪. ಕಾ. ಶು. ೩
೧ ಕಿ. ಪಾ. ೧೮ ಆ. ಶು. ೧	೮ ಕಿ. ಪಾ. ೧೫ ಮಾ. ಶು. ೫
೫	೧ ಕೀ. ಪಾ. ೧೯ ಆಶ್ವಿ. ಶು. ೧೫
೫ ತೊ. ಮಿ. ಖಾ. ಪಾ.೨೯	೧೦
೧೦	

೨೦ ನಫಾತೋಟಾಖಾತೆ.

ಜ — ರೂ.	ಖ — ರೂ.
೧೧೨೦ಕಿ.ಪಾ.೨೫ ಆ. ವ.೩೦ ತೋ.ಮಿ.	೧೮೯ಕಿ.ಪಾ.೨೯ ಆ. ೩೦
	೯೩೧ ತೊ. ೨೯
೧೧೨೦	೧೧೨೦

೨೧ ಪಗಾರ ಖಾತೆ.

ಜ — ರೂ.	ಖ — ರೂ.
೨ ತೋ. ಮಿ. ಕೀ. ಪಾ.೨೯	೨ ಕೀ. ಪಾ. ೮ ಕಾ. ಶು. ೫
೨	೨

ಖಾತೆಪಾನು ೫.

೨೨ ಬಡ್ಡಿ ಖಾತೆ.

ಜ——ರೂ.	ಖ——ರೂ.
೧೨೫ ಕಿ. ಪಾ. ೫	೧೮೭ ತೋ. ಮಿ.
ಕಾ.ಶು. ೪	ಕಿ.ಪಾ.೨೫
೪೦ ಕಿ.ಪಾ. ೭	೦ ಲಂಗ
ಕಾ.ಶು.೫	——
೧೦ ಕೀ.ಪಾ ೯	೧೮೭
ಕಾ.ಶು.೬	
೧೨ ಕಿ.ಪಾ.೨೦	
ಆ.ವ. ೩೦	
——	
೧೮೭	

೨೩ ಬಸಪ್ಪ ಸಕ್ಕರಿ.

ಜ——ರೂ.	ಖ——ರೂ.
೫೦೦ ಕೀ.ಪಾ.೫	೫೦೦ ಅವಲ ಅ.
ಕಾ ಶು.೪	ಕೀ.ಪಾ. ೧
೧೦೦ ಕಿ.ಪಾ ೧೪	೧೦೦ ಕೀ.ಪಾ.೧೫
ಮಾ.ಶು. ೧	ಮಾ. ಶು. ೫
——	——
೬೦೦	೬೦೦

೨೪ ಬಾಡಿಗಿ ಖಾತೆ.

ಜ——ರೂ.	ಖ——ರೂ.
೩ ಕೀ.ಪಾ.೧೮	೧೦ ಕೀ. ಪಾ. ೧೮
ಆ. ಶು. ೧	ಆ. ಶು. ೧
೧೦ ಕೀ.ಪಾ.೨೫	೩ ಕೀ. ಪಾ ೧೯
ತೊ.ಮಿ.೨೫	ಆ. ಶು. ೧೫
—	—
೧೩	೧೩

೨೫ ಬೆಲ್ಲದ ಖಾತೆ.

ಜ——ರೂ.	ಖ——ರೂ.
೨೦೦ ಕೀ.ಪಾ. ೮	೨೦೦ ಕೀ.ಪಾ. ೨
ಕಾ. ಶು. ೬	ಕಾ. ಶು. ೧
ಮಣ ೪೦	ಮಣ ೫೦
೫೦ ಕಿ.ಸಾ ೨೧	೫೦ ತೋ. ಮಿ.
ಆ.ವ.೩೦	ಕಿ.ಪಾ. ೨೫
—— ಮಣ೧೦	——
೨೫೦	೨೫೦

೨೬ ಬಂಗಾರ ಖಾತೆ.

ಜ——ರೂ.	ಖ——ರೂ.
೧೦೦೦ ಕಿ.ಪಾ. ೪	೧೨೦೦ ಕಿ. ಪಾ. ೩
ಕಾ ಶು. ೩	ಕಾ. ಶು ೨
ತೊಲಿ ೪೦	ತೊ. ೪೮
೨೦೦ ಕಿ ಪಾ.೨೧	೦ ಲಂಗ
ಆ.ವ ೩೦	——
—— ತೊ. ೮	೧೨೦೦
೧೨೦೦	

೨೭ ಭೀಮರಾವ ದೇಶಪಾಂಡೆ.

ಜ——ರೂ.	ಖ——ರೂ.
೪೦ ಕೀ. ಪಾ. ೯	೪೦ ಕೀ. ಪಾ. ೩
— ಕಾ. ಶು. ೬	— ಕಾ. ಶು. ೨
೪೦	೪೦

೨೮ ಭೀಮರಾವ ಪಾಟೀಲ.

ಜ——ರೂ.	ಖ——ರೂ.
೩೪೫ ಕೀ ಪಾ.೭	೩೪೫ ಅವಲ ಅ.
ಕಾ.ಶು. ೫	ಕೀ.ಪಾ.೧
೧೨೦ ಅಖೇರ ಅ.	೧೨೦ ಕೀ. ಪಾ.೭
——ಕಿ.ಪಾ.೨೭	——ಕಾ. ಶು.೫
೪೬೫	೪೬೫

೨೯ ಮನೆಯ ಖರ್ಚು ಖಾತೆ.

ಜ——ರೂ.	ಖ——ರೂ.
೨೫ ತೊಂ.ಮಿ.	೨೫ ಕೀ. ಪಾ. ೮
— ಕೀ.ಪಾ.೨೭	— ಕಾ. ಶು. ೬
೨೫	೨೫

೩೦ ರವಾನಿಗೀ ಖಾತೆ.

ಜ——ರೂ.	ಖ——ರೂ.
೪೦ ಕೀ. ಪಾ. ೮	೪೦ ಕೀ. ಪಾ. ೪
— ಕಾ. ಶು. ೫	— ಕಾ. ಶು. ೩
೪೦	೪೦

೩೧ ರಾಚಪ್ಪ ಗದಗ.

ಜ——ರೂ.	ಖ——ರೂ.
೫೦ ಕಿ. ಪಾ. ೭	೫೦ ಕಿ. ಪಾ. ೯
ಕಾ. ಶು. ೫	ಕಾ. ಶು. ೬
೧೦ ಕಿ. ಪಾ. ೨೧	೧೦ ಕಿ. ಪಾ. ೨೦
— ಆ. ವ. ೩೦	— ಆ. ವ. ೩೦
೬೦	೬೦

ಖಾತೆಪಾನು ೬.

೩೨ ರಾಜಶೇಖರ ಸೆಟ್ಟಿ.

ಜ——ರೂ. ಖ——ರೂ.
೧೨೫ ಕೀ.ಪಾ.೧೪ ೧೨೫ ಆಖೇರ ಅ.
ಮಾರ್ಗ ಶು.೫ ಕಿ.ಪಾ. ೨೭
——
೧೨೫ ೧೨೫

೩೩ ರಾಮಪ್ಪಾ ತುಪ್ಪದ.

ಜ——ರೂ. ಖ——ರೂ.
೧೨೦೦ ಅವ. ಅ. ೧೦ ಕಿ. ಪಾ. ೯
ಕಿ.ಪಾ.೧ ಕಾ. ಶು. ೬
೧೦೦ ಮಾ.ಶು.೧ ೧೦೦೦ ಕಿ.ಪಾ.೧೨
ಕಿ.ಪಾ.೧೨ ಮಾ.ಶು.೧
೧೦ ಕಿ.ಪಾ.೧೫ ೧೦ ಕಿ.ಪಾ.೨೦
ಮಾ.ಶು.೫ ಆ.ವ. ೩೦
—— ೨೯೦ ಕಿ.ಪಾ.೨೦
೧೩೧೦ ಆ.ವ. ೩೦
——
೧೩೧೦

೩೪ ಶಂಕರಪ್ಪ ಬೆಲ್ಲದ.

ಜ——ರೂ. ಖ——ರೂ.
೧೫೦೦ ಕಿ.ಪಾ. ೩ ೧೫೦೦ ಅವಲ.ಅ.
ಕಾ.ಶು.೨ ಕಿ. ಪಾ. ೧
——
೧೫೦೦ ೧೫೦೦

ಮುರವಣಿ ಖಾತೆಪಾನು ೭ ನೋಡು.

೩೫ ಶಿವಪ್ಪ ಜವಳಿ.

ಜ——ರೂ. ಖ——ರೂ.
೮೦೦ ಅವಲ ಅ. ೮೦೦ ಕಿ. ಪಾ. ೯
ಕಾ. ಶು. ೧ ಕಾ. ಶು. ೬
ಕಿ. ಪಾ. ೧
——
೮೦೦ ೮೦೦

೩೬ ಸಕರಾಯಿ ನಕರಾಯಿ.

ಜ——ರೂ. ಖ——ರೂ.
೧ ತೋ. ಮಿ. ೧ ಕಿ. ಪಾ. ೧೫.
ಕಿ. ಪಾ. ೨೫ ಮಾರ್ಗ.ಶು.೫
——
೧ ೧

೩೭ ಸದಾಶಿವ ಶಂಕರ.

ಜ——ರೂ ಖ——ರೂ.
೧೦೦ ಕಿ.ಪಾ. ೧೩ ೧೦೦ ಕಿ. ಪಾ. ೧೫
ಮಾರ್ಗ.ಶು.೧ ಮಾ. ಶು ೫
——
೧೦೦ ೧೦೦

೩೮ ಸಯ್ಯದಸಾ॥ ದಲಾಲ.

ಜ——ರೂ. ಖ——ರೂ.
೧೦ ಕಿ. ಪಾ. ೧೯ ೩೦೦ ಕಿ.ಪಾ. ೧೯
ಆಶ್ವಿ.ಶು.೧೫ ಆಶ್ವಿ.ಶು:೧೫
೨೯೦ ತೋ.ಮಿ. ೦ ಲಂಗ
ಕಿ.ಪಾ. ೨೭
——
೩೦೦ ೩೦೦

೩೯ ಸಾದಿಲವಾರ ಖಾತೆ.

ಜ——ರೂ. ಖ——ರೂ.
೧ ತೋ. ಮಿ. ೧ ಕಿ. ಪಾ. ೬
ಕಿ. ಪಾ. ೨೬ ಕಾ. ಶು. ೪
——
೧ ೧

೪೦ ಸೀರಿಯಖಾತೆ.

ಜ——ರೂ. ಖ——ರೂ.
೨೫ ಕಿ.ಪಾ. ೯ ೩೦೦ ಕಿ. ಪಾ. ೨
ಸೀರಿ ೨ ಸೀರಿ ೨೦
ಕಾ. ಶು. ೬ ಕಾ. ಶು. ೧
೨೭೦ ಕಿ. ಪಾ. ೨೧ ೦ ಲಂಗ
ಸೀರಿ ೧೮
ಆ. ವ. ೩೦
——
೨೯೫ ೩೦೦
೫ ತೋ.ಮಿ.
ಕಿ. ಪಾ. ೨೫
——
೩೦೦

ಖಾತೆಪಾನ ೬.

ಪುರವಣಿ.

೩೪ ಶಂಕರೆಪ್ಪ ಬೆಲ್ಲದ ಖಾತೆ

ಖಾತೆ ಪಾನು ೬ ನೋಡು

ಜ——ರೂ. ಖ——ರೂ.

೧೫೦೦ ಹಿಂ. ಬೇ. ೧೫೦೦ ಹಿಂ. ಬೇ.

೧೦೦ ಕಿ.ಪಾ.೧೫ ೧೦೦ ಅ.ಅಥಾವೆ

ಮಾ.ಶು. ೫ ಕಿ.ಪಾ೨೭

——— ———

೧೬೦೦ ೧೬೦೦

೪೧ ಸೂಟಬಟ್ವಾಖಾತೆ.

ಜ——ರೂ. ಖ——ರೂ.

೧೪೫ ತೋ.ಮಿ. ೧೦೦ ಕಿ. ಪಾ. ೩

ಕಿ.ಪಾ. ೨೫ ಕಾ. ಶು. ೨

೦ ಲಂಗ. ೨೫ ಕಿ. ಪಾ. ೫

——— ಕಾ. ಶು. ೪

೧೪೫ ೨೦ ಕಿ. ಪಾ. ೭

——— ಕಾ.ಶು. ೫

೧೪೫

೪೨ ಹತ್ತಿಯ ಖಾತೆ.

ಜ——ರೂ. ಖ——ರೂ.

೭೫೦ ಕಿ.ಪಾ.೪ ೮೦೦ ಕಿ. ಪಾ. ೪

ನಗ ೧೫. ನಗ ೨೦.

ಕಾ.ಶು.೩ ಕಾ. ಶು. ೩

೨೮೦ ಕಿ.ಪಾ.೨೧ ೧೦೦ ಕಿ. ಪಾ. ೧೨

——— ನಗ ೭. ನಗ ೨.

೧೦೩೦ ಮಾ. ಶು. ೧

———

೯೦೦

೧೩೦ ತೊ. ಮಿ.

——— ಕಿ.ಪಾ. ೨೫

೧೦೩೦

೪೩ ಹುಸೇನಸಾ॥ ನರಗುಂದ.

ಜ——ರೂ. ಖ——ರೂ.

೨೦೦ ಕಿ.ಪಾ.೧೮ ೧೦ ಕಿ. ಪಾ. ೧೮

ಆ. ಶು. ೧. ಆ. ಶು. ೧.

೦ ಲಂಗ. ೧೯೦ ಆಖೇ. ಅ.

——— ———ಕಿ.ಪಾ. ೨೭

೨೦೦ ೨೦೦

೪೪ ಹುಂಡಾವಳಿಖಾತೆ.

ಜ——ರೂ. ಖ——ರೂ.

೧ ಕಿ. ಪಾ. ೬ ೨ ತೋ. ಮಿ.

ಕಾ. ಶು. ೪ ಕಿ. ಪಾ. ೨೫

-॥- ಕಿ.ಪಾ.೧೩. ೦ ಲಂಗ.

ಮಾ.ಶು. ೧. ———

-॥- ಕಿ.ಪಾ. ೧೪ ೨

ಮಾ. ಶು. ೧.

———

೨

೪೫ ಹುಂಡಿಖಾತೆ.

ಜ——ರೂ. ಖ——ರೂ.

೧೨೫ ಕಿ.ಪಾ. ೫. ೧೨೫ ಕಿ. ಪಾ.೧೪

ಕಾ. ಶು. ೪ ಮಾ.ಶು. ೫

೦ ಲಂಗ. ೦ ಲಂಗ.

——— ———

೧೨೫ ೧೨೫

೪೬ ಹುಂಡೀ ಖರೇದಿಖಾತೆ.

ಜ——ರೂ. ಖ——ರೂ.

೨೦೧ ಕಿ.ಪಾ. ೪ ೨೦೦ ಕಿ. ಪಾ. ೩

ಕಾ.ಶು. ೩ ಕಾ. ಶು. ೨

೦ ಲಂಗ. ೧ ತೋ. ಮಿ.

——— ಕಿ.ಪಾ. ೨೫

೨೦೧ ———

೨೦೧

೩ ನೆಯ ಭಾಗ.

೧ನೆಯ ಪ್ರಕರಣ.

ಜಮಾಖರ್ಚಿನ ಇತರ ಚೋಪಡಿಗಳು.

ಭಾಗಗಳು—೧ ಸಿಲಕುಬಂದ, ೨ ಬೈಕಿರ್ದಿ, ೩ ಪಠಾಣವಹಿ, ೪ ಜಾಂಗಡ ವಹಿ, ೫ ಮಹತ್ವದ ಜೀನಸುಗಳ ಜಮಾಖರ್ಚು, ೬ ಕಚ್ಚಾಕೀರ್ದಿಯ ನಮೂನೆ, ೭ ಬೋಟಖಾತೆ ೮ ಬೋಟಖತ.

೧ ಪ್ರಾಚೀನಕಾಲದಲ್ಲಿ ಈಗಿನಂತೆ ಪುಸ್ತಕಗಳನ್ನು ಹೊಲಿದು ಬರೆಯದೆ ಬಿಡಿಕಾಗದ (ಓಲೆ) ಗಳ ಮೇಲೆ ಬರೆಯುತ್ತಿದ್ದಂತೆ ಜಮಾಖರ್ಚನ್ನಾದರೂ ಬಿಡಿ ಕಾಗದಗಳ ಮೇಲೆಯೇ ಬರೆಯುತ್ತಿದ್ದರು. ಜಮೆಯ ರಕಮುಗಳನ್ನೊಂದು ಕಾಗದದ ಮೇಲೆ, ಖರ್ಚಿನ ರಕಮುಗಳನ್ನೊಂದು ಕಾಗದದ ಮೇಲೆ ಬರೆದು ಆ ಕಾಗದಗಳನ್ನು ಬೇರೆ ಬೇರೆ ಗಂಟಿನಲ್ಲಿ ಕಟ್ಟಿ ಇಡುತ್ತಿದ್ದರು. ಈ ಕಾಗದಗಳಲ್ಲಿ ಸಿಲಕು ಬರೆಯಲ್ಪಡುತ್ತಿತ್ತು. ಬಿಡಿಕಾಗದಗಳಿಗೆ "ಬಂದ" ಎಂದೆನ್ನುವ ರೂಢಿಯುಂಟು. ಅದರಿಂದ ಇಂಥ ಸಿಲಕಿನ ಕಾಗದಗಳಿಗೆ **ಸಿಲಕುಬಂದ**ವೆಂದು ಅನ್ನುವರು. ಆದರೆ ಈ ಬಿಡಿಕಾಗದಗಳನ್ನು ಜೋಕೆಮಾಡುವದು ಕಷ್ಟವೇ ಸರಿ. ಅವುಗಳಲ್ಲೊಂದು ಕಾಗದವು ಹೋದರೆ ತೀರಿತು. ಲೆಕ್ಕ ತಿಳಿಯುವದಕ್ಕೆ ತೊಂದರೆಯೇ ಸೈ; ಇದಲ್ಲದೆ ತಕರಾರಿನ ಪ್ರಸಂಗದಲ್ಲಿ ಇಂಥ ಬಿಡಿಕಾಗದಗಳು ವಿಶ್ವಾಸಕ್ಕೆ ಪಾತ್ರವಾಗಲಾರವು. ಆ ಕಾರಣ ಸಿಲಕುಬಂದದ ರೂಢಿಯು ಈಗ ಇರುವದಿಲ್ಲ.

ಕೀರ್ದಿ ಸಿಲಕುಬಂದಗಳಲ್ಲಿ ಸಾಮ್ಯವೈಷಮ್ಯ.

ಸಾಮ್ಯ—ಇವೆರಡರಲ್ಲಿ ತಪಸೀಲವಾರ ಜಮಾಖರ್ಚು ಬರೆದು ಸಿಲಕು ತೆಗೆಯುವರು.

ವೈಷಮ್ಯ—(೧) ಕೀರ್ದಿ ಹೊಲಿದಿರುತ್ತದೆ. ಸಿಲಕುಬಂದದಲ್ಲಿ ಬಿಡಿಕಾಗದಗಳಿರುತ್ತವೆ. (೨) ಕೀರ್ದಿಯಲ್ಲಿ ಜಮೆ ವ ಖರ್ಚಿನ ರೂ. ಗಳು ಒಂದೇ ಕಾಗದದಲ್ಲಿರುತ್ತವೆ. ಸಿಲಕುಬಂದದಲ್ಲಿ ಬೇರೆ ಬೇರೆ ಬಂದಗಳಲ್ಲಿರುತ್ತವೆ (೩) ಕೀರ್ದಿ ಹೊಲೆದಿರುವದರಿಂದ ಅದರ ಪಾನು ಹೋಗಲಾರವು; ಸಿಲಕುಬಂದದ ಬಿಡಿಕಾಗದಗಳು ಹೋಗಬಹುದು (೪)ತಕರಾರಿನ ಪ್ರಸಂಗದಲ್ಲಿ ಕೀರ್ದಿ ಪುರಾವೆಗೆ ಗ್ರಾಹ್ಯವಾಗಿರುತ್ತದೆ. ಸಿಲಕುಬಂದು ಬನಾವಟವಿದೆ ಎಂದು ನಿರ್ಣಯಿಸಬಹುದು.

೨ ಬೈರೀ ಕೀರ್ದಿಯ ನಮೂನೆಯು ಕೆಳಗೆ ವಿವರಿಸಲ್ಪಟ್ಟದೆ.

ಬೈರೀಕೀರ್ದಿ.

ಖಾಸಗತ ಶಿವಲಿಂಗಪ್ಪ ಮಹಾಲಿಂಗಪ್ಪ ಸೆಟ್ಟರ ಇರುವ ಸ್ಥಳ ಬೆಳಗಾಂವಿ ಇವರ ಬೈರೀ ಕೀರ್ದಿಯನ್ನು ಬರೆಯುವಾ—

ತಾ||೧೯|೪|೨೬ ರಿಂದ ತಾ||೨೬|೪|೨೬ ರವರೆಗೆ.

೧೯೨೬ ನೆಯ ಇಸ್ವಿಯ ವ್ಹ. ಫಾಯನಲ್ ಪರೀಕ್ಷೆಯ ೨ನೆಯ ಪ್ರಶ್ನೆ.

ಆರಂಭದ ಸಿಲಕು ೪೨೫. (೧) ರಾಮಾ ಚಿಕ್ಕೋಡಿ ಈತನಿಂದ ೧೮೦ ರೂ. ಬರತಕ್ಕವಿದ್ದವು: ಅವುಗಳಲ್ಲಿ ೧೦೦ ರೂ. ಗಳ ಸೀರಿ ತಂದು ಕೊಟ್ಟನು. ೫೦ ರೂ. ಗಳ ಬಗ್ಗೆ ಭೀಮಪ್ಪ ತಡಸ ಈತನ ಹವಾಲೆ ಕೊಟ್ಟನು ಉಳಿದ ೩೦ ರೂ. ಗಳ ಬಗ್ಗೆ ಕತಬೆ ಬರಕೊಟ್ಟನು. (೨) ಈರಪ್ಪ ಬಾಗೇವಾಡಿ ಇವರಲ್ಲಿ ೨೦೦ ರೂ. ಗಳ ಜೋಳ ಖರೇದಿ ಮಾಡಿದೆವು. ಇದರಲ್ಲಿ ೧೦೦ ರೂ. ರೋಖ ಕೊಟ್ಟೆವು. ೭೫ ರೂ. ಗಳಿಗೆ ರಾಮಪ್ಪನ ಹವಾಲೆ ಕೊಟ್ಟೆವು. ಹಾಗೂ ೨೫ ರೂ. ಬಾಕೀ ಇಟ್ಟೆವು. (೩) ಚಂದೂಲಾಲ ಮಾರವಾಡಿ ಇವರು ಬಸಪ್ಪ ಉಪ್ಪಿನ ಇವರ ರಾಖಿಯಿಂದ ಬರೆದ ಹುಂಡಿಯ ಬಗ್ಗೆ ೨೦೩|| ರೂ. ಗುರಪ್ಪಾ ಯಾದವಾಡ ಇವರಿಗೆ ಕೊಟ್ಟೆವು.

ಹೊಲದ ವಸೂಲು ೪೭೮|| ಬಂತು (ಈ ರಕಮು ಪರೀಕ್ಷೆಯ ಪ್ರಶ್ನದೊಳಗಿನದಲ್ಲ. ಮುಂದಿನ ವರ್ಷದ ಪರೀಕ್ಷೆಯ ಪ್ರಶ್ನದ ಸಿಲಕಿಗೆ ಮೇಳು ಹೊಂದುವದಕ್ಕಾಗಿ ಹಿಡಿಯಲ್ಪಟ್ಟದೆ)

ಟೀಪು—ಪ್ರತಿಯೊಂದು ರಕಮಿನ ಜಮಾಖರ್ಚು ಬೇರೆ ಬೇರೆ ತಾರೀಖಿಗೆ ಆಯಿತೆಂದು ತಿಳಿಯಲ್ಪಟ್ಟದೆ.

ತಾ||೨೭|೪|೨೬ ರಿಂದ ತಾ||೩|೫|೨೬ ರವರೆಗೆ.

೧೯೨೭ ನೆಯ ಇಸ್ವಿಯ ವ್ಹ. ಫಾ. ಪರೀಕ್ಷೆಯ ೧೦ ನೆಯ ಪ್ರಶ್ನೆ.

(ಅ) ಆರಂಭದ ಸಿಲಕು ೬೦೦ರೂ. (ಬ) ೪೦೦ ರೂಪಾಯಿಗಳಿಗೆ ೪ ವಾರ ಬಾಂಡುಗಳನ್ನು ನಾರಾಯಣ ಗಣೇಶ ಇವರಿಗೆ ಮಾರಿತು. ಅದರ ಸಲುವಾಗಿ ಅವರು ೩೦೦ ರೂ. ರೋಖ ಕೊಟ್ಟರು. ಉಳಿದ ಹಣಕ್ಕೆ ೫ ಚೀಲ ಗೋದಿಕೊಟ್ಟರು. (ಕ) ಕೃಷ್ಣಾಜಿ ವಾಸುದೇವ ಇವರ ಮನೆಯನ್ನು ೮೦೦ ರೂಪಾಯಿಗಳಿಗೆ ಲಿಲಾವಿನಲ್ಲಿ ಕೊಂಡಿತು. (ಡ) ೧೬೦೦ ರೂ. ಗಳ ಭಂಗಾರವನ್ನು ಭಗವಾನದಾಸ ಹುಕುಮಚಂದ ಮಾರವಾಡಿಗೆ ಮಾರಿತು. ಅವರು ೧೦೦೦ ರೂ ರೋಖ ಕೊಟ್ಟರು. ಮತ್ತು ೨೦೦ರೂ. ಗಳ ಬೆಳ್ಳಿ ಕೊಟ್ಟು ಉಳಿದ ರಕಮನ್ನು ೮ ದಿವಸಗಳಲ್ಲಿ ಕೊಡುತ್ತೇವೆಂದು ಹೇಳಿದರು. ಕೆಲವು ದಿವಸಗಳಲ್ಲಿ ಲೆಕ್ಕಾಚಾರದಲ್ಲಿ ತಪ್ಪಿದ್ದದ್ದು ತಿಳಿದು ಬಂದು ಅವರ ಕಡೆಯಿಂದ ಬರತಕ್ಕ ರಕಮಿನಲ್ಲಿ ೧೦೦ ರೂಪಾಯಿ ಕಡಿಮೆಯಾಗುವದೆಂದು ಗೊತ್ತಾಯಿತು.

ಸಂಗಪ್ಪ ಜೋಳದ ಇವರು ರೂಪಾಯಿ ಭರಣಾಮಾಡಿ ಗೋಕಾಕ ಅರ್ಬನ ಬ್ಯಾಂಕಿನ ಚೆಕ್ಕು ಬೇಡಿದ್ದರಿಂದ ೫೭೫ ರೂ. ಗಳ ೨೦೧ ನೇ ನಂಬರದ ಬೇರರ ಚೆಕ್ಕು ಕೊಟ್ಟಿತು. (ಈ ರಕಮು ಪರೀಕ್ಷೆಯ ಪ್ರಶ್ನದೊಳಗಿನದಲ್ಲ. ಮುಂದಿನ ವರ್ಷದ ಪರೀಕ್ಷೆಯ ಪ್ರಶ್ನದ ಸಿಲಕಿಗೆ ಮೇಳು ಹೊಂದುವದಕ್ಕಾಗಿ ಹಿಡಿಯಲ್ಪಟ್ಟದೆ.)

ಟೀಪು—ಪ್ರತಿಯೊಂದು ರಕಮಿನ ಜಮಾಖರ್ಚು ಬೇರೆ ಬೇರೆ ತಾರೀಖಿಗೆ ಆಯಿತೆಂದು ತಿಳಿಯಲ್ಪಟ್ಟದೆ.

ತಾ - ೪ - ೫ - ೨೬ ರಿಂದ ೧೧ - ೫ - ೨೬ ರ ವರೆಗೆ.

ಸನ್ ೧೯೨೮ ನೇ ಇಸ್ವಿಯ ವ್ಹ. ಫಾ. ಪರೀಕ್ಷೆಯ ೬ ನೇಯ ಪ್ರಶ್ನ.

ನಿನ್ನಿನ ಸಿಲಕು ೧೬೭೫ ರೂ. (೧) ೩೦೦ ರೂ. ಕಾಳಪ್ಪನ ಕಡಿಂದ ಹೊಲದ ಲಾವಣಿ ಬರತಕ್ಕದ್ದಿತ್ತು; ಅವನು ೧೦೦ ರೂ. ಸರಕಾರಿ ಹಪ್ತೆ ತಾನೇ ಕೊಟ್ಟನು ಉಳಿದ ಹಣದಲ್ಲಿ ೧೦ ರೂ.ಗೆ ಒಂದು ಚೀಲದಂತೆ ೨೦ ಚೀಲ ಜೋಳ ಕೊಟ್ಟನು.

(೨) ೬೦೦ ರೂ. ಹುಬ್ಬಳ್ಳಿ ಶ್ರೀ ಗಿರೆಪ್ಪನವರಲ್ಲಿ ಕುಸಿಬೆ ಖರೇದಿ ಮಾಡಿ ಅದರಲ್ಲಿ ೪೦೦ ರೂ. ರೋಖ ಮತ್ತು ೧೫೦ ರೂ. ಕಲ್ಲಪ್ಪನ ಹವಾಲೆಕೊಟ್ಟು ೫೦ ರೂ. ಬಾಕಿ ಮಾಡಿಕೊಂಡೆವು. (೩) ೭೦೦ ರೂ. ಅಸಲು ಮತ್ತು ೧೦೦ ಬಡ್ಡಿ ಇಷ್ಟು ರಕಮು ಬಸಪ್ಪ ಕೋರಿ ಇವರಿಂದ ಬರತಕ್ಕದ್ದಿತ್ತು. ಬಡ್ಡಿಯಲ್ಲಿ ಅರ್ಧ ರಕಮು ಸೂಟುಬಿಟ್ಟಿತು. ಬಸಪ್ಪನು ಅಸಲಿನಲ್ಲಿ ೪೨೦ ರೂ. ರೋಖಕೊಟ್ಟು ಉಳಿದದ್ದಕ್ಕೆ ಕತಬೀ ಬರಕೊಟ್ಟನು.

ಬೈಠೀಕಿರ್ದಿ.

ಖಾಸಗತ ಶಿವಲಿಂಗಪ್ಪಾ ಮಹಾಲಿಂಗಪ್ಪಾ ಸೆಟ್ಟರ ಇರುವ ಸ್ಥಳ ಬೆಳಗಾಂವಿ.

ತಾ. ೧೯-೪-೨೬ ರಿಂದ ೨೬-೪-೨೬ ರ ವರೆಗೆ.

ಜಮಾ —————— ರೂ.

೪೨೫ ಹೋದವಾರದ ಸಿಲಕು.

ಈ ವಾರದ ಜಮೆ.

೧೮೦ ರಾಮಾ ಚಿಕ್ಕೋಡಿ ಈತನ ಖಾತೆ—
ಇವನ ಕಡಿಂದ ಬಂದ ರೂ.ಗಳ ವಿವರ.
೧೦೦ ರೂ. ಗಳ ಸೀರಿ ತಂದುಕೊಟ್ಟ ಕಾರಣ ಸೀರಿ ಖಾತೆಗೆ ಖರ್ಚು ಬರೆದು.
೫೦ ಭೀಮಪ್ಪ ತಡಸ ಇವನ ಹವಾಲೆ ಕೊಟ್ಟಕಾರಣ ಇವನ ಖಾತೆಗೆ ಖರ್ಚು ಬರೆದು.
೩೦ ಕತಬೆ ಬರಕೊಟ್ಟ ಕಾರಣ ರಾಮಾ ಚಿಕ್ಕೋಡಿ ಈತನ ಖಾತೆಗೆ ಖರ್ಚು ಬರೆದು. ತಾ. ೧೯

೧೮೦

ಖಾ. ಪಾ.

೭೫ ರಾಮಪ್ಪನ ಖಾತೆ— ಈರಪ್ಪ ಬಾಗೇವಾಡಿ ಇವರ ಹವಾಲೆಗೆ ಒಪ್ಪಿದ ಕಾರಣ ಜೋಳದ ಖಾತೆಗೆ ಖರ್ಚು ಬರೆದು
ತಾ. ೨೨ ಖಾ. ಪಾ.

ಖರ್ಚ —————— ರೂ.

ಈ ವಾರದ ಖರ್ಚು

೧೦೦ ಸೀರಿಯ ಖಾತೆ— ರಾಮಾ ಚಿಕ್ಕೋಡಿ ಈತನು ಕೊಡತಕ್ಕ ಲೆಕ್ಕದಲ್ಲಿ ಸೀರಿಗಳನ್ನು ಕೊಟ್ಟಕಾರಣ ರಾಮಾ ಚಿಕ್ಕೋಡಿ ಈತನ ಖಾತೆಗೆ ಜಮೆಬರೆದು
ತಾ. ೧೯
ಖಾ. ಪಾ.

೫೦ ಭೀಮಪ್ಪಾ ತಡಸ ಇವನ ಖಾತೆ— ರಾಮಾ ಚಿಕ್ಕೋಡಿ ಈತನ ಹವಾಲೆಗೆ ಒಪ್ಪಿದ ಕಾರಣಾ ರಾಮಾ ಚಿಕ್ಕೋಡಿ ಈತನ ಖಾತೆಗೆ ಜಮೆ ಬರೆದು.
ತಾ. ೧೯ ಖಾ. ಪಾ.

೩೦ ರಾಮಾ ಚಿಕ್ಕೋಡಿ ಈತನ ಖಾತೆ— ಈ ಪೊತ್ತಿನದಿನ ಕತಬೆ ಬರಕೊಟ್ಟ ಕಾರಣ ಸದರಿಯುವನ ಖಾತೆಗೆ ಜಮೆ ಬರೆದು. ತಾ. ೧೯
ಖಾ. ಪಾ

೨೫ ಈರಪ್ಪ ಬಾಗೇವಾಡಿ ಇವರ ಖಾತೆ—
ಜೋಳದ ಲೆಕ್ಕದಲ್ಲಿ ಬಾಕಿ ಮಾಡಿ
ಕೊಂಡ ಕಾರಣ ಜೋಳದ ಖಾತೆಗೆ
ಖರ್ಚು ಬರೆದು ತಾ. ೨೨
ಖಾ. ಪಾ.

೪೭೮||| ಜಮೀನ ಬಾಬಖಾತೆ; ಹೊಳೆಯ
ಹೊಲದಿಂದ ಬಂದ ಬಾಬತು.
ತಾ. ೨೬
ಖಾ. ಪಾ.

೭೫೮||| ಒಟ್ಟು ಜಮೆ.
೪೭೮||| ರೋಖ
೨೮೦ ಪರಭಾರೆ

೭೫೮|||

೧೧೮೩||| ಅಂತೂ ಹನ್ನೊಂದು ನೂರಾ ಎಂ
ಬತ್ತುಮೂರು ರೊಪಾಯಿ ಹನ್ನೆ
ರಡು ಆಣೆ. ದಸ್ತೂರ ಶಿವಲಿಂಗ
ಪ್ಪಾ ಸೆಟ್ಟರ.

೨೦೦ ಜೋಳದ ಖಾತೆ; ಈರಪ್ಪಾ ಬಾಗೇವಾ
ಡಿ ಇವರಲ್ಲಿ ಜೋಳ ತಕ್ಕೊಂಡಿದ್ದು
ರೂ. ಕೊಟ್ಟ ವಿವರ.
೧೦೮ ರೋಖ
೭೫ ರಾಮಪ್ಪನ ಹವಾಲೆ ಕೊಟ್ಟದ್ದ
ರಿಂದ ರಾಮಪ್ಪನ ಖಾತೆಗೆ ಜಮೆ
ಬರೆದು.
೨೫ ಈರಪ್ಪಾ ಬಾಗೇವಾಡಿ ಇವರಲ್ಲಿ
ಬಾಕಿ ಇಟ್ಟದ್ದರಿಂದ ಸದರಿಯ
ವರ ಖಾತೆಗೆ ಜಮೆ ಬರೆದು.

೨೦೦ ರೂ. ತಾ. ೨೨
ಖಾ. ಪಾ.

೨೦೩||| ಚಂದೂಲಾಲ ಮಾರವಾಡೀ ಇವರ
ಖಾತೆ; ಇವರು ಬಸಪ್ಪ ಉಪ್ಪಿನ ಇ
ವರ ರಾಖಲೆಯಿಂದ ಬರೆದ ಹುಂಡಿ
ಯ ಬಗ್ಗೆ ಗುರಪ್ಪ ಯಾದವಾಡ ಇ
ವರಿಗೆ ಕೊಟ್ಟ ಬಾಬತು. ತಾ. ೨೬.
ಖಾ. ಪಾ.

೫೮೩||| ಒಟ್ಟು ಖರ್ಚು
೩೦೩||| ರೋಖ
೨೮೦ ಪರಭಾರೆ

೫೮೩|||

೬೦೦ ವಾರದ ಮುಂದಿನ ಸಿಲಕು

೧೧೮೩||| ಅಂತು ಹನ್ನೊಂದು ನೂರಾ ಎಂಬ
ತ್ತು ಮೂರು ರೂಪಾಯಿ ಹನ್ನೆರಡು
ಆಣೆ ದಸ್ತೂರ ಶಿವಲಿಂಗಪ್ಪಾ ಸೆಟ್ಟರ.

ತಾ. ೨೭-೪-೨೬ ರಿಂದ ೩-೫-೨೬ರ ವರೆಗೆ.

ಜ.——————————ರೂ.
೬೦೦ ಹೋದವಾರದ ಸಿಲಕು.

ಈ ವಾರದ ಜಮೆ
೪೦೦ ವಾರಬಾಂಡಿನ ಖಾತೆ— ೪ ವಾರಬಾಂ
ಡುಗಳನ್ನು ನಾರಾಯಣ ಗಣೇಶ ಇವ
ರಿಗೆ ಮಾರಿದ್ದರ ವಿವರ
೩೦೦ ರೋಖ
೧೦೦ ಗೋದಿ ಖಾತೆಗೆ ಖರ್ಚು ಬರೆದು
೪೦೦

ಖ.——————————ರೂ.
ಈ ವಾರದ ಖರ್ಚು.
೧೦೦ ಗೋದಿಯ ಖಾತೆ:—೧ ವಾರ ಬಾಂಡಿನ
ಲೆಕ್ಕದಲ್ಲಿ ೫ ಚೀಲ ಗೋದಿಯನ್ನು ನಾ
ರಾಯಣ ಗಣೇಶ ಇವರು ಕೊಟ್ಟದ್ದ
ರಿಂದ ವಾರಬಾಂಡಿನ ಖಾತೆಗೆ ಜಮೆ
ಬರೆದು ತಾ ೨೭.
ಖಾ. ಪಾ.

೧೬೦೦ ಬಂಗಾರದ ಖಾತೆ- ಭಗವಾನ ದಾಸ ಹುಕುಮಚಂದ ಇವರಿಗೆ ಮಾರಿದ್ದರ ವಿವರ.

೧೦೦೦ ರೋಖ

೨೦೦ ಬೆಳ್ಳಿ ಕೊಟ್ಟದ್ದರಿಂದ ಬೆಳ್ಳೀ ಖಾತೆಗೆ ಖರ್ಚು ಬರೆದು.

೪೦೦ ರೂ. ಗಳನ್ನು ತುಸು ದಿವಸಗಳಲ್ಲಿ ಕೊಡುತ್ತೇವೆಂದು ಹೇಳಿದ ಕಾರಣ ಭಗವಾನದಾಸರ ಹೆಸರ್ಲೆ ಖರ್ಚು ಬರೆದು.

ತಾ. ೩೦

೧೬೦೦ ಖಾ. ಪಾ.

---

೧೦೦ ಭಗವಾನದಾಸರ ಖಾತೆ—ಲೆಕ್ಕತಪ್ಪಿ ಅವರ ಹೆಸರ್ಲೆ ಖರ್ಚು ಬಿದ್ದಕಾರಣ ಬಂಗಾರ ಖಾತೆಗೆ ಖರ್ಚು ಬರೆದು. ತಾ.೩ ಮೇ

ಖಾ. ಪಾ.

---

೫೭೫ ಗೋಕಾಕ ಅರ್ಬನ ಬ್ಯಾಂಕಿನ ಖಾತೆ; ಸಂಗಪ್ಪ ಜೋಳದ ಇವರು ರೂಪಾಯಿ ಭರಣಾ ಮಾಡಿ ಗೋಕಾಕ ಅರ್ಬನ ಬ್ಯಾಂಕಿನ ಮೇಲೆ ಚೆಕ್ಕು ಬೇಡಿದ್ದರಿಂದ ೨೦೧ ನೇ ನಂಬರದ ಬೇರರ ಚೆಕ್ಕು ಕೊಟ್ಟ ಬಾಬತು. ತಾ.೩ ಮೇ

ಖಾ. ಪಾ.

೨೬೭೫ ಒಟ್ಟು ಜಮೆ.

೧೮೭೫ ರೋಖ

೮೦೦ ಪರಭಾರೆ

೨೬೭೫

೩೨೭೫ ಅಂತು ಮೂವತ್ತೆರಡು ನೂರಾ ಎಪ್ಪತ್ತೈದು ರೂ.ಗಳು ದ. ಶಿವಲಿಂಗಪ್ಪ ಸೆಟ್ಟರ.

೮೦೦ ಖುದ್ದ ಖಾತೆ – ಕೃಷ್ಣಾಜಿ ವಾಸುದೇವ ಇವರ ಮನೆಯನ್ನು ಲಿಲಾವಿನಲ್ಲಿ ರೋಖ ಹಣಕ್ಕೆ ಕೊಂಡ ಬಾಬತು. ತಾ.೩೦.

ಖಾ. ಪಾ.

---

೨೦೦ ಬೆಳ್ಳಿಯ ಖಾತೆ:—ಭಗವಾನದಾಸ ಇವರು ಬಂಗಾರಕ್ಕೆ ಬದಲಾಗಿ ಬೆಳ್ಳಿಕೊಟ್ಟದ್ದರಿಂದ ಬಂಗಾರ ಖಾತೆಗೆ ಜಮೆ ಬರೆದು. ತಾ ೩೦.

ಖಾ. ಪಾ.

---

೪೦೦ ಭಗವಾನ ದಾಸರ ಖಾತೆ:—ಬಂಗಾರದ ಬಾಬತು ಕೊಡತಕ್ಕದ್ದಿರುವ ಕಾರಣ ಬಂಗಾರ ಖಾತೆಗೆ ಜಮೆ ಬರೆದು ತಾ.೩೦

ಖಾ. ಪಾ.

---

೧೦೦ ಬಂಗಾರದ ಖಾತೆ:—ಲೆಕ್ಕದಲ್ಲಿ ತಪ್ಪಿದ ಕಾರಣ ಭಗವಾನದಾಸರ ಖಾತೆಗೆ ಜಮೆ ಬರೆದು. ತಾ. ೩ ಮೇ.

ಖಾ. ಪಾ.

೧೬೦೦ ಒಟ್ಟು ಖರ್ಚು

೮೦೦ ರೋಖ

೮೦೦ ಪರಭಾರೆ

೧೬೦೦

೧೬೭೫ ಮುಂದಿನ ವಾರದ ಸಿಲಕು.

೩೨೭೫ ಅಂತು ಮೂವತ್ತೆರಡುನೂರಾ ಎಪ್ಪತ್ತೈದು ರೂ. ಗಳು. ದ. ಸಿವಲಿಂಗಪ್ಪ ಸೆಟ್ಟರ

ತಾ. ೪-೫-೨೬ ರಿಂದ ತಾ. ೧೧-೫-೨೬ ರ ವರೆಗೆ.

ಜ__________ರೂ.

೧೬೭೫ ಹೋದವಾರದ ಸಿಲಕು.

ಖ.__________ರೂ.

ಈ ವಾರದ ಖರ್ಚು.

೧೦೦ ತೆರಿಗೆಯ ಖಾತೆ; ಹೊಲದ ಬಾ. ಸರಕಾರಕ್ಕೆ ತೆರಿಗೆ ಕೊಟ್ಟ ಬಗ್ಗೆ. ಕಾಳ

ಈ ವಾರದ ಜಮ.

೩೦೦ ಕಾಳಪ್ಪನ ಖಾತೆ; ಇವನಿಂದ ಹೊಲದ ಲಾವಣಿ ಬಂದ ವಿವರ.

೧೦೦ ಸರಕಾರೀ ತೆರಿಗೆ ಕೊಟ್ಟದ್ದರಿಂದ ತೆರಿಗೆಯ ಖಾತೆಗೆ ಖರ್ಚು ಬರೆದು.

೨೦೦ ಜೋಳದ ಚೀಲ ೨೦ ದರ ೧೦ ರಂತೆ ಕೊಟ್ಟಕಾರಣ ಜೋಳದ ಖಾತೆಗೆ ಖರ್ಚು ಬರೆದು.

೩೦೦ ತಾ. ೪ ಮೇ.

೧೫೦ ಕಲ್ಲಪ್ಪನ ಖಾತೆ; ಕುಸಿಬೆಯ ಬಾಬತು ಶ್ರೀಗಿರೆಪ್ಪನಿಗೆ ಕೊಡತಕ್ಕ ರೂ.ಗಳ ಹವಾಲೆಗೆ ಒಪ್ಪಿದ ಕಾರಣ ಕುಸಿಬೆಯ ಖಾತೆಗೆ ಖರ್ಚು ಬರೆದು. ತಾ. ೮ ಮೇ.

ಖಾ. ಪಾ.

೫೦ ಶ್ರೀಗಿರೆಪ್ಪನ ಖಾತೆ; ಕುಸಿಬೆಯ ಬಾಬತು ಇವರ ಲೆಕ್ಕ ಕೊಡತಕ್ಕದ್ದಿರುವ ಕಾರಣ ಕುಸಿಬೆಯ ಖಾತೆಗೆ ಖರ್ಚು ಬರೆದು. ತಾ. ೮ ಮೇ

ಖಾ. ಪಾ.

೭೦೦ ಬಸಪ್ಪ ಕೋರಿ ಇವರಿಂದ ಬರತಕ್ಕ ಸಾಲದ ಹಣ ಬಂದ ವಿವರ

೪೦೦ ರೋಖ

೩೦೦ ಹೊಸ ಕತಬಿ ಬರೆಯಿಸಿಕೊಂಡದ್ದರಿಂದ ಬಸಪ್ಪನ ಖಾತೆಗೆ ಖರ್ಚು ಬರೆದು.

೭೦೦ ತಾ. ೧೦ ಮೇ

ಖಾ. ಪಾ.

೧೦೦ ಬಡ್ಡಿಯ ಖಾತೆ; ಬಸಪ್ಪ ಕೋರಿ ಇವರಿಂದ ಬಂದ ಬಡ್ಡಿಯ ವಿವರ

೫೦ ರೋಖ

ಪ್ಪನ ಖಾತೆಗೆ ಜಮೆಬರೆದು ತಾ.೪ಮೇ.

ಖಾ. ಪಾ.

೨೦೦ ಜೋಳದ ಖಾತೆ; ಕಾಳಪ್ಪ ರೈತನು ಕೊಡತಕ್ಕ ಹಣದಲ್ಲಿ ಜೋಳ ಚೀಲ ೨೦ ದರ ೧೦ ರಂತೆ ಕೊಟ್ಟ ಕಾರಣ ಕಾಳಪ್ಪನ ಖಾತೆಗೆ ಜಮ ಬರೆದು. ತಾ. ೪ ಮೇ.

ಖಾ. ಪಾ.

೬೦೦ ಕುಸಿಬೀ ಖಾತೆ; ಶ್ರೀ ಗಿರೆಪ್ಪನಲ್ಲಿ ಕುಸಿಬೀ ಖರೇದಿ ಮಾಡಿ ಹಣ ಕೊಟ್ಟ ವಿವರ.

೪೦೦ ರೋಖ

೧೫೦ ಕಲ್ಲಪ್ಪನ ಹವಾಲೆ ಕೊಟ್ಟದ್ದರಿಂದ ಕಲ್ಲಪ್ಪನ ಖಾತೆಗೆ ಜಮ ಬರೆದು

೫೦ ಬಾಕಿ ಮಾಡಿಕೊಂಡದ್ದರಿಂದ ಶ್ರೀ ಗಿರೆಪ್ಪನ ಖಾತೆಗೆ ಜಮ ಬರೆದು

೬೦೦ ತಾ. ೮ ಮೇ.

ಖಾ. ಪಾ.

೩೦೦ ಬಸಪ್ಪನ ಖಾತೆ; ಹೊಸ ಕತಬಿ ಬರ ಕೊಟ್ಟದ್ದರಿಂದ ಸದರಿಯವನ ಖಾತೆಗೆ ಜಮ ಬರೆದು ತಾ. ೧೦ ಮೇ.

ಖಾ. ಪಾ.

೫೦ ಸೂಟಬಟ್ಟ ಖಾತೆ; ಬಸಪ್ಪನಿಗೆ ಬಡ್ಡಿಯಲ್ಲಿ ಸೂಟ ಬಿಟ್ಟದ್ದರಿಂದ ಬಡ್ಡಿಯ ಖಾತೆಗೆ ಜಮ ಹಿಡಿದು ತಾ. ೧೧ ಮೇ

ಖಾ. ಪಾ.

೧೨೫೦ ಒಟ್ಟು ಖರ್ಚು

೪೦೦ ರೋಖ

೮೫೦ ಪರಭಾರೆ

೧೨೫೦

೫೦ ಸೂಟ ಬಿಟ್ಟದ್ದರಿಂದ ಸೂಟಬಟ್ಟ
ಖಾತೆಗೆ ಖರ್ಚು ಬರೆದು.

೧೦೦ ತಾ. ೧೧ ಮೇ
ಖಾ. ಪಾ.

೧೩೦೦ ಒಟ್ಟು ಜಮೆ.
೪೫೦ ರೋಖ
೮೫೦ ಪರಭಾರೆ
೧೩೦೦

೨೯೭೫ ಅಂತು ಇಪ್ಪತ್ತರೊಂಬತ್ತುನೂರಾ
ಎಪ್ಪತ್ತೈದು ರೂ. ಗಳು. ದಸ್ತೂರ
ಶಿವಲಿಂಗಪ್ಪ

೧೬೨೫ ಮುಂದಿನ ವಾರದ ಸಿಲಕು

೨೯೭೫ ಅಂತು ಇಪ್ಪತ್ತರೊಂಬತ್ತು ನೂರಾ
ಎಪ್ಪತ್ತೈದು ರೂ. ಗಳು ದಸ್ತೂರ
ಶಿವಲಿಂಗಪ್ಪ

೩ ಪಠಾಣವಹಿ.

ರಕಮುಗಳನ್ನು ಕೀರ್ದಿಯಂತೆ ವಿವರವಾಗಿ ಬರೆಯುವ ಖಾತೆಗೆ ಪಠಾಣ ಖಾತೆಯನ್ನುವರು. ಇಂಥ ಖಾತೆಗಳುಳ್ಳ ವಹಿಗೆ ಪಠಾಣವಹಿಯನ್ನುವರು. ಪಠಾಣ ವಹಿಯಲ್ಲಿ ಹೋದವರ್ಷದ ಬಾಕಿ ಬರತಕ್ಕದಿದ್ದರೆ ಅದನ್ನು ಖರ್ಚಿನಕಡೆಗೂ, ಕೊಡತಕ್ಕದಿದ್ದರೆ ಅದನ್ನು ಜಮೆಯ ಕಡೆಗೂ ಆರಂಭದಲ್ಲಿ ಬರೆಯುವರು. ತರುವಾಯ ಕೀರ್ದಿಯ ಮೇಲಿಂದ ರಕಮುಗಳನ್ನು ವಿವರವಾಗಿ ಬಾರಮಾಡಿ ಮಿತಿಯನ್ನು ಹಾಕುವರು. ಇದು ವಸೂಲಿಯ ಕೆಲಸಕ್ಕೆ ಉಪಯೋಗವಾಗುವದೆಂದು ಇದಕ್ಕೆ ವಸೂಲಿಯ ಬುಕ್ಕೆಂತಲೂ ಅನ್ನುವರು. ವಸೂಲಿಯ ಕೆಲಸಕ್ಕೆ ನಿರ್ಭಿಡೆಯ ಪಠಾಣರನ್ನೇ ಬಹುತರ ಕಳಿಸುತ್ತಿರುವದರಿಂದ ಇದಕ್ಕೆ ಪಠಾಣವಹಿಯೆಂಬ ಹೆಸರು ಬಿದ್ದದೆ.

ಪಠಾಣವಹಿಯ ನಮೂನೆ.

ಬಸಪ್ಪ ಲಿಂಗಪ್ಪ ಅಂಗಡಿ ಖಾತೆ.

ಜ.______________ರೂ.

೨೫ ಕೀರ್ದಿ ಪಾನು ೧. ಆಶ್ವಿನ ಶು. ೧
ಕೊಡತಕ್ಕ ಹಿಂದಿನ ಬಾಕಿ.
೧೬ ಕಿರ್ದಿ ಪಾ ೩ ಆ. ಶು. ೪ ಸೆಜ್ಜಿಯ ಬಾ.
೫೫ ಕೀ. ಪಾ. ೬ ಜೇ. ಶು. ೧ ರೋಖ
ಬಂದದ್ದು.

೯೬

ಖ______________ರೂ.

೧೦೮ ಕೀ. ಪಾ. ೨. ಆಶ್ವಿನ ಶು. ೩. ಸೆಜ್ಜಿ
೧೨ ಮಣ ದರ ೯ ಪ್ರಕಾರ ಒಯ್ದದ್ದು.
೭೫ ಕಿ. ಪಾ. ೪. ವೈ. ಶು. ಅಕ್ಕಿ ಚೀಲ
೬। ದರ ೧೨

೧೮೩

೮೭ ಬಾಕಿ ಬರತಕ್ಕದ್ದು.

ಇದರ ಉತಾರವನ್ನು ಪಠಾಣನ ಕಡೆಗೆ ಕೊಡಲು, ಅವನು ಬಸಪ್ಪನ ಕಡೆಗೆ ಹೋಗಿ, ಬಸಪ್ಪನವರೇ ಇದು ನೋಡಿರಿ, ನಿಮ್ಮ ಖಾತೆಯನ್ನು. ಅದರಲ್ಲಿ ತಪಸೀಲು ಸಹ ಉಂಟು. ನಮ್ಮ ಸೆಟ್ಟರ ಬಾಕಿಯನ್ನು ತಟ್ಟನೆ ಚೆಲ್ಲಿರಿ ಎಂದು ನಿಷ್ಟುರದಿಂದ ನುಡಿದು ನಿಂತ ಕಾಲಮೇಲೆ ಸಟ್ಟನೆ ವಸೂಲು ಮಾಡುವನು.

ಖತಾವಣಿ ಪಠಾಣವಹಿ ಇವುಗಳಲ್ಲಿ ಯಾವದೊಂದನ್ನು ಇಡುವದು ಮಾಲಕರ ಇಚ್ಛೆಯನ್ನವಲಂಬಿಸಿರುತ್ತದೆ. (೧) ವ್ಯವಹಾರವು ಸ್ವಲ್ಪವಿದ್ದು ಸಿಲಕಿನ ಮೇಳನ್ನು ದಿನಾಲು ನೋಡಲೇಬೇಕೆಂಬ ಅವಶ್ಯವಿಲ್ಲದಿದ್ದರೆ, (೨) ವ್ಯವಹಾರವು ಬಹಳವಿದ್ದು ಮೇಲೆ ಮೇಲೆ ತಪಸೀಲನ್ನು ನೋಡುವ ಪ್ರಸಂಗ ಬರುತ್ತಿದ್ದರೆ, (೩) ಖಾತೆಯ ಉತಾರವನ್ನು ಕೊಡತಕ್ಕದ್ದಿದ್ದರೆ, (೪) ಯಾವದೊಂದು ಇಸಮಿನ ಇಲ್ಲವೆ ಬಾಬಿನ ಸಂಬಂಧವಾಗಿ ದಿನಾಲು ಕೊಡಕೊಳ್ಳುವ ವ್ಯವಹಾರಗಳು ಬಹಳವಾಗಿ ಸಾಗುತ್ತಿದ್ದು ಆ ರಕಮುಗಳನ್ನು ಕೀರ್ದಿಯಲ್ಲಿ ಬರೆದು ಪುನಃ ಖತಾವಣಿಯಲ್ಲಿ ಬರೆದುಕೊಳ್ಳುವಂಥ ತ್ರಾಸ ತಪ್ಪಿಸಿಕೊಳ್ಳಬೇಕೆಂಬ ಮನವಿದ್ದರೆ ಪಠಾಣವಹಿಯು ಬಹಳ ಉಪಯೋಗವಾಗುತ್ತದೆ. ಇದಲ್ಲದೆ ಕೊಡಕೊಳ್ಳುವ ಸಂಗತಿಯ ಬಗ್ಗೆ ಕೋರ್ಟಿನಲ್ಲಿ ಕೆಲಸ ನಡೆದಿದ್ದರೆ ಪುರಾವೆಗಾಗಿ ಪಠಾಣವಹಿಯ ಉಪಯೋಗವಾಗುವದು.

೪ ಜಾಂಗಡ ವಹಿ.

ಗುರುತಿನ ಜನರು ಅಂಗಡಿಗೆ ಬಂದು, ಕೆಲವು ಮಾಲನ್ನು ತಕ್ಕೊಂಡು, ಇವುಗಳನ್ನು ನಮ್ಮ ಮನೆಯವರಿಗೆ ತೋರಿಸಿ, ನಮ್ಮ ಇಚ್ಛೆಗೆ ಬಂದಷ್ಟು ಇಟ್ಟುಕೊಂಡು ಉಳಿದವುಗಳನ್ನು ಪರತ ಮಾಡುವ ಕರಾರಿನಿಂದ ಒಯ್ಯುವ ಮಾಲಿಗೆ **ಜಾಂಗಡ ಮಾಲು** ಅನ್ನುತ್ತಾರೆ. ವ್ಯಾಪಾರಿಗಳು ತಮ್ಮ ಗಿರಾಕಿಗಳಿಗೆ ಈ ತರದ ಜಾಂಗಡ ಮಾಲನ್ನು ಕೊಡುವರು. ತಮ್ಮಲ್ಲಿಲ್ಲದಿದ್ದರೆ ಪರರ ಅಂಗಡಿಯಿಂದ ತರಿಸಿಕೊಡುವರು. ಈ ಪ್ರಕಾರವಾಗಿ ಕೊಟ್ಟ ಮತ್ತು ತಂದ ಮಾಲುಗಳು ತಾತ್ಪೂರ್ತಿಕವಾಗಿರುವದರಿಂದ ಇವುಗಳ ಲೆಕ್ಕ ಪಕ್ಕಾ ಕೀರ್ದಿಯಲ್ಲಿ ಬರೆಯದೆ ರೋಜಖರಡಿನಂಥ ಒಂದು ಕಚ್ಚಾವಹಿಯಲ್ಲಿ ಬರೆಯುವರು. ಅಂಥ ಜಾಂಗಡ ಮಾಲಿನ ಟಿಪ್ಪಣೆಗಾಗಿ ಕಟ್ಟಿದ ವಹಿಗೆ **ಜಾಂಗಡ ವಹಿ**ಯೆನ್ನುವರು. ಇದಕ್ಕೆ ಕೆಲವರು ದಾಖವಣಿ (ತೋರಿಸುವ) ವಹಿಯೆನ್ನುತ್ತಾರೆ.

ಜಾಂಗಡವಹಿಯ ನಮೂನೆ.

ತಾ. ೧-೫-೨೬.

ಜಮೆ ———————— ರೂ.
೪ ವಿಕರಿ—ನಾರಾಯಣ ಸದಾಶಿವ ಇವರ ಅಂಗಡಿಯಿಂದ ಗಿರಾಕಿಗಳ ಸಲುವಾಗಿ ೫ ನಾಗಪುರಿ ಧೋತರ ಜೋಡುಗಳನ್ನು
೧ ಪರತ. ತಂದದ್ದು ದರ ೧೨ ರೂ.

ಖ ———————— ರೂ.
೪ ವಿಕರಿ—ಬಸಪ್ಪ ಸಂಗಪ್ಪ ಬೇಳಿ ಇವರಿಗೆ ೬ ಇಲಕಲ್ಲ ಸೀರಿ
೨ ಪರತಕೊಟ್ಟದ್ದು. ದರ ೧೫ರೂ.

೫ ಮಹತ್ವದ ಜೀನಸುಗಳ ಜಮಾಖರ್ಚು.

ಪ್ರತಿಯೊಂದು ಜೀನಸಿನ ಜಮೆಯ, ಖರ್ಚಿನ, ಸಿಲಕಿನ ಲೆಕ್ಕ ತಿಳಿಯುವದಕ್ಕಾಗಿ ಜಮಾಖರ್ಚು ಬರೆಯುವ ಪುಸ್ತಕಕ್ಕೆ ಮಹತ್ವದ ಜೀನಸಿನ ಜಮಾಖರ್ಚು ಅನ್ನುವರು. ವ್ಯಾಪಾರಿಗಳು ಕೊಂಡ ಮತ್ತು ಮಾರಿದ ಮಾಲುಗಳ ಜಮಾಖರ್ಚನ್ನು ಇದರಲ್ಲಿ ಬರೆಯುವರು. ಜಮೀನದಾರರು ತಮ್ಮ ಜಮೀನುಗಳಿಂದ ಬಂದ ಧಾನ್ಯಗಳ ಪ್ರಕಾರ, ಕೊಟ್ಟ ಧಾನ್ಯಗಳ ಪ್ರಕಾರ, ಸಿಲಕು ಇವುಗಳನ್ನು ವಿವರಿಸುವರು.

ಮಿತಿಯ ಕ್ರಮದಿಂದ ಜೀನಸಿನ ಜಮಾಖರ್ಚು ಬರೆದು ಸಿಲಕು ತೆಗೆಯುವ ವಹಿಗೆ ಮಹತ್ವದ ಜೀನಸಿನ ಕೀರ್ದಿವಹಿಯನ್ನುವರು. ಪ್ರತಿಯೊಂದು ವಸ್ತುವಿನ ಲೆಕ್ಕ ಬೇರೆ ಬೇರೆ ತಿಳಿಯುವದಕ್ಕಾಗಿ ಇಟ್ಟ ಖಾತೆಗಳಿಗೆ ಮಹತ್ವದ ಜೀನಸಿನ ಖಾತೆಯೆನ್ನುವರು.

ಮಹತ್ವದ ಜೀನಸಿನ ಕೀರ್ದಿಯ ನಮೂನೆ.

ವೈಶಾಖಮಾಸ ಶಕೆ ೧೮೪೦.

ಜಮೆ ———————— ರೂ.

೨೯ ೧ ಹಿಂದಿನ ಸಿಲಕಿನ ಧಾನ್ಯದ ವಿವರ
ಜೋಳ ಕಡಲಿ
೧೯೧೧ ೯೧೦

೯ ೯ ಜೋಳ ಹೊಳಹೊಲದ ಬಾ.
ವ. ೫

೯೧೦ ಕಡಲಿ ಎರೆಹೊಲದ ಬಾ.
ವ. ೧೦

೯೧೯ ಒಟ್ಟು ಜಮ.

——

೩ ಅಂತು ೩ ಖಂಡಗ

ಖರ್ಚು ———————— ರೂ.

೯೧೧ ಜೋಳ, ಮನೆಯ ಬಳಕೆಗೆ ತೆಗೆದುಕೊಂಡ ಬಾ. ಶು. ೪.

೯೧೦ ಜೋಳ ಕುರುಬರ ಬೀರನಿಗೆ ಸವ್ವಾಕೆಯಂತೆ ಕೊಟ್ಟ ಬಾ.
ವ. ೩.

೯೧೦ ಕಡಲಿ ರೋಖ ಮಾರಿದ್ದು. ವ. ೧೪

೧೯೧೧ ಒಟ್ಟು ಖರ್ಚು

೧೯೯ ಸಿಲಕು. ಧಾನ್ಯದ ವಿವರ
೯೧೯ ಜೋಳ
೯೧೦ ಕಡಲಿ
——
— ೧೯೯

೩ ಅಂತು ಮೂರು ಖಂಡಗ.

ಮುಹತ್ವದ ಜೀನಸಿನ ಖತಾವಣಿಯ ನಮೂನೆ.

ಜೋಳದಖಾತೆ.

ಜ.	ರೂ.	ಖ.	ರೂ.
೧೬೧೧ ಸಿಲಕು.		೬೧೧ ಶು. ೪.	
೯ ಹೊಳಹೊಲದ ಉತ್ಪನ್ನ.		೬೧೦ ಶು. ೩.	
ವ ೫			
೨		೧೬೧	

ಕಡಲಿಖಾತೆ.

ಜಮೆ.	ರೂ.	ಖ.	ರೂ.
೬೧೦ ಸಿಲಕು.		೬೧೦ ಮಾರಾಟ ವ. ೧೪.	
೬೧೦ ಎರೆಹೊಲದ ಬಾ. ವ. ೧೦		೦ ಉಂಗ	
೧		೬೧೦	

೬ ಕಚ್ಚಾಕೀರ್ದಿಯ (ರೋಜಖರಡಿನ) ನಮೂನೆ.

ಈವೊತ್ತಿನ ದಿವಸ ೨೦ರುಮಾಲ ದರ ೫ ರಂತೆ ಮಾರಿದವು. ೧ ಸೀರಿ ೨೦ರೂ. ಗೆ ರಾಮಪ್ಪನಿಗೆ ಮಾರಿತು. ಭೀಮರಾಯರು ೫ ರೂ. ಕೈಗಡ ಒಯ್ದರು. ೧೦ ರುಮಾಲ ದರ ೫ ರೂ. ಪ್ರ. ಮಾರಿದೆವು. ಸಂಗಪ್ಪನಿಂದ ೨೫ ರೂ. ಬಂದವು. ಮನೆಯವರ ಮನಸಿಗೆ ಬಾರದ್ದರಿಂದ ಸೀರಿ ಪರತಮಾಡಿದ ಬಗ್ಗೆ ರಾಮಪ್ಪನಿಗೆ ೩೦ ರೂ. ತಿರುಗಿಕೊಟ್ಟಿತು. ಭೀಮರಾಯರಿಗೆ ಪುನಃ ೧೫ ರೂ. ಕೈಗಡ ಕೊಟ್ಟಿತು. ಸಂಗಪ್ಪನಿಗೆ ೧೫ ರೂ. ಕೊಟ್ಟಿತು.

ಇದರ ರೋಜಖರಡು ಕೆಳಗೆ ಬರೆದಂತೆ.

ಕಚ್ಚಾಕೀರ್ದಿ.

ರೋಜಕೀರ್ದಿಯಂತೆ ಮೇಲ್ಶಿಲಾಸವನ್ನು ಬರೆಯುವದು.

ಮಾಘ ಶು॥ ೫ ಶಕೆ ೧೮೪೦.

ಜಮೆ	ರೂ.	ಖ	ರೂ.
೨೦೦ ನಿನ್ನಿನ ಸಿಲಕು.		ಈ ವೊತ್ತಿನ ಖರ್ಚು.	
ಈವೊತ್ತಿನ ಜಮೆ.		§೫ ಭೀಮರಾಯರಿಗೆ ಕೈಗಡ ಕೊಟ್ಟಿತು ಖಾ. ಪಾ.	
+೧೦೦ ರುಮಾಲ ಖಾತೆ; ರುಮಾಲ ೨೦ ದರ ೫ ರೂ. ಪ್ರ. ರೋಖ ಮಾ. ಖಾ. ಪಾ.		×೨೦ ಸೀರಿಖಾತೆ; ಸೀರಿ ೧ ದರ ೨೦ ರೂ. ಪಾಯಿಗಳದು ರಾಮಪ್ಪನು ಪರತ ಮಾಡಿದಕಾರಣ ಅವನಿಗೆ ತಿರುಗಿ ಕೊಟ್ಟ ಬಗ್ಗೆ. ಖಾ. ಪಾ.	
×೨೦ ಸೀರಿಖಾತೆ; ಸೀರಿ ೧ ದರ ೨೦ ರು.ಪ್ರ. ರಾಮಪ್ಪನಿಗೆ ಮಾರಿತು. ಮನೆಯ			

ವರ ಮನಸಿಗೆ ಬಾರದಿದ್ದರೆ ವರತ ತಕ್ಕೊಳ್ಳುವ ಕರಾರವದೆ.
ಖಾ. ಪಾ.

೧೦

೨೫ ಸಂಗಪ್ಪನ ಖಾತೆ; ಹಿಂದಿನ ಬಾಕಿ ಬಗ್ಗೆ.
ಖಾ. ಪಾ.

+ ೫೦ ರುಮಾಲಖಾತೆ; ರುಮಾಲ ೧೦ ದರ ೫ ರಂತೆ ಮಾರಿದ್ದು.

೧೬೦ ಒಟ್ಟು ಜಮೆ.

೩೬೦ ಅಂತು ಮುನ್ನೂರಾ ಅರವತ್ತು. ರೂಪಾಯಿಗಳು

೧೫ ಸಂಗಪ್ಪನಿಗೆ ಜರೂರ ಬಿದ್ದ ಕಾರಣ ಅವನು ಒಯ್ದು ಬಗ್ಗೆ.
ಖಾ. ಪಾ.

§ ೧೫ ಭೀಮರಾಯರು ಪುನಃ ಕೈಗಡ ಒಯ್ದರು.
ಖಾ, ಪಾ.

೨೦ ಒಟ್ಟು ಖರ್ಚು.

೩೪೦ ಸಾಳಿನ ಸಿಲಕು.

೩೬೦ ಅಂತು ಮುನ್ನೂರಾ ಅರವತ್ತು ರೂಪಾಯಿಗಳು.

ಮೇಲೆ ಬರೆದ ಕಚ್ಚಾ ಕೀರ್ದಿಯಿಂದ ಪಕ್ಕಾ ಕೀರ್ದಿ ಬರೆಯುವಾಗ × ಈ ಗುರುತು ಮಾಡಿದ ರಕಮುಗಳನ್ನು ಅಗದಿ ಬಿಟ್ಟು ಬಿಟ್ಟಿರುತ್ತದೆ. +,§ ಈ ಗುರುತು ಮಾಡಿದ ರಕಮುಗಳನ್ನು ಕೂಡಿಸಿರುತ್ತದೆ. ಸಂಗಪ್ಪನಿಂದ ೧೦ ರೂಪಾಯಿಗಳನ್ನು ಮಾತ್ರ ಜಮೆ ಹಿಡಿದಿರುವೆವು.

ಪಕ್ಕಾ ಕೀರ್ದಿ.

ಮಾಘ ಶು. ೫ ಶಕೆ ೧೮೪೦.

ಜಮೆ ———— ರೂ.

೨೦೦ ನಿನ್ನಿನ ಸಿಲಕು.

ಈವೊತ್ತಿನ ಜಮೆ.

೧೫೦ ರುಮಾಲಖಾತೆ; ರುಮಾಲ ೩೦ ದರ ೫ ರಂತೆ ರೋಖ ಮಾರಿದ್ದು.
ಖಾ. ಪಾ.

೧೦ ಸಂಗಪ್ಪನ ಖಾತೆ; ಹಿಂದಿನ ಬಾಕಿಯ ಬಗ್ಗೆ ಬಂದದ್ದು.
ಖಾ. ಪಾ.

೧೬೦ ಒಟ್ಟು ಜಮೆ

೩೬೦ ಅಂತು ಮುನ್ನೂರಾ ಅರವತ್ತು ರೂಪಾಯಿಗಳು.

ಖರ್ಚು ———— ರೂ.

ಈಹೊತ್ತಿನ ಖರ್ಚು

೨೦ ಭೀಮರಾಯರ ಖಾತೆ; ಕೈಗಡ ಒಯ್ದದ್ದು
ಖಾ. ಪಾ.

೨೦ ಒಟ್ಟು ಖರ್ಚು.

೩೪೦ ಸಾಳಿನ ಸಿಲಕು.

೩೬೦ ಅಂತು ಮುನ್ನೂರಾ ಅರವತ್ತು ರೂಪಾಯಿಗಳು.

೭ ಬೋಟ ಖಾತೆ.

ಚಿಕ್ಕ ತಕ್ಕಡಿಯ ಇಲ್ಲವೆ ಬೇರೆ ಚಿಲ್ಲರ ಅಂಗಡಿಯಲ್ಲಿ ಕಿರುಕಳ ವ್ಯಾಪಾರವೇ ಇರುತ್ತದೆ; ಅಂಥ ಅಂಗಡಿಕಾರರು ರೋಖ ವ್ಯಾಪಾರದ ಹಣದ ಲೆಕ್ಕ ಹಚ್ಚುತ್ತಿರುವದಿಲ್ಲ; ಉದ್ದರಿ ವ್ಯಾಪಾರವಾದರೆ ಮಾತ್ರ ನಿರ್ವಾಹವಿಲ್ಲದೆ ವಸೂಲಿಯುದೆಸೆಯಿಂದ ಹಚ್ಚಬೇಕಾಗುತ್ತದೆ. ಅದರಿಂದ ಅವರು ಉದ್ದರಿ ವ್ಯಾಪಾರವಾದ ಕೂಡಲೆ ಮೊದಲು ಕಚ್ಚಾ ಕೀರ್ದಿಯಂಥ ಟಿಪ್ಪಣೆಯಲ್ಲಿ ಬರೆದುಕೊಂಡು ಬಳಿಕ ತಮ್ಮ ಅನುಕೂಲತೆಯಂತೆ ಬೇರೊಂದು ವಹಿಯಲ್ಲಿ ಉದ್ದರಿ ಒಯ್ದವರ ಖಾತೆಯನ್ನು ಇಟ್ಟು ಅದರಲ್ಲಿ ಅವರ ಲೆಕ್ಕ ವಿವರವಾಗಿ ಬರೆದುಕೊಳ್ಳುವರು. ತಕ್ಕಷ್ಟು ವ್ಯಾಪಾರವೇ ಇಲ್ಲದಿದ್ದ ಮೇಲೆ ಕೀರ್ದಿ ಖಾತೆ ಮುಂತಾದವುಗಳನ್ನು ಚಂದಕ್ಕಾಗಿ ಇಡುವದದೆಯೋ? ಇಂಥ ಅಂಗಡಿಕಾರರ ಲೆಕ್ಕಕ್ಕೆ ಬೋಟಖಾತೆಯೆನ್ನುವರು. ಆದುದರಿಂದ ‘ಪಕ್ಕಾ ಕೀರ್ದಿಯನ್ನಿಡದೆ, ಉದ್ದರಿಯ ಇಸಮುವಾರ ಖಾತೆಗಳನ್ನಿಟ್ಟು ವಿವರವಾದ ಲೆಕ್ಕ ಬರೆಯುವ ವಹಿಗೆ ಬೋಟಖಾತೆಯೆನ್ನುವರು’. ಉದ್ದರಿಯ ಹಣ ವಸೂಲಾದಷ್ಟು ಅವರ ಲೆಕ್ಕದ ಕೆಳಗೇ ವಜಾ ಮಾಡುವರು. ಇಲ್ಲವೆ ಬೇರೆ ಜಮೆ ಹಚ್ಚಿಕೊಳ್ಳುವರು. ಬೋಟಖಾತೆಯ ಉದಾಹರಣೆಯು ಕೆಳಗೆ ಬರೆಯಲ್ಪಟ್ಟದೆ.

ಭೀಮಪ್ಪ ಬಸಪ್ಪ ಕುರಬರ.

ℴ—॥೧ ತೆಂಗಿನಕಾಯಿ ೧ ಮಿತಿ ಚೈತ್ರ ಶು॥೧
ℴ।॥೧ ಉಪ್ಪು ಅರಪಾವು. ಚೈತ್ರ ಶು॥ ೫
ℴ॥೧ ಹುರಕಡ್ಡಿ ಚೈತ್ರ ಶು॥೧೫
———
ℴ≡ ಜಮೆ.
(–) ℴ= ವಸೂಲು ಚೈತ್ರ ವ॥ ೩.
———
ℴ—
(+) ℴ— ಮೆಣಸಿನಕಾಯಿ ಸೇರು ಚೈತ್ರ ವ॥ ೫
———
ℴ=

೮ ಬೋಟಖತ.

ಬೇರೆ ಬೇರೆ ಸದರುಗಳಿಗೆ ಇರುವ ರಕಮುಗಳನ್ನು ಒಂದೇ ಸದರಿಗೆ ತಂದು ಒಟ್ಟುಗೂಡಿಸುವ ಟಿಪ್ಪಣೆಯ ಕಾಗದಕ್ಕೆ “ಬೋಟಖತ” ವೆನ್ನುವರು. ಉದಾ—ಒಬ್ಬನಿಗೆ ಅನೇಕ ಹೊಲಗಳನ್ನು ಖಂಡಿನಿಂದ ಹಚ್ಚಿದ್ದು ಅವೆಲ್ಲವುಗಳ ಒಟ್ಟು ಹಣವು ಅವನಿಂದ ಎಷ್ಟಾಗುತ್ತದೆಂದು ನೋಡುವಂಥ ಟಿಪ್ಪಣೆಯ ಕಾಗದದ ಮಾದರಿಯ ಕಾಗದ, ಅಥಾವೆ ತೋಂಡಮಿಳವಣಿಯ ಟಿಪ್ಪಣೆಗಳು.

---

೨ ನೇ ಪ್ರಕರಣ.

ಬಡ್ಡಿಯ ಲೆಕ್ಕ.

ಭಾಗಗಳು:—೧ ಕಚ್ಚೆಯೆಂದರೇನು ? ೨ ಪಂಚರಾಶಿಕ ಮತ್ತು ಕಚ್ಚೆ ತೆಗೆದು ಮಾಡುವ ಲೆಕ್ಕಗಳ ಭೇದ, ೩ ಕಚ್ಚೆಗಳ ಪ್ರಕಾರ, ೪ ಖಾತೆಗಳ ರಕಮಿನಿಂದ ಬಡ್ಡಿಯ ಆಕಾರ.

೧ ಪಂಚರಾಶಿಕ ರೀತಿಯಿಂದ ಸರಳಬಡ್ಡಿಯನ್ನು ತೆಗೆಯುವದು ಬಹುತರ ಎಲ್ಲರಿಗೂ ಗೊತ್ತಿರುವದಷ್ಟೇ; ಅದೇ ತತ್ವಕ್ಕನುಸರಿಸಿ ಅದಕ್ಕಿಂತ ಹಗುರವಾಗಿ ತೆಗೆಯುವ ರೀತಿಯೊಂದುಂಟು. ಒಬ್ಬನಿಗೆ ೬೦೦ ರೂಪಾಯಿಗಳನ್ನು ೧ ತಿಂಗಳ ವರೆಗೆ ಕೆಲವು ಬಡ್ಡಿಯಿಂದ ಸಾಲ ಕೊಟ್ಟಿರುತ್ತೇವೆಂದು ಕಲ್ಪಿಸುವಾ ಇದರಿಂದ ಬರುವ ಬಡ್ಡಿಯಷ್ಟೇ ಬಡ್ಡಿಯನ್ನು ೧೦೦ ರೂ. ಗಳಿಂದಲೇ ಗಳಿಸಬಹುದು. ಇದೇನು ಸೋಜಿಗವು? ಇದರಲ್ಲೇನು ಸೋಜಿಗವಿಲ್ಲ; ಆ ನೂರು ರೂಪಾಯಿಗಳನ್ನು ೬ ತಿಂಗಳುಗಳ ವರೆಗೆ ಬಿಟ್ಟರಾಯಿತು. ಮೊದಲಿನಷ್ಟೇ ಬಡ್ಡಿ ಬರುವದು. ಸೈ, ಸೈ. ೬೦೦ ರೂ. ಗಳನ್ನು ಒಂದು ತಿಂಗಳು ಬಳಸಿದರೂ ಅಷ್ಟೇ; ನೂರೇ ರೂಪಾಯಿಗಳನ್ನು ೬ ತಿಂಗಳುಗಳ ವರೆಗೆ ಬಳಸಿದರೂ ಅಷ್ಟೇ. ಅವೆರಡುಗಳ ಬಳಸಾಡುವಿಕೆಯ ಪರಿಣಾಮಗಳು ಒಂದೇ ಆಗುತ್ತವೆ. ಇವುಗಳಲ್ಲಿ ೬೦೦ ರೂ ಬಳಸಾಡಿದ ರಕಮು ಇರುತ್ತದೆ. ಬಳಸಾಡುವ ರಕಮಿಗೆ ಕಚ್ಚೆಯೆಂದೆನ್ನುವರು. ಅಂದ ಮೇಲೆ ಕಚ್ಚೆಯೆಂದರೆ ಕೆಲವು ರೂಪಾಯಿಗಳು ಕೆಲವು ಅವಧಿಯ ವರೆಗೆ ಇದ್ದರೆ ಅವೆರಡು ಶುದ್ಧ ಅಂಕೆಗಳ ಗುಣಾಕಾರವಾದಂತಾಯಿತು. ಈ ಮೇರೆಗೆ ಕಚ್ಚೆ ಹಾಕಿ ಬಡ್ಡಿ ತೆಗೆಯುವ ಸುಲಭ ಪದ್ಧತಿಯು ವ್ಯವಹಾರಸ್ತರಲ್ಲುಂಟು.

೨ ಈಗ ನಾವು ಒಬ್ಬನಿಗೆ ೧೦೦ ಕ್ಕೆ ತಿಂಗಳಿಗೆ ೮ಆ ಆಣೆ ಬಡ್ಡಿಯಂತೆ ೫೦೦ ರೂ. ಗಳನ್ನು ೮ ತಿಂಗಳುಗಳ ವರೆಗೂ ೨೦೦ ರೂಪಾಯಿಗಳನ್ನು ೪ ತಿಂಗಳುಗಳ ವರೆಗೂ ಕೊಟ್ಟರೆ ಅವುಗಳ ಸರಳಬಡ್ಡಿಯೆಷ್ಟು?

ಪಂಚರಾಶಿಕದಿಂದ ತೆಗೆಯಲು:—

೧ನೆಯದು—ಅಸಲು×ಮುದ್ದತು×ಬಡ್ಡಿಯ ದರ / ೧೦೦×೧ ಮುದ್ದತು = ೫೦೦×೮×-||- / ೧೦೦×೧ = ೨೦ ಬಡ್ಡಿ.

೨ನೆಯದು—ಅಸಲು×ಮುದ್ದತು×ಬಡ್ಡಿಯದರ / ೧೦೦×೧ ಮುದ್ದತು = ೨೦೦×೪×-||- / ೧೦೦×೧ = ೪ ಬಡ್ಡಿ.

∴ ೨೦+೪=೨೪ ಒಟ್ಟು ಬಡ್ಡಿ.

ಕಚ್ಚೆ ಹಾಕಿ ತೆಗೆಯಲು:—

೫೦೦×೮=೪೦೦೦ ಕಚ್ಚೆಗಳು ಮೊದಲನೆಯ ರಕಮಿನದು.
೨೦೦×೪= ೮೦೦ ಕಚ್ಚೆಗಳು ಎರಡನೆಯ ರಕಮಿನದು.

೪೮೦೦ ಒಟ್ಟು ಕಚ್ಚೆಗಳು

೪೮೦೦×-||- / ೧೦೦ = ೨೪ ಬಡ್ಡಿ.

ಇವೆರಡು ಬಗೆಗಳಲ್ಲಿ ಕಚ್ಚೆ ಹಾಕಿ ತೆಗೆಯುವ ರೀತಿಯು ಸುಲಭವಷ್ಟೆ.

(೩) ಕಚ್ಚೆಗಳಲ್ಲಿ ವರ್ಷಾತ್ಮಕ, ಮಾಸಾತ್ಮಕ, ದಿನಾತ್ಮಕ ಎಂದು ಮೂರು ಪ್ರಕಾರಗಳುಂಟು. ೩೦ ದಿನಾತ್ಮಕ ಕಚ್ಚೆಗಳೆಂದರೆ ೧ ಮಾಸಾತ್ಮಕ ಕಚ್ಚೆ; ೧೨ ಮಾಸಾತ್ಮಕ ಕಚ್ಚೆಗಳೆಂದರೆ ೧ ವರ್ಷಾತ್ಮಕ ಕಚ್ಚೆಯೆಂಬದು ಸ್ಪಷ್ಟವೇ; ಇದರಂತೆ ಕೆಳಗಿನ ಲೆಕ್ಕದ ಕಚ್ಚೆಗಳನ್ನು ತೆಗೆಯುವಾ—

೩೦೦ ರೂ. ಗಳಿಗೆ ೨ವರ್ಷ ೮ತಿಂಗಳು ೬ ದಿವಸಗಳ ವರ್ಷಾತ್ಮಕ ಕಚ್ಚೆಯೆಷ್ಟು?

ಮುದ್ದಲು ೩೦೦	ಮುದ್ದಲು ೩೦೦	ಮುದ್ದಲು ೩೦೦
ವರ್ಷ ×೨	ತಿಂಗಳು ×೮	ದಿವಸ ×೬
ವರ್ಷಾತ್ಮಕ ಕಚ್ಚೆ ೬೦೦	ಮಾಸಾತ್ಮಕ ೨೪೦೦	ದಿನಾತ್ಮಕ ೧೮೦೦

೧೮೦೦ ದಿನಾತ್ಮಕ ಕಚ್ಚೆ = ೬೦ ಮಾಸಾತ್ಮಕ ಕಚ್ಚೆ == ೫ ವರ್ಷಾತ್ಮಕ ಕಚ್ಚೆ

೨೪೦೦ ಮಾಸಾತ್ಮಕ ಕಚ್ಚೆ == ೨೦೦ ,,

೬೦೦ ,,

ಅಂತು ೮೦೫ ವರ್ಷಾತ್ಮಕ ಕಚ್ಚೆಗಳು.

ಇನ್ನು ದಿನಾತ್ಮಕ ಕಚ್ಚೆಗಳಿಗೆ ೩೦ ರಿಂದ ಭಾಗಹೋಗದಿದ್ದರೆ, ಮುದ್ದತಿಯ ದಿವಸಗಳಲ್ಲಿ ೩೦ಕ್ಕೆ ಭಾಗಹೋಗುವಂಥ ಅಂಕೆಗಳನ್ನು ಹುಡುಕಬಹುದು; ಉದಾಹರಣಾರ್ಥವಾಗಿ

೧೧== ೬+೫; ೧೦+೧.

೧೪== ೬+೬+೨.

೨೧== ೧೫+೬.

ಈ ಪ್ರಕಾರವಾಗಿ ಅವುಗಳಲ್ಲಿ ಭಾಗಗಳನ್ನು ಮಾಡಬಹುದು.

ಹಾಗಾದರೆ ೫೦೦ ರೂ. ಗಳಿಗೆ ೨೧ ದಿವಸಗಳಲ್ಲಿ ಮಾಸಾತ್ಮಕ ಕಚ್ಚೆಗಳೆಷ್ಟು? ೨೧ ರಲ್ಲಿ ೧೫ ಮತ್ತು ೬ ಈ ಎರಡು ಭಾಗಗಳನ್ನು ಮಾಡಿದರೆ ಈ ಭಾಗಗಳಿಗೆ ೩೦ ರಿಂದ ಭಾಗಹೋಗುತ್ತದಷ್ಟೇ.

ಆದುದರಿಂದ $\frac{೫೦೦\times೧೫}{೩೦}=೨೫೦$, $೫೦೦\times\frac{೬}{೩೦}=೧೦೦$ } ೨೫೦+೧೦೦=೩೫೦ ಮಾಸಾತ್ಮಕ ಕಚ್ಚೆಗಳು.

(೪) ಇನ್ನು ಖಾತೆಯೊಳಗಿನ ರಕಮುಗಳ ಬಡ್ಡಿ ತೆಗೆಯುವ ಸಂಬಂಧವಾಗಿ ಬರೆಯುವಾ—

ಖಾತೆ ಬಸಪ್ಪ ಲಿಂಗಪ್ಪ ತುಪ್ಪದ.

ಜ — ರೂ.	ಖ — ರೂ.
೮೦೦ ಕೀ. ಪಾ. ೮, ಪೌ. ವ. ೩೦	೩೦೦ ಕೀ. ಪಾ. ೧೨ ಫಾಲ್ಗುಣ ವ. ೩೦
೧೦೦ ಕೀ. ಪಾ. ೧೪ ಚೈ. ವ. ೩೦	೨೦೦ ಕೀ. ಪಾ. ೧೮ ಜೇಷ್ಠ ವ. ೩೦
	೨೦೦ ಕೀ. ಪಾ. ೨೦ ಆಷಾಢ ಶು. ೧೫
೯೦೦	೭೦೦
	೨೦೦ ಬಾಕಿ ಕೊಡತಕ್ಕದ್ದು.
	೯೦೦

ಈ ಖಾತೆಯು ಆಶ್ವಿನ ವ. ೩೦ ಕ್ಕೆ ೧೦೦ ಕ್ಕೆ ತಿಂಗಳಿಗೆ ।೮ ಬಡ್ಡಿಯಂತೆ ಲೆಕ್ಕ ಮಾಡುವಾ—

ಖಾತೆ ಬಸಪ್ಪ ಲಿಂಗಪ್ಪ ತುಪ್ಪದ; ಬಡ್ಡಿಯ ಲೆಕ್ಕ.

ಜ. ———— ರೂ.	ಖ. ———— ರೂ.
೭೨೦೦ ಕಚ್ಚೆ ೮೦೦ ಮುದ್ದಲು; ೯ ತಿಂಗಳು.	೨೧೦೦ ಕಚ್ಚೆ ೩೦೦ ಮು. ೭ ತಿಂಗಳು.
೬೦೦ ಕಚ್ಚೆ ೧೦೦ ಮುದ್ದಲು; ೬ ತಿಂಗಳು.	೮೦೦ ಕಚ್ಚೆ ೨೦೦ ಮು. ೪ ತಿಂಗಳು.
——	೭೦೦ ಕಚ್ಚೆ ೨೦೦ ಮು. ೩|| ತಿಂಗಳು.
೭೮೦೦ ಕಚ್ಚೆ ಕೊಡತಕ್ಕವು	——
ಇವೆಲ್ಲ ಮಾಸಾತ್ಮಕ ಕಚ್ಚೆಗಳು.	೩೬೦೦ ಕಚ್ಚೆ ಬರತಕ್ಕವು.

೭೮೦೦—೩೬೦೦=೪೨೦೦ ಕೊಡತಕ್ಕ ಕಚ್ಚೆಗಳು. ಆದುದರಿಂದ ಇವುಗಳ ಆಕಾರ ೧೦೦ಕ್ಕೆ -||- ರೂಪಾಯಿಯಂತೆ ತೆಗೆಯಲಾಗಿ ೨೧ ರೂ. ಬಡ್ಡಿ ಕೊಡತಕ್ಕದ್ದಾಗುತ್ತದೆ.

ಬರತಕ್ಕ ಬಡ್ಡಿಯ ಆಕಾರದ ಉದಾಹರಣೆ.

ಖಾತೆ ರಾಮಚಂದ್ರ ನಾರಾಯಣ ಕುಲಕರ್ಣಿ.

ಜ ———— ರೂ.	ಖ. ———— ರೂ
೬೦೦ ಕೀ. ಪಾ. ೮ ಆಷಾಢ ವ. ೫	೧೦೦೦ ಕೀ. ಪಾ. ೪ ಜೇಷ್ಠ ಶು. ೫
೪೦೦ ಕೀ. ಪಾ. ೧೨ ಶ್ರಾವಣ ಶು. ೯	೬೪೦ ಕೀ. ಪಾ. ೩೦ ಮಾಘ ಶು. ೧೦
೨೦೦ ಕೀ. ಪಾ. ೩೧ ಮಾಘ ವ. ೩೦	——
——	೧೬೪೦
೧೨೦೦	
೪೪೦ ಬಾಕಿ ಬರತಕ್ಕದ್ದು.	
——	
೧೬೪೦	

ಈ ಖಾತೆಯ ಲೆಕ್ಕ ಫಾಲ್ಗುಣ ವದ್ಯ ೩೦ಕ್ಕೆ ೧೦೦ಕ್ಕೆ ತಿಂಗಳಿಗೆ -|||- ಬಡ್ಡಿಯಂತೆ ಮಾಡಿದೆ.

ಖಾತೆ ರಾಮಚಂದ್ರ ನಾರಾಯಣ ಕುಲಕರ್ಣಿ ಬಡ್ಡಿಯ ಲೆಕ್ಕ.

ಜ. ———— ರೂ.	ಖ ———— ರೂ.
೫೦೦೦ ಕಚ್ಚೆ, ೬೦೦ ಮು. ತಿ. ೮ ದಿ. ೧೦	೯೮೩೩|‾ ಕಚ್ಚೆ ೧೦೦೦ ಮು. ತಿ. ೯-೨೫
೩೦೮೦ ,, ೪೦೦ ,, ತಿ. ೭ ದಿ. ೨೧	೧೦೬೬||≥ ,, ೬೪೦ ಮು, ತಿ. ೧-೨೦
೨೦೦ ,, ೨೦೦ ,, ತಿ. ೧	——
——	೧೦೯೦೦ ಕಚ್ಚೆ ಬರತಕ್ಕವು.
೮೨೮೦ ಒಟ್ಟು ಕಚ್ಚೆ ಕೊಡತಕ್ಕವು.	೮೨೮೦ ಕೊಡತಕ್ಕ ಕಚ್ಚೆ ಕಳೆಯಲಾಗಿ
	——
	೨೬೨೦ ಬರತಕ್ಕ ಕಚ್ಚೆ.

ಇವು ಮಾಸಾತ್ಮಕ ಕಚ್ಚೆಗಳು; ಇವುಗಳಿಗೆ ೧೦೦ ಕ್ಕೆ -|||- ಬಡ್ಡಿಯಂತೆ ಆಕಾರ ಮಾಡಲಾಗಿ ೧೯||=‹೫ ಬಡ್ಡಿ ಬರತಕ್ಕದ್ದಾಗುತ್ತದೆ.

ಇನ್ನೊಂದು ತರದಿಂದ ಬಡ್ಡಿಯ ಆಕಾರ ಮಾಡುವದುಂಟು; ಇದರಲ್ಲಿ ಖಾತೇದಾರನಿಂದ ಬರತಕ್ಕದ್ದೆಷ್ಟು? ಕೊಡತಕ್ಕದ್ದೆಷ್ಟು ಎಂಬದನ್ನು ತೆಗೆದು ಬಳಿಕ ಅವುಗಳ ಮುದ್ದತನ್ನು ನಿರ್ಣಯಿಸಿ ಕಚ್ಚೆಗಳ ಆಕಾರ ಮಾಡುವರು. ಇದಕ್ಕಾಗಿ ರಕಮುಗಳನ್ನು ಮಿತಿಯ ಕ್ರಮದಿಂದ ಒಂದರ ಕೆಳಗೊಂದು ಬರೆಯುವರು. ಮೊದಲಿನ ಉದಾಹರಣೆಯನ್ನು ಈ ರೀತಿಯಿಂದ ಬಿಡಿಸುವಾ.

ಜಮೆಯ ರಕಮು.	ಮಿತಿ	ಖರ್ಚಿನರಕಮು	ಕೊಡತಕ್ಕ ರೂ. ಗಳು	ಮುದ್ದತು ತಿಂಗಳು
೮೦೦	ಪೌಷ್ಯ ೩೦	೦	೮೦೦	೨
೦	ಫಾಲ್ಗುಣ ೩೦	೩೦೦	೫೦೦	೧
೧೦೦	ಚೈತ್ರ ೩೦	೦	೬೦೦	೨
೦	ಜ್ಯೇಷ್ಠ ೩೦	೨೦೦	೪೦೦	||
೦	ಆಷಾಢ ಶು. ೧೫	೨೦೦	೨೦೦	೩||

೮೦೦×೨= ೧೬೦೦
೫೦೦×=೧ ೫೦೦
೬೦೦×೨= ೧೨೦೦
೪೦೦× || = ೨೦೦
೨೦೦×೩||,= ೭೦೦
———
೪೨೦೦ ಕಚ್ಚೆಗಳು.

೧೦೦ ಕ್ಕೆ ತಿಂಗಳಿಗೆ || ಬಡ್ಡಿಯಂತೆ ಆಕಾರ ಮಾಡಲಾಗಿ ೨೧ ರೂ. ಬಡ್ಡಿ ಕೊಡತಕ್ಕದ್ದಾಗುತ್ತದೆ.

ಎರಡನೆಯ ಉದಾಹರಣೆ—

ಜಮೆಯ ರಕಮು.	ಮಿತಿ	ಖರ್ಚು	ರೂಪಾಯಿ	ಮುದ್ದತು ತಿಂಗಳು
೦	ಜೇಷ್ಠ ಶು. ೫	೧೦೦೦ ಬರತಕ್ಕ	೧೦೦೦	೧||
೬೦೦	ಆಷಾಢ ವ. ೫	೦ ,,	೪೦೦	||೪
೪೦೦	ಶ್ರಾವಣ ಶು. ೯	೦ ,,	೦	೬~೧
೦	ಮಾಘ ಶು. ೧೦	೬೪೦ ,,	೬೪೦	||೫
೨೦೦	ಮಾಘ ವ. ೩೦	೦ ,,	೪೪೦	೧

ಇವುಗಳ ಕಚ್ಚೆಗಳು.

೧೦೦೦×೧|| =೧೫೦೦
೪೦೦×||೪ =೨೫೩|-೪
೦ ×೬~೧ = ೦
೬೪೦×||೫ = ೪೨೬||~೮
೪೪೦×೧ = ೪೪೦
———
೨೬೨೦ ಮಾಸಾತ್ಮಕ ಕಚ್ಚೆಗಳು.

ಈ ಕಚ್ಚೆಗಳಿಗೆ ೧೦೦ ಕ್ಕೆ ||| ಯಂತೆ ಬಡ್ಡಿಯ ಆಕಾರ ಮಾಡಲಾಗಿ ೧೯||=೫ ಬಡ್ಡಿ ಬರತಕ್ಕದ್ದಾಗುತ್ತದೆ.

ಮೊದಲಿನ ಉದಾಹರಣೆಯು ಕೊಡತಕ್ಕ ಬಡ್ಡಿಯ ಆಕಾರದ್ದಿರುವದರಿಂದ ಜಮೆಯ ರಕಮಿನಲ್ಲಿ ಖರ್ಚಿನ ರಕಮನ್ನು ಕಳೆದಿರುತ್ತದೆ. ಎರಡನೆಯ ಉದಾಹರಣೆಯು ಬರತಕ್ಕ ಬಡ್ಡಿಯ ಆಕಾರದ್ದಿರುವದರಿಂದ ಖರ್ಚಿನ ರಕಮಿನಲ್ಲಿ ಜಮೆಯ ರಕಮನ್ನು ಕಳೆದಿರುತ್ತದೆ. ಎರಡೂ ಲೆಕ್ಕಗಳ ಮುದ್ದತನ್ನು ಎಣಿಸುವಾಗ ಕ್ರಮವಾಗಿ ಮುಂದಿನ ಮುದ್ದತಿನ ವರೆಗೆ ಎಣಿಸಲ್ಪಟ್ಟಿದೆ. ಮೊದಲಿನ ಲೆಕ್ಕದ ಕಡೆಯ ಮುದ್ದತು ಆಷಾಢ ಶು. ೧೫ ರಿಂದ ಆಶ್ವಿನ ೩೦ ರ ವರೆಗೂ ಎರಡನೆಯ ಲೆಕ್ಕದ ಕಡೆಯ ಮುದ್ದತು ಮಾಘ ೩೦ ರಿಂದ ಫಾಲ್ಗುಣ ೩೦ ರ ವರೆಗೂ ಎಣಿಸಲ್ಪಟ್ಟಿವೆ. ಮುದ್ದತಿನಲ್ಲಿ ಅಧಿಕಮಾಸ ಬಂದರೆ ೧೦ ದಿವಸ ಸೂಟುಬಿಟ್ಟು ೨೦ ದಿವಸಗಳ ಬಡ್ಡಿ ಹಿಡಿಯುವರು.

೩ ನೆಯ ಪ್ರಕರಣ.

ವ್ಯವಹಾರ ಸಂಬಂಧವಾದ ಲೇಖಗಳು.

ಶಹಜೋಗ ಹುಂಡಿಯ ನಮೂನೆ.

ದಾಖಲೆಗಾಗಿ ಇಡುವದು.	ಹರಿದುಕೊಡುವದು.
‖ ಶ್ರೀ ‖ ನಂಬರು ೨೦. ಶಿವಪ್ಪ ಸಂಗಪ್ಪ ಸೆಟ್ಟಿ ಬೆಳಗಾಂವಿ. ಹುಂಡಿ ಯಾರ ಮೇಲೆ ಕೊಟ್ಟಿತು. ಶಂಕರಪ್ಪ ಬೆಲ್ಲದ ಮುಂಬಯಿ. ದಾಖಲೆ ಸದಾಶಿವ ಶಂಕರ ರೂಪಾಯಿ (೧೦೦) ಅಕ್ಷರದಿಂದ ನೂರು. ಮಿತಿ ಮಾರ್ಗಶೀರ್ಷ ಶು. ೧. ಹಸ್ತೆ ಸದಾಶಿವ ಶಂಕರ. ಸಹಿ ಶಿವಪ್ಪ ಸೆಟ್ಟಿ.	‖ ಶ್ರೀ ‖ ನಂಬರು. ೨೦ ರಾ. ರಾ. ಶಂಕರಪ್ಪ ಬೆಲ್ಲದ ಮುಂಬಯಿ ಇವರಿಗೆ. ಬೆಳಗಾಂವಿಯ ಶಿವಪ್ಪ ಸಂಗಪ್ಪ ಸೆಟ್ಟಿ ಇವರ ಶರಣಶರಣಾರ್ಥಿ. ಈಗ ತಮ್ಮ ಮೇಲೆ ಸದಾಶಿವ ಶಂಕರ ಗೋಕಾವಿ ಇವರ ದಾಖಲೆಯಿಂದ ಬರೆದ ಹುಂಡಿಯ ರೂಪಾಯಿ (೧೦೦) ಅಕ್ಷರದಲ್ಲಿ ಒಂದು ನೂರು ಇದರ ಅರ್ಧ ಐವತ್ತು ಇದರ ಇಮ್ಮಡಿ ಮಾಡಿ ಹುಂಡಿ ಮುಟ್ಟಿದ ಮೇಲೆ ~~ದರ್ಶನಿಗೆ~~ ೪ ದಿವಸಗಳ ಮುದ್ದತಿಗೆ ಹುಂಡಿ ತಂದವನ ಶಹಜೋಗ, ಸ್ಥಳ ಮುಂತಾದವುಗಳನ್ನು ಚನ್ನಾಗಿ ವಿಚಾರ ಮಾಡಿ ಮಾಲಿಕನ ಕಬಜಾ ತೆಗೆದು ಪೂರಾ ಹಣ ಪೇಠಚಾಲಿಯ ರೂಪಾಯಿ ಕೊಡಿರಿ. ಮಿತಿ ಮಾರ್ಗಶೀರ್ಷ ಶುದ್ಧ ೧ ಶಕೆ ೧೮೪೦. ಸಹಿ ದಸ್ತೂರ ಶಿವಪ್ಪ ಸಂಗಪ್ಪ ಸೆಟ್ಟಿ. ರೂಪಾಯಿ ೧೦೦

ಟೀಪು:–ಇದು ಮುದ್ದತಿ ಹುಂಡಿಯಿದ್ದ ಕಾರಣ ದರ್ಶನಿಗೆ ಈ ಶಬ್ದಕ್ಕೆ ಕಾಟ ಹಾಕಿರುತ್ತದೆ.

ಪೇಠ.

(ಕಳೆದುಹೋದ ಹುಂಡಿ ಬರೆದಂತೆ ಬರೆದು ಅದರ ಕೆಳಗೆ) ಮೂಲ ಹುಂಡಿ ಕಳಕೊಂಡಿರುವೆನೆಂದು ದಾಖಲೆಯು ಹೇಳಿದ್ದರಿಂದ ಈ ಪೇಠ ಬರಕೊಟ್ಟಿದ್ದೇವೆ. ಮೂಲಹುಂಡಿ ತಮಗೆ ಲಾಗು ಆಗದೆ, ನಮ್ಮ ಖಾತೆಗೆ ಖರ್ಚು ಬೀಳದಿದ್ದರೆ ಈ ಪೇಠಿನ ಪ್ರಕಾರ ಒಂದುನೂರು ರೂಪಾಯಿ ಇದರ ಅರ್ಧ ಐವತ್ತು ಇದರ ಇಮ್ಮಡಿ ಮಾಡಿ ಪೇಠಚಾಲಿಯ ರೂಪಾಯಿಗಳನ್ನು ಮಾಲಿಕನಿಗೆ ಕೊಡಿರಿ. ಮಿತಿ ಮಾರ್ಗಶೀರ್ಷ ಶು. ೧೫ ಶಕೆ ೧೮೪೦.

ಸಹಿ ಶಿವಪ್ಪ ಸಂಗಪ್ಪ ಸೆಟ್ಟಿ, ಬೆಳಗಾಂವಿ.

ಪ್ರಾಮಿಸರಿನೋಟು.

ರಾ|| ರಾ|| ಶಿವಪ್ಪ ಸಂಗಪ್ಪ ಸೆಟ್ಟಿ ಸಾ|| ಬೆಳಗಾಂವಿ ಇವರಿಗೆ—

ಪ್ರಾಮಿಸರಿ ನೋಟ ಬೇ|| ಗುರಪ್ಪ ಸೆಟ್ಟಿ ಸಾ|| ಬೆಳಗಾಂವಿ ನಾನು ಬರಕೊಡುವ ಪ್ರಾಮಿಸರಿ ನೋಟ ಏನಂದರೆ— ನಾನು ಈ ಹೊತ್ತು ತಮ್ಮ ಕಡೆಯಿಂದ ರೋಖ ರೂಪಾಯಿ ೫೦, ಅಕ್ಷರದಲ್ಲಿ ಐವತ್ತು ತೆಗೆದುಕೊಂಡಿರುತ್ತೇನೆ. ಈ ರೂಪಾಯಿಗಳನ್ನು ನೀವು ಎಂದು ಬೇಡುವಿರೋ ಅಂದು ಕೊಡುವೆನು. ಸದರೀ ಐವತ್ತು ರೂಪಾಯಿಗಳು ನನಗೆ ರೋಖ ಮುಟ್ಟಿರುತ್ತವೆ. ಎಂದು ಬರಕೊಟ್ಟ ಪ್ರಾಮಿಸರಿ ನೋಟು ಸಹಿ ಮಿತಿ ಕಾರ್ತಿಕ ಶು|| ೧ ಶಕೆ ೧೮೪೦. ದ. ಖು.

ಆಣೆಯ ಟಿಕೀಟು | ಗುರಪ್ಪ | ಸೆಟ್ಟಿ ಸಾ|| ಬೆಳಗಾಂವ ದ. ಖು.

ಟೀಪು—೨೫೦ ರೂ. ಗಳಗೆ ೧ ಆಣೆಯ ಟಿಕೀಟು, ೨೫೧ ರಿಂದ ೫೦೦ ರೂ. ಗಳ ವರೆಗೆ ೨ ಆಣೆಯ ಟಿಕೀಟು, ೫೦೧ ರಿಂದ ಮುಂದೆ ೪ ಆಣೆಯ ಟಿಕೀಟು ಹಚ್ಚಬೇಕಾಗುತ್ತದೆ. ಪ್ರಾಮಿಸರಿ ನೋಟಿನಲ್ಲಿ ಬಡ್ಡಿಯು ಕರಾರ ಮಾಡಲಿಕ್ಕೆ ಬರುತ್ತದೆ.

ಚೆಕ್ಕು.

ದಾಖಲೆ.	ಹರಿದು ಕೊಡುವದು.
ನಂಬರು ೫೨೫. ತಾ. ೧೦-೬-೨೬. ಸಂಗಪ್ಪಾ ಬೆಣ್ಣಿ. ೫೦ ರೂ. ೦ ಆ ೦ ಪೈ. ಸಹಿ ಕ. ಮ. ಬೆಂಬಳಗಿ. ಮೆಂಬರ	ನಂಬರು ೫೨೫ ಗೋಕಾಂವಿ ತಾ-೧೦-೬-೨೯. ಪಾಯೋನಿಯರ ಪರಸ್ಪರ ಸಹಾಯ್ಯಕಾರಿ ಬ್ಯಾಂಕ ಲಿಮಿಟೆಡ್ ಬೆಳಗಾಂವ. ರಾ. ರಾ. ಸಂಗಪ್ಪ ಬೆಣ್ಣಿ ಇವರಿಗೆ ಅಥವಾ ತಂದವರಿಗೆ (ಬೇರರ), ಅಪ್ಪಣೆ ಮಾಡಿದವರಿಗೆ (ಆರ್ಡರ). ಐವತ್ತು ರೂ. ಗಳನ್ನು ಕೊಡಬೇಕು. ರೂ. [೫೦] ಅಂಕೆಯಿಂದ ಸಹಿ ಕಲ್ಲಪ್ಪ ಮಲ್ಲಪ್ಪ ಬೆಂಬಳಗಿ ಮೆಂಬರ.

ಟೀಪು:—ಇದು ಬೇರರ ಇದ್ದ ಕಾರಣ ಆರ್ಡರ ಶಬ್ದಕ್ಕೆ ಕಾಟಹಾಕಿದೆ. ಆರ್ಡರ ಇದ್ದರೆ ಇದರ ಹಿಂಬದಿಗೆ ಯಾವನಿಗೆ ಅಪ್ಪಣೆ ಮಾಡಿರುತ್ತದೋ ಅವನ ಹೆಸರು ಬರೆದು ಸಂಗಪ್ಪ ಬೆಣ್ಣಿ ಇವರು ಸಹಿ ಮಾಡತಕ್ಕದ್ದು.

ಭಲಾವಣಿಪತ್ರ.

ರಾ. ರಾ. ಶಂಕರೆಪ್ಪ ಬೆಲ್ಲದ ಮುಂಬಯಿ ಇವರಿಗೆ—

ಶಿವಪ್ಪ ಸಂಗಪ್ಪ ಶೆಟ್ಟಿ ಸಾ. ಬೆಳಗಾಂವಿ ಇವರ ವಿನಂತಿ. ರಾ. ರಾ. ನಾಗಪ್ಪ ಸಂಗಪ್ಪ ಸಂತಿ ಸಾ. ಬೆಳಗಾಂವಿ ಇವರು ಒಳ್ಳೇ ಪ್ರಾಮಾಣಿಕರು ಇರುತ್ತಾರೆ. ಇವರು ತಮ್ಮಲ್ಲಿ ಮಾಲ ಖರೇದಿಗಾಗಿ ಬಂದಿರುವರು. ಇವರಿಗೆ ರೂ. ಗಳ ಅಡಚಣಿ ಬಿದ್ದರೆ ಒಂದು ತಿಂಗಳವರೆಗೆ ೨೦೦ ರೂಪಾಯಿಗಳನ್ನಾಗಲಿ ಅಷ್ಟರವರೆಗೆ ಅವರು ಬೇಡಿದ ಮಾಲನ್ನಾಗಲಿ ಕೊಡಬೇಕು. ಸದರಿ ರಕಮು ಅವರಿಂದ ಬಾರದಿದ್ದರೆ ಆ ಹಣವನ್ನು ನಾನು ನಿಮಗೆ ತುಂಬಿ ಕೊಡುವೆನು. ತಾ.೧೦|೬|೨೬

ಸಹಿ ಶಿ. ಸ. ಸೆಟ್ಟಿ.

೪ನೆಯ ಪ್ರಕರಣ.

ಕೆಲವು ಮುಖ್ಯ ವ್ಯಾಖ್ಯೆಗಳು.

೧ ಮಂದಿಯ ಕಡೆಯಿಂದ ತಮಗೆ ರೋಖ ಇಲ್ಲವೆ ಬೇರೆ ಯಾವ ರೀತಿಯಿಂದಾದರೂ ಬಂದ ಹಣಕ್ಕೆ ' ಜಮೆ ' ಯೆನ್ನುವರು.

೨ ಮಂದಿಗೆ ರೋಖವಾಗಲಿ ಬೇರೆ ಯಾವ ರೀತಿಯಿಂದಾಗಲಿ ಕೊಟ್ಟ ಹಣಕ್ಕೆ ' ಖರ್ಚು ' ಅನ್ನುವರು.

೩ ಮೊದಲಿದ್ದ ಹಣದಲ್ಲಿ ಹೊಸದಾಗಿ ಬಂದ ಹಣಕೂಡಿಸಲಾಗಿ ಆಗುವ ಒಟ್ಟಿನಲ್ಲಿ ಇಲ್ಲವೆ ಜಮೆಯು ರಕಮಿನಲ್ಲಿ ಖರ್ಚಿನ ರಕಮನ್ನು ಕಳೆಯಲಾಗಿ ಉಳಿಯುವ ಹಣಕ್ಕೆ ' ಸಿಲಕು ' ಎಂದೆನ್ನುವರು.

೪ ತಪಸೀಲವಾರ ಜಮೆ ಮತ್ತು ಖರ್ಚು ಬರೆದು ಸಿಲಕು ತೆಗೆಯುವ ಪುಸ್ತಕಕ್ಕೆ ' ಕೀರ್ದಿ ' ಎನ್ನುವರು.

೫ ದಿನವೊಂದಕ್ಕೂ ತಪಸೀಲವಾರ ಜಮಾಖರ್ಚು ಬರೆದು ಸಿಲಕುತೆಗೆಯುವ ಪುಸ್ತಕಕ್ಕೆ ' ರೋಜಕೀರ್ದಿ ' ಯೆನ್ನುವರು.

೬ ಕೆಲ ಕೆಲವು ದಿವಸಗಳ ವರೆಗೆ ತಡೆ ತಡೆದು ಬರೆಯುವ ಕೀರ್ದಿಗೆ ' ಬೈಠೀಕೀರ್ದಿ ಯೆನ್ನುವರು.

೭ ಪ್ರತಿಯೊಬ್ಬ ಮನುಷ್ಯನ ಇಲ್ಲವೆ ಪ್ರತಿಯೊಂದು ಬಾಬಿನ ಕೊಡಕೊಳ್ಳುವದನ್ನು ಒತ್ತಟ್ಟಿಗೆ ಸ್ವತಂತ್ರವಾಗಿ ಬರೆದು ಇಡುವ ಜಮಾಖರ್ಚಿಗೆ ' ಖಾತೆ ' ಯೆನ್ನುವರು.

೮ ಕಾಗದದ ನಟ್ಟನಡುವೆ ಬರೆಯುವ ಸಾಲಿಗೆ ' ಬೀತವಳಿ ' ಯೆನ್ನುವರು.

೯ ಯಾವನ ಕೈಮುಟ್ಟ ವ್ಯವಹಾರ ನಡೆಯುವದೋ ಅವನಿಗೆ ' ಹಸ್ತೇದಾರ ' ನೆನ್ನುವರು.

೧೦ ಸಾಕ್ಷಿಯು ದೆಶೆಯಿಂದ ಒಬ್ಬನ ಮುಖಾಂತರ ವ್ಯವಹಾರ ನಡೆದರೆ ಅವನಿಗೆ ' ಗುಜಾರತ ' ವೆನ್ನುವರು.

೧೧ ಯಾವ ರಕಮಿನಿಂದ ಸಿಲಕಿನಲ್ಲಿ ಪ್ರತ್ಯಕ್ಷ ಹಣದ ಹೆಚ್ಚು ಕಡಿಮೆಯಾಗುವದೋ ಆ ಹಣಕ್ಕೆ ' ರೋಖೀ ರಕಮು ' ಎನ್ನುವರು.

೧೨ ರೋಖ ವ್ಯವಹಾರ ನಡೆಯದೆ ಒಂದು ಖಾತೆಗೆ ಜಮ ಇಲ್ಲವೆ ಖರ್ಚುಬಿದ್ದು ಪುನಃ ಅದೇ ಖಾತೆಗೆ ಇಲ್ಲವೆ ಬೇರೊಂದು ಖಾತೆಗೆ ಕ್ರಮವಾಗಿ ಖರ್ಚು ಇಲ್ಲವೆ ಜಮ ಬರೆಯಲ್ಪಡುವ ರಕಮಿಗೆ ' ಜಮಾಖರ್ಚಿ ' ' ದುಬೇರಜೀ ' ಇಲ್ಲವೆ ' ಪರಭಾರೆ ' ಯೆನ್ನುವರು.

೧೩ ಠೋಕ ವ್ಯಾಪಾರಿಗಳು ಕಿರುಕಳ ವ್ಯಾಪಾರಿಗಳಿಗೆ ಮಾರಲಿಕ್ಕೆ ಮಾಲನ್ನು ಕೊಟ್ಟು ಮಾರಿದಷ್ಟು ಹಣ ಉಳಿದ ಮಾಲು ಕೊಡಬೇಕೆಂದು ಮಾಡಿದ ಕರಾರಿಗೆ ' ಸಂಜಾಯತ 'ವೆನ್ನುವರು.

೧೪ ಪರರ ಮಾಲನ್ನು ಮಾರಿಸಿಕೊಡುವದಕ್ಕೆ, ಅವರಿಗೆ ಮಾಲನ್ನು ಕೊಂಡು ಕೊಡುವದಕ್ಕೆ ವ್ಯಾಪಾರದಲ್ಲಿ ನಡುವೆಯಾದವನು ತನ್ನ ಶ್ರಮದ ಸಲುವಾಗಿ ತೆಗೆದುಕೊಳ್ಳುವ ಹಣಕ್ಕೆ ' ದಲಾಲಿ ' ಯೆನ್ನುವರು.

೧೫ ರಕಮನ್ನು ಇಂಥ ಖಾತೆಗೇ ಜಮೆಮಾಡಬೇಕೆಂಬ ನಿಶ್ಚಯಾತ್ಮಕ ಸಂಗತಿ ತಿಳಿಯದೆ ಸಂಶಯ ಯುಕ್ತ ಸ್ಥಿತಿಯಲ್ಲಿದ್ದ ರಕಮನ್ನು ಜಮೆಮಾಡುವ ಖಾತೆಗೆ ' ಅಮಾನತ ಖಾತೆ ' ಯೆನ್ನುತ್ತಾರೆ.

೧೬ ತಮ್ಮಲ್ಲಿಯ ಹಣವನ್ನು ಸುರಕ್ಷಿತತೆಯ ದೆಸೆಯಿಂದಲೂ ಬಡ್ಡಿಯ ದೆಸೆಯಿಂದಲೂ ಸಾವುಕಾರರಲ್ಲಿ ಇಟ್ಟ ಇಡಗಂಟಿಗೆ ' ಠೇವು ' ಅನ್ನುತ್ತಾರೆ.

೧೭ ಪರಸ್ಥಳದಲ್ಲಿ ಯಾವನೊಬ್ಬನಿಗೆ ಹಣಕಳುಹಿ ಅದನ್ನು ಖರ್ಚು ಬರೆಯುವ ಖಾತೆಗೆ ' ರವಾನಿಗೆ ಖಾತೆ ' ಯೆನ್ನುವರು.

೧೮ ವ್ಯಾಪಾರಸ್ತರು ಗಿರಾಕಿಗಳಿಗೆ ಮಾಲಿನ ಬೆಲೆಯಲ್ಲಿ ಸಂತೋಷದಿಂದ ಬಿಡುವ ಹಣಕ್ಕೆ ' ಕಮಿಶನ ' ವೆನ್ನುವರು.

೧೯ ಸಾಲಗಾರನಿಗೆ ಸಾಲದ ಹಣವನ್ನು ಕೊಡುವಾಗ ಬಡ್ಡಿಯ ಹೊರತಾಗಿ ಕೆಲವು ಹಣ ಮುರಿದುಕೊಂಡು ಕೊಡುವರು. ಈ ಮುರಿದುಕೊಳ್ಳುವ ಹಣಕ್ಕೆ ' ಮನೋತಿ ' ಯೆನ್ನುವರು.

೨೦ ಸಾಲಕ್ಕಾಗಿ ಸ್ಥಾವರ ಆಸ್ತಿಯನ್ನು ಆಧಾರಕ್ಕಾಗಿ ಅಡವು ಬರಕೊಟ್ಟರೆ ' ತೋರಒತ್ತೆ ' ಯೆನ್ನುವರು.

೨೧ ಸಾಲದ ಹಣದೊಳಗೆ ಸ್ಥಾವರ ಆಸ್ತಿಯನ್ನು ಇಂತಿಷ್ಟು ಅವಧಿ ಉಪಭೋಗಿಸಿ ಬಿಟ್ಟು ಕೊಡಬೇಕೆಂದು ಮಾಡಿದ ಕರಾರಿಗೆ ' ಇಳಿ ಒತ್ತೆ ' ಯೆನ್ನುವರು.

೨೨ ಸಾಲ ಮುಟ್ಟಿಸುವ ವರೆಗೆ ಸ್ಥಾವರ ಆಸ್ತಿಯನ್ನು ಬಡ್ಡಿಯ ಸಲುವಾಗಿ ಸಾವುಕಾರನ ಸ್ವಾಧೀನ ಮಾಡುವದಕ್ಕೆ ' ಕಬ್ಜಾ ಒತ್ತೆ ' ಯೆನ್ನುವರು.

೨೩ ಯಾವದೊಂದು ಕೆಲಸವನ್ನು ಮಾಡುವದಕ್ಕೆ ಒಪ್ಪಿಕೊಂಡ ಮನುಷ್ಯನಿಗೆ ಮೇಲೆ ಮೇಲೆ ಬೇಡುವದಕ್ಕೆ ತ್ರಾಸವಾಗಬಾರದೆಂದು ಅವನಲ್ಲಿ ಕೆಲವು ಹಣವನ್ನಿಟ್ಟು ಖರ್ಚು ಬರೆಯುವ ಖಾತೆಗೆ ' ತಸಲ್ಮಾತ ಖಾತೆ ' ಯೆನ್ನುತ್ತಾರೆ.

೨೪ ಕೆಲವೊಂದು ರಕಮನ್ನು ಇಂಥ ಮನುಷ್ಯನಿಗೆ ಇಂಥ ದಿವಸಕ್ಕೆ ಕೊಡುವದಕ್ಕಾಗಿ ಒಬ್ಬ ಸಾವುಕಾರನು ತನ್ನ ಪರಿಚಯದ ಸಾವುಕಾರನಿಗೆ ಬರೆದುಕೊಡುವ ಪತ್ರಕ್ಕೆ ' ಹುಂಡಿ ' ಯೆನ್ನುವರು.

೨೫ ಭರಪಾಯದ ಹುಂಡಿಗೆ ' ಖೋಕೆ ' ಯೆನ್ನುವರು.

೨೬ ಹುಂಡಿಯ ಹಣಕ್ಕಿಂತ ಹೆಚ್ಚು ತೆಗೆದುಕೊಂಡ ಹಣಕ್ಕೆ ಹೊರಬಟ್ಟವೆಂತಲೂ ಕಡಿಮೆತೆಗೆದುಕೊಂಡ ಹಣಕ್ಕೆ ಒಳಬಟ್ಟವೆಂತಲೂ ಅನ್ನುವರು. ಇವೆರಡಕ್ಕೂ ' ಹುಂಡಾವಳಿ ' ಯೆನ್ನುವರು.

೨೭ ಹುಂಡಿಯನ್ನು ಸ್ವೀಕರಿಸುವಬಗ್ಗೆ ಅಡತದಾರನಿಗೆ ಏನಾದರೂ ಕೊಟ್ಟಿದ್ದರೆ, ಅಡತದಾರನು ಹುಂಡಿಯನ್ನು ಹಿಡಿಯದಿದ್ದರೆ, ಇಲ್ಲವೆ ಹುಂಡಿಯ ಮುದ್ದತಿಗಿಂತ ಹೆಚ್ಚು ದಿವಸ ಇಟ್ಟುಕೊಂಡಿದ್ದರೆ ಈ ಬಗ್ಗೆ ಹುಂಡಿಯ ಮಾಲಿಕನು ಹುಂಡಿ ಕೊಟ್ಟವನಿಂದ ತೆಗೆದುಕೊಳ್ಳುವ ಹಾನಿಯ ಹಣಕ್ಕೆ ' ಸಕರಾಯಿ ನಕರಾಯಿ ' ಅನ್ನುತ್ತಾರೆ.

೨೮ ಹುಂಡಿಯ ಹಣವನ್ನು ತುಂಬಿದವನಿಗೆ (ರಾಖಿಲೆಗೆ) ಹಣ ಕೊಡಬೇಕೆಂದು ಬರೆದ ಹುಂಡಿಗೆ ' ಧನಿಜೋಗ ಹುಂಡಿ ' ಯೆನ್ನುವರು.

೨೯ ಹುಂಡಿಯಲ್ಲಿ ಬರೆದ ಹೆಸರಿನ ಮನುಷ್ಯನಿಗೆ ಹಣವನ್ನು ಕೊಡಬೇಕೆಂದು ಬರೆದ ಹುಂಡಿಗೆ ' ಸಾಮಜೋಗ ಹುಂಡಿ ' ಯೆನ್ನುವರು.

೩೦ ಹುಂಡಿಯನ್ನು ತಂದ ಯೋಗ್ಯ ಮನುಷ್ಯನಿಗೆ ಹಣವನ್ನು ಕೊಡಬೇಕೆಂದು ಬರೆದ ಹುಂಡಿಗೆ ' ಶಹಜೋಗ ಹುಂಡಿ ' ಯೆನ್ನುವರು.

೩೧ ಹುಂಡಿಯನ್ನು ನೋಡಿದ ಕೂಡಲೆ ಹಣಕೊಡಬೇಕೆಂದು ಬರೆದ ಹುಂಡಿಗೆ 'ದರ್ಶನಿ ಹುಂಡಿ' ಯೆನ್ನುವರು.

೩೨ ಹುಂಡಿಲಾಗು ಆದ ಇಂತಿಷ್ಟು ದಿವಸಗಳಿಗೆ ಹಣಕೊಡಬೇಕೆಂದು ಬರೆದ ಹುಂಡಿಗೆ 'ಮುದ್ದತಿಹುಂಡಿ' ಯೆನ್ನುವರು.

೩೩ ಹುಂಡಿಯನ್ನು ಬರೆದಂದಿನಿಂದ ಇಂತಿಷ್ಟು ದಿವಸಗಳಲ್ಲಿ ಕೊಡಬೇಕೆಂದು ಬರೆದ ಹುಂಡಿಗೆ 'ಬಂದೀ ಮುದ್ದತಿ' ಹುಂಡಿಯೆನ್ನುವರು.

೩೪ ಬ್ಯಾಂಕಿನಲ್ಲಿ ಹಣವನ್ನಿಟ್ಟವರು ತಮ್ಮ ಬ್ಯಾಂಕಿನ ಮೇಲೆ ಕೊಡುವ ದರ್ಶನಿ ಹುಂಡಿಗೆ 'ಚೆಕ್ಕು' ಅನ್ನುವರು. ಇದರಲ್ಲಿ ಬೇರರ ಮತ್ತು ಆರ್ಡರ ಎಂದು ತರಗಳು.

೩೫ ಬ್ಯಾಂಕಿನ ಮೇಲೆ ಇಂಥವನಿಗೆ ಅಥವಾ ಇದನ್ನು ತಂದ ಬೇಕಾದ ಯೋಗ್ಯಮನುಷ್ಯನಿಗೆ ಹಣಕೊಡಬೇಕೆಂದು ಬರೆದ ಹುಂಡಿಗೆ 'ಬೇರರ ಚೆಕ್ಕು' ಅನ್ನುತ್ತಾರೆ. ಇದು ಶಹಜೋಗ ಹುಂಡಿಯಂತಿರುವದು.

೩೬ ಬ್ಯಾಂಕಿನ ಮೇಲೆ ಇಂಥವನಿಗೆ ಅಥವಾ ಅವನು ಅಪ್ಪಣೆಮಾಡಿದವನಿಗೆ ಹಣಕೊಡಬೇಕೆಂದು ಬರೆದ ಹುಂಡಿಗೆ 'ಆರ್ಡರ ಚೆಕ್ಕು ಅನ್ನುವರು' ಇದು ನಾಮಜೋಗ ಹುಂಡಿಯಂತಿರುವದು.

೩೭ ಇಂಥಲ್ಲಿ ಇಂಥವನಿಗೆ ಹಣಮುಟ್ಟಿಸಿ ಪಾವತಿ ತರಿಸಿಕೊಡಬೇಕೆಂದು ರಾಖಲೆಯು ಸಾವುಕಾರನಿಂದ ಬರೆಯಿಸಿದ ಹುಂಡಿಗೆ 'ಜವಾಬೀ ಹುಂಡಿ' ಯೆನ್ನುತ್ತಾರೆ.

೩೮ ಹುಂಡಿಯು ಕಳೆದುಹೋದರೆ ಅದರ ಬದಲು ಬರೆದುಕೊಡುವ ಹುಂಡಿಯ ನಕಲಿಗೆ 'ಪೇಠ' ವೆಂತಲೂ, ಪೇಠಹೋದರೆ ಅದರ ಬದಲು ಬರೆದುಕೊಡುವ ಪೇಠಿನ ನಕಲಿಗೆ 'ಪರಪೇಠ' ವೆಂತಲೂ ಅನ್ನುತ್ತಾರೆ.

೩೯ ತನ್ನ ನಂಬಿಗೆಯ ಯೋಗ್ಯಮನುಷ್ಯನಿಗೆ ಇಂತಿಷ್ಟು ಮುದ್ದತಿನವರೆಗೆ ಇಂತಿಷ್ಟು ರಕಮಿನವರೆಗೆ ಮಾಲನ್ನು ಇಲ್ಲವೆ ರೋಖಹಣವನ್ನು ಕೊಡಬೇಕೆಂದು ಸಾವುಕಾರರು ತಮ್ಮ ಅಡತದಾರರ ಮೇಲೆ ಬರಕೊಡುವ ಪತ್ರಕ್ಕೆ 'ಭಲಾವಣಿ ಪತ್ರ' ಅನ್ನುತ್ತಾರೆ.

೪೦ ಕೆಲವೊಬ್ಬನು ಸಾವುಕಾರರಿಂದ ಹಣ ಇಸಕೊಂಡು, ನೀವು ಇಲ್ಲವೆ ನಿಮ್ಮ ಅಪ್ಪಣೆಯ ಲೇಖತಂದವನು ಇದರಲ್ಲಿ ಬರೆದ ರಕಮನ್ನು ಬೇಡಿದಕೂಡಲೆ, ಅಥವಾ ಇದನ್ನು ಬರೆದಂದಿನಿಂದ ಇಂತಿಷ್ಟು ಮುದ್ದತಿಗೆ ಕೊಡುತ್ತೇನೆಂದು ಬರೆದುಕೊಟ್ಟ ಪತ್ರಕ್ಕೆ 'ಪ್ರಾಮಿಸರಿನೋಟು' ಅಥವಾ 'ವಚನದ ಚೀಟಿ' ಯೆನ್ನುತ್ತಾರೆ.

೪೧ ಕೊಡಕೊಳ್ಳುವ ಕೆಲಸ ಹಗುರಾಗಿ ಸಾಗಬೇಕೆಂದು ಸರಕಾರದವರು ನಾಣ್ಯಗಳಂತೆ ನಡೆಯುವಂಥ ಒಂದು ತರದ ಮುದ್ರಿಸಿದ ಕಾಗದಕ್ಕೆ 'ಕರನ್ಸೀನೋಟು ಅನ್ನುತ್ತಾರೆ'

೪೨ ಕೀರ್ದಿಯ ಮೇಲಿಂದ ತಿಂಗಳು ಅಥವಾ ವರ್ಷದ ಒಟ್ಟು ಲೆಕ್ಕವನ್ನು ಖಾತೆಗೆ ತಾಳನೋಡುವದಕ್ಕೆ ಬರೆದ ಕಾಗದಕ್ಕೆ 'ತಾಳಬಂದ' ಅನ್ನುತ್ತಾರೆ.

೪೩ ಖಾತೆಗಳ ಬಾಕಿಗಳನ್ನು ಕೀರ್ದಿಗೆ ಹೊಂದಿಸಿ ತಾಳನೋಡುವದಕ್ಕೆ 'ಬಾಕಿಗಳ ತಾಳ' ಯೆನ್ನುವರು.

೪೪ ಯಾವ ಖಾತೆಗಳಿಗೆ ವರ್ಷದಕೊನೆಯ ಕೊಡಕೊಳ್ಳುವದನ್ನು ಮುಂದೆ ಕೇಳಲಿಕ್ಕೆ ಬರುವಂತಿರುವದಿಲ್ಲವೋ ಆ ಖಾತೆಗಳಿಗೆ 'ಕಚ್ಚಾಖಾತೆ' ಇಲ್ಲವೆ 'ಕಚ್ಚಾಬಾಕಿ' ಅನ್ನುತ್ತಾರೆ.

೪೫ ಯಾವ ಖಾತೆಗಳಿಂದ ವರ್ಷದಕೊನೆಗೆ ಕೊಡಕೊಳ್ಳುವದು ಹೊರಟು ಮುಂದೆ ಅವುಗಳನ್ನು ಕೇಳಬೇಕಾಗಿ ಬರೆದುಕೊಳ್ಳುವದುಂಟೋ ಅವುಗಳಿಗೆ ' ಪಕ್ಕಾಖಾತೆ ' ಇಲ್ಲವೆ ' ಪಕ್ಕಾ ಬಾಕಿ ' ಅನ್ನುತ್ತಾರೆ.

೪೬ ಕಚ್ಚಾಖಾತೆಗಳನ್ನು ಬಾಯಿಗೂಡಿಸುವ ಲೆಕ್ಕಕ್ಕೆ ' ತೋಂಡಮಿಳವಣಿ ' ಯೆನ್ನುತ್ತಾರೆ.

೪೭ ಪಕ್ಕಾಖಾತೆಗಳನ್ನು ಬಾಯಿಗೂಡಿಸುವ ಲೆಕ್ಕಕ್ಕೆ ' ಅಧಾವೆ ' ಯೆನ್ನುತ್ತಾರೆ.

೪೮ ವರ್ಷದಕೊನೆಗೆ ಜನರಿಂದ ಬರತಕ್ಕ ಕೊಡತಕ್ಕ (ಪಕ್ಕಾ) ಖಾತೆಗಳನ್ನು ಬಾಯಿಗೂಡಿಸುವಿಕೆಯ ಜಮಾಖರ್ಚಿಗೆ ' ಅಖೇರ ಅಧಾವೆ ' ಯೆನ್ನುತ್ತಾರೆ.

೪೯ ವರ್ಷದ ಆರಂಭಕ್ಕೆ ಜನರಿಂದ ತನಗೆ ಬರತಕ್ಕದ್ದೆಷ್ಟು ? ಜನರಿಗೆ ತಾನು ಕೊಡತಕ್ಕದ್ದೆಷ್ಟು ? ಎಂಬದನ್ನು ತಿಳಿಯುವದಕ್ಕಾಗಿ ಕೀರ್ದಿಯ ಆರಂಭದಲ್ಲಿ ಬರೆದುಕೊಳ್ಳುವ ಜಮಾಖರ್ಚಿಗೆ ' ಅವಲ ಅಧಾವೆ ' ಅನ್ನುತ್ತಾರೆ.

೫೦ ಪೂರ್ವದಲ್ಲಿ ಜಮೆಯ ರಕಮುಗಳನ್ನೊಂದು ಬಿಡಿಕಾಗದದ ಮೇಲೆ, ಖರ್ಚಿನ ರಕಮುಗಳನ್ನೊಂದು ಬಿಡಿಕಾಗದದ ಮೇಲೆ ತಪಸೀಲವಾರ ಬರೆದು ಸಿಲಕು ತೆಗೆಯುತ್ತಿದ್ದ ವಹಿಗೆ ' ಸಿಲಕುಬಂದು ' ಅನ್ನುವರು.

೫೧ ರಕಮುಗಳನ್ನು ಕೀರ್ದಿಯಂತೆ ವಿವರವಾಗಿ ಬರೆಯುವ ಖಾತೆಗೆ ' ಪರಾಣ ಖಾತೆ ' ಯೆನ್ನುವರು.

೫೨ ಗುರುತಿನ ಜನರಿಗೆ ಮನೆಗೆ ತೋರಿಸಿಕೊಂಡು ಬರುವದಕ್ಕಾಗಿ ಕೊಡುವ ಮಾಲಿಗೆ ' ಜಾಂಗಡಮಾಲು ' ಅನ್ನುತ್ತಾರೆ.

೫೩ ಪಕ್ಕಾ ಕೀರ್ದಿಯನ್ನಿಡದೆ ಉದ್ದರಿಯ ಇಸಮುವಾರ ಖಾತೆಗಳನ್ನಿಟ್ಟು ವಿವರವಾದ ಲೆಕ್ಕ ಬರೆಯುವ ಖಾತೆಗೆ ' ಬೋಟಖಾತೆ ' ಯೆನ್ನುವರು.

೫೪ ಬೇರೆ ಬೇರೆ ಸದರುಗಳಿಗೆ ಇರುವ ರಕಮುಗಳನ್ನು ಒಂದೇ ಸದರಿಗೆ ತಂದು ಒಟ್ಟುಗೂಡಿಸುವ ಟಿಪ್ಪಣಿಯ ಕಾಗದಕ್ಕೆ " ಬೋಟಖತ " ವೆನ್ನುವರು.

೫೫ ಬಡ್ಡಿಯ ಮಾತಿಲ್ಲದೆ ಕೊಡುವಹಣಕ್ಕೆ ' ಕೈಗಡ ' ವೆಂದೂ ಬಡ್ಡಿಯ ಮಾತುಮಾಡಿ ಕೊಡುವಹಣಕ್ಕೆ ' ಸಾಲ ' ವೆಂದೂ ಅನ್ನುತ್ತಾರೆ.

೫೬ ಯಾವದೊಂದು ಮಾಲನ್ನು ತೂಕ ಮಾಪುಗಳಿಲ್ಲದೆ ಅಜಮಾಸಿನ ಮೇಲಿಂದ ಒಮ್ಮೆಲೆ ಗುತ್ತಿಗೆಯಾಗಿ ಬೇಡುವದಕ್ಕೆ ' ಸಟ್ಟಾ ' ಎನ್ನುತ್ತಾರೆ.

೫೭ ಇವಲ್ಲದೆ ಮುಂದೆ ಬರೆದ ಶಬ್ದಗಳು ವ್ಯವಹಾರದಲ್ಲಿ ರೂಢವಾಗಿರುತ್ತವೆ. ' ತೇಜಿ ' (ವ್ಯವಹಾರವು ಭರದಿಂದಸಾಗಿ ಮಾಲು ತುಟ್ಟಿಯಾಗೋಣ), ' ಮಂದಿ ' (ವ್ಯವಹಾರವು ಮಂದವಾಗಿ ಸಾಗಿ ಮಾಲು ಅಗ್ಗವಾಗೋಣ), ' ಗೋಷವಾರೆ ' (ತಪಸೀಲು) ' ಮೊಕಾಬಿಲೆ ' (ತಾಳೆನೋಡೋಣ), ' ರುಜುವಾತ ' (ಮಂದಿಯಲೆಕ್ಕಕ್ಕೂ ತನ್ನ ಲೆಕ್ಕಕ್ಕೂ ಮೇಳುನೋಡೋಣ) ' ಮಾಮೂಲ ' (ವಹಿವಾಟಿಯ), ' ಧನಕೋ ' (ಸಾವುಕಾರ), ' ಋಣಕೋ ' (ಸಾಲಗಾರ).

೫ನೆಯ ಪ್ರಕರಣ.

ವ್ಹರ್ನ್ಯಾಕ್ಯುಲರ ಪರೀಕ್ಷೆಯ ಪ್ರಶ್ನಗಳು.

೧೯೨೫ ಇಸ್ವಿ.

ಅವಮಾನತಖಾತೆ, ಪಠಾಣವಹಿ, ಪರಪೇಠ, ಗುಜಾರತ, ರಾಖಿಲೆ, ತಸಲವಾತ, ಬೈಠೀಕೇರ್ದಿ, ಮತ್ತು ಸಂಜಾಯತ ಅಂದರೇನು ? ಸ್ಪಷ್ಟೀಕರಿಸಿರಿ.

ಅಥವಾ

ನಾವು ವ್ಯವಹಾರದಲ್ಲಿ ನೋಡುತ್ತಿರುವ ನೋಟುಗಳಿಗೆ ಯಾವತರದ ಹುಂಡಿಯೆನ್ನಬಹುದು? ಏಕೆ? ಇವುಗಳಿಂದ ವ್ಯವಹಾರಸ್ತರಿಗಾಗುವ ಲಾಭಾಲಾಭಗಳಾವವು ? ಮತ್ತು ಪ್ರಾಮಿಸರಿ ನೋಟಿಗೂ ದರ್ಶನಿ ಹುಂಡಿಗೂ ಭೇದವೇನು ? ಸ್ಪಷ್ಟೀಕರಿಸಿರಿ.

(೨) ಖಾನಾಪೂರ ಪರಸಪ್ಪನು ಗೋವಿಂದರಾವ ಚಿಕ್ಕೋಡಿ ಇವರಿಗೆ ಕೊಡತಕ್ಕ ೫೦೦ ರೂ. ಲಾವಣಿಯ ಹಣದಲ್ಲಿ ಅವರಿಗೆ ರೋಖ ೫೦ ರೂ. ಗಳನ್ನೂ ೫೦ ರೂ. ಗಳ ಗೋದಿಯನ್ನೂ ಕೊಟ್ಟನು. ೫೦ ರೂ. ಹಪ್ತೇ ಕೊಟ್ಟನು. ೨೦೦ ರೂ. ಗಳಿಗೆ ರಾಮರಾಯರ ಹವಾಲೆ ಕೊಟ್ಟನು. ಮತ್ತು ಉಳಿದ ೧೫೦ ರೂ. ಗಳ ಬಗ್ಗೆ ಹಿರಜೀಸೇಟ ಇವರ ಮೇಲೆ ದರ್ಶನಿಹುಂಡಿ ಕೊಟ್ಟನು.. ಆದರೆ ಗೋವಿಂದರಾವ ಪರಸಪ್ಪ ಇವರು ತಮ್ಮ ತಮ್ಮ ಜಮಾಖರ್ಚು ಹೇಗೆ ಮಾಡುವರು? ಬರೆದು ತೋರಿಸಿರಿ.

(೩) ಕೆಳಗಿನ ಸಂಗತಿಗಳಿಂದ ತೋಂಡಮಿಳವಣಿ (ಬಾಯಿಗೂಡಿಸೋಣ) ಯನ್ನು ತಯಾರಮಾಡಿರಿ.

ಲಾಭ.		ಹಾನಿ.	
೧೦೦ ರೂಪಾಯಿ	ಸಕ್ಕರೆ	೫೦ ರೂಪಾಯಿ	ಧರ್ಮಾದಾಯ
೫೦ ,,	ಜವಳಿ	೨೦ ,,	ಸಂಬಳ

ಸಿಲಕು ಮಾಲು

೧೦೦ ರೂಪಾಯಿ ಗೋದಿ ಹೇರು ೫ ದರ ೨೦

೧೦೦ ರೂಪಾಯಿ ಸೀರಿ ೫ ದರ ೨೦.

(೪) ನಿಮ್ಮ ಕಾರಕೂನನು ಜಮಾಖರ್ಚು ಬರೆಯುವಾಗ ಕೆಳಗೆ ಹೇಳಿದ ತಪ್ಪುಗಳನ್ನು ಮಾಡಿರುವನು ಅವು ನಿಮಗೆ ಯಾವಾಗ ತಿಳಿಯುವವು? ಅವುಗಳನ್ನು ಹೇಗೆ ತಿದ್ದುವಿರಿ.

(ಅ) ಪರಸಪ್ಪನ ಖಾತೆಗೆ ೧೦ ರೂಪಾಯಿ ಜಮಾ ಮಾಡತಕ್ಕದ್ದನ್ನು ಅವನ ಖಾತೆಗೆ ಖರ್ಚು ಹಾಕಿರುತ್ತಾನೆ.

(ಬ) ಜೋತೀಬಾ ಇವನ ಖಾತೆಗೆ ೧೨ ರೂಪಾಯಿ ಜಮಾ ಹಿಡಿಯತಕ್ಕದ್ದನ್ನು ರಾಮಪ್ಪನ ಖಾತೆಗೆ ಜಮಾ ಹಿಡಿದಿರುವನು.

(ಕ) ಅಕ್ಕಿಯ ಖಾತೆಗೆ ಜಮಾ ಮಾಡತಕ್ಕದ್ದನ್ನು ಗೋದಿಯ ಖಾತೆಗೆ ಜಮಾಹಿಡಿದಿರುವನು

(ಡ) ಕೇರ್ದಿಯೊಳಗಿನ ಒಂದು ರಕಮನ್ನು ಖಾತೆಗೆ ಏರಿಸುವದನ್ನು ಮರೆತಿರುವನು.

೧೯೨೬ ಇಸ್ವಿ.

೧. (ಅ) ಅಮಾನತ ಹಾಗು ತಸಲ್ಮಾತ ಖಾತೆಗಳಲ್ಲಿ ಯಾವ ಯಾವ ರಕಮುಗಳ ಜಮಾ ಖರ್ಚು ಮಾಡುವರು ?

(ಬ) ಸಂಜಾಯತ ಕರಾರಿನಿಂದ ಮಾಲು ತಂದರೆ, ಅಥವಾ ಕೊಟ್ಟರೆ ಜಮಾಖರ್ಚು ಹೇಗೆ ಮಾಡುವರು.

(ಕ) ಹವಾಲೆ ಜಮಾಖರ್ಚು ಹೇಗೆ ಮಾಡುವರು ?

೨. ತಾ ೧೯-೪-೧೯೨೬ ನೆಯ ದಿವಸ ನಮ್ಮಲ್ಲಿ ಕೆಳಗಿನಂತೆ ವ್ಯವಹಾರ ನಡೆಯಿತು. ಅದರ ಜಮಾಖರ್ಚು ತಯಾರಿಸಿರಿ. ಆರಂಭದ ಸಿಲಕು ೪೨೫.

೧ ರಾಮಾ ಚಿಕ್ಕೋಡಿ ಈತನ ಕಡೆಯಿಂದ ೧೮೦ ರೂಪಾಯಿ ಬರತಕ್ಕವಿದ್ದವು. ಅವುಗಳಲ್ಲಿ ೧೦೦ ರೂಪಾಯಿ ಸೀರಿ ತಂದು ಕೊಟ್ಟನು. ೫೦ ರೂಪಾಯಿ ಬಗ್ಗೆ ಭೀಮಪ್ಪ ತಡಸ ಈತನ ಹವಾಲೆ ಕೊಟ್ಟನು. ಉಳಿದ ೩೦ ರೂಪಾಯಿ ಬಗ್ಗೆ ಕತಬಿ ಬರಕೊಟ್ಟನು.

೨ ಈರಪ್ಪ ಬಾಗೇವಾಡಿ ಇವರಲ್ಲಿ ೨೦೦ ರೂಪಾಯಿ ಜೋಳ ಖರೇದಿ ಮಾಡಿದೆವು. ಇದರಲ್ಲಿ ೧೦೦ ರೂಪಾಯಿ ರೋಖ ಕೊಟ್ಟೆವು. ೭೫ ರೂಪಾಯಿಗೆ ರಾಮಪ್ಪನ ಹವಾಲೆ ಕೊಟ್ಟೆವು. ಹಾಗೂ ೨೫ ರೂಪಾಯಿಬಾಕಿ ಇಟ್ಟೆವು.

೩ ಚಂದೂಲಾಲ ಮಾರವಾಡಿ ಇವರು ಬಸಪ್ಪ ಉಪ್ಪಿನ ಇವರ ರಾಖಲೆಯಿಂದ ಬರೆದ ಹುಂಡಿಯ ಬಗ್ಗೆ ೨೦೩||| ರೂಪಾಯಿ ಗುರಪ್ಪ ಯಾದವಾಡ ಇವರಿಗೆ ಕೊಟ್ಟೆವು.

೩. ಸಕ್ರಾಯಿನಕ್ರಾಯಿ, ಖೋಖ, ಪೇಠ, ಪರಪೇಠ ಮತ್ತು ರಾಖಲೆ ಅಂದರೇನು ?

೪. (ಅ) ಅಥಾವೆಯೆಂದರೇನು ? ಅದರಲ್ಲಿ ಭೇದಗಳೆಷ್ಟು ?

(ಬ) ಅಖೇರ ಅವಲ ಅಡಾವೆಗಳಲ್ಲಿಯ ಭೇದವೇನು ?

ಅಥವಾ

ಸಾಮಜೋಗಹುಂಡಿ, ದರ್ಶನಿಹುಂಡಿ ಹಾಗು ಲಹಣೆ ಅಂದರೇನು ? ಹುಂಡಿ ಪಟಾಯಿಸದೆ ತಿರುಗಿ ಬಂದರೆ ಸಾವುಕಾರನು ಏನು ಮಾಡುವನು.

೧೯೨೭ ಇಸ್ವಿ.

ಕೆಳಗಿನ ಶಬ್ದಗಳ ಭೇದವನ್ನು ಸ್ಪಷ್ಟೀಕರಿಸಿರಿ:—

೧. (ಅ) ಬಾಕಿಗಳ ತಾಳೆ, ಅಥಾವೆ.

(ಬ) ಹುಂಡಿ, ಕರನ್ಸೀನೋಟು ಮತ್ತು ಚಕ್ಕ.

೨. (ಅ) ವ್ಯವಹಾರ ಮತ್ತು ಪರಭಾರೆ ರಕಮು ಅಂದರೇನು ?

(ಬ) ಜೇನಸವಾರ ಖಾತೆಯನ್ನು ಹ್ಯಾಗೆ ತೋಂಡಮಿಳವಣಿ ಮಾಡುವಿರಿ ? ಉದಾಹರಣೆಗಳಿಂದ ಸ್ಪಷ್ಟೀಕರಿಸಿರಿ.

೩. ತಸಲಮಾತ, ಅಮಾನತ ಮತ್ತು ಠೇವು ಈ ಖಾತೆಗಳನ್ನು ಇಡುವ ಉದ್ದೇಶವನ್ನೂ ಇವುಗಳಲ್ಲಿಯ ಭೇದವನ್ನೂ ಹೇಳಿರಿ.

೪. ಹರಿಪಂತ ಫಡಕೆ ಇವರಲ್ಲಿ ಎಪ್ರೀಲ ೧ನೇಯ ತಾರೀಖಿಗೆ ಕೆಳಗಿನಂತೆ ನಡೆದ ವ್ಯವಹಾರಗಳ ಜಮಾಖರ್ಚು ಬರೆಯಿರಿ:—

(ಅ) ಆರಂಭದ ಶಿಲ್ಕು ೬೦೦ ರೂ.

(ಬ) ೪೦೦ ರೂ. ಗೆ ೪ ವಾರಬಾಂಡ ನಾರಾಯಣ ಗಣೇಶ ಇವರಿಗೆ ಮಾರಿತು. ಅದರ ಸಲುವಾಗಿ ಅವರು ೩೦೦ ರೂ. ರೋಖ ಕೊಟ್ಟರು. ಉಳಿದ ಹಣಕ್ಕೆ ೫ ಚೀಲ ಗೋದಿ ಕೊಟ್ಟರು.

(ಕ) ಕೃಷ್ಣಾಜಿ ವಾಸುದೇವ ಇವರ ಮನಿಯನ್ನು ೮೦೦ ರೂ. ಗೆ ಲಿಲಾವಿನಲ್ಲಿ ತೆಗೆದು ಕೊಂಡನು.

(ಡ) ೧೬೦೦ರೂ. ಯ ಭಂಗಾರವನ್ನು ಭಗವಾನಧಾಸ ಹುಕುಮಚಂದ ಮಾರವಾಡಿಗೆ ಮಾರಿತು. ಅವರು ೧೦೦೦ ರೂ. ರೋಖ ಕೊಟ್ಟರು. ಮತ್ತು ೨೦೦ ರೂ. ಯ ಬೆಳ್ಳಿ ಕೊಟ್ಟು ಉಳಿದ ರಕಮು ೮ ದಿವಸಗಳಲ್ಲಿ ಕೊಡುತ್ತೇನೆಂದು ಹೇಳಿದರು. ಕೆಲವು ದಿವಸಗಳಲ್ಲಿ ಲೆಕ್ಕಾಚಾರದಲ್ಲಿ ತಪ್ಪಿದ್ದದ್ದು ತಿಳಿದು ಬಂದು ಅವರ ಕಡಿಂದಾ ಬರತಕ್ಕ ರಕಮಿನಲ್ಲಿ ೧೦೦ ರೂ. ಕಡಿಮೆಯಾಗುವದೆಂದು ಗೊತ್ತಾಯಿತು.

(೫) ವ್ಯಾಪಾರಸ್ಥನು ದಲಾಲನಿಗೆ ಕಳಿಸಿದ ಮಾಲಿನ ಜಮಾಖರ್ಚನ್ನು ತನ್ನಲ್ಲಿ (ಅ) ಕಳಿಸಿದಕೂಡಲೆ (ಬ) ಮಾರಾಟದ ಯಾದಿ ಬಂದ ಮೇಲೆ ಹ್ಯಾಗೆ ಮಾಡುತ್ತಾನೆ ?

(೬) ಹುಂಡಿಯ ಪದ್ಧತಿಯು ವ್ಯವಹಾರದಲ್ಲಿ ಯಾಕೆ ಬಂತು ? ಅದರಿಂದ ಏನು ಅನುಕೂಲತೆ ಆಯಿತು ? ಮನಿಯಾರ್ಡರ ಯಾವ ತರದ ಹುಂಡಿಯಾಗಬಹುದು ?

೧೯೨೮ ಇಸ್ವಿ.

೧ ಪಠಾಣವಹಿ, ಸಿಲ್ಕುಬಂಧ, ಪಳಪೇಠ, ಗುಜಾರತ ಮತ್ತು ರಾಖಲೇ ಅಂದರೇನು ?

೨ ಹುಂಡಿ ಅಂದರೇನು ? ಅವು ಎಷ್ಟು ಪ್ರಕಾರದವು ? ಇವುಗಳ ಜಮಾಖರ್ಚು ಎಷ್ಟು ಪ್ರಕಾರದಿಂದ ಮಾಡುವರು ?

೩ ತೋಂಡಮಿಳವಣಿಗೂ ಅಖೈರ ಅಥಾವೆಗೂ ಭೇದವೇನು ? ಇವೆರಡನ್ನು ಯಾಕೆ ಮಾಡಬೇಕಾಗುವದು. ? ಸಿಲ್ಕು ಮಾಲು ಅಖೈರ ಅಡಾವೆಯಲ್ಲಿ ಬರುತ್ತದೋ ಇಲ್ಲವೋ ?

೪ ಕೀರ್ದಿ ಬರೆಯುವಾಗ ಎಂಥ ತಪ್ಪುಗಳಾದರೆ, ಸಿಲ್ಕು ಹೆಚ್ಚು ಅಥವಾ ಕಡಿಮೆ ಬರುವದು. ? ಇದನ್ನು ಸ್ಪಷ್ಟ ಮಾಡಿ ತೋರಿಸಿರಿ. ಈ ತಪ್ಪುಗಳನ್ನು ಯಾವಾಗ ತಿದ್ದುವಿರಿ ಮತ್ತು ಹ್ಯಾಗೆ ?

೫ ಮಂಡಿಯ ಕಡೆಯಿಂದ ಸಂಜಾಯತದಿಂದ ಮಾಲು ತಂದರೆ ಅಥವಾ ಕೊಟ್ಟರೆ ಅದರ ಜಮಾಖರ್ಚು ಮಾಡುವ ಕ್ರಮವನ್ನು ಬರೆಯಿರಿ.

೬ ತಾರೀಖು ೧೫ನೇ ಜೂನ ೧೯೨೬ ನೇ ದಿವಸ ನಮ್ಮ ಅಂಗಡಿಯಲ್ಲಿ ಕೆಳಗೆ ಬರೆದಂತೆ ವ್ಯವಹಾರ ನಡೆಯಿತು. ಅದರ ಜಮಾಖರ್ಚು ಮಾಡಿ ತೋರಿಸಿರಿ. ಆ ದಿವಸ ೧೬೭೫ ರೂ||ಗಳು ಸಿಲ್ಕು ಆವೆ.

೩೦೦ ರೂ|| ಕಾಳಪ್ಪನ ಕಡೆಯಿಂದ ಹೊಲದ ಲಾವಣೀ ಬರತಕ್ಕದ್ದು ಇತ್ತು. ಅವನು ೧೦೦ರೂ|| ಸರಕಾರೀ ಹಪ್ತೆ ತಾನೇ ಕೊಟ್ಟನು. ಉಳಿದ ಹಣದಲ್ಲಿ ೧೦ರೂ||ಗೆ ಒಂದು ಚೀಲದಂತೆ ೨೦ ಚೀಲ ಜೋಳ ಕೊಟ್ಟನು.

೬೦೦ ರೂ|| ಹುಬ್ಬಳ್ಳೀ ಶ್ರೀಗಿರೆಪ್ಪನವರಲ್ಲಿ ಕುಸಿಬೀ ಖರೀದಿ ಮಾಡಿ ಅದರಲ್ಲಿ ೪೦೦ ರೂ|| ರೋಖ ಮತ್ತು ೧೫೦ ರೂ|| ಕಲ್ಲಪ್ಪನ ಹವಾಲೀ ಕೊಟ್ಟು ೫೦ರೂ. ಬಾಕೀ ಮಾಡಿಕೊಂಡೆವು.

೭೦೦ ರೂ|| ಅಸಲು ಮತ್ತು ೧೦೦ ರೂ|| ಬಡ್ಡಿ ಇಷ್ಟು ರಕಮು ಬಸಪ್ಪಾ ಕೋರಿ ಇವರ ಕಡಿಯಿಂದ ಬರತಕ್ಕದ್ದು ಇತ್ತು. ಬಡ್ಡಿಯಲ್ಲಿ ಅರ್ಧದಷ್ಟು ರಕಮು ಸೊಟುಬಿಟ್ಟಿತು. ಬಸಪ್ಪನು ಅಸಲಿನಲ್ಲಿ ೪೦೦ ರೂ|| ರೋಖ ಕೊಟ್ಟು ಉಳಿದದ್ದಕ್ಕೆ ಕತಬೀ ಬರಕೊಟ್ಟನು.

೬ ನೆಯ ಪ್ರಕರಣ.

ಬಿಡಿಸಿ ತೋರಿಸಿದ ಕೆಲವು ಬಿಗಿಯಾದ ಪ್ರಶ್ನಗಳು.

ಸನ್ ೧೯೧೦ ನೆಯ ಇಸ್ವಿಯ ಹ್ವ. ಫಾ. ಪರೀಕ್ಷೆಯ ೩ ನೇ ಪ್ರಶ್ನ.

ವರ್ಷಾರಂಭದ ಸಿಲಕು ೧೬೦೦; ವರ್ಷದ ಅಂತ್ಯಕ್ಕೆ ಬೇರೆ ಬೇರೆ ಖಾತೆಗಳ ಜಮಾಖರ್ಚು ಕೆಳಗೆ ಬರೆದಂತೆ ಆಗಿರುತ್ತದೆ. ಅವುಗಳ ತೋಂಡಮಿಳವಣಿ ಆಖೇರ ಅಢಾವೆಗಳನ್ನು ತಯಾರಿಸಿ ಖುದ್ದ ಖಾತೆಯನ್ನು ಪೂರ್ಣಮಾಡಿರಿ.

ಬಾಬಗಳು	ಜಮೆ	ಖರ್ಚು	ಬಾಬಗಳು	ಜಮೆ	ಖರ್ಚು
ಬಡ್ಡಿಯಖಾತೆ	೩೦೦	೦	ಮನೆಯ ಖರ್ಚುಖಾತೆ	೦	೨೫೦
ನಫಾತೋಟಾ ಖಾತೆ	೫೦೦	೩೦೦	' ಬನ ' ಖಾತೆ	೧೫೦	೦
' ಕನ ' ಖಾತೆ	೦	೩೦೦			

ಉತ್ತರ

ಮೊದಲು ಕಚ್ಚಾ ಪಕ್ಕಾ ಖಾತೆಗಳ ಟಿಪ್ಪಣಿ ಮಾಡುವಾ.

ಕಚ್ಚಾ ಖಾತೆ.

ಖಾತೆಗಳು	ಬರತಕ್ಕದ್ದು	ಕೊಡತಕ್ಕದ್ದು.	ಖಾತೆಗಳು	ಬರತಕ್ಕದ್ದು	ಕೊಡತಕ್ಕದ್ದು.
ಬಡ್ಡಿಯಖಾತೆ	೦	೩೦೦	ಮನೆಖರ್ಚುಖಾತೆ	೨೫೦	೦
ನಫಾತೋಟಾಖಾತೆ	೦	೨೦೦			

ಪಕ್ಕಾ ಖಾತೆ.

' ಬನ ' ಖಾತೆ	೦	೧೫೦	ಕನ ' ಖಾತೆ	೩೦೦	೦

ತೋಂಡ ಮಿಳವಣಿ

ಆಶ್ವಿನ ವದ್ಯ ೩೦ ಶಕೆ ೧೮೪೨

ಜ. ———————— ರೂ.

೨೫೦ ಬೇರೆ ಬೇರೆ ಖಾತೆಗಳಿಂದ ಬರತಕ್ಕದ್ದು ಹೊರಟ ವಿವರ

೨೫೦ ಮನೆಯಖರ್ಚು ಖಾತೆ

ಖಾ. ಪಾ.

———

೨೫೦ ಈ ರಕಮನ್ನು ಖುದ್ದಖಾತೆಗೆ ಖರ್ಚು ಬರೆದು.

೫೦೦ ಖುದ್ದಖಾತೆ—ಬೇರೆ ಬೇರೆ ಖಾತೆಗಳಿಗೆ ಕೊಡತಕ್ಕದ್ದು ಆಯಾಖಾತೆಗಳಿಗೆ ಖರ್ಚು ಬರೆದು.

ಖಾ. ಪಾ.

———

೭೫೦ ಅಂತು ಏಳೂವರೆ ನೂರು ರೂ. ಗಳು

ಖ. ———————— ರೂ.

೨೫೦ ಖುದ್ದಖಾತೆ-ಮನೆಯ ಖರ್ಚುಖಾತೆಗೆ ಜಮೆ ಬರೆದು.

ಖಾ. ಪಾ.

೫೦೦ ಬೇರೆ ಬೇರೆ ಖಾತೆಗೆ ಕೊಡತಕ್ಕವಿವರ.

೩೦೦ ಬಡ್ಡೀಖಾತೆ

ಖಾ. ಪಾ.

೨೦೦ ನಫಾತೋಟಾ ಖಾತೆ

ಖಾ. ಪಾ.

———

೫೦೦ ಈ ರಕಮನ್ನು ಖುದ್ದಖಾತೆಗೆ ಜಮೆ ಹಿಡಿದು.

———

೭೫೦ ಅಂತು ಏಳೂವರೆ ನೂರು ರೂ. ಗಳು

ಅಖೇರ ಅಢಾವೆ.

ಆಶ್ವಿನ ವ. ೩೦ ಶಕೆ ೧೮೪೨.

ಜ. ——— ರೂ.

೩೦೦ ಜನರ ಕಡೆಯಿಂದ ಬರತಕ್ಕದ್ದರ ವಿವರ

೩೦೧ ‘ ಕನ ’ ಖಾತೆ

ಖಾ. ಪಾ.

———

೩೦೦ ಈ ರಕಮನ್ನು ಖುದ್ದ ಖಾತೆಗೆ ಖರ್ಚುಬರೆದು

೧೫೦ ಖುದ್ದಖಾತೆ ಜನರಿಗೆ ಕೊಡತಕ್ಕದ್ದು ಅವರವರ ಖಾತೆಗೆ ಖರ್ಚು ಬರೆದು

ಖಾ. ಪಾ.

೪೫೦ ಅಂತೂ ನಾಲ್ಕ್ಯಾವರೆ ನೂರು ರೂ.

ಖ. ——— ರೂ.

೩೦೦ ಖುದ್ದಖಾತೆ ಜನರಿಂದ ಬರತಕ್ಕದ್ದು ಅವರವರ ಖಾತೆಗೆ ಜಮ ಹಿಡಿದು

ಖಾ. ಪಾ.

೧೫೦ ಜನರಿಗೆ ಕೊಡತಕ್ಕದ್ದು ಹೊರಟ ವಿವರ.

೧೫೦ ‘ ಬನ ’ ಖಾತೆ

ಖಾ. ಪಾ.

———

೧೫೦ ಈ ರಕಮನ್ನು ಖುದ್ದಖಾತೆಗೆ ಜಮ ಹಿಡಿದು

———

೪೫೦ ಅಂತೂ ನಾಲ್ಕ್ಯಾವರೆ ನೂರು ರೂ.

ಖುದ್ದಖಾತೆ.

ಜ. ——— ರೂ.

೧೬೦೦ ಅವಲ ಸಿಲಕು ಕಾ. ಶು. ೧

೫೦೦ ತೋಂಡಮಿಳವಣಿ ಆ. ವ. ೩೦

೧೫೦ ಅಖೇರ ಅಢಾವೆ ಆ. ವ. ೩೦

———

೨೨೫೦ ಅ. ಇಪ್ಪತ್ತೆರಡುವರೆ ನೂರು ರೂ.

ಖ. ——— ರೂ.

೨೫೦ ತೊಂ. ಮಿ. ಆ. ವ. ೩೦

೩೦೦ ಅಖೇರ ಅ. ಆ. ವ. ೩೦

೧೭೦೦ ಅಖೇರ ಸಿಲಕು.

———

೨೨೫೦ ಅ. ಇಪ್ಪತ್ತೆರಡೂವರೆ ನೂರು ರೂ.

(ಸನ್ ೧೯೧೪ ನೆಯ ಇಸ್ವಿಯ ಹ್ವ. ಫಾ. ಪರೀಕ್ಷೆಯ ೫ ನೆಯ ಪ್ರಶ್ನ).

ಕೆಳಗೆ ಬರೆದ ರಕಮುಗಳಿಂದ ಅರಳಿಯ ಖಾತೆಯನ್ನು ತಯಾರಿಸಿ ಬಾಯಿಗೂಡಿಸಿರಿ.

೧೨೦೦ ರೂ. ಹೋದ ವರ್ಷದ ಸಿಲಕು	೪೦ ಅಂಡಿಗಿ
೨೦೦೦ ರೂ. ಈ ವರ್ಷದ ಖರೀದಿ	೫೦ ,, ರೋಖ ಚೈ. ಶು. ೨
೨೦೦೦ ,, ,, ,,	೪೦ ,, ಉದ್ದರಿ ಚೈ. ಶು. ೫
೨೫೦೦ ,, ,, ವಿಕರಿ	೫೦ ,, ರೋಖ ಚೈ. ಶು. ೬
೩೧೨೦ ,, ,, ,,	೬೦ ,, ಉದ್ದರಿ ವೈ. ಶು. ೧೦

ಅರಳಿ ಖಾತೆ.

ಜ. ——— ರೂ.

೨೫೦೦ ಕೇ. ಪಾ. ಚೈ ಶು. ೬ ಅಂಡಿಗಿ ೫೦

೩೧೨೦ ಕೇ. ಪಾ. ವೈ. ಶು. ೧೦ ಅಂ. ೬೦

೧೧೦

೧೦೪೦ ಕೇ. ಪಾ. ಸಿಲಕು, ಇದ್ದ ಅಂಡಿಗಿ ೨೦

ಖ. ——— ರೂ.

೧೨೦೦ ಕೇ. ಪಾ. ಚೈತ್ರ ಶು. ೧ ಅಂ. ೪೦

೨೦೦೦ ಕೇ. ಪಾ. ಚೈ. ಶು. ೨ ಅಂ. ೫೦

೨೦೦೦ ಕೇ. ಪಾ. ಚೈ. ಶು. ೫ ಅಂ. ೪೦

———

೧೩೦

ಬಿಡಿಸಿ ತೋರಿಸಿದ ಕೆಲವು ಬಿಗಿಯಾದ ಪ್ರಶ್ನ

ಅಂಡಿಗೆಗಳ ಬೆಲೆ ಫಾ. ೩೦ ೫೨೦೦

———

೧೩೦ ೧೪೬೦ ಕೀ. ಪಾ

——— ——— ೬೬೬

೬೬೬೦

ವರ್ಷಾರಂಭದಲ್ಲಿ ೧೨೦೦ ಈ ರಕಮು ಸಿಲಕ ಮಾಲಿನ ರ
ಸಮಾವೇಶವಾಗಿರುವದರಿಂದ ಕೀರ್ದಿಯಲ್ಲಿ ಖರ್ಚಿನ ಕಡೆಗಿರುತ್ತದೆ

ಸಿಲಕು ಇದ್ದ ೨೦ ಅಂಡಿಗೆಗಳ ಬೆಲೆ ೬೦ ಅಂಡಿಗೆಗಳ (೫೨) ದರದಂತೆ ಪ

ಪ್ರಶ್ನೆ.

ಕೆಳಗಿನ ವ್ಯವಹಾರಗಳಿಂದ ಖುದ್ದ(ಬಂಡವಲ) ಖಾತೆ ಬರೆದು ಬಾಯಿಗು

ವರ್ಷದ ಆರಂಭಕ್ಕೆ ಜನರಿಂದ ಬರುವದು.	,,	೫೦೦	
,, ಜನರಿಗೆ ಕೊಡುವದು.	,,	೨೦೦	ರೂ.
,, ಸಿಲಕು	,,	೧೦೦೦	ರೂ,
ಈವರ್ಷದಲ್ಲಿ ನಿವಳ ಲಾಭ	,,	೨೦೦	ರೂ.
ಮನೆಯ ಖರ್ಚು	,,	೫೦೦	ರೂ.
ವರ್ಷದ ಅಂತ್ಯಕ್ಕೆ ಜನರಿಂದ ಬರುವದು.	,,	೨೦೦	ರೂ.
,, ಜನರಿಗೆ ಕೊಡುವದು.	,,	೫೦೦	ರೂ.

ಉತ್ತರ.

ಖುದ್ದ ಖಾತೆ.

ಜಮೆ	ರೂ.	ಖರ್ಚು	ರೂ.
೫೦೦ ಆವಲ ಅಥಾವೆ. ಕಾ. ಶು.	೧	೨೦೦ ಆವಲ ಅಥಾವೆ. ಕಾ. ಶು.	೧
೧೦೦೦ ಆವಲ ಸಿಲಕು ಕಾ. ಶು.	೧	೫೦೦ ತೋ. ಮಿ. ಅ. ವ.	೩೦
೨೦೦ ತೋ. ಮಿ. ಆಶ್ವಿನ	೩೦	೨೦೦ ಅಖೇರ ಅಥಾವೆ. ಅ. ವ.	೩೦
೫೦೦ ಅಖೇರ ಅಥಾವೆ ಆಶ್ವಿನ	೩೦	೧೩೦೦ ಅಖೇರ ಸಿಲಕು. ಅ. ವ.	೩೦
೨೨೦೦		೨೨೦೦	

ಇದರ ಮೇಲಿಂದ ಅಖೇರ ಸಿಲಕು. ೧೩೦೦ ಇರಲಿಕ್ಕೆ ಬೇಕು.

(೧೯೧೩ ನೇ ಇಸ್ವಿಯ ಹ್ವ. ಫಾ. ಪರೀಕ್ಷೆಯ ೫ ನೇ ಪಶ್ನ)

ಕೆಳಗಿನ ವ್ಯವಹಾರದಿಂದ ಬೆಲ್ಲದ ಖಾತೆ ತಯಾರಿಸಿ ಬಾಯಿಗೂಡಿಸಿರಿ.

ತಾ.	೧	ಮೇ.	ಹಿಂದಿನ ಸಿಲಕು ಬೆಲ್ಲ ರೂ. ೮೦
,,	೪	ಈ ತಿಂಗಳಲ್ಲಿ	ರೋಖ ಖರೇದಿ ರೂ. ೧೨೩
,,	೫	,,	ರಾಮಪ್ಪನಿಗೆ. ಉದ್ರಿಮಾರಿದ್ದು ರೂ. ೪೬
,,	೧೫	,,	ರೋಖ ಮಾರಿದ್ದು ರೂ. ೭೫
,,	೨೫	,,	ಗೋವಿಂದರಾಯರು ಬೆಲ್ಲ ಒಯ್ದದ್ದು ರೂ. ೩೩
,,	೩೧	,,	ಬೆಲ್ಲದ ವ್ಯಾಪಾರದಿಂದ ಲಾಭ ರೂ. ೬೬

ಅ. ಉತ್ತರ

ಆಶ್ವಿನ ... ಬೆಲ್ಲದ ಖಾತೆ.

ಜ. ——— ರೂ. ಖ ——— ರೂ.

೩೦೦ ಜನರ ಕಡೆಯಿಂದ ಬರತಕ್ಕದ... ೮೦ ಕೀ. ಪಾ. ತಾ. ೧-೫

ವಿವರ ೧೨೩ ಕೀ. ಪಾ. ತಾ. ೪.೫

೩೦೦ 'ಕನ' ಖಾತೆ ೧೫.೫ ೬೬ ಕೀ. ಪಾ. ತೊ. ಮಿ. ನಫಾತೋಟಾ ಖಾತೆ

ಖಾ. ... ತಾ. ೨೫. ೫ —— ಗೆ ಜಮೆ

——— ...ಿ. ಸಿ. ಮಾ. ಬೆಲೆ. ೨೬೯

——

೩೦೦ ಈ ರಕ್ತ...

ಖರ್ಚುಬರ್ಚ್ಚ... ೮೦ ಈ ರಕಮು ಕೀರ್ದಿಯಲ್ಲಿ ಖರ್ಚಿನ ಕಡೆಗೆ ಇರುತ್ತದೆ.

==

೧೫೦ ೨ ಹಿರೇದಿ ರಕಮು ೨೦೩ (೮೦+೧೨೩) ಇದರಲ್ಲಿ ೬೬ ರೂ. ಲಾಭ ಕೂಡಿಸಲಾಗಿ ೨೬೯ ಮಾರಿ ಬಂದ ಹಣವಾಯಿತು. ಇದರಲ್ಲಿ ವಿಕ್ರಿ ರಕಮು ೧೫೫ (೪೭+೭೫+೩೩) ಹೋಗಲಾಗಿ ಶಿಲಕು ಮಾಲಿನ ಬೆಲೆ ೧೧೪ (೨೬೯-೧೫೫) ಇರಬೇಕು.

೧೯೧೭ ಇಸ್ವಿ ಹ್ಷ. ಫಾ. ಪರೀಕ್ಷೆಯ ೪ ನೇ ಪಶ್ನೆ.

ರಾಮಚಂದ್ರ ದೇಶಪಾಂಡೆ ಇವರ ಖಾತೆವಹಿಯಿಂದ ಆ. ವ. ೩೦ ಹೊರಟ ಲೆಕ್ಕದ ವಿವರ.

ಲಾಭ	ಹಾನಿ	ಶಿಲಕು ಮಾಲು
೨೫ ಧಾನ್ಯ ಖಾತೆ	೧೨॥ ಧರ್ಮಾದಾಯ ಖಾತೆ	೧೦೦ ಗೋದಿ ಹೇರು ೧೦ ದರ ೧೦ ರೂ.
೧೦ ಬಂಗಾರದ ಖಾತೆ	೭॥ ಬಾಡಿಗಿಖಾತೆ	೧೫೦ ಜವಳ ಶೀರಿ ೧೦ ದರ ೧೫ ರೂ.
೫೦ ಜವಳೀಖಾತೆ	೧೦॥ ಪಗಾರ ಖಾತೆ	೧೨೦ ಬಂಗಾರ ತೊಲಿ ೬ ದರ ೨೦ ರೂ.
———	———	———
೮೫	೩೦॥	೩೭೦

ಈ ಸಂಗತಿಯನ್ನು ಕುರಿತು ತೋಂಡಮಿಳವಣಿ ಮಾಡಿರಿ.

ಉತ್ತರ

ರೋಜ ಕೀರ್ದಿ ಆಶ್ವಿನ ವ. ೩೦

ಜಮೆ ——— ರೂ. ಖ ——— ರೂ.

೦ ನಿನ್ನಿನ ಶಿಲಕು

ಈ ಹೊತ್ತಿನ ಜಮೆ

೩೭೦ ಶಿಲಕು ಮಾಲಿನ ಬೆಲೆ ಆಕಾರಿಸಿದ ವಿವರ

೧೦೦ ಗೋದಿ ಹೇರು ೧೦ ದರ ೧೦ ರೂ.

೧೫೦ ಶೀರಿ ೧೦ ದರ ೧೫ ರೂ.

೧೨೦ ಬಂಗಾರ ತೊ. ೬ ದರ ೨೦ ರೂ.

———

೩೭೦

———

೩೭೦ ಅಂತು ಮುನ್ನೂರಾ ಎಪ್ಪತ್ತು ರೂ.

೦ ಈ ಹೊತ್ತಿನ ಖರ್ಚು

೩೭೦ ವರ್ಷದ ಅಖೇರ ಶಿಲಕು

೦ ರೋಖ

೩೭೦ ಮಾಲು

೧೦೦ ಗೋದಿ

೧೫೦ ಶೀರಿ

೧೨೦ ಬಂಗಾರ

———

೩೭೦

———

೩೭೦ ಅಂತು ಮೂನ್ನೂರಾ ಎಪ್ಪತ್ತು ರೂ.

ಬಿಡಿಸಿ

ತೋಂಡಮಿಳ

ಜ. ———————— ರೂ.

೮೫ ನಫಾತೋಟಾಖಾತೆ-ವರ್ಷದ ಕೊನೆಗೆ ಬೇರೆ ಬೇರೆ ಖಾತೆಗಳ ಲಾಭವನ್ನು ಬಾಯ್ಗೂಡಿಸುವದಕ್ಕಾಗಿ ಆಯಾ ಖಾತೆಗಳಿಗೆ ಖರ್ಚು ಬರೆದು

ಖಾ. ಪಾ.

೩೦|| ಬೇರೆ ಬೇರೆ ಖಾತೆಗಳ ಹಾನಿಗಳ ವಿವರ

೧೨|| ಧರ್ಮಾದಾಯ ಖಾತೆ

ಖಾ. ಪಾ.

೭|| ಬಾಡಿಗೆ ಖಾತೆ

ಖಾ. ಪಾ.

೧೦|| ಪಗಾರ ಖಾತೆ

ಖಾ. ಪಾ.

೩೦|| ಈ ರಕಮನ್ನು ನಫಾತೋಟಾ ಖಾತೆಗೆ ಖರ್ಚು ಬರೆದು.

೫೪|| ಖುದ್ದ ಖಾತೆ-ನಫಾ ತೋಟಾಖಾತೆ ಬಾಯಿ ಗೂಡಿಸುವದಕ್ಕಾಗಿ ಆ ಖಾತೆಗೆ ಖರ್ಚು ಬರೆದು.

ಖಾ. ಪಾ.

೧೭೦ ಅಂತು ನೂರಾ ಎಪ್ಪತ್ತು ರೂ.

೮೫ ಬ

೭೫ ಧಾ

೧೦ ಬಂಗಾರ ಖ

ಖಾ. ಪಾ.

೫೦ ಕಪ್ಪಡ ಖಾತೆ

ಖಾ. ಪಾ.

೮೫ ಈ ರಕಮು ನಫಾ ತೋಟಾ ಖಾತೆಗೆ ಜಮೆಹಿಡಿದು

೩೦|| ನಫಾ ತೋಟಾಖಾತೆ-ವರ್ಷದ ಕೊನೆಗೆ ಬೇರೆ ಬೇರೆ ಖಾತೆಗಳ ಹಾನಿಯನ್ನು ಬಾಯ್ಗೂಡಿಸುವದಕ್ಕಾಗಿ ಆಯಾ ಖಾತೆಗಳಿಗೆ ಜಮೆಹಿಡಿದು

ಖಾ. ಪಾ.

೫೪|| ನಫಾ ತೋಟಾ ಖಾತೆ-ನಿವಳ ಲಾಭ ಹೊರಟದ್ದು ಖುದ್ದ ಖಾತೆಗೆ ಜಮೆ ಹಿಡಿದು.

ಖಾ. ಪಾ.

——೧೭೦ ಅಂತು ನೂರಾ ಎಪ್ಪತ್ತು ರೂ.

ಸಿಲಕು ಮಾಲಿನ ಬೆಲೆಯನ್ನು ತೋಂಡಮಿಳವಣಿಯಲ್ಲಿ ಬರೆದರೂ ಸಾಗುತ್ತದೆ. ಆದರೆ ಸಿಲಕಿನ ಲೆಕ್ಕವನ್ನು ದಿನದಂತೆ ಕೊನೆಯ ದಿವಸ ತೋರಿಸುವದೇ ಹೆಚ್ಚು ವಿಹಿತವು.

ಸಮಾಪ್ತ.